ಮಂಗಳವಾರ, ಮೇ 6, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 125 | ಪುಟ 14
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಐಸಿಸಿ ರ‍್ಯಾಂಕಿಂಗ್: ಭಾರತದ ಸಾಧನೆ

ರೋಹಿತ್ ಶರ್ಮಾ

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸೋಮವಾರ ಪ್ರಕಟಿಸಿರುವ ವಾರ್ಷಿಕ ರ‍್ಯಾಂಕಿಂಗ್‌ನಲ್ಲಿ ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಭಾರತ ಅಗ್ರಸ್ಥಾನ ಉಳಿಸಿಕೊಂಡಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಇಳಿದಿದೆ.

	ರ‍್ಯಾಂಕಿಂಗ್	ರೇಟಿಂಗ್
ಏಕದಿನ	1	124
ಟಿ20	1	271
ಟೆಸ್ಟ್	4	105

ಆಳ–ಅಗಲ
ವಿಮಾನಯಾನ ಸಂಸ್ಥೆಗಳಿಗೆ ಹೊರೆ
‘ಮುಂಗಾರು ತಡವಾದರೆ 6,319 ಹಳ್ಳಿಗಳಿಗೆ ಸಮಸ್ಯೆ’ 6
ಶೇ 1.5ರಷ್ಟು ರೆಪೊ ದರ ಕಡಿತ? 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,796	24,461	₹99,390 (ಬೆಂಗಳೂರು)	₹99,200 (ಬೆಂಗಳೂರು)	84.30

ಪರಿಶ್ರಮ
ಪಿಯು ಕಾಲೇಜು | ನೀಟ್ ಅಕಾಡೆಮಿ
NEET 2025 ಕಠಿಣವಾಗಿತ್ತೇ? ಉತ್ತಮ ಅಂಕಗಳು ಬರಲಾರದೆಂಬ ಆತಂಕದಲ್ಲಿದ್ದೀರಾ?
ಚಿಂತೆ ಬಿಡಿ! ಪರಿಶ್ರಮ NEET ಅಕಾಡೆಮಿ ನಿಮ್ಮೊಂದಿಗಿದೆ.
ನಮ್ಮ NEET ಲಾಂಗ್ ಟರ್ಮ್ ಕೋರ್ಸ್ ಮೂಲಕ ನೀವು ಭಾರತದ ಪ್ರಮುಖ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಪಡೆಯಲು ಸೂಕ್ತವಾದ ಮಾರ್ಗದರ್ಶನ ಮತ್ತು ತರಬೇತಿಯನ್ನು ಪಡೆಯಬಹುದು.
1st Batch starts from 8th May | 2nd Batch starts from 10th May | 3rd Batch starts from 12th May | 4th Batch starts from 14th May
Merit Concession Available
Flexible Fee Payment in 3 Installments Available
ADMISSIONS OPEN 2025-26 PUC (PCMB) & NEET LONG TERM
080 24413400, 74838 30545 www.parishramaneetacademy.com

ರಾಜ್ಯ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ 1.50 ಹೆಚ್ಚಳ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ನಿವೃತ್ತರ ತುಟ್ಟಿಭತ್ಯೆಯನ್ನು ಜನವರಿ 1ರಿಂದ ಪೂರ್ವಾನ್ವಯ ಆಗುವಂತೆ ಶೇ 1.50ರಷ್ಟು ಹೆಚ್ಚಳ ಮಾಡಲಾಗಿದೆ. ನೌಕರರು ತಮ್ಮ ಮೂಲ ವೇತನದ ಶೇ 10.75ರಷ್ಟು ತುಟ್ಟಿಭತ್ಯೆ ಪಡೆಯುತ್ತಿದ್ದು, ಹೊಸ ಆದೇಶದಿಂದಾಗಿ ಒಟ್ಟು ತುಟ್ಟಿಭತ್ಯೆ ಪ್ರಮಾಣ ಶೇ 12.25ಕ್ಕೆ ಏರಿಕೆ ಆಗಲಿದೆ. ಸಿ.ಎಂ ಸಿದ್ದರಾಮಯ್ಯ ಇದಕ್ಕೆ ಅನುಮೋದನೆ ನೀಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಸೇನಾ ದಾಳಿಗೆ ಸಜ್ಜಾಗಲು ಎಲ್ಲ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ

ಪೌರರಿಗೆ ಸ್ವರಕ್ಷಣೆ ತಾಲೀಮು

ಪ್ರಜಾವಾಣಿ ವಾರ್ತೆ

ನವದೆಹಲಿ: ಪಹಲ್ಗಾಮ್ ದಾಳಿಯ ಬಳಿಕ ಪಾಕಿಸ್ತಾನ ಜೊತೆಗಿನ ಸಂಬಂಧ ವಿಷಮಗೊಂಡಿರುವ ನಡುವೆಯೇ ಯಾವುದೇ ಸನ್ನಿವೇಶ ಎದುರಿಸಲು ಸ್ವರಕ್ಷಣೆ ತಾಲೀಮು ನಡೆಸಿ ಎಂದು ಎಲ್ಲ ರಾಜ್ಯಗಳಿಗೆ ಕೇಂದ್ರ ಗೃಹ ಸಚಿವಾಲಯವು ಸೂಚಿಸಿದೆ.

ಈ ಸ್ವರಕ್ಷಣೆ ತಾಲೀಮು ಸಂದರ್ಭದಲ್ಲಿ, ವಾಯುದಾಳಿಯ ಎಚ್ಚರಿಕೆ ನೀಡುವ ಸೈರನ್ ಮೊಳಗಿಸುವಂತೆ ಹೇಳಲಾಗಿದೆ. ಬುಧವಾರ ನಡೆಯಲಿರುವ ಈ ತಾಲೀಮಿನಲ್ಲಿ ಸ್ವರಕ್ಷಣೆಯ ಕ್ರಮಗಳನ್ನು ಸೇರಿಸಿಕೊಳ್ಳಬೇಕು ಎಂದೂ ಸೂಚಿಸಲಾಗಿದೆ.

ದೇಶದ ಮೇಲೆ ಯಾವುದೇ ರೀತಿಯ ಸೇನಾ ದಾಳಿ ನಡೆದರೆ ನಾಗರಿಕರ ಸುರಕ್ಷತೆಯನ್ನು ಖಾತರಿಪಡಿಸಲು ಈ ತಾಲೀಮು ವ್ಯವಸ್ಥೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ವಿದ್ಯಾರ್ಥಿಗಳಿಗೂ ತರಬೇತಿ ನೀಡಬೇಕು. ಪ್ರಮುಖ ಘಟಕಗಳು ತಟ್ಟನೆ ಕಾಣಿಸದಂತೆ ಬಣ್ಣ ಬಳಿಯಬೇಕು, ತೆರವು ಕಾರ್ಯಾಚರಣೆಯ ಯೋಜನೆ ರೂಪಿಸಬೇಕು ಮತ್ತು ಅದರ ತಾಲೀಮು ಕೂಡ ಮಾಡಬೇಕು ಎಂಬ ನಿರ್ದೇಶನಗಳನ್ನು ನೀಡಲಾಗಿದೆ.

ಪಹಲ್ಗಾಮ್ ದಾಳಿಗೆ ಪುಟಿನ್ ಖಂಡನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ದೂರವಾಣಿ ಮೂಲಕ ಸೋಮವಾರ ಮಾತುಕತೆ ನಡೆಸಿದರು.

ಈ ವೇಳೆ ಪುಟಿನ್ ಅವರು, ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಖಂಡಿಸಿದರು. ಭೀಕರ ದಾಳಿ ನಡೆಸಿದವರಿಗೆ ಮತ್ತು ಅದಕ್ಕೆ ಕುಮ್ಮಕ್ಕು ನೀಡಿದವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಹೇಳಿದರು. ‘ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟ ಮುಗ್ಧ ಜನರ ಸಾವಿಗೆ ಸಂತಾಪ ವ್ಯಕ್ತಪಡಿಸಿದ ಅವರು, ಭಯೋತ್ಪಾದನೆ ವಿರುದ್ಧದ ಭಾರತದ ಹೋರಾಟಕ್ಕೆ ರಷ್ಯಾವು ಬೆಂಬಲ ನೀಡಲಿದೆ ಎಂದರು’ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದರು.

11ನೇ ಪುಟ ನೋಡಿ

ದಾಳಿ ನಡೆಸಿದರೆ ಅಣ್ವಸ್ತ್ರ ಪ್ರಯೋಗ: ಪಾಕ್

ಮಾಸ್ಕೊ (ಪಿಟಿಐ): ‘ಸಿಂಧೂ ನದಿ ನೀರಿನ ಹರಿವಿಗೆ ಅಡ್ಡಿಪಡಿಸಿದರೆ ಅಥವಾ ದಾಳಿ ನಡೆಸಿದರೆ ಅಣ್ವಸ್ತ್ರ ಸೇರಿದಂತೆ ತನ್ನ ಸಂಪೂರ್ಣ ಬಲದಿಂದ ಪ್ರತಿಕ್ರಿಯೆ ನೀಡಲಾಗುವುದು’ ಎಂದು ರಷ್ಯಾದಲ್ಲಿರುವ ಪಾಕಿಸ್ತಾನದ ರಾಯಭಾರಿ ಮುಹಮ್ಮದ್ ಖಾಲಿದ್ ಜಮಾಲಿ ತಿಳಿಸಿದ್ದಾರೆ.

‘ನಮ್ಮ ಮೇಲಿನ ಯಾವುದೇ ರೀತಿಯ ಆಕ್ರಮಣ ವನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗಿದ್ದೇವೆ. ಸಾಂಪ್ರದಾಯಿಕ, ಪರಮಾಣು ಅಸ್ತ್ರಗಳನ್ನು ಒಳಗೊಂಡಂತೆ ಪೂರ್ಣ ಬಲವನ್ನು ಬಳಸುತ್ತೇವೆ’ ಎಂದು ಸಂದರ್ಶನವೊಂದರಲ್ಲಿ ಎಚ್ಚರಿಸಿದ್ದಾರೆ.

ಸೋಮವಾರದ ಬೆಳವಣಿಗೆಗಳು

- ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಪ್ರಧಾನಿಯನ್ನು ಭೇಟಿಯಾಗಿ ಮಾತುಕತೆ ನಡೆಸಿದರು
- ಪಾಕಿಸ್ತಾನಕ್ಕೆ ಅನುದಾನ ನೀಡುವುದನ್ನು ನಿಲ್ಲಿಸುವಂತೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ (ಎಡಿಬಿ) ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮನವಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ
- ದಕ್ಷಿಣ ಏಷ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆ ಕಾಯ್ದುಕೊಳ್ಳುವ ಉದ್ದೇಶದಿಂದ ಚೀನಾ ಯಾವಾಗಲೂ ಪಾಕಿಸ್ತಾನವನ್ನು ಬೆಂಬಲಿಸಲಿದೆ ಎಂದು ಪಾಕ್‌ನಲ್ಲಿರುವ ಚೀನಾದ ರಾಯಭಾರಿ ಜಿಯಾಂಗ್ ಜೈಡಾಂಗ್ ತಿಳಿಸಿದರು
- ಜಮ್ಮು ಕಾಶ್ಮೀರ ಗಡಿನಿಯಂತ್ರಣ ರೇಖೆ (ಎಲ್‌ಒಸಿ) ಬಳಿಯಲ್ಲಿನ ಎಂಟು ಮುಂಚೂಣಿ ವಲಯಗಳಲ್ಲಿ ಪಾಕಿಸ್ತಾನಿ ಸೇನಾ ಪಡೆಗಳು ಅಪ್ರಚೋದಿತ ಗುಂಡಿನ ದಾಳಿ ನಡೆಸಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ
- ಭಾರತ–ಪಾಕಿಸ್ತಾನ ಬಿಕ್ಕಟ್ಟಿನ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಚರ್ಚೆ

‘ಒಳಮೀಸಲು: 2 ತಿಂಗಳಲ್ಲಿ ವರದಿ’

ನಿಖರ ಮಾಹಿತಿ ನೀಡಲು ಸಿ.ಎಂ ಸಿದ್ದರಾಮಯ್ಯ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯಂತೆ ಒಳಮೀಸಲಾತಿ ಜಾರಿಗೆ ದೃಢ ಹೆಜ್ಜೆ ಇಟ್ಟಿದ್ದೇವೆ. ಪರಿಶಿಷ್ಟ ಜಾತಿಗಳ ನಿಖರ ದತ್ತಾಂಶ ಸಂಗ್ರಹ ಕಾರ್ಯ ಆರಂಭವಾಗಿದ್ದು, ಎರಡು ತಿಂಗಳಲ್ಲಿ ವರದಿ ಪಡೆದು ಒಳ ಮೀಸಲಾತಿ ಜಾರಿಗೊಳಿಸಲಾಗುವುದು’ ಎಂದು ಸಿದ್ದರಾಮಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘2011ರ ಜನಗಣತಿ ಆಧಾರದಲ್ಲಿ ಸದಾಶಿವ ಆಯೋಗ ಪರಿಶಿಷ್ಟ ಜಾತಿಗಳ ಸಂಖ್ಯೆಯನ್ನು ಗುರುತಿಸಿತ್ತು. ಸುಪ್ರೀಂ ಕೋರ್ಟ್ ಆದೇಶದ ನಂತರ ಒಳ ಮೀಸಲಾತಿ ಅನುಷ್ಠಾನಕ್ಕಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಅವರ ಅಧ್ಯಕ್ಷತೆ ಯಲ್ಲಿ ಏಕ ಸದಸ್ಯ ಆಯೋಗ ರಚನೆ ಮಾಡಿದ್ದೆವು. ಆಯೋಗದ ಮಧ್ಯಂತರ ಶಿಫಾರಸಿನಂತೆ ಪರಿಶಿಷ್ಟರಲ್ಲಿನ 101 ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕಾಗಿ ನಿಖರ ಮಾಹಿತಿ ಕಲೆ ಹಾಕಲಾಗುತ್ತಿದೆ. ಮೂರು ಹಂತಗಳಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ’ ಎಂದರು.

‘ಪರಿಶಿಷ್ಟರಲ್ಲಿನ ಆದಿ ದ್ರಾವಿಡ, ಆದಿ ಕರ್ನಾಟಕ, ಆದಿ ಆಂಧ್ರ ಜಾತಿಗಳಲ್ಲಿನ ಎಡ, ಬಲದವರನ್ನು ನಿಖರವಾಗಿ ಗುರುತಿಸಬೇಕಿದೆ. ಅಂಥವರು ತಮ್ಮ ಉಪ ಜಾತಿಯನ್ನೂ ಕಡ್ಡಾಯವಾಗಿ ನಮೂದಿಸಬೇಕು’ ಎಂದರು.

ಸಮೀಕ್ಷೆಯ ಹಂತ	ಅವಧಿ
ಮನೆ ಮನೆ ಭೇಟಿ	ಮೇ 5-17
ವಿಶೇಷ ಶಿಬಿರ	ಮೇ 19-21
ಆನ್‌ಲೈನ್ ನೋಂದಣಿ	ಮೇ 19-23

101 ಪರಿಶಿಷ್ಟ ಜಾತಿಗಳು

65 ಸಾವಿರ ಸಮೀಕ್ಷೆಗೆ ನೇಮಕಗೊಂಡ ಶಿಕ್ಷಕರು

60 ದಿನಗಳು ವರದಿ ಸಲ್ಲಿಕೆಗೆ ನೀಡಿದ ಗಡುವು

5ನೇ ಪುಟ ನೋಡಿ

ಪ್ರಶ್ನೆಪತ್ರಿಕೆ ಸೋರಿಕೆ ಶಂಕೆ: ದೂರು

ಕೆಪಿಎಸ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ 384 ಹುದ್ದೆಗಳ ನೇಮಕಾತಿಗಾಗಿ ಸೋಮವಾರ (ಮೇ 5) ನಡೆದ ಮುಖ್ಯ ಪರೀಕ್ಷೆಯ ಸಾಮಾನ್ಯ ಅಧ್ಯಯನ–1 ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಶಂಕೆ ವ್ಯಕ್ತವಾಗಿದ್ದು, ಈ ಕುರಿತು ಅಭ್ಯರ್ಥಿಗಳು ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ದೂರು ಸಲ್ಲಿಸಿದ್ದಾರೆ.

ಬೆಂಗಳೂರಿನ ಕಸ್ತೂರಬಾ ನಗರದ ಬಿಬಿಎಂಪಿ ಸಂಯೋಜಿತ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದ ಪ್ರಶ್ನೆಪತ್ರಿಕೆ ಸೋರಿಕೆಯಾಗಿವೆ ಎಂದು ಅಭ್ಯರ್ಥಿಗಳು ಆರೋಪಿಸಿದ್ದಾರೆ.

‘ಕೇಂದ್ರಕ್ಕೆ ಕಳುಹಿಸಿದ ಪ್ರಶ್ನೆಪತ್ರಿಕೆಯ ಬಂಡಲ್ ಮೇಲ್ಭಾಗದಲ್ಲಿ ಮಾತ್ರ ಮುಚ್ಚಿದ್ದು, ಒಳ ಭಾಗದಲ್ಲಿ (ಎರಡನೇ ಶೀಲ್ಡ್) ತೆರೆದಿತ್ತು. ಈ ಕುರಿತು ಪರೀಕ್ಷಾ ಮೇಲ್ವಿಚಾರಕರು, ಅಲ್ಲಿನ ಪ್ರಾಂಶುಪಾಲರನ್ನು ಪ್ರಶ್ನಿಸಿದಾಗ, ಅದೇ ರೀತಿಯೇ ಕಳಹಿಸಿರುವುದಾಗಿ ಕೆಪಿಎಸ್‌ಸಿ ಹೇಳಿದೆ ಎಂದು ಉತ್ತರಿಸಿದ್ದರು ಎಂದು ಅವರು ದೂರಿದರು.

7ನೇ ಪುಟ ನೋಡಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಶ್ರೀ ಕೆ.ಹೆಚ್. ಮುನಿಯಪ್ಪ
ಮಾನ್ಯ ಸಚಿವರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳು, ಕರ್ನಾಟಕ ಸರ್ಕಾರ
ಆರ್.ಬಿ. ತಿಮ್ಮಾಪುರ್
ಮಾನ್ಯ ಸಚಿವರು, ಅಬಕಾರಿ, ಕರ್ನಾಟಕ ಸರ್ಕಾರ

ಗೌರವಾನ್ವಿತ ನ್ಯಾಯಮೂರ್ತಿ ಡಾ. ಹೆಚ್. ಎನ್. ನಾಗಮೋಹನ್ ದಾಸ್ ಏಕಸದಸ್ಯ ವಿಚಾರಣಾ ಆಯೋಗ
ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ-2025
ಒಳಮೀಸಲಾತಿ ಜಾರಿಗಾಗಿ ಪರಿಶಿಷ್ಟ ಜಾತಿಗಳಲ್ಲಿನ ಮೂಲಜಾತಿಗಳ ಸಮೀಕ್ಷೆಗಾಗಿ ಮನೆ ಮನೆಗೆ ಭೇಟಿ ನೀಡಿದಾಗ ಒಳಮೀಸಲಾತಿ ಜಾತಿಗಣತಿಯಲ್ಲಿ ನಿಮ್ಮ ಮೂಲ ಜಾತಿ ಮಾದಿಗ ಎಂದು ಸ್ವಾಭಿಮಾನದಿಂದ ಹೇಳಿ, ಶೋಷಿತರ ಸದೃಢ ಸಮಾಜ ನಿರ್ಮಾಣಕ್ಕಾಗಿ ಸಹಕರಿಸಿ...
ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 101 ಜಾತಿಗಳಲ್ಲಿ ಬಹು ಮುಖ್ಯವಾಗಿ AA, AD, AK ಎಂದು ಕರೆಯಲ್ಪಡುವ ಜಾತಿಗಳು ಜಾತಿಗಳಲ್ಲ ! ಅವು ವಿವಿಧ ಜಾತಿ/ ಉಪಜಾತಿಗಳ ಗುಂಪುಗಳಿಗೆ ನೀಡಿರುವ ಜಾತಿ ಸೂಚಕ ಪದಗಳು, ಈಗ ನಡೆಸುತ್ತಿರುವ ಸಮೀಕ್ಷೆಯಲ್ಲಿ ನಾವು ಕಡ್ಡಾಯವಾಗಿ, ಮುಜುಗರವಿಲ್ಲದೇ ನಮ್ಮ ಮೂಲ ಜಾತಿ/ ಉಪಜಾತಿಗಳನ್ನು ನಮೂದಿಸಬೇಕು.
05.05.2025 ರಿಂದ 17.05.2025ರ ವರೆಗೆ ಮನೆ ಮನೆಗೆ ಭೇಟಿ | ಒಳಮೀಸಲಾತಿಗಾಗಿ ಗಣತಿಕಾರ್ಯ
ಗಣತಿದಾರರಿಗೆ ನಿಖರ ಮಾಹಿತಿ ನೀಡಿ
ವಿಶೇಷ ಶಿಬಿರಗಳಲ್ಲಿ ಸಮೀಕ್ಷೆ 19.05.2025 ರಿಂದ 21.05.2025ರ ವರೆಗೆ
ಸ್ವಯಂ ಘೋಷಣೆ ಆನ್‌ಲೈನ್ ಮೂಲಕ 19.05.2025 ರಿಂದ 23.05.2025 ರವರೆಗೆ
ಕುಟುಂಬದ ಸದಸ್ಯರು ಗಣತಿದಾರರು ಮನೆಮನೆಗೆ ಬೇಟಿ ನೀಡುತ್ತಾರೆ. ಓಟರ್ ಐಡಿ, ರೇಶನ್ ಕಾರ್ಡ್, ಆಧಾರ ಕಾರ್ಡ್ ತೆಗೆದಿಟ್ಟಕೊಂಡು ಅವುಗಳನ್ನು ತೋರಿಸಿ, ಗಣತಿ ಕಾರ್ಯಕ್ಕೆ ಸಹಕರಿಸಿ.
ಮಾದಿಗ ಸಮುದಾಯಕ್ಕೆ ಸೇರಿದವರು
ಕ್ರಮ ಸಂಖ್ಯೆ - 61 ಮಾದಿಗ ಎಂದೇ ನೊಂದಾಯಿಸಿಕೊಳ್ಳಲು ವಿನಂತಿ.
ಪ್ರಕಟಣೆ: ಕರ್ನಾಟಕ ಮಾದರ ಮಹಾಸಭಾ ಮತ್ತು ಮಾದಿಗ ಮೀಸಲಾತಿ ಹೋರಾಟ ಸಂಘಟನೆಗಳು
ಹೆಮ್ಮೆಯಿಂದ ಬರೆಯಿಸಿ ನಾವು ಮಾದಿಗ ಜಾತಿಯವರೆಂದು

ಸಂಕ್ಷಿಪ್ತ ಸುದ್ದಿ

ಬೋಧಿ ಸಪ್ತಾಹ ಇಂದಿನಿಂದ

ಬೆಂಗಳೂರು: ಬುದ್ಧ ಜಯಂತಿ ಅಂಗವಾಗಿ ಮೇ 6ರಿಂದ 12ರವರೆಗೆ ಬೋಧಿ ಸಪ್ತಾಹ ಆಯೋಜಿಸಲಾಗಿದೆ ಎಂದು ನಾಗಸೇನಾ ಬುದ್ಧ ವಿಹಾರ, ಭಾರತೀಯ ಬೌದ್ಧ ಮಹಾಸಭಾ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಎಂ. ವೆಂಕಟಸ್ವಾಮಿ, 'ಬೆಂಗಳೂರು ನಗರದ ಗಾಂಧಿನಗರ, ಯಶವಂತಪುರ, ಮಲ್ಲೇಶ್ವರ, ಹೆಬ್ಬಾಳ ವಿಧಾನಸಭಾ ಕ್ಷೇತ್ರಗಳ ಏಳು ಬಡವರ ಕಾಲೊನಿಗಳಲ್ಲಿ ಬೋಧಿ ಸಪ್ತಾಹ ಆಚರಿಸಲಾಗುತ್ತದೆ. ಬೌದ್ಧ ಚಿಂತನೆ ಪ್ರಚುರಪಡಿಸುವ ಪ್ರವಚನ ನಡೆಯಲಿದೆ' ಎಂದರು.

'ಮೇ 12ರಂದು ನಡೆಯುವ ಬುದ್ಧ ಜಯಂತಿ ದಿನದಂದು ಬೆಳಿಗ್ಗೆ 8.30ರಿಂದ ಬುದ್ಧನ ಪ್ರತಿಮೆಯ ಬೋಧಿರಥದ ಮೆರವಣಿಗೆಯು ಶ್ರೀರಾಮಪುರದ ಗೌತಮ ಕಾಲೊನಿಯಿಂದ ಹೊರಟು ಮಧ್ಯಾಹ್ನ 12ಗಂಟೆಗೆ ಸದಾಶಿವನಗರದಲ್ಲಿರುವ ನಾಗಸೇನಾ ಬುದ್ಧ ವಿಹಾರಕ್ಕೆ ತಲುಪಲಿದ್ದು, ಅಲ್ಲಿಯೇ ಬುದ್ಧ ಜಯಂತಿ ಆಚರಿಸಲಾಗುತ್ತದೆ' ಎಂದು ಹೇಳಿದರು.

ವಿವಿಧ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಉದಯಭಾನು ಕಲಾ ಸಂಘದ ವತಿಯಿಂದ ಮೇ ತಿಂಗಳಿನಿಂದ ಪ್ರಾರಂಭವಾಗುವ ಹೊಲಿಗೆ, ಕಸೂತಿ ಮತ್ತು ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಹೊಲಿಗೆ ಮತ್ತು ಕಸೂತಿ ತರಬೇತಿಗೆ ಮಹಿಳೆಯರು ಮತ್ತು ಯುವತಿಯರು ಅರ್ಜಿ ಸಲ್ಲಿಸಬಹುದು. ಬೆಳಿಗ್ಗೆ 11 ರಿಂದ ಮಧ್ಯಾಹ್ನ 1ರವರೆಗೆ, ಸಂಜೆ 4.30ರಿಂದ 6.30ರವರೆಗೆ ಎರಡು ಅವಧಿಗಳಲ್ಲಿ ತರಗತಿಗಳು ನಡೆಯಲಿವೆ. ಕಂಪ್ಯೂಟರ್ ತರಬೇತಿ ಪಡೆಯುವ ಆಸಕ್ತರು ಒಂದು ವಾರದೊಳಗೆ ಅರ್ಜಿ ಸಲ್ಲಿಸಬಹುದು ಎಂದು ಸಂಘದ ಗೌರವ ಕಾರ್ಯದರ್ಶಿ ರಾಧಾಕೃಷ್ಣ ಕೌಂಡಿನ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ: 080-26601831, 080-26609343.

ಇಸ್ರೊ ಬಡಾವಣೆಯಲ್ಲಿ 30 ವರ್ಷದಿಂದ ಅತಿಕ್ರಮಣವಾಗಿದ್ದ ಜಮೀನು ಮರುವಶ

ಒತ್ತುವರಿ ತೆರವು: ಹಸಿರೀಕರಣದತ್ತ ಚಿತ್ತ

• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬಡಾವಣೆ ನಿರ್ಮಿಸಿದ್ದ ಸಮಯದಿಂದಲೂ ಒತ್ತುವರಿಯಾಗಿಯೇ ಉಳಿದಿದ್ದ ಉದ್ಯಾನದ ಜಾಗವನ್ನು 30 ವರ್ಷದ ನಂತರ ಬಿಬಿಎಂಪಿ ವಶಕ್ಕೆ ಪಡೆದಿದೆ.

ಕುಮಾರಸ್ವಾಮಿ ಲೇಔಟ್ ವ್ಯಾಪ್ತಿಯಲ್ಲಿರುವ ಇಸ್ರೊ ಬಡಾವಣೆಯಲ್ಲಿ ಬಿಡಿಎ ಉದ್ಯಾನಕ್ಕೆಂದು ಜಾಗವನ್ನು ಮೀಸಲಿಟ್ಟಿತ್ತು. ಬಿಬಿಎಂಪಿಗೆ ಬಡಾವಣೆಯನ್ನು ಹಸ್ತಾಂತರ ಮಾಡುವಾಗಲೂ ಈ ಪ್ರದೇಶ ಒತ್ತುವರಿಯಾಗಿತ್ತು. ಈ ಪ್ರದೇಶದ ಒತ್ತುವರಿ ಇದೀಗ ತೆರವಾಗಿದ್ದು, ಹಸಿರೀಕರಣ ಮಾಡುವತ್ತ ಮುಂದಡಿ ಇರಿಸಿದೆ.

ಪದ್ಮನಾಭನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಉತ್ತರಹಳ್ಳಿ ತಾಲ್ಲೂಕು ಬಿಕಾಸಿಪುರ ಗ್ರಾಮದ ಸರ್ವೆ ನಂಬರ್ 1ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಬಿಡಿಎ ಇಸ್ರೊ ಬಡಾವಣೆ ನಿರ್ಮಾಣದ ಸಂದರ್ಭದಲ್ಲಿ ಉದ್ಯಾನಕ್ಕೆ ಮೀಸಲಿಟ್ಟಿತ್ತು. ಆದರೆ, ಈ ಪ್ರದೇಶವನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿದ್ದರು. ವೃತ್ತಾಕಾರದಲ್ಲಿ ಸಾಗುವ ರಾಜಕಾಲುವೆಯ ಅಕ್ಕಪಕ್ಕವೇ ಇರುವ ಈ ಜಮೀನಿನಲ್ಲಿ ಶೆಡ್ ಹಾಗೂ ಇತರೆ ನಿರ್ಮಾಣಗಳಿದ್ದವು. ಬಡಾವಣೆಯನ್ನು ಬಿಬಿಎಂಪಿಗೆ ಬಿಡಿಎ ಹಲವು ವರ್ಷಗಳ ಹಿಂದೆಯೇ ಹಸ್ತಾಂತರಿಸಿತ್ತು.



ಇಸ್ರೊ ಬಡಾವಣೆಯಲ್ಲಿ ನಿರ್ಮಾಣವಾಗಲಿರುವ ಉದ್ಯಾನದಲ್ಲಿ ವಾಕಿಂಗ್ ಟ್ರ್ಯಾಕ್, ತಂಗುದಾಣಗಳ ಮಾದರಿ

ಉದ್ಯಾನಕ್ಕಾಗಿಯೇ ಮೀಸಲಿಟ್ಟ ಜಾಗವನ್ನು ತೆರವುಗೊಳಿಸಲು ಬಿಬಿಎಂಪಿ ಹಲವು ಬಾರಿ ಪ್ರಯತ್ನಿಸಿತ್ತು. ಸ್ಥಳೀಯ ಲಾಬಿಯಿಂದ ಯಶಸ್ಸು ಸಿಕ್ಕಿರಲಿಲ್ಲ. ಎರಡು ತಿಂಗಳ ಹಿಂದೆ ಎಲ್ಲ ರೀತಿಯ ದಾಖಲೆಗಳನ್ನೂ ಸಂಗ್ರಹಿಸಿ, ಪೊಲೀಸ್ ಬಂದೋಬಸ್ತ್‌ನೊಂದಿಗೆ ಬಿಬಿಎಂಪಿ ದಕ್ಷಿಣ ವಲಯದ ಯೋಜನಾ ವಿಭಾಗದ ಎಂಜಿನಿಯರ್‌ಗಳು ಒತ್ತುವರಿಯನ್ನು ತೆರವುಗೊಳಿಸಿದರು.

ರಾಜಕಾಲುವೆ ಸುತ್ತಲಿರುವ ಈ ಪ್ರದೇಶದ ಸುತ್ತಲೂ ತಡೆಗೋಡೆ ನಿರ್ಮಿಸಿ, ಚರಂಡಿ ಮೂಲಕ ನೀರು ಹರಿಯುವ ವ್ಯವಸ್ಥೆಯನ್ನು ಮಾಡಲಾಗಿದೆ. ತಗ್ಗು ಪ್ರದೇಶವಾಗಿದ್ದ ಕಾರಣ, ದೊಡ್ಡ ಪ್ರಮಾಣದಲ್ಲಿ ಮಣ್ಣು ತುಂಬಿ ರಸ್ತೆಯ ಮಟ್ಟಕ್ಕೆ ತರಲಾಗಿದೆ. ಉದ್ಯಾನದ ಅಭಿವೃದ್ಧಿ ಕಾಮಗಾರಿ ಆರಂಭವಾಗಿದ್ದು, ಮೂರು ತಿಂಗಳಲ್ಲಿ ಮುಗಿಯಲಿದೆ ಎಂದು ಬಿಬಿಎಂಪಿ ದಕ್ಷಿಣ ವಲಯದ ಎಂಜಿನಿಯರ್ ತಿಳಿಸಿದರು.

'ರಾಜಕಾಲುವೆ ಸುತ್ತಲೂ ವೃತ್ತಾಕಾರದಲ್ಲಿರುವ ಈ ಪ್ರದೇಶದಲ್ಲಿ ಹಲವು ರೀತಿಯ ಸೌಲಭ್ಯಗಳನ್ನು ವಿಭಿನ್ನ ರೀತಿಯಲ್ಲಿ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಒಂದು ಕಡೆ, ವೃಕ್ಷ ವನವನ್ನಾಗಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಮತ್ತೊಂದೆಡೆ ಉದ್ಯಾನವನ್ನು ನಿರ್ಮಿಸಲಾಗುತ್ತಿದೆ. ಲಾನ್‌ನಂತಹ ವ್ಯವಸ್ಥೆ ಇಲ್ಲಿ ಇರುವುದಿಲ್ಲ. ವಾಯು ವಿಹಾರಿಗಳಿಗೆ 'ವಾಕಿಂಗ್ ಟ್ರ್ಯಾಕ್' ಮಾತ್ರ ನಿರ್ಮಿಸಲಾಗುತ್ತಿದೆ. ಉಳಿದ ಪ್ರದೇಶವನ್ನೆಲ್ಲ ಹಸಿರೀಕರಣ ಮಾಡಲು ಗಿಡಗಳನ್ನು ನೆಡಲಾಗುತ್ತದೆ. ಮಕ್ಕಳಿಗೆ ಆಟವಾಡಲು ಸಲಕರಣೆಗಳನ್ನು ಒಂದೆಡೆ ಅಳವಡಿಸಲಾಗುತ್ತಿದೆ. ವ್ಯಾಯಾಮ ಮಾಡಲು ಅನುಕೂಲವಾಗುವ ವ್ಯವಸ್ಥೆಯನ್ನೂ ಕಲ್ಪಿಸಲಾಗುತ್ತದೆ' ಎಂದು ಕಾರ್ಯಪಾಲಕ ಎಂಜಿನಿಯರ್ ಮಹಾಂತೇಶ್ ವಿವರಿಸಿದರು.

'ಹಲವು ವರ್ಷಗಳಿಂದ ಈ ಪ್ರದೇಶದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದ್ದವು. ಸುತ್ತಮುತ್ತಲಿನ ನಿವಾಸಿಗಳು ರಸ್ತೆಯಲ್ಲಿ ಸಂಚರಿಸುವುದಕ್ಕೂ ಭಯಪಡುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಹಲವು ಬಾರಿ ಬಿಬಿಎಂಪಿಗೆ ದೂರು ನೀಡಿ, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿಕೊಳ್ಳಲಾಗಿತ್ತು. ಕೊನೆಗೆ, ಬಡಾವಣೆ ನಿವಾಸಿಗಳು ಶಾಸಕ ಆರ್. ಅಶೋಕ ಅವರ ಮೇಲೆ ಹೆಚ್ಚಿನ ಒತ್ತಡ ಹಾಕಿದರು. ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ ಮೇಲೆ ಒತ್ತುವರಿ ತೆರವಾಗಿದೆ, ಸ್ವಚ್ಛವಾಗಿದೆ. ಶಾಸಕರೇ ಅನುದಾನ ನೀಡಿ, ಉದ್ಯಾನ ಮಾಡುವುದಾಗಿ ಹೇಳಿದ್ದಾರೆ. ಇದು ಒಳ್ಳೆಯ ಕ್ರಮ' ಎಂದು ಇಸ್ರೊ ಬಡಾವಣೆ ಸ್ಥಳೀಯ ನಿವಾಸಿ ಬಸವರಾಜು ತಿಳಿಸಿದರು.

₹3 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

'ಇಸ್ರೊ ಬಡಾವಣೆಯಲ್ಲಿ ಉದ್ಯಾನಕ್ಕೆಂದೇ ಮೀಸಲಿಟ್ಟಿರುವ ಈ ಪ್ರದೇಶದಲ್ಲಿ ವೃಕ್ಷವನ, ಉದ್ಯಾನ ಹಾಗೂ ವ್ಯಾಯಾಮ ಮಾಡುವ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಇದು ರಾಜಕಾಲುವೆಯ ಅಕ್ಕಪಕ್ಕವಿರುವ ಪ್ರದೇಶವಾಗಿದ್ದು, ಹಿರಿಯ ನಾಗರಿಕರ ವಾಯುವಿಹಾರಕ್ಕೆ ವಿಶೇಷ ರೀತಿಯಲ್ಲಿ ಸೌಲಭ್ಯ ಕಲ್ಪಿಸಲಾಗುತ್ತದೆ. ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಶಾಸಕ ಆರ್. ಅಶೋಕ ಅವರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ₹3 ಕೋಟಿ ವೆಚ್ಚದಲ್ಲಿ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ಬಿಬಿಎಂಪಿ ದಕ್ಷಿಣ ವಲಯದ ಯೋಜನಾ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಮಹಾಂತೇಶ್ ತಿಳಿಸಿದರು.

ಸರ್ಕಾರ ಇದ್ದರೆಷ್ಟು ಸತ್ತರೆಷ್ಟು: ಅಶೋಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕೆಪಿಎಸ್‌ಸಿ ಮುಖ್ಯ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಎರಡು ದಿನ ಮುಂಚೆಯೇ ಸೋರಿಕೆ ಆಗಿತ್ತು ಎನ್ನುವ ವಿಷಯ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಮತ್ತೆ ಮರ್ಮಾಘಾತ ನೀಡಿದೆ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಒಂದು ನೇಮಕಾತಿ ಪರೀಕ್ಷೆಯನ್ನು ನೆಟ್ಟಗೆ ನಡೆಸಲು ಕೈಲಾಗದಿರುವ ಈ ನಾಲಾಯಕ್ ಸರ್ಕಾರ ಇದ್ದರೆಷ್ಟು ಸತ್ತರೆಷ್ಟು' ಎಂದು ಅವರು 'ಎಕ್ಸ್' ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕೆಪಿಎಸ್‌ಸಿ ಪೂರ್ವಭಾವಿ ಪರೀಕ್ಷೆ, ಮರುಪರೀಕ್ಷೆ, ಮುಖ್ಯ ಪರೀಕ್ಷೆ ಹೀಗೆ ಮೂರು ಪರೀಕ್ಷೆಗಳಲ್ಲೂ ಆಗಿರುವ ಲೋಪದಿಂದ ಈಗಾಗಲೇ ಲಕ್ಷಾಂತರ ಕನ್ನಡ ಮಾಧ್ಯಮ ಅಭ್ಯರ್ಥಿಗಳು ಅನ್ಯಾಯಕ್ಕೊಳಗಾಗಿದ್ದಾರೆ' ಎಂದಿದ್ದಾರೆ.

'ಒಂದು ಸ್ಪರ್ಧಾತ್ಮಕ ಪರೀಕ್ಷೆಯನ್ನು ನೆಟ್ಟಗೆ ನಡೆಸಲಾಗದ ತಾವು ಯಾವ ಸೀಮೆ ಮುಖ್ಯಮಂತ್ರಿ ಸ್ವಾಮಿ? ತಮ್ಮ ಕೈಯಲ್ಲಿ ಆಡಳಿತ ನಡೆಸಲು ಸಾಧ್ಯವಿಲ್ಲ ಎನ್ನುವುದಾದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ. ಅದು ಬಿಟ್ಟು ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಿಗೆ ಈ ರೀತಿ ಪದೇ ಪದೇ ಯಾಕೆ ತೊಂದರೆ ಕೊಡುತ್ತೀರಿ' ಎಂದು ಅಶೋಕ ಪ್ರಶ್ನಿಸಿದ್ದಾರೆ.

63,982 ವಿದ್ಯಾರ್ಥಿಗಳಿಗೆ ಪದವಿ, 82 ಪಿಎಚ್‌.ಡಿ ಪ್ರದಾನ

ಆರೋಗ್ಯ ವಿ.ವಿ ಘಟಿಕೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ 27ನೇ ವಾರ್ಷಿಕ ಘಟಿಕೋತ್ಸವ ಮೇ 6ರಂದು ಬೆಳಿಗ್ಗೆ 11.30ಕ್ಕೆ ನಿಮ್ಹಾನ್ಸ್ ಸಮಾವೇಶ ಕೇಂದ್ರದಲ್ಲಿ ನಡೆಯಲಿದೆ.

ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದಾರೆ. ಅಜೀಂ ಪ್ರೇಮ್‌ಜಿ ಫೌಂಡೇಷನ್ ಅಧ್ಯಕ್ಷ ಅಜೀಂ ಪ್ರೇಮ್‌ಜಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ಉಪಸ್ಥಿತರಿರಲಿದ್ದಾರೆ ಎಂದು ವಿಶ್ವವಿದ್ಯಾಲಯದ ಕುಲಪತಿ ಭಗವಾನ್ ಬಿ.ಸಿ. ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಬಾರಿ ವಿಜ್ಞಾನಿ, ಸೆಂಟರ್ ಫಾರ್ ಹ್ಯೂಮನ್ ಜೆನೆಟಿಕ್ಸ್ ಕೇಂದ್ರದ ಮುಖ್ಯಸ್ಥ ಹೊಂಬೇಗೌಡ ಶರತ್‌ಚಂದ್ರ, ಒಎಂಎಫ್ ಸರ್ಜನ್ ಡಾ. ಗಿರೀಶ್ ರಾವ್ ಮತ್ತು ನರರೋಗ ತಜ್ಞ ಡಾ. ಜಿ.ಟಿ. ಸುಭಾಷ್ ಅವರಿಗೆ ಡಾಕ್ಟರ್ ಆಫ್ ಸೈನ್ಸ್ ಗೌರವ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

93 ವಿದ್ಯಾರ್ಥಿಗಳಿಗೆ 109 ಚಿನ್ನದ ಪದಕ ಸೇರಿ 63,982 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ. 82 ಪಿಎಚ್‌.ಡಿ., 265 ಸೂಪರ್ ಸ್ಪೆಷಾಲಿಟಿ 8,588 ಸ್ನಾತಕೋತ್ತರ ಪದವಿ, 6 ಸ್ನಾತಕೋತ್ತರ ಡಿಪ್ಲೊಮಾ, 515 ಫೆಲೋಶಿಪ್ ಕೋರ್ಸ್, 9 ಸರ್ಟಿಫಿಕೇಟ್ ಕೋರ್ಸ್ ಹಾಗೂ 54,517 ಸ್ನಾತಕ ಅಭ್ಯರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ. ಒಟ್ಟು ಶೇ 87.49ರಷ್ಟು ಫಲಿತಾಂಶ ಪ್ರಕಟವಾಗಿದೆ ಎಂದು ತಿಳಿಸಿದರು.

ಗಿರೀಶ್‌ಗೆ 6 ಚಿನ್ನ: ಪಿಇಎಸ್ ಫಾರ್ಮಸಿ ಕಾಲೇಜಿನ ಫಾರ್ಮಾ ಡಿ. ಕೋರ್ಸ್‌ನ ಡಾ. ಗಿರೀಶ್ ಬಿ.ಎಸ್. ಆರು ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದಾರೆ. ಉಜಿರೆಯ ಎಸ್.ಡಿ.ಎಂ. ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನ ಡಾ. ಗನ್ಯಾಶ್ರೀ (ಆಯುಷ್) 4, ಶಿವಮೊಗ್ಗ ಶರಾವತಿ ದಂತ ಕಾಲೇಜಿನ ಡಾ. ಪ್ರಕೃತಿ ಸಿ. ಪಾಟೀಲ ಅವರು 3 ಚಿನ್ನದ ಪದಕ ಮತ್ತು 4 ನಗದು ಬಹುಮಾನ ಹಾಗೂ ನೈಟಿಂಗೇಲ್ ನರ್ಸಿಂಗ್ ಕಾಲೇಜಿನ ಅಲೀನಾ ಜೋಸ್ (ಬಿಎಸ್‌ಸಿ ನರ್ಸಿಂಗ್) 3 ಚಿನ್ನದ ಪದಕಗಳನ್ನು ಪಡೆದಿದ್ದಾರೆ. 22 ಕ್ಯಾರೆಟ್‌ನ 5 ಗ್ರಾಂ. ತೂಕದ ಚಿನ್ನದ ಪದಕವನ್ನು ನೀಡಲಾಗುತ್ತದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಪಿ.ಆರ್. ಶಿವಪ್ರಸಾದ್ ಮತ್ತು ಮೌಲ್ಯಮಾಪನ ಕುಲಸಚಿವ ಡಾ. ರಿಯಾಜ್ ಬಾಷ ಎಸ್. ಉಪಸ್ಥಿತರಿದ್ದರು.

₹ 1,400 ಕೋಟಿ ಆದಾಯ

ರಾಜೀವ ಗಾಂಧಿ ಆರೋಗ್ಯ ವಿವಿಯು ಸರ್ಕಾರದಿಂದ ಯಾವುದೇ ರೀತಿಯಲ್ಲಿ ಆರ್ಥಿಕ ಅನುದಾನ ಪಡೆಯುವುದಿಲ್ಲ. ವಿದ್ಯಾರ್ಥಿಗಳ ಶುಲ್ಕ, ಕಾಲೇಜುಗಳ ಸಂಯೋಜನೆಯಿಂದಲೇ ₹ 1,400 ಕೋಟಿ ಆದಾಯವಿದೆ ಎಂದು ಕುಲಪತಿ ಬಿ.ಸಿ. ಭಗವಾನ್ ತಿಳಿಸಿದರು.

ಸುಮಾರು ₹ 600 ಕೋಟಿ ವೆಚ್ಚದಲ್ಲಿ ರಾಮನಗರದ ಅರ್ಚಕರ ಹಳ್ಳಿಯಲ್ಲಿ ನಿರ್ಮಿಸುತ್ತಿರುವ ಆರ್‌ಜಿಯುಎಚ್‌ಎಸ್ ಕ್ಯಾಂಪಸ್ 2026ರ ಏಪ್ರಿಲ್‌ವೇಳೆಗೆ ಸಿದ್ಧವಾಗಲಿದೆ. ಕಾಮಗಾರಿಗೆ ಸದ್ಯ ₹ 300 ಕೋಟಿ ಅನುದಾನ ಒದಗಿಸಲಾಗಿದೆ. ಸದ್ಯ ಶೇ 30ರಷ್ಟು ಕೆಲಸ ಪೂರ್ಣಗೊಂಡಿದೆ. ಇನ್ನಷ್ಟು ಕೆಲಸಗಳಾಗುತ್ತಿದ್ದಂತೆ ಉಳಿದ ಅನುದಾನ ಒದಗಿಸಲಾಗುವುದು ಎಂದರು.

2025-26ನೇ ಸಾಲಿಗೆ ರಾಮನಗರ ಮತ್ತು ಕನಕಪುರ ವೈದ್ಯಕೀಯ ಕಾಲೇಜುಗಳಿಗೆ ಮಾನ್ಯತೆ ನೀಡಲಾಗಿದೆ. ಸರ್ಕಾರವು ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿಗೆ (ಎನ್‌ಎಂಸಿ) ರಾಜ್ಯ ಸರ್ಕಾರವು ಮಾನ್ಯತೆ ಕೋರಿ ಅರ್ಜಿ ಸಲ್ಲಿಸಲಿದೆ ಎಂದು ಮಾಹಿತಿ ನೀಡಿದರು.

ತುಮಕೂರು: ಕ್ರಿಕೆಟ್ ಮೈದಾನಕ್ಕೆ 41 ಎಕರೆ ಜಮೀನು ಹಸ್ತಾಂತರ

ಎಂ.ಬಿ. ಪಾಟೀಲ ಅವರು ಕೆಎಸ್‌ಸಿಎ ಪದಾಧಿಕಾರಿಗಳಿಗೆ ಭೂಸ್ವಾಧೀನದ ಪತ್ರ ವಿತರಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರಿನ ವಸಂತ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಕ್ರೀಡಾಂಗಣ ನಿರ್ಮಿಸಲು 41 ಎಕರೆ ಜಮೀನಿನ ಸ್ವಾಧೀನ ಪತ್ರವನ್ನು ಸಚಿವ ಎಂ.ಬಿ. ಪಾಟೀಲ ಹಸ್ತಾಂತರಿಸಿದರು.

ಸ್ವಾಧೀನ ಪತ್ರವನ್ನು ಪಡೆದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಪದಾಧಿಕಾರಿಗಳು, 'ಈಗ ಕೊಟ್ಟಿರುವ ಜಾಗದ ಪಕ್ಕದಲ್ಲಿರುವ 6 ಎಕರೆ 20 ಗುಂಟೆ ಖರಾಬು ಜಮೀನನ್ನು ಕೆಎಸ್‌ಸಿಎಗೆ ನೀಡಬೇಕು' ಎಂದು ಮನವಿ ಸಲ್ಲಿಸಿದರು.

ಇದಕ್ಕೆ ಸ್ಪಂದಿಸಿದ ಸಚಿವ ಎಂ.ಬಿ. ಪಾಟೀಲ, ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ತುಮಕೂರು ಸೇರಿದಂತೆ ರಾಜ್ಯದ ಹಲವೆಡೆ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣಗಳು ನಿರ್ಮಾಣ ಆಗಬೇಕಾದ ಅಗತ್ಯವಿದೆ ಎಂದರು.

'ಬೆಂಗಳೂರಿಗೆ ಹೊಂದಿಕೊಂಡಂತಿರುವ ತುಮಕೂರು ಜಿಲ್ಲೆಯು ಬೆಳೆಯುತ್ತಿದೆ. ಅಲ್ಲಿ ಒಂದು ಸುಸಜ್ಜಿತ ಕ್ರಿಕೆಟ್ ಕ್ರೀಡಾಂಗಣ ಅಗತ್ಯವಿದೆ ಎಂದು ಗೃಹ ಸಚಿವ ಪರಮೇಶ್ವರ ಅವರು ಹೇಳುತ್ತಿದ್ದಾರೆ. ತುಮಕೂರಿನಲ್ಲೂ ಒಂದು ಕ್ರೀಡಾಂಗಣ ಬಂದರೆ ಅಲ್ಲಿನ ಪ್ರತಿಭೆಗಳಿಗೆ ಉಜ್ವಲ ಅವಕಾಶಗಳು ಸಿಗಲಿವೆ' ಎಂದು ಸಚಿವರು ಹೇಳಿದರು.

'ವಿಜಯಪುರದಲ್ಲೂ ಇಂಥದ್ದೊಂದು ಕ್ರೀಡಾಂಗಣ ಬರಬೇಕು ಎನ್ನುವುದು ತಮ್ಮ ಕನಸಾಗಿದೆ. ಇಂತಹ ಮೈದಾನದಲ್ಲಿ ಪಂಚತಾರಾ ಹೋಟೆಲ್ ಸೇರಿ ಅನೇಕ ಅನುಕೂಲಗಳು ಬರಲಿವೆ. ಕ್ರೀಡೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಕೆಐಎಡಿಬಿ ಮೂಲಕ 41 ಎಕರೆ ಜಾಗವನ್ನು ರಿಯಾಯಿತಿ ದರದಲ್ಲಿ ಅಂದರೆ ಎಕರೆಗೆ ₹15 ಲಕ್ಷದಂತೆ ನೀಡಲಾಗಿದೆ' ಎಂದರು.

Hg dt 19.06.2025

IN THE COURT OF THE HON'BLE I ADDL PRINCIPLE CIVIL JUDGE AT BANGALORE CCH-2
P& SC. No.148/2024

BETWEEN:
1. **Mr. K.N.Hari Kumar,** Aged about 72 years, S/o Late Mr. K.A.Nettakallappa, Aged about 71 years, 22, 1st 'A' Main Road, Block 1, RMV 2nd stage, Bangalore-560094
2. **Mr. K.N.Tilak Kumar,** Aged about 71 years, S/o Late Mr. K.A.Nettakallappa, 173, Subbarama Chetty Road, Basavanagudi, Bangalore-560004
3. **Mr. K.N.Shanth Kumar,** Aged about 63 years, S/o Late Mr. K.A.Nettakallappa, 298/A, 1st Main Road, 8th Block, Jayanagar, Bangalore- 560082 **PETITIONERS**

AND

NIL **RESPONDENT/S**

PUBLIC NOTICE

Whereas the petitioner have filed the above petition under section 376 read with 372 of the Indian Succession Act, 1925, for the grant of succession certificate in their favour holding that they are entitled to succeed title over the share certificates and bank account of their mother Late Mrs. K.N.Jambavathi alias Jambavathi Nettakalappa who died on 27/06/1995.

Interested parties are hereby notified to appear before the Hon'ble court in person or by pleader duly instructed on **19 of June 2025 at 11 'o' Clock** to show-cause against the above petition, take notice that, in default of your appearance on the date aforementioned, the petition will be heard and determined in your absence.

Details of the assets that standing in the name of the Late. Mrs. K.N Jambavathi alias Jambavathi Nettakalappa.

SCHEDULE PROPERTIES

I. Equity Shares

NAME OF THE COMPANY AND FOLIO NUMBER	Certificate Nos.	Distinctive Nos From	Distinctive Nos To	No. of Equity Shares
ABB India Limited **J0002590**	269476	37539196	37539245	50
	269477	37539246	37539295	50
	269478	37539296	37539345	50
	269479	37539346	37539395	50
	269480	37539396	37539405	10
	269481	37539406	37539415	10
	269482	37539416	37539416	01
	269483	37539417	37539417	01
	902225	933799970	933800635	666
			Total	888
Glaxo Smith Kline Pharmaceuticals Limited **0147071**	42105	6602926	6602955	30
	98981	10417651	10417665	15
	380018	14018341	14018355	15
	431129	28560708	28560720	13
	842362	37816651	37816700	50
	842363	37816701	37816710	10
	842364	37816711	37816720	10
	842365	37816721	37816721	01
	842366	37816722	37816722	01
	842367	37816723	37816723	01
	1290912	171621914	171622059	146
			Total	292
Mahindra & Mahindra Limited **N003209**	424049	1242473217	1242476548	3332
	2016742	5535917	5539248	3332
			Total	6664
Essel Propack Limited **J01436**			Total	12800
Sterlite Technologies Limited **K55145**	192654	0158872614 - 0158872863		250
		0320506869 - 0320507118		250
			Total	500
Peirce Leslie India Limited **00002815**	5141	385466 - 385525		60
	8872	466046 - 466075		30
	13092 -13095	968041-968240		200
			Total	290
Hitachi energy India Ltd **APS0158901**	158901	42372492	42373379	
			Total	888
Reliance Capital Ltd **108095903**	16726210	226817081	226817130	
			Total	50
Reliance Communications Ltd **012538651**	1179375	77106212	77107211	
			Total	1000
Reliance Infrastructure Ltd **108095903**	16305326	216468598	216468672	
			Total	75

II. Savings Bank Account
Savings bank account with Kotak Mahindra Bank Bearing Account No.134010000791 held at Nettakallappa circle branch, Bangalore.

Given under my hand and seal of this Court on this 21st day of April 2025

Advocate for the petitioners
Tarunn Surana, Surana & Co
No. 58, Railway Parallel Road, Kumarapark West Bangalore - 560020
Email: **office@suranaandco.com** Ph. **+91 9845910663**

By the order of the court
Bengaluru city

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, (ಕ್ಯೂಎ/ಕ್ಯೂಸಿ) ವಿಭಾಗ, ಪಶ್ಚಿಮ, ರೂಂ ನಂ.101, ಅನೆಕ್ಸ್-3 ಬಿಲ್ಡಿಂಗ್, ಬಿಬಿಎಂಪಿ ಎನ್ ಆರ್ ಸ್ಕ್ವೇರ್, ಬೆಂಗಳೂರು-02

ನಂ.: ಕಾಅ(ಕ್ಯೂಎ/ಕ್ಯೂಸಿ)/ಪಶ್ಚಿಮ/ಟೆಂಡರ್/04/2025-26 ದಿನಾಂಕ : 05.05.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ (2ನೇ ಕರೆ)
(ದ್ವಿ ಲಕೋಟೆ ಪದ್ಧತಿ)
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮೂಲಕ ಮಾತ್ರ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಕ್ಯೂಎ/ಕ್ಯೂಸಿ (ಬೆಂಗಳೂರು ಪಶ್ಚಿಮ ವಲಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗುಣಮಟ್ಟ ಭರವಸೆ/ಗುಣಮಟ್ಟ ನಿಯಂತ್ರಣ ವಿಭಾಗದಿಂದ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ ಕೆಳಗಿನ ಕಾಮಗಾರಿಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (PMC) ಸೇರಿದಂತೆ ಯೋಜನಾ ನಿರ್ವಹಣೆಗಾಗಿ ಸಲಹಾ ಸೇವೆಗಳಿಗಾಗಿ ಇದೇ ರೀತಿಯ ಕಾಮಗಾರಿಯನ್ನು ಮಾಡಿದ ಆಸಕ್ತ ವ್ಯಕ್ತಿಗಳು/ಸಂಸ್ಥೆಗಳಿಂದ ಪ್ರಸ್ತಾವನೆಗಳಿಗಾಗಿ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	"ಕೃಷ್ಣಾನಂದ ನಗರದ ಕರ್ನಾಟಕ ಪಬ್ಲಿಕ್ ಶಾಲೆಗೆ ಇ-ಲೈಬ್ರರಿ ವ್ಯವಸ್ಥೆ ಮತ್ತು ಇತರ ಉಪಕರಣಗಳ ಖರೀದಿ ಮತ್ತು ವಾರ್ಡ್ ಸಂಖ್ಯೆ 46 ರಾಜೀವ್‌ನಗರದಲ್ಲಿ ಸಂಬಂಧಿತ ಕೆಲಸಗಳು ಮತ್ತು ಪೈಪ್‌ಲೈನ್ ಕೆಲಸಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು"-2ನೇ-ಕರೆ ಅಂದಾಜು ವೆಚ್ಚ : ರೂ.210.00 ಲಕ್ಷಗಳು, ಇಎಂಡಿ ಮೊತ್ತ ರೂ. 4,700/-
2.	"ವಾರ್ಡ್ ಸಂಖ್ಯೆ 51, ಶಂಕರಮಠದ ಕುರುಬರಹಳ್ಳಿ ಸರ್ಕಾರಿ ಶಾಲೆಯ ಅಭಿವೃದ್ಧಿ ಮತ್ತು ಸಂಬಂಧಿತ ಕೆಲಸಗಳಿಗೆ (ಹಂತ-6) ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು" – 2ನೇ-ಕರೆ. ಅಂದಾಜು ವೆಚ್ಚ : ರೂ.188.00 ಲಕ್ಷಗಳು, ಇಎಂಡಿ ಮೊತ್ತ ರೂ. 3,800/-
3.	"ಮಹಾಲಕ್ಷ್ಮಿ ಲೇಔಟ್ ಕ್ಷೇತ್ರದಲ್ಲಿ ಬೀದಿ ದೀಪಗಳು ಮತ್ತು ಉದ್ಯಾನ ದೀಪಗಳ ಅಭಿವೃದ್ಧಿ ಮತ್ತು ವಾರ್ಡ್ ಸಂಖ್ಯೆ 49 ನಾಗಪುರದಲ್ಲಿರುವ ಉದಯ ಕುಮಾರ್ ಉದ್ಯಾನವನದಲ್ಲಿ ಬಿಬಿಎಂಪಿ ಸಂಕೀರ್ಣಕ್ಕೆ ವಿದ್ಯುದ್ದೀಕರಣ ಒದಗಿಸುವುದಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು – 2ನೇ-ಕರೆ. ಅಂದಾಜು ವೆಚ್ಚ : ರೂ.105.00 ಲಕ್ಷಗಳು, ಇಎಂಡಿ ಮೊತ್ತ ರೂ. 2,200/-
4.	ವಾರ್ಡ್ ಸಂಖ್ಯೆ-51 ಶಂಕರಮಠದಲ್ಲಿರುವ ಕುರುಬರಹಳ್ಳಿ ಸರ್ಕಾರಿ ಶಾಲಾ ಕಟ್ಟಡ ಹಂತ-7 (ಬಾಕಿ ಉಳಿದಿರುವ ಕೆಲಸ) ನಿರ್ಮಾಣಕ್ಕಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು"- 2ನೇ-ಕರೆ. ಅಂದಾಜು ವೆಚ್ಚ : ರೂ.250.00 ಲಕ್ಷಗಳು, ಇಎಂಡಿ ಮೊತ್ತ ರೂ. 6,000/-
5.	ವಾರ್ಡ್ ಸಂಖ್ಯೆ 53, ವೃಷಭಾವತಿನಗರದಲ್ಲಿರುವ ಎನ್‌ಜಿಒ ಕಾಲೋನಿಯಲ್ಲಿ ಬಿಬಿಎಂಪಿ ಪ್ರೌಢಶಾಲಾ ಕಟ್ಟಡಕ್ಕೆ ಹೆಚ್ಚುವರಿ ತರಗತಿ ಕೊಠಡಿ ನಿರ್ಮಾಣ ಮತ್ತು ಇತರ ಸಂಬಂಧಿತ ಕೆಲಸಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು" -2ನೇ-ಕರೆ. ಅಂದಾಜು ವೆಚ್ಚ : ರೂ.282.00 ಲಕ್ಷಗಳು, ಇಎಂಡಿ ಮೊತ್ತ ರೂ. 6,000/-

ಷೆಡ್ಯೂಲ್‌ನ ಸಮಯ /ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಯನ್ನು ಇ-ಪೋರ್ಟಲ್ ಫಾರ್ಮ್ ಮೂಲಕ ಡೌನ್‌ಲೋಡ್ ಮಾಡುವ ದಿನಾಂಕ: **06.05.2025.** (2) ಬಿಡ್ ಪೂರ್ವ ಸಭೆ: **ದಿನಾಂಕ 12.05.2025 ರಂದು ಬೆಳಿಗ್ಗೆ 11.30 ಕ್ಕೆ** ಕಾರ್ಯಪಾಲಕ ಅಭಿಯಂತರರು, (ಕ್ಯೂಎ/ಕ್ಯೂಸಿ) ಕಚೇರಿ ಆರ್. ನಂ.101. ಅನೆಕ್ಸ್-3 ಬಿಲ್ಡಿಂಗ್, ಬಿಬಿಎಂಪಿ ಎನ್ ಆರ್ ಸ್ಕ್ವೇರ್, ಬೆಂಗಳೂರು -560 002 (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **17.05.2025 ರಂದು ಸಂಜೆ 04.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **19.05.2025 ರಂದು ಸಂಜೆ 04.30 ರೊಳಗೆ.** (5) **ಟೆಂಡರ್‌ನ ಸಿಂಧುತ್ವ:** ಟೆಂಡರ್ ಸ್ವೀಕರಿಸಿದ ಕೊನೆಯ ದಿನಾಂಕದಿಂದ 90 ದಿನಗಳು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕ್ಯೂಎ/ಕ್ಯೂಸಿ ವಿಭಾಗ, ಪಶ್ಚಿಮ ವಲಯ

ಕಾಂಗ್ರೆಸ್ ಅವಧಿಯಲ್ಲಿ ಹೆಚ್ಚು ಕೊಲೆ: ಜೋಶಿ

ಹುಬ್ಬಳ್ಳಿ: 'ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ, ಮಂಗಳೂರಿನಲ್ಲಿ ಹೆಚ್ಚು ಕೋಮು ಪ್ರಚೋದಕ ಕೊಲೆ ನಡೆದಿವೆ. ಸರ್ಕಾರ ತಮ್ಮನ್ನು ರಕ್ಷಿಸುತ್ತದೆ ಎಂಬ ಭಾವನೆ ಒಂದು ವರ್ಗಕ್ಕೆ ಇರುವ ಕಾರಣ ಕಾನೂನು ಸುವ್ಯವಸ್ಥೆ ಹದಗೆಡಿಸುವ ಕೃತ್ಯ ನಡೆಯುತ್ತಿದೆ' ಎಂದು ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

ಎಸ್‌ಎಸ್‌ಎಲ್‌ಸಿ ಸಾಧಕರು

ಶ್ರೀ ವೆಂಕಟೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೆ.ಆರ್. ಪುರ

ಡಿ. ಕೀರ್ತಿ ರೆಡ್ಡಿ (ಶೇ 98.4)

ಜಯಶ್ರೀ ಎಸ್. (ಶೇ 97.44)

ಗ್ರೇಸಿ ಪಿ. (ಶೇ 97.28)

ಕೀರ್ತನಾ ಕೆ. (ಶೇ 97.12)

ಶ್ರೇಯಾ (ಶೇ 96.96)

ಅರುಣೋದಯ ಪ್ರೌಢಶಾಲೆ, ಸುಂಕದಕಟ್ಟೆ

ಶಾಲಿನಿ ಆರ್. (ಶೇ 99.52)

ಅನುಶ್ರೀ ಎಚ್‌.ಪಿ. (ಶೇ 99.04)

ಚಂದುಶ್ರೀ ಕೆ.ಬಿ. (ಶೇ 97.28)

ಅಮೂಲ್ಯ (ಶೇ 97.12)

ಅಫೀಫಾ ಕೌನೈನ್ (ಶೇ 97.6)

ರಾವುತ್ತನಹಳ್ಳಿ ಸರ್ಕಾರಿ ಪ್ರೌಢಶಾಲೆ, ಸೊಂಡೆಕೊಪ್ಪ ಕ್ಲಸ್ಟರ್
ಮಾನಸ ಕೆ.ಆರ್. (621)

ನೈಋತ್ಯ ರೈಲ್ವೆ
ಇ-ಟೆಂಡರ್ ಪ್ರಕಟಣೆ ಸಂ. ವೈ/ಇ.29/2025-26/04
ದಿನಾಂಕ : 25-04-2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಮೈಸೂರಿನ ಸಿಎನ್‌ಸಿ ಫ್ಲೋರ್ ವೀಲ್ ಲೇತ್‌ಗಾಗಿ ವಿದ್ಯುತ್ ಸರಬರಾಜು ವ್ಯವಸ್ಥೆಗಳನ್ನು ಒದಗಿಸುವುದು.	ರೂ. 35,70,863/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **16-05-2025 ರಂದು 11:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಸಾಮಾನ್ಯ ಮೈಸೂರು
ಪಿಯುಬಿ/78/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26
South Western Railway - SWR | SWRRLY | SWRRLY

ಕರ್ನಾಟಕ ಗೃಹ ಮಂಡಳಿ
ಸಾರ್ವಜನಿಕ ಪ್ರಕಟಣೆ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, ಕಾವೇರಿಭವನ, ಬೆಂಗಳೂರು
ಸಂಖ್ಯೆ :ಕಗೃಮಂ/ಸಕಾಅ/ಬೆಂನಜಿಯೋಕ/39/2024-25, ದಿನಾಂಕ: 05-05-2025

ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ಬ್ಯಾಲಾಳು ಗ್ರಾಮದಲ್ಲಿ ಅಭಿವೃದ್ಧಿ-ಪಡಿಸಿರುವ ಬಡಾವಣೆಯಲ್ಲಿನ ನಿವೇಶನ ಸಂಖ್ಯೆ: B1-1254-MIG ನ್ನು ಶ್ರೀಮತಿ ಹೆಚ್.ಬಿ. ಲೀಲಾವತಿ ಎಂಬುವವರಿಗೆ ದಿನಾಂಕ: 27.01.2025 ರಂದು ಹಂಚಿಕೆ ಮಾಡಲಾಗಿರುತ್ತದೆ. ಸದರಿ ನಿವೇಶನದ ಹಂಚಿಕೆದಾರರಾದ **ಶ್ರೀಮತಿ ಹೆಚ್.ಬಿ. ಲೀಲಾವತಿ** ರವರು ದಿನಾಂಕ: 25.02.2023 ರಂದು ಮರಣ ಹೊಂದಿರುತಾರೆ. ಈ ಹಿನ್ನೆಲೆಯಲ್ಲಿ ಸದರಿ ನಿವೇಶನದ ಹಂಚಿಕೆಯನ್ನು ದಿವಂಗತರ ಮಗಳಾದ **ಶ್ರೀಮತಿ. ನಾಗವೇಣಿ .ಡಿ** ರವರ ಹೆಸರಿಗೆ ನಿಯಮಾನುಸಾರ ವರ್ಗಾವಣೆ ಮಾಡಲು ಕೋರಿರುತ್ತಾರೆ. ಆದ್ದರಿಂದ ಅರ್ಜಿದಾರರ ಮನವಿಯಂತೆ ಸದರಿ ನಿವೇಶನದ ಹಂಚಿಕೆ ವರ್ಗಾವಣೆ ಪ್ರಕ್ರಿಯೆ ಆರಂಭಿಸಿದ್ದು, ಈ ಸಂಬಂಧ ಯಾವುದೇ ತಕರಾರು/ ಆಕ್ಷೇಪಣೆ ಇದ್ದಲ್ಲಿ ಈ ಪ್ರಕಟಣೆ ಪ್ರಕಟಗೊಂಡ ದಿನಾಂಕದಿಂದ **7 (ಏಳು) ದಿನಗಳೊಳಗಾಗಿ** ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ, 5ನೇ ಮಹಡಿ, ಕಾವೇರಿಭವನ, ಬೆಂಗಳೂರು-560009 ರವರಿಗೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದೊಳಗೆ ಯಾವುದೇ ತಕರಾರು/ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ಮಗಳಾದ ಶ್ರೀಮತಿ. ನಾಗವೇಣಿ .ಡಿ ರವರ ಹೆಸರಿಗೆ ವರ್ಗಾವಣೆ ಮಾಡಿ ಕ್ರಯಪತ್ರವನ್ನು ನಿರ್ವಹಿಸಿಕೊಡಲು ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು ಹಾಗೂ ಸದರಿಯವರಿಗೆ ಶುದ್ಧ ಕ್ರಯಪತ್ರವನ್ನು ನೀಡಲಾಗುವುದು. ನಿಗಧಿತ ದಿನಾಂಕದ ನಂತರ ಬರುವ ಯಾವುದೇ ತಕರಾರು/ಆಕ್ಷೇಪಣೆ ಮನವಿಗಳನ್ನು ಪರಿಗಣಿಸುವುದಿಲ್ಲ ಎಂದು ಈ ಮೂಲಕ ತಿಳಿಯಪಡಿಸಿದೆ.

ಸಹಾಯಕ ಕಂದಾಯ ಅಧಿಕಾರಿ
ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲಾ ಯೋಜನಾ ಕಛೇರಿ
5ನೇ ಮಹಡಿ, ಕಾವೇರಿ ಭವನ, ಬೆಂಗಳೂರು- 09.

ಇಲೆಕ್ಟ್ರಾನಿಕ್ಸ್ ಮತ್ತು ರಡಾರ್ ಅಭಿವೃದ್ಧಿ ಸಂಸ್ಥೆ
ಡಿಆರ್‌ಡಿಒ ಕಾಂಪ್ಲೆಕ್ಸ್, ಸಿ.ವಿ.ರಾಮನ್ ನಗರ, ಬೆಂಗಳೂರು-560093
ಎಲ್‌ಆರ್‌ಡಿಇ: ಜಾಹೀರಾತು ಸಂ. 01/ಅಡ್ಮಿನ್-ಎಂಐ ರೂಮ್/2025

ಇಲೆಕ್ಟ್ರಾನಿಕ್ಸ್ ಮತ್ತು ರಡಾರ್ ಅಭಿವೃದ್ಧಿ ಸಂಸ್ಥೆ (ಎಲ್‌ಆರ್‌ಡಿಇ) ಎಂಬ ಈ ಸಂಸ್ಥೆಯು ರಕ್ಷಣಾ ಸಚಿವಾಲಯದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಅಡಿಯಲ್ಲಿನ ಒಂದು ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದ್ದು, ಇದರು ರಡಾರ್‌ಗಳು, ಇಲೆಕ್ಟ್ರಾನಿಕ್ಸ್ ಸಿಸ್ಟಮ್ಸ್ ಮತ್ತು ಸಂಬಂಧಿತ ತಂತ್ರಜ್ಞಾನಗಳ ಕ್ಷೇತ್ರದಲ್ಲಿನ ಅಗತ್ಯ ಸೇವೆಗಳನ್ನು ಪೂರೈಸುತ್ತದೆ. ಇದೀಗ ಈ ಸಂಸ್ಥೆಯು ಗುತ್ತಿಗೆ ಆಧಾರದ ಮೇರೆಗೆ ಸಿವಿಲಿಯನ್ ಮೆಡಿಕಲ್ ಆಫೀಸರ್ ಎಂಬ ಸೇವೆಗಳಿಗೆ ತೊಡಗಿಸಿಕೊಳ್ಳಲು, ಕೆಳಕಂಡ ಅರ್ಹತಾ ಮಾನದಂಡಗಳನ್ನು ಪೂರೈಸಬಲ್ಲ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:

ಹುದ್ದೆಯ ಹೆಸರು: ಸಿವಿಲಿಯನ್ ಮೆಡಿಕಲ್ ಆಫೀಸರ್ (ಗುತ್ತಿಗೆ ಆಧಾರದ ಮೇರೆಗೆ)
ಅಗತ್ಯ ವಿದ್ಯಾರ್ಹತೆ: ಎಂಬಿಬಿಎಸ್ (ಕರ್ನಾಟಕ ವೈದ್ಯಕೀಯ ಪರಿಷತ್ ನೋಂದಣಿ ಪಡೆದಿರಬೇಕು)
ಅಪೇಕ್ಷಿತ ಅರ್ಹತೆ: ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೆಲಸ ಮಾಡಿದ ಅನುಭವ.
ಕೆಲಸದ ಸಮಯ: 0800 ರಿಂದ 1630 ಗಂಟೆ (ಸೋಮವಾರ ದಿಂದ ಶುಕ್ರವಾರ)
ಸಂಭಾವಣೆ: ಮಾಸಿಕ (ಕ್ರೋಢಿಕೃತ/ನಿಗದಿತ) ಸಂಭಾವಣೆ ರೂ.60,000/-
ಗುತ್ತಿಗೆ ಅವಧಿ: ಒಂದು ವರ್ಷ (ಒಂದು ಬಾರಿಗೆ ಒಂದು ವರ್ಷದಂತೆ 3 ವರ್ಷಗಳವರೆಗೆ ವಿಸ್ತರಿಸಬಹುದಾಗಿರುತ್ತದೆ) ಅಥವಾ ರೆಗ್ಯೂಲಾರ್ ಅಭ್ಯರ್ಥಿಯ ನಿಯೋಜನೆ ಆಗುವವರೆಗೆ, ಇದರಲ್ಲಿ ಯಾವುದು ಮೊದಲೊ ಅದು.

ಬಿಳಿ ಹಾಳೆಯ ಮೇಲೆ ಟೈಪ್ ಮಾಡಲಾದ ಅರ್ಜಿಯನ್ನು ಸ್ವಯಂ ದೃಢೀಕೃತ ಜನ್ಮದಿನಾಂಕ ಪುರಾವೆಯಾಗಿ ಮೆಟ್ರಿಕ್ಯುಲೇಶನ್/ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಪದವಿ ಪ್ರಮಾಣಪತ್ರ/ಅಂಕಪಟ್ಟಿಗಳ, ವೃತ್ತಿಪರಿಣಿತಿ ಮತ್ತು ಅನುಭವ ಪ್ರಮಾಣಪತ್ರಗಳ, ವಿಳಾಸ (ಹಾಲಿ ವಿಳಾಸ ಮತ್ತು ಖಾಯಂ ವಿಳಾಸ, ಮೊಬೈಲ್ ನಂಬರ್) ಹಾಗೂ ಕೆಎಂಸಿ ನೋಂದಣಿ ಪ್ರಮಾಣಪತ್ರದ ನಕಲು ಪ್ರತಿಗಳನ್ನು ಲಗತ್ತಿಸಿ, ನಿರ್ದೇಶಕರು, ಎಲ್‌ಆರ್‌ಡಿಇ, ಸಿ.ವಿ.ರಾಮನ್ ನಗರ, ಬೆಂಗಳೂರು-560093 ವಿಳಾಸಕ್ಕೆ ಅಂಚೆಯ ಮೂಲಕ, ಈ ಜಾಹೀರಾತು ದಿನಾಂಕದಿಂದ 21 ದಿನಗಳೊಳಗೆ ತಲುಪುವಂತೆ ರವಾನಿಸುವುದು.

ನಿರ್ದೇಶಕರು
ಗಂಪಾಲಾ ವಿಶ್ವಂ
ವಿಶೇಷ ವಿಜ್ಞಾನಿ ಮತ್ತು ನಿರ್ದೇಶಕರು,
ಎಲ್‌ಆರ್‌ಡಿಇ

CBC10301/11/0011/2526

ನಗರದಲ್ಲಿ ಇಂದು

'ಕನ್ನಡ ಸಾಹಿತ್ಯ ಮತ್ತು ಯುವಜನತೆ' ಉಪನ್ಯಾಸ: ನಟರಾಜ್, ಉಪಸ್ಥಿತಿ: ಮಲ್ಲಿಕಾರ್ಜುನ ಜಿ.ಎಸ್., ರವೀಂದ್ರ ಎಸ್., ಗೋಪಿಕೃಷ್ಣ ಜೆ., ಲತಾಶ್ರೀ ವಿ., ಕರುಣಾಕರ್ ಎಸ್., ಸೌಮ್ಯ ನಾಯಕ್ ಪಿ., ಆಯೋಜನೆ ಮತ್ತು ಸ್ಥಳ: ಸಿಟಿ ಎಂಜಿನಿಯರಿಂಗ್ ಕಾಲೇಜು, ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 10

'ವಿಶ್ವಾಮಿತ್ರ ಮೇನಕೆ ಡಾನ್ಸ್ ಮಾಡೋದು ಏನಕೆ ASK Mr.YNK' ನಾಟಕ ಪ್ರದರ್ಶನ: ರಚನೆ: ಜೋಗಿ, ನಿರ್ದೇಶನ: ಚಿತ್ರಶೇಖರ್ ಎನ್.ಎಸ್., ಆಯೋಜನೆ: ಸಂಚಯ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಹಳೇ ಎಂಆರ್‌ಐ ಉಪಕರಣ ಖರೀದಿ: ಛಲವಾದಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಳೆಯ ಎಂಆರ್‌ಐ ಉಪಕರಣಗಳ ಖರೀದಿಗೆ ಮುಂದಾಗಿದ್ದು, ಇದಕ್ಕೆ ಸಂಬಂಧಿಸಿದ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ನಿಯಮದಂತೆ ಸರ್ಕಾರ ಅತ್ಯಾಧುನಿಕ ಉಪಕರಣಗಳನ್ನೇ ಖರೀದಿಸಬೇಕು. ಆದರೆ, ಹಳೆಯ ಎಂಟು ಎಂಆರ್‌ಐ ಉಪಕರಣಗಳನ್ನು ಖರೀದಿಸಲು ಮುಂದಾಗಿದೆ ಎಂದು ಹೇಳಿ, ದಾಖಲೆ ಬಿಡುಗಡೆ ಮಾಡಿದರು.

ಫಿಲಿಪ್ಸ್ ಕಂಪನಿಯ ಹಳೆಯ ಉಪಕರಣಗಳನ್ನು ಖರೀದಿಸಲು ಅಧಿಕಾರಿಗಳು ಮುಂದಾಗಿದ್ದಾರೆ. ಫಿಲಿಪ್ಸ್ ಕಂಪನಿಯು ಸಲ್ಲಿಸಿರುವ ನಿರ್ದಿಷ್ಟ ವಿವರ (ಸ್ಪೆಸಿಫಿಕೇಷನ್) ಗಳನ್ನು ಟೆಂಡರ್‌ನಲ್ಲಿ ಯಥಾವತ್ತಾಗಿ ನಮೂದಿಸಲಾಗಿದೆ. ಹಳೆಯ ಉಪಕರಣ ಖರೀದಿಯ ಟೆಂಡರ್ ಮೊತ್ತ ₹90 ಕೋಟಿ. ಇವೆಲ್ಲ ವೈದ್ಯಕೀಯ ಸಚಿವ ಶರಣ ಪ್ರಕಾಶ ಪಾಟೀಲ ಅವರ ಮೂಗಿನ ಕೆಳಗೆ ನಡೆಯುತ್ತಿದೆ ಎಂದು ದೂರಿದರು.

ಜಾಗತಿಕ ಮಟ್ಟದ ಟೆಂಡರ್ ಇದಾಗಿದ್ದು, ಈ ಟೆಂಡರ್ ಅನ್ನು ತರಾತುರಿಯಲ್ಲಿ ಮುಗಿಸಲು ಅಧಿಕಾರಿಗಳು ಯತ್ನಿಸುತ್ತಿದ್ದಾರೆ. ಇದೇ ನಿರ್ದೇಶನಾಲಯ ಈ ಹಿಂದೆ ರೋಗಿಗಳಿಗೆ ತ್ವರಿತಗತಿಯಲ್ಲಿ ಗುಣಮಟ್ಟದ ಸೇವೆ ನೀಡುವುದಕ್ಕಾಗಿ ಅತ್ಯಾಧುನಿಕ ಎಂಆರ್‌ಐ ಉಪಕರಣಗಳನ್ನು ಖರೀದಿಸಿತ್ತು ಎಂದು ಛಲವಾದಿ ಹೇಳಿದರು.

'ಕಂಪನಿಯು ಹಳೆಯ ಉಪಕರಣಗಳ ಸ್ಟಾಕ್ ಕ್ಲಿಯರ್ ಮಾಡುವ ಉದ್ದೇಶದಿಂದ ಸರ್ಕಾರಕ್ಕೆ ಮಾರಲು ಮುಂದಾಗಿದೆ. ಈ ಉಪಕರಣದಲ್ಲಿ ರೋಗಿ ಸ್ಕ್ಯಾನಿಂಗ್‌ಗಾಗಿ ಒಂದು ಗಂಟೆ ಮಲಗಬೇಕಾಗುತ್ತದೆ. ರೋಗಿ ಹೆಚ್ಚು ಹೊತ್ತು ಎಂಆರ್‌ಐನಲ್ಲಿ ಮಲಗಿದರೆ ಅಡ್ಡ ಪರಿಣಾಮ ಬೀರುತ್ತದೆ. ಆದ್ದರಿಂದ ಟೆಂಡರ್ ಅನ್ನು ರದ್ದುಪಡಿಸಬೇಕು' ಎಂದರು.

ಛಲವಾದಿ ಹಿಟ್ ಅಂಡ್ ರನ್ ಸಚಿವ ಶರಣ ಪ್ರಕಾಶ ಪಾಟೀಲ

'ಛಲವಾದಿ ನಾರಾಯಣಸ್ವಾಮಿ ಸದಾ ಹಿಟ್ ಅಂಡ್ ರನ್ ಆರೋಪ ಮಾಡುತ್ತಾರೆ. ಅವರ ಹೇಳಿಕೆಗಳಲ್ಲಿ ಹುರುಳಿಲ್ಲ. ಅವರ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯ ಇಲ್ಲ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ತಿಳಿಸಿದ್ದಾರೆ.

'ಅವರ ಹೇಳಿಕೆಗಳ ಬಗ್ಗೆ ಹೆಚ್ಚು ಸ್ಪಷ್ಟನೆ ಕೊಡುವ ಅಗತ್ಯವೇ ಇಲ್ಲ. ಅವರ ಬಗ್ಗೆ ಅವರ ಪಕ್ಷದವರೇ ಹೆಚ್ಚು ಗಂಭೀರವಾಗಿ ಪರಿಗಣಿಸುವುದಿಲ್ಲ. ನಾವೇಕೆ ತಲೆಕಡಿಸಿಕೊಳ್ಳಬೇಕು' ಎಂದರು.



ಶರಣ ಪ್ರಕಾಶ್ ಪಾಟೀಲ

ಪ್ರತ್ಯೇಕ ಅಪಘಾತ: 3 ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಜೆಸಿಬಿ ಅಪರೇಟರ್ ಸೇರಿ ಮೂವರು ಮೃತಪಟ್ಟಿದ್ದಾರೆ.

ಖಾಸಗಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡದ ಪರಿಣಾಮ ಸವಾರ ದೇವರಬೀಸನಹಳ್ಳಿ ನಿವಾಸಿ ಮಲ್ಲಪ್ಪ (26) ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ರೈಲು ನಿಲ್ದಾಣದ ಬಳಿ ನಡೆದಿದೆ.

ಕಲಬುರಗಿ ಮೂಲದ ಮಲ್ಲಪ್ಪ ವೃತ್ತಿಯಲ್ಲಿ ಜೆಸಿಬಿ ಆಪರೇಟರ್ ಆಗಿದ್ದು, ದೇವರಬೀಸನಹಳ್ಳಿಯಲ್ಲಿ ನೆಲಸಿದ್ದರು. ಭಾನುವಾರ ರಾತ್ರಿ ಯಲಹಂಕದಲ್ಲಿ ಸ್ನೇಹಿತರನ್ನು ಭೇಟಿಯಾಗಿ ವಾಪಸ್ ಮನೆ ಕಡೆಗೆ ಹೊರಟಿದ್ದರು. ಕೆ.ಆರ್.ಪುರ ರೈಲು ನಿಲ್ದಾಣದ ಬಳಿ ತೆರಳುವಾಗ ವೇಗವಾಗಿ ಬಂದ ಖಾಸಗಿ ಬಸ್‌ವೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ದ್ವಿಚಕ್ರ ವಾಹನ ಸಹಿತ ರಸ್ತೆಗೆ ಬಿದ್ದ ಮಲ್ಲಪ್ಪನ ಮೇಲೆ ಆ ಬಸ್‌ನ ಚಕ್ರ ಹರಿದ ಪರಿಣಾಮ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟರು.

ಖಾಸಗಿ ಬಸ್‌ನ ಚಾಲಕನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ. ಈ ಸಂಬಂಧ ಕೆ.ಆರ್.ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉರುಳಿ ಬಿದ್ದ ಬೈಕ್

ದ್ವಿಚಕ್ರ ವಾಹನ ನಿಯಂತ್ರಣ ತಪ್ಪಿ ರಸ್ತೆಗೆ ಉರುಳಿ ಬಿದ್ದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡು ಮೃತಪಟ್ಟಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಕಾಳೇನ ಅಗ್ರಹಾರ ನಿವಾಸಿ ಶ್ರೀಶೈಲ ಕುಮಾರ್(36) ಮೃತ ಸವಾರ. ಭಾನುವಾರ ತಡರಾತ್ರಿ ಸುಮಾರು 12.30ಕ್ಕೆ ಬೇಗೂರು-ಕೊಪ್ಪ ರಸ್ತೆಯ ಮೈಲಸಂದ್ರದ ಬಳಿ ಈ ಘಟನೆ ನಡೆದಿದೆ.

ಬೆಳಗಾವಿ ಮೂಲದ ಶ್ರೀಶೈಲ ಕಾಳೇನ ಅಗ್ರಹಾರದಲ್ಲಿ ನೆಲಸಿದ್ದರು. ಖಾಸಗಿ ಕಂಪನಿಯೊಂದರ ಉದ್ಯೋಗಿಯಾಗಿದ್ದ ಅವರು, ತಡರಾತ್ರಿ ಬೈಕ್‌ನಲ್ಲಿ ಬರುವಾಗ ಮೈಲಸಂದ್ರದ ಬಳಿ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದಿದ್ದಾರೆ. ಸ್ಥಳೀಯರು ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ. ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಿಯಂತ್ರಣ ತಪ್ಪಿದ ಬೈಕ್ ಸವಾರ ಸಾವು

ದ್ವಿಚಕ್ರ ವಾಹನದ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದು ಸವಾರ ಮೃತಪಟ್ಟಿರುವ ಘಟನೆ ಹೆಬ್ಬಾಳ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಮನೋರಾಯನಪಾಳ್ಯ ನಿವಾಸಿ ಸುಮನ್ ಪ್ರಭಾತ್(21) ಮೃತ ಸವಾರ.

‘ಸೋಮವಾರ ಮುಂಜಾನೆ ಸುಮಾರು 1.30ಕ್ಕೆ ಹೆಬ್ಬಾಳದ ಲುಂಬಿನಿ ಗಾರ್ಡನ್ ಬಳಿ ಈ ದುರ್ಘಟನೆ ನಡೆದಿದೆ. ಬಿ.ಕಾಂ.ಪದವೀಧರನಾದ ಸುಮನ್, ಭಾನುವಾರ ರಾತ್ರಿ ಸ್ನೇಹಿತನ ಭೇಟಿಯಾಗಿ ಮುಂಜಾನೆ ದ್ವಿಚಕ್ರ ವಾಹನದಲ್ಲಿ ಮನೆ ಕಡೆಗೆ ಹೊರಟ್ಟಿದ್ದ ವೇಳೆ ನಿಯಂತ್ರಣ ತಪ್ಪಿ ರಸ್ತೆಗೆ ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದ. ಬಳಿಕ ದಾರಿಹೋಕರು ಅವರನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಪರೀಕ್ಷಿಸಿದ ವೈದ್ಯರು ಮಾರ್ಗ ಮಧ್ಯೆಯೇ ಸುಮನ್ ಮೃತಪಟ್ಟಿರುವುದಾಗಿ ದೃಢಪಡಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಹೆಬ್ಬಾಳ ಸಂಚಾರ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಅತಿವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರತೀಕಾರ: ಸೋದರ ಮಾವನ ಕೊಲೆ

ಪ್ರಜಾವಾಣಿ ವಾರ್ತೆ

ಫಹಾದ್

ಶರೀಪುದ್ದೀನ್

ತೌಹಿದ್

ಇರ್ಷಾದ್

ಬೆಂಗಳೂರು: ತಂದೆಯ ಕೊಲೆಗೆ ಪ್ರತೀಕಾರವಾಗಿ ಮಗ, ತನ್ನ ಸಹಚರರೊಂದಿಗೆ ಸೇರಿ ಸೋದರ ಮಾವನನ್ನೇ ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಿರುವ ಘಟನೆ ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಡಿ.ಜೆ.ಹಳ್ಳಿ ನಿವಾಸಿ ಸೈಯದ್ ಸಿರಾಜುದ್ದೀನ್ (32) ಕೊಲೆಯಾದವರು. ಭಾನುವಾರ ರಾತ್ರಿ ಸುಮಾರು 7.30ಕ್ಕೆ ಟಿನ್ ಫ್ಯಾಕ್ಟರಿ ಬಳಿ ಈ ಘಟನೆ ನಡೆದಿದ್ದು, ಕೊಲೆಯಾದ ಸಿರಾಜುದ್ದೀನ್‌ನ ಅಕ್ಕನ ಮಗನಾದ ಹಲಸೂರಿನ ಆರೋಪಿ ಫಹಾದ್ (24), ಆತನ ಸಹಚರರಾದ ಶರೀಪುದ್ದೀನ್, ಮೊಹಮ್ಮದ್ ತೌಹಿದ್ ಹಾಗೂ ಇರ್ಷಾದ್ ಎಂಬುವವರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಕೊಲೆಯಾದ ಸಿರಾಜುದ್ದೀನ್ ಮತ್ತು ಆರೋಪಿ ಫಹಾದ್‌ನ ತಾಯಿಯ ಸಹೋದರ. 2010ರಲ್ಲಿ ಕೌಟುಂಬಿಕ ವಿಚಾರಕ್ಕೆ ಸಿರಾಜುದ್ದೀನ್ ತನ್ನ ಅಕ್ಕನ ಪತಿ ಅನ್ವರ್ ಪಾಷಾನನ್ನು ಕೊಲೆ ಮಾಡಿದ್ದ. ಈ ಪ್ರಕರಣದಲ್ಲಿ ಪೊಲೀಸರು ಸಿರಾಜುದ್ದೀನ್‌ನನ್ನು ಬಂಧಿಸಿ ಜೈಲಿಗಟ್ಟಿದ್ದರು. 10 ವರ್ಷ ಜೈಲು ಶಿಕ್ಷೆ ಅನುಭವಿಸಿ ಮೂರು ವರ್ಷಗಳ ಹಿಂದೆ ಸಿರಾಜುದ್ದೀನ್ ಜೈಲಿನಿಂದ ಬಿಡುಗಡೆಯಾಗಿದ್ದ. ಬಳಿಕ ಟಿನ್ ಫ್ಯಾಕ್ಟರಿ ಬಳಿಯ ದರ್ಗಾಮೊಹಲ್ಲಾದ ರಸ್ತೆ ಬದಿ ಗುಡಿಸಲು ಹಾಕಿಕೊಂಡು ವಾಸಿಸುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ತಂದೆಯ ಕೊಲೆ ಸಮಯದಲ್ಲಿ ಆರೋಪಿ ಫಹಾದ್ 9 ವರ್ಷದ ಬಾಲಕನಾಗಿದ್ದ. ತನ್ನ ಕಣ್ಣೆದುರೇ ತಂದೆಯನ್ನು ಕೊಲೆ ಮಾಡಿದ್ದ ಸಿರಾಜುದ್ದೀನ್ ವಿರುದ್ಧ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದ. ಅದರಂತೆ ಭಾನುವಾರ ರಾತ್ರಿ ಟಿನ್‌ಫ್ಯಾಕ್ಟರಿ ಬಳಿ ಸಿರಾಜುದ್ದೀನ್ ಇರುವ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಫಹಾದ್, ತನ್ನ ಸಹಚರರೊಂದಿಗೆ ಬಂದು ಮಾರಕಾಸ್ತ್ರಗಳಿಂದ ತೀವ್ರ ಹಲ್ಲೆ ನಡೆಸಿ ಪರಾರಿ ಆಗಿದ್ದರು. ಸಿರಾಜುದ್ದೀನ್‌ನನ್ನು ಸ್ಥಳೀಯರ ನೆರವಿನಿಂದ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ’ ಎಂದರು.

ಪ್ರಕರಣ ದಾಖಲಿಸಿದ ರಾಮಮೂರ್ತಿನಗರ ಠಾಣೆ ಪೊಲೀಸರು ಫಹಾದ್ ಸೇರಿ ನಾಲ್ವರನ್ನು ಬಂಧಿಸಿದ್ದಾರೆ.

ಪ್ರಶಸ್ತಿ ಪ್ರದಾನ

ಸೃಷ್ಟಿ ಅಭಿನಯ ಕಲಾವಿದರ ಕೇಂದ್ರ ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಡಾ. ಮಾಯಾರಾವ್ ಸ್ಮರಣಾರ್ಥ ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷೆ ಶುಭಾ ಧನಂಜಯ ಅವರಿಗೆ ಸೃಷ್ಟಿ ‘ರಾಷ್ಟ್ರೀಯ ನೃತ್ಯ ಸಾಧಕಿ ಪ್ರಶಸ್ತಿ’ ಮತ್ತು ರೋಟರಿ ಸೇವಾ ಪರಿಣಿತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಕೇಂದ್ರದ ನಿರ್ದೇಶಕ ಎ.ವಿ. ಸತ್ಯನಾರಾಯಣ, ವೆಂಕಟೇಶ ನಾಟ್ಯ ಮಂದಿರದ ನಿರ್ದೇಶಕಿ ರಾಧಾ ಶ್ರೀಧರ್, ಕಲಾವಿದೆ ರತ್ನಾ ಸುಪ್ರಿಯಾ, ಶಾರದಾ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಔಷಧ ಅಂಗಡಿ ಮಾಲೀಕನಿಗೆ ವಂಚಿಸಿದ ಆರೋಪ • ಸಿಸಿಬಿ ಪೊಲೀಸರಿಂದ ಕಾರ್ಯಾಚರಣೆ

ಮೂವರು ಕಾನ್‌ಸ್ಟೆಬಲ್‌ಗಳ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿಗಳು

ಬೆಂಗಳೂರು: ಔಷಧ ಅಂಗಡಿ ಮಾಲೀಕನಿಗೆ ವಂಚಿಸಿದ ಆರೋಪದ ಮೇಲೆ ಮೂವರು ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಕೇಂದ್ರ ಅಪರಾಧ ವಿಭಾಗ (ಸಿಸಿಬಿ) ಬಂಧಿಸಿದೆ ಎಂದು ಪೊಲೀಸ್ ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ದಾವಣಗೆರೆಯ ಹೆಡ್ ಕಾನ್‌ಸ್ಟೆಬಲ್ ಮಾರುತಿ ಮತ್ತು ಬೆಂಗಳೂರಿನ ಆರ್.ಟಿ.ನಗರ ಠಾಣೆಯ ಕಾನ್‌ಸ್ಟೆಬಲ್‌ಗಳಾದ ಯುವರಾಜ್ ಮತ್ತು ಮೆಹಬೂಬ್ ಬಂಧಿತರು. ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಮಾರುತಿ ಅವರು ಈಗಾಗಲೇ ಅಮಾನತಗೊಂಡಿದ್ದು, ಹಿಂದೆ ದಾವಣಗೆರೆ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದು ಹೇಳಿದರು.

ಈ ಮೂವರು ಆರೋಪಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ನಿವಾಸಿ, ಔಷಧ ಅಂಗಡಿ ಮಾಲೀಕ ಜೆ. ತಬ್ರೇಜ್ (26) ಅವರನ್ನು ವಂಚಿಸಿದ್ದಾರೆ ಎಂದರು.

‘ನನ್ನ ಅಂಗಡಿಗೆ ಮಾತ್ರೆ ತೆಗೆದುಕೊಳ್ಳಲು ಬಂದಿದ್ದ ದಾವಣಗೆರೆಯ ರಮೇಶ್ ಎಂಬಾತ ತನ್ನ ಪರಿಚಯ ಮಾಡಿಕೊಂಡ. ಊರಿನಲ್ಲಿ ತಾತ, ಜಮೀನಿನಲ್ಲಿ ಉಳುಮೆ ಮಾಡುವಾಗ 4 ಕೆ.ಜಿ ಚಿನ್ನದ ನಾಣ್ಯ ಸಿಕ್ಕಿವೆ. ಕಡಿಮೆ ಬೆಲೆಗೆ ಮಾರಾಟ ಮಾಡುತ್ತಾರೆ. ಆಸಕ್ತಿ ಇದ್ದರೆ ದಾವಣಗೆರೆ ಬಸ್ ನಿಲ್ದಾಣಕ್ಕೆ ಬರುವಂತೆ ಸೂಚಿಸಿದ್ದ’ ಎಂದು ತಬ್ರೇಜ್ ದೂರಿನಲ್ಲಿ ತಿಳಿಸಿದ್ದಾರೆ.

‘ಮಾರ್ಚ್ 13ರಂದು ಬಸ್‌ನಲ್ಲಿ ದಾವಣಗೆರೆಗೆ ಹೋದಾಗ ತಾತ ಮತ್ತು ಮೊಮ್ಮಗ ಭೇಟಿಯಾಗಿ ನಕಲಿ ಚಿನ್ನದ ನಾಣ್ಯ ತೋರಿಸಿ, ಇದರ ಮೌಲ್ಯ ₹80 ಲಕ್ಷ ಆಗಲಿದೆ ಎಂದರು. ಅಷ್ಟು ಹಣ ನನ್ನ ಬಳಿ ಇಲ್ಲದ ಕಾರಣ ₹10 ಲಕ್ಷಕ್ಕೆ ಕೊಡುವಂತೆ ಕೋರಿದೆ. ಆಗ ಅವರು ₹1,001 ಪಡೆದು ಸಣ್ಣ ನಾಣ್ಯ ಕೊಟ್ಟು ಕಳುಹಿಸಿದರು. ಅದನ್ನು ತಂದು ದೇವನಹಳ್ಳಿಯಲ್ಲಿ ಪರೀಕ್ಷಿಸಿದಾಗ, ಅಸಲಿ ಎಂಬುದು ಗೊತ್ತಾಯಿತು. ಬಳಿಕ ನನ್ನ ಬಳಿಯಿದ್ದ ₹10 ಲಕ್ಷ ಮತ್ತು ಕೈ ಸಾಲ ₹2 ಲಕ್ಷ ಪಡೆದು ದಾವಣಗೆರೆಗೆ ಹೋಗಿ 2 ಕೆ.ಜಿ. ಚಿನ್ನದ ನಾಣ್ಯ ಖರೀದಿಸಿಕೊಂಡು ಬಂದು, ದೇವನಹಳ್ಳಿಗೆ ಬಂದ ಮೇಲೆ ಪರಿಶೀಲಿಸಿದಾಗ ನಕಲಿ ಎಂಬುದು ಗೊತ್ತಾಗಿದೆ’ ಎಂದು ತಬ್ರೇಜ್ ಹೇಳಿದ್ದಾರೆ.

‘ನಂತರ ಆರ್.ಟಿ.ನಗರ ಠಾಣೆಯ ಇಬ್ಬರು ಪೊಲೀಸ್ ಕಾನ್‌ಸ್ಟೆಬಲ್‌ಗಳು ಕರೆ ಮಾಡಿ, ‘ನೀವು ಚಿನ್ನದ ನಾಣ್ಯಕ್ಕಾಗಿ ₹12 ಲಕ್ಷ ಹಣ ಕಳೆದುಕೊಂಡಿರುವ ವಿಚಾರ ಗೊತ್ತಾಗಿದೆ. ಠಾಣೆ ಬಳಿ ಬರುವಂತೆ ಹೇಳಿದರು. ಅದರಂತೆ ಠಾಣೆ ಬಳಿಯ ಹೋಟೆಲ್ ವೊಂದರಲ್ಲಿ ಅವರನ್ನು ಭೇಟಿ ಮಾಡಿ ವಿಚಾರ ತಿಳಿಸಿದೆ’ ಎಂದರು.

‘ಒಂದು ತಿಂಗಳ ಬಳಿಕ ನನಗೆ ಕರೆ ಮಾಡಿದ ಆರ್.ಟಿ.ನಗರ ಕಾನ್‌ಸ್ಟೆಬಲ್‌ಗಳು, ₹12 ಲಕ್ಷಗಳಲ್ಲಿ ₹8 ಲಕ್ಷ ಮಾತ್ರ ಜಪ್ತಿ ಮಾಡಿದ್ದು, ಇದರಲ್ಲಿ ₹2 ಲಕ್ಷ ಮಾಹಿತಿದಾರರಿಗೆ ನೀಡಿದ್ದಾಗಿ ಹೇಳಿದರು. ಹಣ ಜಪ್ತಿ ಮಾಡಲು ಸಹಕರಿಸಿದ ದಾವಣಗೆರೆಯ ಪೊಲೀಸ್ ಕಾನ್‌ಸ್ಟೆಬಲ್ ಮೂರ್ತಿ ಅವರಿಗೆ ₹75 ಸಾವಿರ ಕೊಡಿಸಿದರು. ಆರ್.ಟಿ.ನಗರದ ಇಬ್ಬರು ಕಾನ್‌ಸ್ಟೆಬಲ್‌ಗಳು ₹75 ಸಾವಿರ ಪಡೆದುಕೊಂಡರು. ನನಗೆ ವಂಚನೆ ಮಾಡಿರುವ ರಮೇಶ್, ಮೆಹಬೂಬ್, ಯುವರಾಜ್, ಮೂರ್ತಿ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ತಬ್ರೇಜ್ ಅವರು ಪ್ರಕರಣ ದಾಖಲಿಸದ ಕಾರಣ ಮಾರುತಿ ಅವರು ₹12 ಲಕ್ಷಗಳಲ್ಲಿ ₹8 ಲಕ್ಷಗಳನ್ನು ರಮೇಶ್‌ನಿಂದ ವಶಪಡಿಸಿಕೊಂಡಿದ್ದಾರೆ. ಉಳಿದ ₹4.5 ಲಕ್ಷ ಗಳನ್ನು ತಬ್ರೇಜ್‌ಗೆ ನೀಡಿರುವುದು ತನಿಖೆ ವೇಳೆ ಗೊತ್ತಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಈ ಬಗ್ಗೆ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

₹8.71 ಲಕ್ಷ ನಗದು ಮುಟ್ಟುಗೋಲು

ಮಾದಕ ವಸ್ತು ಕಳ್ಳ ಸಾಗಣೆಯಿಂದ ಆರೋಪಿ ಅಕ್ರಮವಾಗಿ ಗಳಿಸಿದ್ದ ₹8.71 ಲಕ್ಷ ನಗದು ಅನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಸಿಸಿಬಿ ಪೊಲೀಸರು ಮುಟ್ಟಗೋಲು ಹಾಕಿಕೊಂಡಿದ್ದಾರೆ.

ಕಳೆದ ನವೆಂಬರ್ ತಿಂಗಳಲ್ಲಿ ಕೇರಳದ ಆರೋಪಿ ಹಾಗೂ ನಗರದ ಇಬ್ಬರು ಪೆಡ್ಲರ್‌ಗಳಿಂದ ₹71 ಲಕ್ಷ ಮೌಲ್ಯದ ಎಂಡಿಎಂಎ ಕ್ರಿಸ್ಟಲ್‌ಗಳನ್ನು ವಶಪಡಿಸಿಕೊಂಡು, ಎನ್‌ಡಿಪಿಎಸ್ ಕಾಯ್ದೆ ಮತ್ತು ಕರ್ನಾಟಕ ಕಾರಾಗೃಹ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು.

ಈ ಪೈಕಿ ಜೈಲಿನಿಂದಲೇ ಆರೋಪಿ ಡ್ರಗ್ಸ್ ಪೆಡ್ಲಿಂಗ್ ಮಾಡುತ್ತಿರುವುದು ಗೊತ್ತಾಯಿತು. ಆರೋಪಿಯನ್ನು ಪೊಲೀಸ್ ಕಸ್ಟಡಿಗೆ ಪಡೆದುಕೊಂಡು ತನಿಖೆ ಕೈಗೊಳ್ಳಲಾಯಿತು. ಡ್ರಗ್ ಪೆಡ್ಲಿಂಗ್‌ನಿಂದ ಬರುತ್ತಿದ್ದ ಹಣವನ್ನು ಆರೋಪಿಯು ತನ್ನ ಬ್ಯಾಂಕ್ ಖಾತೆ ಮತ್ತು ತಮ್ಮ ಸಂಬಂಧಿಕರ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡುತ್ತಿರುವುದು ತನಿಖೆಯಿಂದ ದೃಢಪಟ್ಟಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಿಸಿಬಿ ಪೊಲೀಸರು ಆತನ ಖಾತೆಯಲ್ಲಿದ್ದ ₹3.90 ಲಕ್ಷ, ಸಂಬಂಧಿಕರ ಖಾತೆಗಳಲ್ಲಿದ್ದ ₹81 ಸಾವಿರ ಹಾಗೂ ₹4 ಲಕ್ಷ ಸೇರಿ ಒಟ್ಟು ₹8.71 ಲಕ್ಷ ಹಣವನ್ನು ಮುಟ್ಟುಗೋಲು ಹಾಕಿ ಆದೇಶ ಹೊರಡಿಸಿದ್ದಾರೆ.

ಪರಾರಿಯಾಗಿದ್ದ ಕೈದಿ ಸೆರೆ

ಚಂದ್ರಶೇಖರ್

ವಿಕ್ಟೋರಿಯಾ ಆಸ್ಪತ್ರೆಯಿಂದ ಪರಾರಿಯಾಗಿದ್ದ ವಿಚಾರಣಾಧೀನ ಕೈದಿಯನ್ನು ವಿಶ್ವೇಶ್ವರಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಬಸ್ ನಿಲ್ದಾಣದಲ್ಲಿದ್ದ ಆರೋಪಿ ಚಂದ್ರಶೇಖರ್ ಅಲಿಯಾಸ್ ಚಂದ್ರು (32) ಎಂಬಾತನನ್ನು ಸೋಮವಾರ ವಶಕ್ಕೆ ಪಡೆದು, ನಗರಕ್ಕೆ ಕರೆತರಲಾಗಿದೆ.

2023ರಲ್ಲಿ ಸುಬ್ರಹ್ಮಣ್ಯನಗರ ಠಾಣೆಯಲ್ಲಿ ದಾಖಲಾಗಿದ್ದ ಡಕಾಯಿತಿ ಪ್ರಕರಣದಲ್ಲಿ ತುಮಕೂರು ಜಿಲ್ಲೆ ಗುಬ್ಬಿಯ ಚಂದ್ರಶೇಖರ್‌ನನ್ನು ಬಂಧಿಸಲಾಗಿತ್ತು. ಎರಡು ವರ್ಷಗಳಿಂದ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಚಂದ್ರಶೇಖರ್‌ಗೆ ಮೇ 2ರಂದು ಎದೆ ನೋವು ಹಾಗೂ ವಾಂತಿ ಹೆಚ್ಚಾಗಿದ್ದರಿಂದ ಜೈಲಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ವೈದ್ಯರ ಸೂಚನೆ ಮೇರೆಗೆ ಆರೋಪಿಯನ್ನು ತುರ್ತು ನಿಗಾ ಘಟಕದ 3ನೇ ಮಹಡಿಯಲ್ಲಿ ಒಳ ರೋಗಿಯಾಗಿ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿತ್ತು. ಆತನ ಬೆಂಗಾವಲಿಗಾಗಿ ಜೈಲು ವೀಕ್ಷಕ ಸಂತೋಷ್ ರಾಥೋಡ್ ನೇಮಿಸಲಾಗಿತ್ತು. ಮೇ 3ರ ರಾತ್ರಿ 11 ಗಂಟೆ ಸುಮಾರಿಗೆ ಎಲ್ಲರ ಕಣ್ತಪ್ಪಿಸಿ ಆರೋಪಿ ತುರ್ತು ನಿಗಾ ಘಟಕದಿಂದ ಪರಾರಿಯಾಗಿದ್ದ’ ಎಂದು ಪೊಲೀಸರು ತಿಳಿಸಿದರು.

ಪರಾರಿಯಾಗುವ ಉದ್ದೇಶದಿಂದ ಚಂದ್ರಶೇಖರ್ ಜೈಲಿನಲ್ಲಿದ್ದ ಬಲ್ಬ್ ಚೂರುಗಳನ್ನು ನುಂಗಿದ್ದ ಎಂದು ಹೇಳಲಾಗಿದೆ. ಅದೇ ಕಾರಣಕ್ಕೆ ಆತನಿಗೆ ಎದೆ ನೋವು ಹಾಗೂ ವಾಂತಿ ಶುರುವಾಗಿದೆ. ಹಾಗಾಗಿ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವರದಕ್ಷಿಣೆಗಾಗಿ ಪತ್ನಿಯ ಕೊಲೆ

ಲೋಕೇಶ್

ವರದಕ್ಷಿಣೆ ವಿಚಾರವಾಗಿ ದಂಪತಿ ನಡುವೆ ಜಗಳವಾಗಿ ಪತ್ನಿಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಪತಿಯನ್ನು ಬಸವೇಶ್ವರ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪತ್ನಿ ನಮಿತಾ ಸಾಹು (43) ಕೊಲೆಯಾದವರು. ಲೋಕೇಶ್ ಕುಮಾರ್ ಗೆಹಲೋತ್ (43) ಬಂಧಿತ ಆರೋಪಿ.

ಏಪ್ರಿಲ್ 24ರಂದು ಠಾಣಾ ವ್ಯಾಪ್ತಿಯ ಮಹಾಗಣಪತಿ ನಗರದ ಮನೆಯಲ್ಲಿ ನಮಿತಾ ಸಾಹು ಅವರನ್ನು ಕೊಲೆ ಮಾಡಲಾಗಿತ್ತು. ಮನೆ ಮಾಲೀಕ ಭೂಪೇಂದರ್ ಅವರು ನೀಡಿದ ದೂರು ಆಧರಿಸಿ, ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೊಪ್ಪಿಸಲಾಗಿದೆ.

ಕಬ್ಬನ್ ಪೇಟೆಯಲ್ಲಿ ಫೋಟೊ ಸ್ಟುಡಿಯೊ ಹೊಂದಿದ್ದ ರಾಜಸ್ಥಾನದ ಲೋಕೇಶ್ ಕುಮಾರ್, ಐದು ವರ್ಷಗಳ ಹಿಂದೆ ನಮಿತಾ ಸಾಹು ಅವರನ್ನು ವಿವಾಹವಾಗಿ ಮಹಾಗಣಪತಿ ನಗರದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದ. ದಂಪತಿಗೆ ಮೂರು ವರ್ಷದ ಹೆಣ್ಣು ಮಗುವಿದೆ. ಇತ್ತೀಚೆಗೆ ದಂಪತಿ ನಡುವೆ ಸಣ್ಣಪುಟ್ಟ ವಿಚಾರಗಳಿಗೆ ಗಲಾಟೆಯಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಏಪ್ರಿಲ್ 24ರಂದು ಮನೆಯಲ್ಲಿದ್ದ ಲೋಕೇಶ್‌ಗೆ, ಪತ್ನಿಯ ಸಹೋದರ ಕರೆ ಮಾಡಿದ್ದರು. ಈ ವೇಳೆ ಫೋನ್ ಸ್ಪೀಕರ್ ಆನ್ ಮಾಡುವಂತೆ ನಮಿತಾ ಒತ್ತಾಯಿಸಿದ್ದರು. ಆನ್ ಮಾಡಲು ನಿರಾಕರಿಸಿದಾಗ ಇಬ್ಬರ ಮಧ್ಯೆ ಗಲಾಟೆಯಾಗಿತ್ತು. ಈ ಸಂದರ್ಭದಲ್ಲಿ ಮಾತಿಗೆ ಮಾತು ಬೆಳೆದು ಪತ್ನಿಯ ಕತ್ತು ಹಿಸುಕಿ ಕೊಲೆ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಮದುವೆಗೂ ಮುನ್ನ ಪತ್ನಿ ಕೆಲಸ ಮಾಡುತ್ತಿದ್ದಾಗ ಕೂಡಿಟ್ಟ ಹಣ ಕೊಡುವಂತೆ ಆರೋಪಿ ಪೀಡಿಸುತ್ತಿದ್ದ. ಸ್ಟುಡಿಯೊ ಅಭಿವೃದ್ಧಿಪಡಿಸಲು ಮತ್ತು ನಗರದಲ್ಲಿ ನಿವೇಶನ ಖರೀದಿಸಲು ಹಣ ನೀಡುವಂತೆ ಪತ್ನಿಯನ್ನು ಪೀಡಿಸುತ್ತಿದ್ದ. ಆಕೆಯಿಂದ ₹ 60 ಸಾವಿರ ಪಡೆದುಕೊಂಡಿದ್ದ ಮತ್ತು ತವರು ಮನೆಯಿಂದ ವರದಕ್ಷಿಣೆ ತರುವಂತೆ ಒತ್ತಾಯ ಮಾಡುತ್ತಿದ್ದ’ ಎಂದು ನಮಿತಾ ಸಾಹು ಕುಟುಂಬಸ್ಥರು ಆರೋಪಿಸಿದ್ದಾರೆ.

‘ಲೌಡ್ ಸ್ಪೀಕರ್ ಹಾಕಲು ಜಗಳ’

ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್ ಮಾತನಾಡಿ, ‘ಬಸವೇಶ್ವರನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ದಂಪತಿ ಮಧ್ಯೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಏಪ್ರಿಲ್ 24ರ ಸಂಜೆ ಕೆಲಸದಿಂದ ಮನೆಗೆ ಬಂದ ಲೋಕೇಶ್, ತನ್ನ ಪತ್ನಿಯ ಅಣ್ಣನೊಂದಿಗೆ ಮಾತನಾಡುತ್ತಿದ್ದ. ಈ ವೇಳೆ ತಾನೂ ಕೇಳಿಸಿಕೊಳ್ಳಬೇಕೆಂದು ಲೌಡ್ ಸ್ಪೀಕರ್ ಹಾಕುವಂತೆ ಪತ್ನಿಯು ಒತ್ತಾಯಿಸಿದ್ದಾರೆ. ಆದರೆ, ಇದಕ್ಕೆ ಆತ ಒಪ್ಪಿಲ್ಲ. ಕೋಪದಲ್ಲಿ ಪತ್ನಿಗೆ ಹೊಡೆದು, ಕತ್ತು ಹಿಸುಕಿ ಕೊಲೆ ಮಾಡಿರುವುದು ಗೊತ್ತಾಗಿದೆ’ ಎಂದು ತಿಳಿಸಿದರು.

ಎರಡು ಪಾಳಿಯಲ್ಲಿ ನೀಟ್-ಪಿಜಿ: ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್-ಪಿಜಿ) ಎರಡು ಪಾಳಿಗಳಲ್ಲಿ ನಡೆಸುವ ಅಧಿಸೂಚನೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳಿಗೆ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ ಮತ್ತು ಇತರರಿಗೆ ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರು ದೇಶದಾದ್ಯಂತ ಏಕಕಾಲದಲ್ಲಿ ಪರೀಕ್ಷೆ ನಡೆಸುವಂತೆ ಕೋರಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದರು.

‘ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಪರೀಕ್ಷಾ ಮಂಡಳಿ, ರಾಷ್ಟ್ರೀಯ ವೈದ್ಯಕೀಯ ಮಂಡಳಿಯು ಈ ಸಂಬಂಧ ಒಂದು ವಾರದ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸಬೇಕು’ ಎಂದು ಪೀಠ ತಿಳಿಸಿದೆ.

ರೌಡಿ ಕೊಲೆ: ‘ಉಘೇ, ಉಘೇ’ ಕೂಗುತ್ತಾ ಪರಾರಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಗರದ ಇಸ್ಪೀಟ್ ಕ್ಲಬ್ ಒಂದರಲ್ಲಿ ರೌಡಿ ಶೀಟರ್ ಸಂತೋಷಕುಮಾರ್ ಅಲಿಯಾಸ್ ಕಣುಮ ಸಂತೋಷ್‌ನನ್ನು (50) ದುಷ್ಕರ್ಮಿಗಳು ಸೋಮವಾರ ಸಂಜೆ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿದ್ದಾರೆ.

ರಿಯಲ್ ಎಸ್ಟೇಟ್ ಉದ್ಯಮದಲ್ಲಿ ತೊಡಗಿದ್ದ ಕೆಟಿಜೆ ನಗರ ನಿವಾಸಿ ಕಣುಮ ಸಂತೋಷ್ ವಿರುದ್ಧ ಕೊಲೆ, ವಂಚನೆ ಸೇರಿ 10ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕೆಲ ವರ್ಷಗಳ ಹಿಂದೆ ನಗರದಲ್ಲಿ ನಡೆದಿದ್ದ ರೌಡಿ ಬುಳ್ಳ ನಾಗನ ಕೊಲೆ ಪ್ರಕರಣದಲ್ಲಿ ಕಣುಮ ಪ್ರಮುಖ ಆರೋಪಿಯಾಗಿದ್ದ. ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ರೌಡಿಗಳ ತಂಡವು ಈತನ ಕೊಲೆ ಮಾಡಿರುವ ಅನುಮಾನ ವ್ಯಕ್ತವಾಗಿದೆ.

ಕ್ಲಬ್‌ಗೆ ಕಣುಮ ಸೋಮವಾರ ಬಂದಿದ್ದ. ಸಂಜೆ 5.30ಕ್ಕೆ ಆಟೊದಲ್ಲಿ ಬಂದ ಏಳೆಂಟು ಜನರ ಗುಂಪು ಆತನ ಮುಖಕ್ಕೆ ಕಾಳುಮೆಣಸಿನ ಪುಡಿ ಎರಚಿದೆ. ಬಳಿಕ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೊಲೆ ಮಾಡಲಾಗಿದೆ. ಸ್ಥಳದಿಂದ ತೆರಳುವಾಗ ‘ಉಘೇ, ಉಘೇ..’ ಎಂದು ಕೂಗುತ್ತ ಪರಾರಿಯಾಗಿದೆ.

‘ಸಂತೋಷನನ್ನು ದುಷ್ಕರ್ಮಿಗಳು ಕೊಚ್ಚಿ ಕೊಲೆ ಮಾಡಿದ್ದಾರೆ. ದಾಳಿ ನಡೆಸಿದ ತಂಡದ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಪ್ರಕರಣದ ತನಿಖೆಗೆ ಡಿವೈಎಸ್‌ಪಿ ಶರಣ ಬಸವೇಶ್ವರ ನೇತೃತ್ವದಲ್ಲಿ 4 ತಂಡಗಳನ್ನು ರಚಿಸಲಾಗಿದೆ. ಆರೋಪಿಗಳ ಪತ್ತೆಗೆ ತಂಡಗಳು ಕಾರ್ಯ-ಪ್ರವೃತ್ತವಾಗಿವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರ ಒತ್ತಾಯ

ಸೋನು ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡಿಗರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಬಾಲಿವುಡ್ ಗಾಯಕ ಸೋನು ನಿಗಮ್ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

‘ನಗರದ ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ಏಪ್ರಿಲ್ 25 ಮತ್ತು 26ರಂದು ನಡೆದ ಸಂಗೀತ ಕಾರ್ಯಕ್ರಮದಲ್ಲಿ ಕನ್ನಡಿಗರಿಂದಾಗಿಯೇ ಭಯೋತ್ಪಾದಕರ ದಾಳಿ ನಡೆಯುತ್ತಿದೆ ಎಂದು ಸೋನು ನಿಗಮ್ ಹೇಳಿದ್ದಾರೆ. ಕನ್ನಡದಲ್ಲಿ ಹಾಡುವಂತೆ ಕೇಳಿದ ವಿದ್ಯಾರ್ಥಿಗಳ ಮೇಲೆ ಹರಿಹಾಯ್ದ ಅವರನ್ನು ಬಂಧಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ ಮಾತನಾಡಿ, ‘ಕನ್ನಡಿಗರನ್ನು ಕೀಳಾಗಿ ನಿಂದಿಸಿರುವ ಸೋನು ಅವರು ಮತ್ತೆ ವಿಡಿಯೊ ಹರಿಬಿಟ್ಟಿದ್ದಾರೆ. ಘಟನೆ ಬಗ್ಗೆ ಕ್ಷಮೆ ಕೇಳದೆ, ಅದನ್ನು ಸಮರ್ಥಿಸಿಕೊಂಡಿದ್ದಾರೆ. ಉತ್ತರ ಭಾರತೀಯರು ಅವರನ್ನು ನಿರ್ಲಕ್ಷ್ಯ ಮಾಡಿದಾಗ, ಕನ್ನಡಿಗರು ಕರೆದು ಅವಕಾಶ ನೀಡಿದ್ದನ್ನು ಮರೆತಿದ್ದಾರೆ. ಗಾಯಕನ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದರು.

ಈ ಸಂಬಂಧ ವೇದಿಕೆ ಕಾರ್ಯಕರ್ತರು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಅವರಿಗೆ ಮನವಿ ಸಲ್ಲಿಸಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಿಮ್ಮ ಬಿಬಿಎಂಪಿಯ ಅಂತಿಮ ಇ-ಖಾತೆಯನ್ನು ಆನ್‌ಲೈನ್‌ನಲ್ಲಿ ಇಂದೇ ಪಡೆಯಿರಿ

ಬಿಬಿಎಂಪಿ ಇ-ಖಾತೆಯು ಸಂಪರ್ಕರಹಿತ, ಫೇಸ್‌ಲೆಸ್ ಮತ್ತು ಆನ್‌ಲೈನ್ ವ್ಯವಸ್ಥೆಯಾಗಿದೆ @
https://bbmpeAasthi.karnataka.gov.in/

ನಿಮ್ಮ ಸ್ವತ್ತಿಗೆ ಸಂಬಂಧಿಸಿದ ಈ ಕೆಳಕಂಡ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ

1) ಮಾಲೀಕರುಗಳ ಆಧಾರ್
2) ಆಸ್ತಿ ತೆರಿಗೆ ಎಸ್.ಎ.ಎಸ್ ಅರ್ಜಿ ಸಂಖ್ಯೆ
3) ಸ್ವತ್ತಿನ ಕ್ರಯ/ನೋಂದಯಿತ ಪತ್ರ ಸಂಖ್ಯೆ
(ಕಾವೇರಿ ತಂತ್ರಾಂಶದಿಂದ ವಿದ್ಯುನ್ಮಾನವಾಗಿ ಪಡೆದುಕೊಳ್ಳುತ್ತದೆ)
4) ಬೆಸ್ಕಾಂ ಅರ್ಜಿ ಸಂಖ್ಯೆ
(ಖಾಲಿ ನಿವೇಶನಗಳಿಗೆ ಅಗತ್ಯವಿಲ್ಲ)
5) ಸ್ವತ್ತಿನ ಭಾವಾಚಿತ್ರ

ಮತ್ತು ಅಂತಿಮ ಇ-ಖಾತೆಯನ್ನು ನೀವೇ ಆನ್‌ಲೈನ್‌ನಲ್ಲಿ ಅಥವಾ ಬೆಂಗಳೂರು ಒನ್‌ಗೆ ಭೇಟಿ ನೀಡಿ ಪಡೆದುಕೊಳ್ಳಿ

ಇ-ಖಾತೆ ಸಹಾಯವಾಣಿಗೆ ಕರೆ ಮಾಡಿ 94806 83695
ಯಾವುದೇ ಬೃ.ಬೆಂ.ಮ.ಪಾಲಿಕೆ ಕಚೇರಿಗೆ ಭೇಟಿ ನೀಡಬೇಡಿ ಅಥವಾ ಕರೆ ಮಾಡಬೇಡಿ.

YouTube ಯೂಟ್ಯೂಬ್‌ನಲ್ಲಿ ತರಬೇತಿ ವಿಡಿಯೋ ವೀಕ್ಷಿಸಿರಿ
ಸ್ವಂತ ಅಂತಿಮ ಇ-ಖಾತೆ ರಚಿಸಿ (ಕನ್ನಡ)
@https://tinyurl.com/36suwvn2
ಸ್ವಂತ ಅಂತಿಮ ಇ-ಖಾತೆ ರಚಿಸಿ (ಆಂಗ್ಲ)
@https://tinyurl.com/2we4peah
ಇ-ಖಾತೆ ತಿದ್ದುಪಡಿಗಳಿಗಾಗಿ ಅರ್ಜಿ ಸಲ್ಲಿಸಿ
@https://tinyurl.com/mst8avrj

ಸಹಿ/– ಮುಖ್ಯ ಆಯುಕ್ತರು, ಬಿಬಿಎಂಪಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

EDUCATION SUCCESS ಕ್ಲಾಸಿಫೈಡ್ಸ್

JOB OPPORTUNITIES

Teachers / Professors

ADITYA GROUP OF INSTITUTIONS
Yelahanka
Invites applications for the post of
- ACCOUNTS EXECUTIVES
- ADMIN EXECUTIVES
- IT & NETWORKING
- CANTEEN MANAGER
- MAINTENANCE SUPERVISORS
- TELE-CALLERS
- HOSTEL WARDENS
- HR MANAGER
- RECEPTIONIST
- HOUSEKEEPING
- DRIVERS
- LAB ASST.
- ATTENDERS
- **SECURITY SERVICE** : from reputed agencies for providing efficient security service.

Interested candidates may send their resumes with photograph to
hrdept.aditya@gmail.com Contact No.: 7090001946

BUILDERS ESSENTIAL

Interior/Exterior

FURNITURE FOR sale. Good Condition teak wood elegant custom made Household furniture for sale. Genuine buyers contact 9663301222

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8970126393

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

PERSONAL

Change of Name

CHANGE OF NAME
I, Devaraju M.N S/o Late Ningaiah, Residing at # Makali, Makali Post Channapattana Taluk, Ramanagara District - 562108, have changed my minor daughter's name from M. SHAARVARIDEV to **SHAARVARI M DEV** vide affidavit dated 29-04-2025 before notary Mohammed Hussain.K, Bengaluru.

CHANGE OF NAME
I, Devaraju M.N S/o Late Ningaiah, Residing at # Makali, Makali Post Channapattana Taluk, Ramanagara District - 562108, have changed my minor son's name from M. YASHODEV to **YASHODEV M GOWDA** vide affidavit dated 28-04-2025 before notary Mohammed Hussain.K, Bengaluru.

CHANGE OF NAME
I, PREETI S (SHANMUGAM) and PREETI H (HARISH) residing at No. 555, 3rd Main Road, Jalavayu Vihar West Gate, Kacharakanahalli, Bengaluru- 560084, declare that the above names pertain to me only & henceforth I shall be known as **PREETI S (SHANMUGAM)** vide affidavit dated 03-02-2025, sworn before Notary Uday Kumar K, Bengaluru.

CHANGE OF NAME
I, Kanyakumari @ Kanya Rajarao, residing at No.141/6, 1st Floor, Srinivasa Nilaya, 23rd A Main, 2nd Cross, JP Nagar, 2nd Phase Bengaluru-560078, declare that the above names pertain to me only & henceforth I shall be known as **KANYAKUMARI** vide affidavit dated 05-05-2025, sworn before Notary S.I. Balaguru, Bengaluru.

BUSINESS

Business to Business

Business

FOR BUSINESS Takeovers Solutions, Arranging Funds for Mega Projects in Bangalore. Contact: Dr. Swamy Naidu, MBA (U.S.A) Anika Project Consultants, Bangalore:- 9342247637.







45 ಎಕರೆ ಬದಲು 10 ಎಕರೆ ಜಮೀನು!

ಜಮೀನು ನೀಡುವಂತೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ್ದ ಬಿಎಂಆರ್‌ಸಿಎಲ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಹೆಬ್ಬಾಳದಲ್ಲಿ ಬಹು ಮಾದರಿ ಸಾರಿಗೆ 'ಹಬ್' ನಿರ್ಮಿಸುವುದಕ್ಕಾಗಿ ಬಿಎಂಆರ್‌ಸಿಎಲ್‌ಗೆ ಕೆಐಎಡಿಬಿಯ ಜಮೀನು ನೀಡುವ ಪ್ರಸ್ತಾವ ಚರ್ಚೆಯ ಹಂತ ದಾಟುತ್ತಿಲ್ಲ. ಒಂದರ ಹಿಂದೆ ಒಂದು ಸಭೆ ನಡೆಸಿದರೂ ಅಂತಿಮ ತೀರ್ಮಾನ ಆಗುತ್ತಿಲ್ಲ. ಈ ಮಧ್ಯೆ 45 ಎಕರೆ ಬದಲು 9 ಅಥವಾ 10 ಎಕರೆ ಜಮೀನು ಮಾತ್ರ ನೀಡುವ ಕುರಿತು ಚರ್ಚೆ ಶುರುವಾಗಿದೆ.

ರೈಲು, ಮೆಟ್ರೊ ರೈಲು, ಉಪನಗರ ರೈಲು, ಬಿಎಂಟಿಸಿ ಬಸ್‌ಗಳು ಹಾದು ಹೋಗುವ ಹೆಬ್ಬಾಳದಲ್ಲಿ ಬಹು ಮಾದರಿ ಸಾರಿಗೆ ಹಬ್ ನಿರ್ಮಿಸಲು 45 ಎಕರೆ 5.5 ಗುಂಟೆ ಜಮೀನು ಅಗತ್ಯವಿದೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) 55 ಎಕರೆ ಜಮೀನು ಇಲ್ಲಿದ್ದು, ಹಿಂದೆ ಬೇರೆ ಯೋಜನೆ ರೂಪಿಸಿದ್ದರೂ ಕಾರ್ಯಗತಗೊಂಡಿಲ್ಲ. ಹಾಗಾಗಿ ಬಹು ಮಾದರಿ ಸಾರಿಗೆ ಹಬ್ ನಿರ್ಮಾಣಕ್ಕೆ ಈ ಜಮೀನನ್ನು ಒದಗಿಸಬೇಕು ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಬೆಂಗಳೂರು ಮೆಟ್ರೊ ರೈಲ್ ಕಾರ್ಪೊರೇಶನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಪ್ರಸ್ತಾವ ಸಲ್ಲಿಸಿತ್ತು.

ಸೆಂಟ್ರಲ್ ಸಿಲ್ಕ್ ಬೋರ್ಡ್–ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ನಮ್ಮ ಮೆಟ್ರೊ ನೀಲಿ ಮಾರ್ಗವು ಹೆಬ್ಬಾಳ ಮೂಲಕ ಹಾದುಹೋಗುತ್ತಿದ್ದು, ಕಾಮಗಾರಿ ನಡೆಯುತ್ತಿದೆ. ಜೆ.ಪಿ. ನಗರದಿಂದ ಕೆಂಪಾಪುರದವರೆಗಿನ ಮೆಟ್ರೊ ಮಾರ್ಗ (ಕಿತ್ತಳೆ ಮಾರ್ಗ), ಹೆಬ್ಬಾಳ–ಸರ್ಜಾಪುರ ಮಧ್ಯದ ಮೆಟ್ರೊ (ಕೆಂಪು) ಮಾರ್ಗವೂ ನಿರ್ಮಾಣಗೊಳ್ಳಲಿದೆ. ಮೂರು ಮೆಟ್ರೊ ಮಾರ್ಗಗಳು ಒಂದೆ ಕಡೆ ಸಂಧಿಸುವ ನಗರದ ಏಕೈಕ ಪ್ರದೇಶ ಇದಾಗಿದೆ.

ಬೆಂಗಳೂರು ಉಪನಗರ ರೈಲು ಯೋಜನೆಯ ಎರಡನೇ ಕಾರಿಡಾರ್ ಚಿಕ್ಕಬಾಣಾವರ–ಬೆನ್ನಿಗಾನಹಳ್ಳಿ ಮಾರ್ಗ (ಮಲ್ಲಿಗೆ ಮಾರ್ಗ) ಕೂಡ ಇಲ್ಲಿಂದಲೇ ಹಾದು ಹೋಗುತ್ತಿದೆ. ಹೆಬ್ಬಾಳ ರೈಲು ನಿಲ್ದಾಣ, ಬಿಎಂಟಿಸಿ ಡಿಪೊ ಎಲ್ಲವೂ ಇಲ್ಲೇ ಸುತ್ತಮುತ್ತ ಇವೆ.

ಹೆಬ್ಬಾಳ ಮತ್ತು ಹೆಬ್ಬಾಳ ಅಮಾನಿ ಕೆರೆಯಲ್ಲಿ ಬಹುಮಾದರಿ ಸಾರಿಗೆ ಸಂಪರ್ಕ ಕೇಂದ್ರ (ಹಬ್) ನಿರ್ಮಿಸಿದರೆ ವಾಹನ ದಟ್ಟಣೆ ಕಡಿಮೆಯಾಗಲಿದೆ. ಜಮೀನು ಒದಗಿಸಿಕೊಟ್ಟರೆ ಬಹು ಹಂತದ ಕಾರು ಪಾರ್ಕಿಂಗ್, ಆಧುನಿಕ ಡಿಪೊ ಮತ್ತು ಇತರ ಸಂಬಂಧಿತ ಮೂಲಸೌಕರ್ಯಗಳನ್ನು ಕಲ್ಪಿಸಲಾಗುವುದು. ಜಮೀನು ಒದಗಿಸಿದರೆ ಎಕರೆಗೆ ₹12 ಕೋಟಿಯಂತೆ ಪಾವತಿಸಲು ಸಿದ್ಧ ಎಂದು ಬಿಎಂಆರ್‌ಸಿಎಲ್ ಒಂದು ವರ್ಷದ ಹಿಂದೆ ತಿಳಿಸಿತ್ತು.

ಆನಂತರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಲವು ಬಾರಿ ಸಭೆ ನಡೆಸಿದ್ದರು. ಆದರೆ, ಪ್ರಸ್ತಾವವು ಮುಂದಿನ ಹಂತಕ್ಕೆ ಹೋಗಿರಲಿಲ್ಲ. ಸೋಮವಾರ ಮತ್ತೆ ಆಂತರಿಕ ಸಭೆ ನಡೆದಿದೆ. ಆದರೆ, ಯಾವುದೇ ತೀರ್ಮಾನವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ನಗರದ ಹೆಬ್ಬಾಳ ಮೇಲ್ಸೇತುವೆ ಬಳಿಯ ವಾಹನ ದಟ್ಟಣೆ (ಸಾಂದರ್ಭಿಕ ಚಿತ್ರ)

ಹೆಬ್ಬಾಳ ಹಬ್

'ಅಗತ್ಯ ಜಾಗ ಪಡೆಯುತ್ತೇವೆ'

'ಹೆಬ್ಬಾಳ ಜಂಕ್ಷನ್ ಬಹಳ ಮುಖ್ಯವಾದ ಜಾಗ. ಇಲ್ಲಿ ಮೆಟ್ರೊ ಹಾಗೂ ಸುರಂಗ ಮಾರ್ಗ ಅವಶ್ಯವಿದೆ. ಹೀಗಾಗಿ ನಾವು ಅಗತ್ಯವಿರುವ ಜಾಗವನ್ನು ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣಕ್ಕೂ ಯೋಜನೆ ಹಿಂಪಡೆಯಲು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ಮೆಟ್ರೊ ಹಾಗೂ ಸುರಂಗ ರಸ್ತೆಗೆ ಸಂಬಂಧಿಸಿದ ಅಧಿಕಾರಿಗಳು ಸೇರಿ ವಿನ್ಯಾಸ ಸಿದ್ಧಪಡಿಸುವಂತೆ ಸೂಚಿಸಲಾಗಿದೆ. ಇದಕ್ಕೆ ಅಗತ್ಯವಿರುವ ಮಿಲಿಟರಿ ಜಾಗ ಹಾಗೂ ಖಾಸಗಿ ಜಾಗ ಎಷ್ಟು ಬೇಕು ಎಂದು ನಾವು ಚರ್ಚೆ ಮಾಡಿದ್ದೇವೆ. ಟಿಡಿಆರ್ ಅಥವಾ ಎಫ್‌ಎಆರ್ ಮೂಲಕ ಪರಿಹಾರ ನೀಡಲು ಬದ್ಧರಾಗಿದ್ದೇವೆ. ನಾವು ಈ ಜಾಗ ಬಿಟ್ಟು ಕೊಡಲು ಸಿದ್ಧವಿಲ್ಲ' ಎಂದು ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು.

ಮತ್ತೊಂದು ಸಭೆ

'ಕೆಐಎಡಿಬಿಯ ಜಮೀನು ಆಗಿರುವುದರಿಂದ ಮತ್ತೆ ಪಡೆಯುವುದು ಕಷ್ಟದ ಕೆಲಸ. ಹಾಗಾಗಿ ಬಿಎಂಆರ್‌ಸಿಎಲ್ ಕೇಳಿದಷ್ಟು ಜಮೀನು ಒದಗಿಸುವುದು ಕಷ್ಟ. ಬಹು ಮಹಡಿ ಸಾರಿಗೆ ಹಬ್ ನಿರ್ಮಿಸಲು, ಅಲ್ಲಿ ಹಾದು ಹೋಗುವ ನಾಲಾದ ಎರಡೂ ಬದಿಯಲ್ಲಿ ರಸ್ತೆ ನಿರ್ಮಿಸಲು, ಬಹು ಸಾರಿಗೆಗಳಿಗೆ ಸಂಪರ್ಕ ಕಲ್ಪಿಸಲು, ಪ್ರಯಾಣಿಕರಿಗೆ ಪಾರ್ಕಿಂಗ್ ಒದಗಿಸಲು ಎಷ್ಟು ಬೇಕು ಎಂಬುದನ್ನು ನಿಖರವಾಗಿ ತಿಳಿಸಬೇಕು. ಸುಮಾರು 10 ಎಕರೆ ಸಾಕಾಗಲಿದ್ದು, ಅಷ್ಟನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ. ಈ ಬಗ್ಗೆ ಮತ್ತೊಂದು ಸಭೆ ನಡೆಸಲಾಗುವುದು ಎಂದು ಸಭೆಯಲ್ಲಿ ಉಪ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಳೆ: ಮುನ್ನೆಚ್ಚರಿಕೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆಗಾಲದ ವೇಳೆಗೆ ಸನ್ನದ್ಧರಾಗಿರಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮುಂಗಾರು ಮಳೆ ಆರಂಭ ಸನಿಹವಾಗುತ್ತಿದ್ದು, ನಗರದಲ್ಲಿ ಸಂಭವನೀಯ ಪ್ರವಾಹ, ಮಳೆ ಅನಾಹುತಗಳನ್ನು ತಡೆಗಟ್ಟಲು ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ವಿವಿಧ ಇಲಾಖೆಗಳ ಮುಖ್ಯಸ್ಥ-ರೊಂದಿಗೆ ಅವರು ಸೋಮವಾರ ಸಭೆ ನಡೆಸಿದರು.

ನಗರದಲ್ಲಿ 209 ಪ್ರವಾಹಪೀಡಿತ ಪ್ರದೇಶ-ಗಳಿದ್ದು, ಈಗಾಗಲೇ 166 ಸ್ಥಳಗಳಲ್ಲಿ ಯಾವುದೇ ಸಮಸ್ಯೆಯಾಗ-ದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. 43 ಪ್ರವಾಹಪೀಡಿತ ಪ್ರದೇಶಗಳಲ್ಲಿ ಯಾವುದೇ ಸಮಸ್ಯೆಯಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕಿದ್ದು, ಆಯಾ ವಲಯ ಹಿರಿಯ ಅಧಿಕಾರಿಗಳು ಖುದ್ದು ಪ್ರವಾಹ ಪೀಡಿತ ಸ್ಥಳಗಳಿಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕು ಎಂದು ಸೂಚಿಸಿದರು.

ಮೆಟ್ರೊ, ಕೆ-ರೈಡ್, ಕೆಪಿಟಿಸಿಎಲ್ ಸೇರಿದಂತೆ ಹಲವು ಇಲಾಖೆಗಳ ವತಿಯಿಂದ ನಗರದಾದ್ಯಂತ ಕಾಮಗಾರಿಗಳು ನಡೆಯುತ್ತಿದ್ದು, ಈ ಸ್ಥಳಗಳಲ್ಲಿ ದುರಸ್ತಿಯಾಗಿರುವ ಕಾಲುವೆಗಳ ಪಟ್ಟಿಯನ್ನು ಸಿದ್ಧಪಡಿಸಿ ಸಂಬಂಧಪಟ್ಟ ಇಲಾಖೆಗಳಿಗೆ ವರದಿ ನೀಡಬೇಕು. ಸಂಬಂಧಟ್ಟ ಇಲಾಖೆಗಳು ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮಳೆ ಪ್ರಾರಂಭ ಆಗುವುದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಬೇಕು ಎಂದರು.



ಮುಖ್ಯಾಂಶಗಳು

- ಚರಂಡಿಗಳಲ್ಲಿ ಹೂಳೆತ್ತಲು ಸೂಚನೆ
- ಅಧಿಕಾರಿಗಳನ್ನು ನಿಯೋಜಿಸಲು ಸಲಹೆ
- 'ಮಳೆಗೆ ಮುನ್ನ ಕಾಮಗಾರಿ ಪೂರ್ಣಗೊಳಿಸಿ'

ಪಾಲಿಕೆ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ 82 ಕಡೆ ನೀರು ನಿಲ್ಲುವ ಸ್ಥಳಗಳನ್ನು ಸಂಚಾರ ಪೊಲೀಸ್ ವಿಭಾಗವು ಗುರುತಿಸಿದ್ದು, ಪಾಲಿಕೆಗೆ ಪಟ್ಟಿ ನೀಡಲಾಗಿದೆ. ಸಂಬಂಧಪಟ್ಟ ಎಂಜಿನಿಯರ್‌ಗಳು ಪಟ್ಟಿಯ ಅನುಸಾರ ಸ್ಥಳ ಪರಿಶೀಲಿಸಿ ಸೈಡ್‌ಡ್ರೈನ್‌ಗಳಲ್ಲಿ ಹೂಳೆತ್ತಿ ಸ್ವಚ್ಛಗೊಳಿಸಬೇಕು. ಸಂಚಾರ ದಟ್ಟಣೆಯಾಗುವುದನ್ನು ನಿಯಂತ್ರಿಸಬೇಕು ಎಂದು ಹೇಳಿದರು.

ಆಯಾ ವಲಯ ವ್ಯಾಪ್ತಿಯಲ್ಲಿರುವ ಅಗ್ನಿ ಶಾಮಕ ಠಾಣೆಗಳ ಜೊತೆ ವಲಯ ಆಯುಕ್ತರು ಸದಾ ಸಂಪರ್ಕದಲ್ಲಿರಬೇಕು. ಬಿಬಿಎಂಪಿಯಲ್ಲಿ ಎಂಟು ವಲಯಗಳು ಹಾಗೂ ಪಾಲಿಕೆ ಕೇಂದ್ರ ಕಚೇರಿ ಸೇರಿದಂತೆ ಒಂಬತ್ತು ಶಾಶ್ವತ ನಿಯಂತ್ರಣ ಕೊಠಡಿಗಳು ಹಾಗೂ 63 ಉಪ ವಿಭಾಗಗಳ ನಿಯಂತ್ರಣ ಕೊಠಡಿಗಳನ್ನು ಸ್ಥಾಪಿಸಿದ್ದು, ಎಲ್ಲಾ ನಿಯಂತ್ರಣ ಕೊಠಡಿಗಳಿಗೆ ಪಾಲಿಕೆ, ಬೆಸ್ಕಾಂ, ಜಲಮಂಡಳಿ ಅಧಿಕಾರಿಗಳನ್ನು ಕೂಡಲೇ ನಿಯೋಜಿಸಬೇಕು. ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ರಚಿಸಿ ಅದರ ಮೂಲಕ ಸಮನ್ವಯ ಸಾಧಿಸಿ, ಸಮಸ್ಯೆ ಬಗೆಹರಿಸಲು ಸೂಚನೆ ನೀಡಿದರು.

'ಸಂಚಾರ ಪೊಲೀಸ್ ಅಧಿಕಾರಿಗಳು 647 ರಸ್ತೆ ಗುಂಡಿಗಳನ್ನು ಮುಚ್ಚಲು ಪಟ್ಟಿ ನೀಡಿದ್ದು, ಅದರಂತೆ ಈಗಾಗಲೇ 323 ರಸ್ತೆ ಗುಂಡಿಗಳನ್ನು ಮುಚ್ಚಲಾಗಿರುತ್ತದೆ. 239 ರಸ್ತೆ ಗುಂಡಿಗಳು ಬಾಕಿಯಿದ್ದು, ಕೂಡಲೇ ಮುಚ್ಚಲಾಗುವುದು. ಇನ್ನು 90 ರಸ್ತೆ ಗುಂಡಿಗಳು ಬೇರೆ-ಬೇರೆ ಇಲಾಖೆಗಳಿಗೆ ಬರಲಿದ್ದು, ಐದು ರಸ್ತೆಗಳು ಬಿಬಿಎಂಪಿ ವ್ಯಾಪ್ತಿಗೆ ಬರುವುದಿಲ್ಲ' ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್, 'ನಗರದಲ್ಲಿ ಮಳೆಯಾದ ವೇಳೆ ಹೆಚ್ಚು ಸಮಸ್ಯೆ ಕಂಡುಬರುವ ಸ್ಥಳಗಳಿಗೆ ಅಧಿಕಾರಿಗಳು ಖುದ್ದು ಭೇಟಿ ನೀಡಿ ಪರಿಶೀಲಿಸಬೇಕು. ಆ ನಂತರ ಯಾವ ಸಮಸ್ಯೆಗಳಿವೆ ಎಂಬುದನ್ನು ಗುರುತಿಸಿ ಅಧಿಕಾರಿಗಳೇ ಬಗೆಹರಿಸಬೇಕು' ಎಂದರು.

ಹೈಕೋರ್ಟ್ ಸುದ್ದಿಗಳು

ಗಾಂಜಾ ಗಿಡ ಬೆಳೆಸಿದ ಆರೋಪ: ಪ್ರಕರಣ ರದ್ದುಪಡಿಸಿದ ಕೋರ್ಟ್

ಬೆಂಗಳೂರು: ಹಿತ್ತಲಿನಲ್ಲಿ ಐದರಿಂದ ಆರು ಗಾಂಜಾ ಗಿಡಗಳನ್ನು ಬೆಳೆಸಿದ ಆರೋಪಕ್ಕೆ ಸಂಬಂಧಿಸಿದಂತೆ ನಗರದ ಹಿರಿಯ ನಾಗರಿಕರೊಬ್ಬರ ವಿರುದ್ಧ ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

'ನನ್ನ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದಂತೆ ನಗರದ 34ನೇ ಸೆಷನ್ಸ್ ಕೋರ್ಟ್‌ನಲ್ಲಿರುವ ನ್ಯಾಯಿಕ ಪ್ರಕ್ರಿಯೆ ರದ್ದುಗೊಳಿಸಬೇಕು' ಎಂದು ಕೋರಿ ಜಯನಗರದ 7ನೇ ಬ್ಲಾಕ್ ನಿವಾಸಿ ಚಂದ್ರಶೇಖರ್ (67) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅರ್ಜಿದಾರರು ಗಾಂಜಾ ಬೆಳೆಯುತ್ತಿದ್ದರು ಎಂಬುದನ್ನು ಸಾಬೀತುಪಡಿಸುವಲ್ಲಿ ತನಿಖಾಧಿಕಾರಿ ಯಾವುದೇ ಸಾಕ್ಷ್ಯ ಒದಗಿಸಿಲ್ಲ. ಹೀಗಾಗಿ, ದೋಷಾರೋಪ ಪಟ್ಟಿಯು ಕಾನೂನಿಗೆ ವಿರುದ್ಧವಾಗಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಪ್ರಕರಣವನ್ನು ರದ್ದುಗೊಳಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಯಶ್ಯಾಮ್ ಜಯಸಿಂಹ ರಾವ್ ವಾದ ಮಂಡಿಸಿದ್ದರು.

ವಿಲ್ಸನ್ ಗಾರ್ಡನ್ ನಾಗ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: 'ಮಾದಕ ವಸ್ತು ಮಾರಾಟ ಪ್ರಕರಣದಲ್ಲಿ ಸಹ ಆರೋಪಿಯ ತಪ್ಪೊಪ್ಪಿಗೆ ಆಧರಿಸಿ ಮತ್ತೊಬ್ಬ ವ್ಯಕ್ತಿಯನ್ನು ಅಪರಾಧದಲ್ಲಿ ಸಿಲುಕಿಸಲಾಗದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ರೌಡಿಶೀಟರ್ ಜೆ.ನಾಗರಾಜ್ ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ ವಿರುದ್ಧದ ಕ್ರಿಮಿನಲ್ ಪ್ರಕ್ರಿಯೆಯನ್ನು ರದ್ದುಪಡಿಸಿದೆ.

'ನನ್ನ ವಿರುದ್ಧದ ಕ್ರಿಮಿನಲ್ ಪ್ರಕರಣ ಮತ್ತು ದೋಷಾರೋಪ ಪಟ್ಟಿ ರದ್ದುಗೊಳಿಸಬೇಕು' ಎಂದು ಕೋರಿ ಜೆ.ನಾಗರಾಜ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಮಾದಕ ದ್ರವ್ಯ ನಿಗ್ರಹ ಕಾಯ್ದೆ–1985ರ (ಎನ್‌ಡಿಪಿಎಸ್) ಕಲಂ 52ಎ ಅಡಿ ಜಪ್ತಿ ಮಾಡಿದ ವಸ್ತುವನ್ನು ಆರೋಪಿಯ ಸಮ್ಮುಖದಲ್ಲಿ ಮಹಜರು ಮಾಡಬೇಕು. ಆದರೆ, ಈ ಪ್ರಕರಣದಲ್ಲಿ ಜಪ್ತಿ ಮಾಡಿದ ವಸ್ತುಗಳನ್ನು ಮಹಜರು ಮಾಡಿಲ್ಲ. ಹಾಲಿ ಪ್ರಕರಣದಲ್ಲಿ ಕಲಂ 67ರ ಅಡಿ ಸಹ ಆರೋಪಿಯ ತಪ್ಪೊಪ್ಪಿಗೆ ಆಧರಿಸಿ ಅರ್ಜಿದಾರರನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ' ಎಂಬ ಅಭಿಪ್ರಾಯದೊಂದಿಗೆ ನ್ಯಾಯಪೀಠ ಜೆ.ನಾಗರಾಜ್ ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಿದೆ. ನಾಗ ಪರ ಹೈಕೋರ್ಟ್ ವಕೀಲರಾದ ಮಧುಕರ ದೇಶಪಾಂಡೆ ಮತ್ತು ಎನ್.ಗೌರವ್ ವಾದ ಮಂಡಿಸಿದ್ದರು.

ಮುಖ್ಯಮಂತ್ರಿ ವಿರುದ್ಧದ ಕ್ರಿಮಿನಲ್ ಪ್ರಕರಣ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರು 2013 ರಿಂದ 2018ರ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ವೇಳೆ ತಮ್ಮ ಸರ್ಕಾರದ ಸಾಧನೆಗಳನ್ನು ಬಿಂಬಿಸುವ ಜಾಹೀರಾತುಗಳನ್ನು, ಬಿಬಿಎಂಪಿ ವ್ಯಾಪ್ತಿಯ ಬಸ್ ತಂಗುದಾಣಗಳಲ್ಲಿ ಪ್ರದರ್ಶಿಸುವ ಮೂಲಕ ಬೊಕ್ಕಸಕ್ಕೆ ₹68 ಕೋಟಿಗೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ್ದಾರೆ' ಎಂದು ಆರೋಪಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಜಾಗೊಳಿಸಿದೆ.

ಬಿಬಿಎಂಪಿ ಮಾಜಿ ಸದಸ್ಯ ಎನ್.ಆರ್.ರಮೇಶ್ ಅವರು, ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿ ಪ್ರಕರಣದ ತನಿಖೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಖಾಸಗಿ ದೂರಿನ ವಿಚಾರಣೆ ನಡೆಸಿದ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್,'ದೂರಿನಲ್ಲಿ ಉಲ್ಲೇಖಿಸಲಾಗಿರುವ ಆಪಾದನೆಗಳನ್ನು ಸಾಬೀತುಪಡಿಸುವ ಯಾವುದೇ ಆಧಾರಗಳಿಲ್ಲ' ಎಂಬ ಅಭಿಪ್ರಾಯ-ದೊಂದಿಗೆ ವಜಾಗೊಳಿಸಿದ್ದಾರೆ.

ದೂರಿನಲ್ಲಿ ಸಿದ್ದರಾಮಯ್ಯ, ಸಚಿವ ಕೆ.ಜೆ.ಜಾರ್ಜ್, ಅಂದಿನ ಬಿಬಿಎಂಪಿ ಆಯುಕ್ತ ಐಎಎಸ್ ಅಧಿಕಾರಿ ಮಂಜುನಾಥ ಪ್ರಸಾದ್ ಮತ್ತಿತರರ ವಿರುದ್ಧ ಆಪಾದನೆ ಹೊರಿಸಲಾಗಿತ್ತು.

ಕೆಪಿಎಸ್‌ಸಿ: ಸರ್ಕಾರದ ನಿರ್ಧಾರಕ್ಕೆ ಕೋರ್ಟ್ ಶ್ಲಾಘನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ಅಧ್ಯಕ್ಷ ಮತ್ತು ಸದಸ್ಯರ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಪಿ.ಸಿ.ಹೋಟಾ ಸಮಿತಿಯ ಶಿಫಾರಸಿಗೆ ಅನುಗುಣವಾಗಿ ಶೋಧನಾ ಸಮಿತಿ ರಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆದೇಶಿಸಿರುವುದನ್ನು ಹೈಕೋರ್ಟ್ ಶ್ಲಾಘಿಸಿದೆ.

ಎಂಜಿನಿಯರ್‌ಗಳ ನೇಮಕಾತಿಗೆ ಸಂಬಂಧಿಸಿದ ಪ್ರಕರಣದಲ್ಲಿ, ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) ಆದೇಶ ಪ್ರಶ್ನಿಸಿ ಎಂಜಿನಿಯರ್‌ಗಳಾದ ವಿಶ್ವಾಸ್ ಮತ್ತಿತರರು ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರು ನೀಡಿರುವ ಹೇಳಿಕೆಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ತನ್ನ ದೈನಂದಿನ ಆದೇಶದಲ್ಲಿ ಉಲ್ಲೇಖಿಸಿದೆ.

'ಶೋಧನಾ ಸಮಿತಿಯಲ್ಲಿ ತಲಾ ಒಬ್ಬರು ಮಹಿಳೆ ಮತ್ತು ತುಳಿತಕ್ಕೊಳಗಾದ ಸಮುದಾಯದ ವ್ಯಕ್ತಿಯನ್ನು ಸದಸ್ಯರನ್ನಾಗಿ ಮಾಡಬೇಕೆಂಬ ನ್ಯಾಯಪೀಠದ ಸಲಹೆಯನ್ನು ಸಂಪುಟ ಸಭೆಯ ಮುಂದೆ ಇರಿಸಲಾಗುವುದು. ಇದನ್ನು ಸಚಿವ ಸಂಪುಟ ಪರಿಶೀಲಿಸಲಿದೆ' ಎಂಬ ಅಡ್ವೊಕೇಟ್ ಜನರಲ್ ಅವರ ಹೇಳಿಕೆಯನ್ನೂ ನ್ಯಾಯಪೀಠ ಶ್ಲಾಘಿಸಿದೆ.

ಇದೇ ವೇಳೆ ನ್ಯಾಯಪೀಠಕ್ಕೆ ಮುಚ್ಚಿದ ಲಕೋಟೆಯೊಂದನ್ನು ಸಲ್ಲಿಸಿರುವ ರಾಜ್ಯ ಸರ್ಕಾರ, 'ಒಂದು ವೇಳೆ ನ್ಯಾಯಾಲಯ ಕೆಪಿಎಸ್‌ಸಿ ಹಗರಣದ ತನಿಖೆ ನಡೆಸಲು ವಿಶೇಷ ತನಿಖಾ ದಳ (ಎಸ್‌ಐಟಿ) ರಚಿಸಿದರೆ ಅದಕ್ಕಾಗಿ ಮೂವರು ಐಪಿಎಸ್ ಅಧಿಕಾರಿಗಳನ್ನು ಪರಿಗಣಿಸಬಹುದು' ಎಂದು ಮೂವರು ಅಧಿಕಾರಿಗಳ ಹೆಸರುಗಳನ್ನು ನಮೂದಿಸಿದೆ.

ಪ್ರಕರಣದಲ್ಲಿ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲರಾದ ವಿ. ಲಕ್ಷ್ಮಿನಾರಾಯಣ, ಎಂ.ಎಸ್.ಭಾಗವತ್ ಮತ್ತು ಕೆಪಿಎಸ್‌ಸಿ ಪರ ಪದಾಂಕಿತ ಹಿರಿಯ ವಕೀಲ ಪಿ.ಎಸ್. ರಾಜಗೋಪಾಲ್ ವಾದ ಮಂಡಿಸಿದ್ದಾರೆ.

ಪಿಇಎಸ್ ವಿ.ವಿ– ಎಚ್‌ಸಿಎಲ್ ಟೆಕ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೈಕ್ಷಣಿಕ, ಸಂಶೋಧನೆ ಮತ್ತು ಉದ್ಯಮ ಆಧಾರಿತ ಕೌಶಲ ಬಲಪಡಿಸಲು ಪಿಇಎಸ್ ವಿಶ್ವವಿದ್ಯಾಲಯ ಮತ್ತು ಜಾಗತಿಕ ತಂತ್ರಜ್ಞಾನ ಕಂಪನಿ ಎಚ್‌ಸಿಎಲ್ ಟೆಕ್ ಒಪ್ಪಂದಕ್ಕೆ ಸಹಿ ಹಾಕಿವೆ.

ನವೀನ ತಂತ್ರಜ್ಞಾನ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳನ್ನು ಆಧುನಿಕ ಜ್ಞಾನದಿಂದ ಸಜ್ಜುಗೊಳಿಸುವ ಮೂಲಕ ಶೈಕ್ಷಣಿಕ ಮತ್ತು ಉದ್ಯಮದ ನಡುವಿನ ಅಂತರವನ್ನು ಕಡಿಮೆ ಮಾಡುವ ಗುರಿ ಇಟ್ಟುಕೊಂಡು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಪಿಇಎಸ್ ಪ್ರಕಟಣೆ ತಿಳಿಸಿದೆ.

ಪಿಇಎಸ್ ವಿದ್ಯಾರ್ಥಿಗಳು ಮತ್ತು ಎಚ್‌ಸಿಎಲ್ ಟೆಕ್ ಉದ್ಯೋಗಿಗಳು ಸಂಶೋಧನೆ, ನಾವಿನ್ಯ ಮತ್ತು ಕೌಶಲ ಅಭಿವೃದ್ಧಿಯ ಬಗ್ಗೆ ಕೇಂದ್ರೀಕರಿಸುವಂತೆ ಮಾಡಲಾಗುವುದು. ಜಂಟಿ ಸಂಶೋಧನೆ, ಅಭಿವೃದ್ಧಿ ಯೋಜನೆಗಳು, ಅತಿಥಿ ಉಪನ್ಯಾಸಗಳು, ಉದ್ಯಮ ತಜ್ಞರ ನೇತೃತ್ವದ ಕಾರ್ಯಾಗಾರಗಳು ನಡೆಯಲಿವೆ. ಪಿಇಎಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಎಚ್‌ಸಿಎಲ್ ಟೆಕ್ ಇಂಟರ್ನ್‌ಶಿಪ್ ನೀಡುವುದಲ್ಲದೇ ಪ್ರಾಯೋಗಿಕ ಅನುಭವ ಮತ್ತು ಸಂಭಾವ್ಯ ಉದ್ಯೋಗ ಅವಕಾಶಗಳನ್ನು ಒದಗಿಸಲಿದೆ. 'ಕೃತಕ ಬುದ್ಧಿಮತ್ತೆ, ಸೆಮಿ ಕಂಡಕ್ಟರ್‌ಗಳು, ಡಿಜಿಟಲ್ ಎಂಜಿನಿಯರಿಂಗ್ ಪರಿಹಾರಗಳಂಥ ಹೊಸ ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ಅಭಿವೃದ್ಧಿಪಡಿಸುವ, ಸಂಶೋಧನೆಯನ್ನು ಬೆಳೆಸುವ ಮೂಲಕ ಭಾರತದ ತಾಂತ್ರಿಕ ಪರಿಸರ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಪ್ರಕ್ರಿಯೆ ಈ ಒಪ್ಪಂದದ ಮೂಲಕ ನಡೆಯಲಿದೆ' ಎಂದು ಎಚ್‌ಸಿಎಲ್ ಟೆಕ್ ಕಾರ್ಪೊರೇಟ್ ಉಪಾಧ್ಯಕ್ಷ ಹರಿ ಸಾದರಹಳ್ಳಿ ತಿಳಿಸಿದರು.

'ನಮ್ಮ ವಿದ್ಯಾರ್ಥಿಗಳಿಗೆ ನೈಜ ಪ್ರಪಂಚದ ಸವಾಲುಗಳನ್ನು ಪರಿಚಯಿಸಲು, ಮುಂದುವರಿದ ಉದ್ಯಮಗಳೊಂದಿಗೆ ತೊಡಗಿಕೊಳ್ಳಲು ಅವಕಾಶವನ್ನು ಈ ಒಪ್ಪಂದ ಒದಗಿಸಲಿದೆ' ಎಂದು ಪಿಇಎಸ್ ವಿಶ್ವವಿದ್ಯಾಲಯ ಕುಲಾಧಿಪತಿ ಜವಾಹರ್ ದೊರೆಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ಶೈಕ್ಷಣಿಕ, ಸಂಶೋಧನೆ ಮತ್ತು ಉದ್ಯಮ ಆಧಾರಿತ ಕೌಶಲ ಬಲಪಡಿಸಲು ಪಿಇಎಸ್ ವಿಶ್ವವಿದ್ಯಾಲಯ ಮತ್ತು ಜಾಗತಿಕ ತಂತ್ರಜ್ಞಾನ ಕಂಪನಿ ಎಚ್‌ಸಿಎಲ್ ಟೆಕ್ ನಡುವೆ ಒಡಂಬಡಿಕೆ ನಡೆಯಿತು

ಕ.ಸಾಪ. ಸಂಸ್ಥಾಪನಾ ದಿನಾಚರಣೆಯಲ್ಲಿ ಎಂ. ವೀರಪ್ಪ ಮೊಯಿಲಿ ಅಭಿಪ್ರಾಯ

ಕನ್ನಡ ಬೆಳೆಯಲು ಎಲ್ಲೆಡೆಯಿಂದ ಬರಲಿ ಪದ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಭಾಷೆಯಿಂದ ಪದಗಳನ್ನು ಪಡೆಯಲು ಕನ್ನಡಿಗರು ಹಿಂಜರಿಯಬಾರದು. ಪದ ಸಂಪತ್ತು ಇಲ್ಲದೇ ಭಾಷೆ ಬೆಳೆಯದು. ಎಲ್ಲ ಭಾಷೆಗಳಿಂದ ಪಡೆಯುವ ಶಬ್ದಗಳನ್ನು ಕನ್ನಡಕ್ಕೆ ಒಗ್ಗಿಸಬೇಕು. ಅಷ್ಟರ ಮಟ್ಟಿಗೆ ನಾವು ಉದಾರಿಗಳಾಗಬೇಕು' ಎಂದು ಸಾಹಿತಿ ಎಂ. ವೀರಪ್ಪ ಮೊಯಿಲಿ ತಿಳಿಸಿದರು.

ನಗರದಲ್ಲಿ ಸೋಮವಾರ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ 111ನೇ ಸಂಸ್ಥಾಪನಾ ದಿನಾಚರಣೆ, ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 'ದೇವಭಾಷೆ ಎಂಬುದು ಇಲ್ಲ. ಮನುಷ್ಯ ಸಂವಹನಕ್ಕೆ ಬಳಸುವ ಭಾಷೆಗಳೇ ಎಲ್ಲ. ಕನ್ನಡವು ನಮ್ಮ ಹೃದಯದ ಭಾಷೆ' ಎಂದರು.

ಕನ್ನಡ ನಿಘಂಟು ಒಂದು ಬಾರಿ ರಚಿಸಿದರೆ ಮುಗಿಯಿತು ಎಂಬ ಮನೋಭಾವ ಇರಬಾರದು. ಕಾಲಕಾಲಕ್ಕೆ ಅದಕ್ಕೆ ಹೊಸ ಶಬ್ದಗಳು ಸೇರ್ಪಡೆಗೊಳ್ಳುತ್ತಾ ಹೋಗಬೇಕು. ಕನ್ನಡ ಲಿಪಿ ಸುಧಾರಣೆ ಕೂಡ ಆಗಬೇಕು ಎಂದು ಸಲಹೆ ನೀಡಿದರು.

'ಸಾಹಿತ್ಯ ಸಮ್ಮೇಳನವು ಭಾಷಾ ಸಮ್ಮೇಳನವಾದರೆ ಸಾಲದು. ವಿಜ್ಞಾನದ ಸಮ್ಮೇಳನವೂ ನಡೆಯಬೇಕು. ಸಾಹಿತ್ಯ ಸಮ್ಮೇಳನವು ಸಾಂಸ್ಕೃತಿಕ ಸಮ್ಮೇಳನವಾಗಿ ಪರಿವರ್ತನೆಗೊಳ್ಳಬೇಕು. ಕನ್ನಡದ ಬೆಳವಣಿಗೆಗೆ ಕೊಡುಗೆ ನೀಡಲಿ ಎಂಬ ಕಾರಣಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರವನ್ನು, ಕನ್ನಡ ವಿಶ್ವವಿದ್ಯಾಲಯವನ್ನು ಆರಂಭಿಸಿದ್ದೆ. ಆದರೆ, ಉದ್ದೇಶ ಈಡೇರಿಲ್ಲ. ಸಂಶೋಧನೆಗಳೆಲ್ಲ ನಿಂತು ಹೋಗಿವೆ' ಎಂದು ಬೇಸರ ವ್ಯಕ್ತಪಡಿಸಿದರು.

ಅಲಭ್ಯ ಕೃತಿಗಳನ್ನು ಮರುಮುದ್ರಣ ಮಾಡಲು ಪರಿಷತ್ತು ಮುಂದಾಗಬೇಕು. ಗ್ರಂಥಾಲಯ ಸೆಸ್ ಶೇ 2 ಇತ್ತು. ಅದನ್ನು ಶೇ 6ಕ್ಕೆ ಏರಿಸಿದ್ದೆ. ಆದರೆ, ಈಗ ಆ ಸೆಸ್ ಎಲ್ಲೆಲ್ಲೋ ಖರ್ಚಾಗುತ್ತಿದೆ. ಗ್ರಂಥಾಲಯದ ಬೆಳವಣಿಗೆಗೇ ಬಳಕೆ ಆಗುವಂತೆ ಮಾಡಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅಧ್ಯಕ್ಷತೆ ವಹಿಸಿದ್ದರು. ಭರತನಾಟ್ಯ ಕಲಾವಿದ ಶ್ರೀಧರ್, ಉದಯವಾಣಿ ಸಂಪಾದಕ ರವಿಶಂಕರ್ ಕೆ.ಭಟ್, ಸಾಹಿತಿ ಬೇಲೂರು ರಾಮಮೂರ್ತಿ, ದತ್ತಿ ದಾನಿಗಳಾದ ಎಚ್. ವಿಶ್ವನಾಥ್, ಎ. ಪುಷ್ಪಾ ಅಯ್ಯಂಗಾರ್, ಪರಿಷತ್ತಿನ ನೇ.ಭ. ರಾಮಲಿಂಗ ಶೆಟ್ಟಿ, ಪದ್ಮಿನಿ ನಾಗರಾಜು, ಬಿ.ಎಂ. ಪಟೇಲ್‌ಪಾಂಡು ಉಪಸ್ಥಿತರಿದ್ದರು.

ಸ.ರ. ಸುದರ್ಶನ ಅವರಿಗೆ ಕನ್ನಡ ಚಳವಳಿ ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ, ಎಚ್.ಎ. ಶಕುಂತಲಾ ಭಟ್, ವಿಜಯಾ ಮೋಹನ್ ಅವರಿಗೆ ಬಿ. ಸರೋಜಾದೇವಿ ದತ್ತಿ ಪ್ರಶಸ್ತಿ, ಗುರುದೇವ ನಾರಾಯಣಕುಮಾರ್, ಡಿ.ಬಿ. ರಜಿಯಾ ಅವರಿಗೆ ಸತ್ಯವತಿ ವಿಜಯರಾಘವ ಚಾರಿಟಬಲ್ ಟ್ರಸ್ಟ್ ಧರ್ಮದರ್ಶಿಗಳ ದತ್ತಿ, ಗುರುಬಸವ ಮಹಾಮನೆಯ ಬಸವಾನಂದ ಸ್ವಾಮಿ ಅವರಿಗೆ ಎಚ್.ವಿಶ್ವನಾಥ್–ಎಂ.ಎಸ್. ಇಂದಿರಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸ.ರ. ಸುದರ್ಶನ, ಎಚ್. ಶಕುಂತಲಾ ಭಟ್, ಗುರುದೇವ ನಾರಾಯಣ ಕುಮಾರ್, ಬಸವಾನಂದ ಸ್ವಾಮೀಜಿ, ವಿಜಯಾ ಮೋಹನ್, ಡಿ.ಬಿ. ರಜಿಯಾ ಅವರಿಗೆ ದತ್ತಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು ಪ್ರಜಾವಾಣಿ ಚಿತ್ರ

ವಿಶ್ವದ ಎಲ್ಲ ಭಾಷೆಗಳಿಗೆ ಅನುವಾದಗೊಂಡರೆ ಕನ್ನಡದ ಬೆಳವಣಿಗೆ: ಸಿ.ಎಂ

ಕನ್ನಡ ಕೃತಿಗಳ ಅನುವಾದಕ್ಕೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಉಳಿಸಿ, ಬೆಳೆಸಲು ಸರ್ಕಾರ ಹಿಂದೆ ಬೀಳುವುದಿಲ್ಲ. ಕನ್ನಡದ ಮಹತ್ವದ ಕೃತಿಗಳನ್ನು ಇಂಗ್ಲಿಷ್ ಸೇರಿದಂತೆ ಹಲವು ಭಾಷೆಗಳಿಗೆ ಅನುವಾದ ಮಾಡಲು ನೆರವು ನೀಡಲಾಗುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಹಂಪ ನಾಗರಾಜಯ್ಯ ಅವರ ದೇಸಿಕಾವ್ಯ 'ಚಾರು ವಸಂತ'ದ ಪರ್ಷಿಯನ್ ಅನುವಾದದ ಕೃತಿಯನ್ನು ಸೋಮವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಹಂಪನಾ ಹಾಗೂ ಬಿ.ಎಲ್. ಶಂಕರ್ ಅವರು ಕನ್ನಡದ ಮಹತ್ವದ ಕೃತಿಗಳ ಭಾಷಾಂತರಕ್ಕೆ ಸಲಹೆ ನೀಡಿದ್ದಾರೆ. ಕನ್ನಡದ ಕೃತಿಗಳು ವಿಶ್ವದ ಎಲ್ಲಾ ಭಾಷೆಗಳಿಗೆ ಅನುವಾದಗೊಂಡರೆ ಕನ್ನಡದ ಬೆಳವಣಿಗೆಗೆ ಕಾರಣವಾಗುತ್ತದೆ. ಅದಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು' ಎಂದರು.

'ಪರ್ಷಿಯನ್ ಭಾಷೆಯಿಂದ ಕನ್ನಡಕ್ಕೆ, ಕನ್ನಡದಿಂದ ಪರ್ಷಿಯನ್‌ಗೆ ಹಲವು ಕೃತಿಗಳು ಅನುವಾದವಾಗಿವೆ. ಹಂಪನಾ ಅವರ ಚಾರು ವಸಂತ 16 ಭಾಷೆಗಳಿಗೆ ಅನುವಾದವಾಗಿದ್ದು, ಪರ್ಷಿಯನ್‌ಗೂ ಅನುವಾದ ಆಗಿರುವುದು ಕನ್ನಡದ ಹೆಮ್ಮೆ' ಎಂದು ಹೇಳಿದರು.

'ಹಂಪನಾ ಅವರ ಚಾರು ವಸಂತ ಕಾವ್ಯ, ನಾಟಕವಾಗಿ ಕೂಡ ಜನಮನ್ನಣೆ ಗಳಿಸಿದೆ. ಹಂಪನಾ ದಂಪತಿ ನನಗೆ ಬಹಳ ವರ್ಷಗಳಿಂದ ಆತ್ಮೀಯರು. ನಾನು ಸಾಹಿತಿ ಅಲ್ಲ. ಆದರೆ, ಸಾಹಿತ್ಯ ಮತ್ತು ಸಾಹಿತಿಗಳ ಒಡನಾಟ ಇದೆ, ಸಾಹಿತಿಗಳ ಬಗ್ಗೆ ಅಪಾರ ಗೌರವವಿದೆ' ಎಂದರು.

'ಮಲ ಹೊರುವ ಪದ್ಧತಿ ಕುರಿತ ಕೃತಿ ಇದಾಗಿದೆ. ಜಾತಿ ವ್ಯವಸ್ಥೆ ರೂಪಿಸಿದ ಶಾಪ ಅಸ್ಪೃಶ್ಯತೆ ಅಳಿಯಬೇಕು. ಕೆಲವು ವಿದ್ಯಾವಂತರೇ ಜಾತಿಯಿಂದ ಎಲ್ಲವನ್ನು ಅಳೆಯುತ್ತಾರೆ. ಜಾತಿ ಸುಲಭವಾಗಿ ಹೋಗುವುದಿಲ್ಲ. ಸಾಮಾಜಿಕ, ಆರ್ಥಿಕ ಶಕ್ತಿ ಎಲ್ಲರಿಗೂ ಸಿಕ್ಕಾಗ ಮಾತ್ರ ಚಲನೆ ಇಲ್ಲದ ಜಾತಿ ವ್ಯವಸ್ಥೆ ಅಳಿಯಲು ಸಾಧ್ಯ' ಎಂದು ಹೇಳಿದರು.

'ಯುವಕರು ಪುಸ್ತಕ ಓದುವುದಿಲ್ಲ. ಇದು ಮೊಬೈಲ್ ಯುಗವಾಗಿದ್ದು, ಅಂತಹ ಮಾಧ್ಯಮದ ಮೂಲಕವೇ ಕನ್ನಡವನ್ನು ಯುವ ಜನಾಂಗಕ್ಕೆ ತಲುಪಿಸಬೇಕು. ಕನ್ನಡದ ಮಹತ್ವದ ಕೃತಿಗಳನ್ನು ಶ್ರವ್ಯ–ದೃಶ್ಯ ಮಾಧ್ಯಮದಲ್ಲಿ ಯುವಕರಿಗೆ ತಲುಪಿಸುವ ವ್ಯವಸ್ಥೆಯಾಗಬೇಕು' ಎಂದು ಹಂಪ ನಾಗರಾಜಯ್ಯ ಸಲಹೆ ನೀಡಿದರು.

'ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ತನ್ನ ನಿಘಂಟಿನಲ್ಲಿ ಆಗಾಗ್ಗೆ ಹೊಸ ಪದಗಳನ್ನು ಸೇರಿಸಿಕೊಳ್ಳುತ್ತದೆ. ಅದೇ ರೀತಿ ಕನ್ನಡ ನಿಘಂಟಿಗೂ ಹೊಸ ಪದಗಳನ್ನು ಸೇರಿಸಿಕೊಳ್ಳುವ ಪ್ರಯತ್ನವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಡಬೇಕು. ಸರ್ಕಾರ, ಸಾಂಸ್ಕೃತಿಕ ಲೋಕಕ್ಕೆ ಮತ್ತಷ್ಟು ಅನುದಾನವನ್ನು ನೀಡಿ, ಉತ್ತಮ ಕೃತಿಗಳನ್ನು ಯಾರೇ ಬರೆದಿದ್ದರೂ ಅವುಗಳನ್ನು ಇಂಗ್ಲಿಷ್ ಹಾಗೂ ಇತರೆ ಭಾಷೆಗಳಿಗೆ ಅನುವಾದ ಮಾಡಬೇಕು' ಎಂದು ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಅನುವಾದಕ ಮಾಹೇರ್ ಮನ್ಸೂರ್ ಉಪಸ್ಥಿತರಿದ್ದರು.

ಕಮಲಾ–ಹಂಪನಾ ಸಾಹಿತ್ಯ ವೇದಿಕೆ, ಕರ್ನಾಟಕ ಚಿತ್ರಕಲಾ ಪರಿಷತ್ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಸಮಾರಂಭದಲ್ಲಿ ಸಿದ್ದರಾಮಯ್ಯ ಹಾಗೂ ಹಂಪ ನಾಗರಾಜಯ್ಯ ಅವರೊಂದಿಗೆ ಮಾತುಕತೆ ನಡೆಸಿದರು. ಎಲ್.ಎನ್. ಮುಕುಂದರಾಜ್, ಬಿ.ಎಲ್. ಶಂಕರ್, ಪುರುಷೋತ್ತಮ ಬಿಳಿಮಲೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮಗಳ ಮದುವೆ ನಿಶ್ಚಯ: ಅಪರಾಧಿಗೆ ಪೆರೋಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಅಪರಾಧದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿ ಏಳು ವರ್ಷಗಳಿಂದ ಜೈಲಿನಲ್ಲಿರುವ ಕೈದಿಯೊಬ್ಬರು ತಮ್ಮ ಮಗಳ ಮದುವೆ ನಿಶ್ಚಯ ಕಾರ್ಯಕ್ಕೆ ಹಾಜರಾಗಲು ಹೈಕೋರ್ಟ್, 60 ದಿನಗಳ ಪೆರೋಲ್ ಮಂಜೂರು ಮಾಡಿದೆ.

'ಮಗಳ ಮದುವೆ ನಿಶ್ಚಯ ಕಾರ್ಯ ನಡೆಸಬೇಕಿದ್ದು, ನನ್ನ ಪತಿ ಫರೀದ್ ಅಲಿಯಾಸ್ ಫಾಹೀದ್‌ಗೆ 90 ದಿನಗಳ ಪೆರೋಲ್ ಮಂಜೂರು ಮಾಡಲು ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಕೋರಿ ಫಾಹಿದ್ ಪತ್ನಿ ಅಫ್ಸಾನ (42) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಸ್ತ್ರೀಯರಿಗೆ ಸಮಾನತೆ ನೀಡಿದ ಬಸವಣ್ಣ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಬಸವಣ್ಣನವರು ಸಮಾಜದಲ್ಲಿ ಜಾತಿ ಪದ್ಧತಿ ನಿರ್ಮೂಲನೆ, ಮಹಿಳೆಯರ ಉನ್ನತಿ, ಸಬಲೀಕರಣಕ್ಕೆ ಪ್ರಾಶಸ್ತ್ಯ ನೀಡಿದ್ದರು' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ವೀರಶೈವ-ಲಿಂಗಾಯತ ಕ್ಷೇಮಾಭಿವೃದ್ಧಿ ವೇದಿಕೆ, ಕಾಯಕಯೋಗಿ ಸಹಕಾರ ಸಂಘ ಮತ್ತು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದಾಸರಹಳ್ಳಿ ಘಟಕ ವತಿಯಿಂದ ಆಯೋಜಿಸಿದ್ದ ಬಸವ ಜಯಂತಿ ಸಮಾರಂಭದಲ್ಲಿ ಅವರು ಮಾತನಾಡಿದರು.

ಬಸವಣ್ಣನವರ ಮುಖ್ಯ ಉದ್ದೇಶ ಮಹಿಳೆಯರ ಸರ್ವಾಂಗೀಣ ಪ್ರಗತಿ ಹಾಗೂ ಮಹಿಳೆಯರಿಗೆ ಸಮಾನತೆ, ವಿವೇಚನೆಯ ಅರಿವು ಮೂಡಿಸುವುದೇ ಆಗಿತ್ತು ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಜಯದೇವ್ ಸಾರಥ್ಯದಲ್ಲಿ ಬಸವೇಶ್ವರರ ಪುತ್ಥಳಿಯನ್ನು ಸಾರೋಟಿನಲ್ಲಿ ಡಿಜೆ ಮತ್ತು ವಚನ ಗೀತೆಗಳೊಂದಿಗೆ ಕಾಯಕಯೋಗಿ ಸಹಕಾರ ಸಂಘದ ಕಚೇರಿಯಿಂದ ದಾಸರಹಳ್ಳಿ ಮುಖ್ಯರಸ್ತೆ ಮೂಲಕ ಶ್ರೀ ಸಾಯಿ ಕಲ್ಯಾಣ ಮಂಟಪದವರೆಗೂ ಮೆರವಣಿಗೆ ಮಾಡಲಾಯಿತು.

ನೆಲಮಂಗಲದ ಪವಾಡ ಬಸವಣ್ಣ ದೇವರ ಮಠದ ಸಿದ್ದಲಿಂಗ ಸ್ವಾಮೀಜಿ, ಶಾಸಕ ಎಸ್. ಮುನಿರಾಜು, ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ವೇದಿಕೆಯ ಅಧ್ಯಕ್ಷ ಬಸವರಾಜಣ್ಣ, ದಾಸರಹಳ್ಳಿ ಕ್ಷೇತ್ರ ಘಟಕದ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈ.ಬಿ.ಎಚ್. ಜಯದೇವ್, ಎಂ.ಕೆ ಜಗದೀಶ್, ಶ್ರೀ ಶಿವ ಸಾಯಿ ಎಲೆಕ್ಟ್ರಾನಿಕ್ಸ್ ಮಾಲೀಕ ಸಿದ್ದಲಿಂಗಪ್ಪ, ಎಂ.ಬಿ. ದಯಾನಂದ್, ಎಂ.ಎಸ್. ಬಸವರಾಜು, ಪಿ.ಎಚ್. ರಾಜು, ರಾಜೇಂದ್ರ, ಬಿ.ಟಿ.ಸುರೇಶ್ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು

ಕ್ಷೇಮ ಕುಶಲ



ಮೂತ್ರಪಿಂಡಗಳ ದಂಡನೆ ಬೇಡ

ಡಾ. ಕುಶ್ವಂತ್ ಕೋಳಿಬೈಲು

ಮೂತ್ರಪಿಂಡಗಳು ನಮ್ಮ ಆರೋಗ್ಯವನ್ನು ಕಾಪಾಡುವಲ್ಲಿ ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ತ್ಯಾಜ್ಯ ಪದಾರ್ಥಗಳನ್ನು ಮೂತ್ರದ ಮೂಲಕ ಹೊರಹಾಕುವುದು ಮಾತ್ರ ಮೂತ್ರಪಿಂಡಗಳ ಕೆಲಸ ಎಂದು ಹೆಚ್ಚಿನವರು ತಿಳಿದುಕೊಂಡಿರುವುದು ಪೂರ್ಣಸತ್ಯವಲ್ಲ. ನಮ್ಮ ರಕ್ತದೊತ್ತಡದ ನಿಯಂತ್ರಣ, ಕೆಂಪುರಕ್ತಕಣಗಳ ಉತ್ಪಾದನೆ, ದೇಹದೊಳಗಿನ ನೀರಿನ ಅಂಶದ ನಿಯಂತ್ರಣ ಮತ್ತು ವಿಟಮಿನ್ ಡಿ ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸಲೂ ಮೂತ್ರಪಿಂಡಗಳು ಆರೋಗ್ಯದಿಂದ ಇರುವುದು ಅತ್ಯಗತ್ಯ.

ನಮ್ಮ ಹೃದಯ, ಶ್ವಾಸಕೋಶ, ಮಿದುಳು ಮುಂತಾದ ಅಂಗಾಂಗಗಳ ಬಗ್ಗೆ ವಹಿಸುವಷ್ಟು ಕಾಳಜಿಯನ್ನು ನಾವು ಮೂತ್ರಪಿಂಡಗಳ ಬಗ್ಗೆ ವಹಿಸುವುದಿಲ್ಲ. ಇಂದು ಬಹಳಷ್ಟು ಜನರು ಮೂತ್ರಪಿಂಡಗಳ ವೈಫಲ್ಯದಿಂದ ಬಳಲುವುದನ್ನು ನಾವು ಕಾಣಬಹುದು. ಮೂತ್ರಪಿಂಡಗಳು ಕಾರ್ಯನಿರ್ವಹಿಸುವುದನ್ನು ನಿಲ್ಲಿಸಿದರೆ ಅವುಗಳು ಮಾಡುವ ರಕ್ತ ಶುದ್ಧೀಕರಣದ ಕೆಲಸವನ್ನು ನಾವು ಡಯಾಲಿಸಿಸ್ ಮಾಡುವ ಮೂಲಕ ಮಾಡಬಹುದು. ಆದರೆ ಮೂತ್ರಪಿಂಡಗಳು ದೇಹದೊಳಗೆ ಕಾಪಾಡುತ್ತಾ ಬರುವ ಇತರ ಸೂಕ್ಷ್ಮ ಸಮತೋಲನಗಳು ಬಿಗಡಾಯಿಸುವ ಕಾರಣ ಡಯಾಲಿಸಿಸ್ ಮೇಲಿರುವ ರೋಗಿಗಳ ಆರೋಗ್ಯವು ಯಾವುದೇ ಕ್ಷಣದಲ್ಲಿ ಹದಗೆಡಬಹುದು.

ಮೂತ್ರಪಿಂಡಗಳು ಸೂಕ್ತ ರೀತಿಯಲ್ಲಿ ಕೆಲಸ ಮಾಡುವ ಬಗ್ಗೆ ನಾವು ಬಾಲ್ಯದಿಂದಲೇ ನಿಗಾ ವಹಿಸಬೇಕು. ಮಗು ಹುಟ್ಟಿದ ನಲವತ್ತೆಂಟು ಗಂಟೆಯೊಳಗೆ ಮೂತ್ರವಿಸರ್ಜನೆಯನ್ನು ಮಾಡದಿದ್ದರೆ ಮಗುವಿಗೆ ಹುಟ್ಟಿನಿಂದಲೇ ಮೂತ್ರಪಿಂಡದ ಸಮಸ್ಯೆಯಿರಬಹುದು. ಮೂತ್ರಪಿಂಡ ಮತ್ತು ಮೂತ್ರಕೋಶದ ಮಾರ್ಗದಲ್ಲಿ ಯಾವುದಾದರೂ ಅಡಚಣೆಗಳಿದ್ದರೆ, ಅವನ್ನು ತಾಯಿಯ ಗರ್ಭದ ಸ್ಕ್ಯಾನಿಂಗ್‌ನಿಂದ ಪತ್ತೆ ಹಚ್ಚಬಹುದು. ಯಾವುದಾದರೂ ತೊಂದರೆಗಳಿದ್ದರೆ ಅಂಥ ಅಡಚಣೆಗಳನ್ನು ಮಗು ಜನಿಸಿದ ನಂತರ ಬಗೆಹರಿಸಲು ಸಾಧ್ಯವಾದರೆ ಆಗ ಮೂತ್ರಪಿಂಡಗಳ ಮೇಲಿನ ಒತ್ತಡವು ಕಡಿಮೆಯಾಗುವುದು. ಮಕ್ಕಳಲ್ಲಿ ಉಂಟಾಗುವ ಮೂತ್ರನಾಳದ ಸೋಂಕನ್ನು ಗಂಭೀರವಾಗಿ ಪರಿಗಣಿಸಬೇಕು. ಮಕ್ಕಳಲ್ಲಿ ಶೇ 90ರಷ್ಟು ಮೂತ್ರನಾಳದ ಸೋಂಕನ್ನು 'ಈ ಕೋಲೈ' (E Coli) ಎಂಬ ಬ್ಯಾಕ್ಟೀರಿಯಾ ಉಂಟುಮಾಡುತ್ತದೆ. ಈ ಸೋಂಕನ್ನು ಸಮರ್ಪಕವಾದ ಆ್ಯಂಟಿಬಯಾಟಿಕ್ ಮೂಲಕ ಶಮನ ಮಾಡದಿದ್ದಲ್ಲಿ ಆ ಸೋಂಕು ಮೂತ್ರಪಿಂಡಕ್ಕೆ ವ್ಯಾಪಿಸುತ್ತದೆ. ಅದು ಭವಿಷ್ಯದಲ್ಲಿ ಮೂತ್ರಪಿಂಡದ ವೈಫಲ್ಯಕ್ಕೆ ಕಾರಣವಾಗಬಹುದು. ಹಾಗಾಗಿ ಯಾವುದೇ ಮಗುವಿಗೆ ಮೂತ್ರನಾಳದ ಸೋಂಕು ಉಂಟಾದಲ್ಲಿ ಅದು ಗುಣವಾದ ಬಳಿಕ ಮೂತ್ರಪಿಂಡದ ಮೇಲೆ ಆ ಸೋಂಕು ಮಾಡಿರಬಹುದಾದ ಪರಿಣಾಮವನ್ನು ಪತ್ತೆ ಹಚ್ಚಬೇಕು. ನೆಫ್ರೋಟಿಕ್ (Nephrotic) ಮತ್ತು ಗ್ಲೊಮೆರುಲೊನೆಫ್ರೈಟಿಸ್ (Glomerulonephritis) ಕಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ಸಿಗದಿದ್ದಲ್ಲಿ ಅದರಿಂದಲೂ ಮೂತ್ರಪಿಂಡಗಳ ವೈಫಲ್ಯ ಉಂಟಾಗಬಹುದು. ತೀವ್ರವಾದ ರಕ್ತಸ್ರಾವದ ಸಂದರ್ಭದಲ್ಲಿ ಅಥವಾ ಅತಿಯಾದ ವಾಂತಿಭೇದಿಗಳ ಸಮಯದಲ್ಲಿ ದೇಹದೊಳಗೆ ನೀರಿನ ಪ್ರಮಾಣವು ಕಡಿಮೆಯಾಗುತ್ತದೆ. ಮೂತ್ರಪಿಂಡಗಳು ಸೂಕ್ತವಾಗಿ ಕಾರ್ಯ ನಿರ್ವಹಿಸಲು ದೇಹದೊಳಗೆ ನೀರಿನ ಕೊರತೆಯುಂಟಾಗಬಾರದು. ಇಂಥ ಸಂದರ್ಭಗಳಲ್ಲಿ ರಕ್ತವರ್ಗಾವಣೆ ಮತ್ತು ಡ್ರಿಪ್ಸ್ ಚಿಕಿತ್ಸೆ ದೊರಕಲು ತಡವಾದರೆ ಅವುಗಳು ಮೂತ್ರಪಿಂಡದ ವೈಫಲ್ಯಕ್ಕೆ ಕಾರಣವಾಗಬಹುದು.

> ರೋಗಿಯು ವೈದ್ಯರ ಸಲಹೆಯಿಲ್ಲದೆ ಹೆಚ್ಚಿನ ಪ್ರಮಾಣದ ನೋವುನಿವಾರಕ ಔಷಧಗಳನ್ನು ಸೇವಿಸುವುದು ಮೂತ್ರಪಿಂಡಗಳ ವೈಫಲ್ಯಕ್ಕೆ ಕಾರಣವಾಗಬಹುದು.



ನಾವುಗಳು ಸೇವಿಸುವ ಔಷಧಗಳು ಅಥವಾ ದೇಹದೊಳಗೆ ಸೇರಿಕೊಳ್ಳುವ ಯಾವುದೇ ರಾಸಾಯನಿಕ ಪದಾರ್ಥಗಳು ನಮ್ಮ ಯಕೃತ್ತು ಅಥವಾ ಮೂತ್ರಪಿಂಡಗಳ ಮೂಲಕ ದೇಹದಿಂದ ಹೊರಹಾಕಲ್ಪಡುತ್ತವೆ. ಹೆಚ್ಚಿನ ನೋವುನಿವಾರಕ ಔಷಧಗಳು ಮತ್ತು ಕೆಲವು ಆ್ಯಂಟಿಬಯಾಟಿಕ್ ಔಷಧಗಳು ಮೂತ್ರಪಿಂಡದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ. ರೋಗಿಯು ವೈದ್ಯರ ಸಲಹೆಯಿಲ್ಲದೆ ಹೆಚ್ಚಿನ ಪ್ರಮಾಣದ ನೋವುನಿವಾರಕ ಔಷಧಗಳನ್ನು ಸೇವಿಸುವುದು ಕೂಡ ಮೂತ್ರಪಿಂಡಗಳ ವೈಫಲ್ಯಕ್ಕೆ ಕಾರಣವಾಗಬಹುದು. ಮಧುಮೇಹ ಮತ್ತು ರಕ್ತದೊತ್ತಡ ದೇಹದ ಎಲ್ಲಾ ಅಂಗಾಂಗಗಳ ಮೇಲೆ ತಮ್ಮ ದುಷ್ಪರಿಣಾಮವನ್ನು ಬೀರುತ್ತವೆ. ಈ ಕಾಯಿಲೆಗಳು ಎಲ್ಲಾ ಪ್ರಮುಖ ಅಂಗಾಂಗಗಳಿಗೆ ರಕ್ತಸರಬರಾಜು ಮಾಡುವ ರಕ್ತನಾಳಗಳಲ್ಲಿ ಸಮಸ್ಯೆಗಳನ್ನು ಉಂಟುಮಾಡುತ್ತವೆ. ಭಾರತದಲ್ಲಿ ಕೋಟ್ಯಂತರ ಜನರು ಚಿಕ್ಕವಯಸ್ಸಿನಲ್ಲಿ ಮಧುಮೇಹ ಮತ್ತು ರಕ್ತದೊತ್ತಡದ ರೋಗಗಳಿಂದ ಬಳಲುತ್ತಿದ್ದಾರೆ. ಅಂಥ ರೋಗಿಗಳು ತಮ್ಮ ಕಾಯಿಲೆಗಳನ್ನು ನಿಯಂತ್ರಿಸಿಕೊಳ್ಳದಿದ್ದರೆ ಕಾಲ ಕ್ರಮೇಣದಲ್ಲಿ ಅವು ಮೂತ್ರಪಿಂಡಗಳ ವೈಫಲ್ಯವನ್ನು ಉಂಟುಮಾಡಬಹುದು.

ನಮ್ಮ ದೇಹದಲ್ಲಿ ಒಂದು ಮೂತ್ರಪಿಂಡವು ವಿಫಲವಾದಲ್ಲಿ ಮತ್ತೊಂದು ಮೂತ್ರಪಿಂಡವು ಸೂಕ್ತ ರೀತಿಯಲ್ಲಿ ಕಾರ್ಯನಿರ್ವಹಿಸಿದರೆ ಆರೋಗ್ಯವು ಹದಗೆಡುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಎರಡೂ ಮೂತ್ರಪಿಂಡಗಳು ವಿಫಲವಾದಲ್ಲಿ ಮೂತ್ರಪಿಂಡದ ಕಸಿ ಮಾಡಿಸಿಕೊಳ್ಳಬಹುದು. ಅದಕ್ಕೆ ಸೂಕ್ತ ದಾನಿಯ ಮೂತ್ರಪಿಂಡಗಳು ಲಭ್ಯವಿರಬೇಕಾಗುತ್ತವೆ. ನಮ್ಮ ದೇಹದ ರೋಗನಿರೋಧಕ ಶಕ್ತಿಯು ಈ ಹೊಸ ಮೂತ್ರಪಿಂಡದ ಮೇಲೆ ದಾಳಿಯನ್ನು ಮಾಡದಂತೆ ತಡೆಯಲು ರೋಗಿಯ ರೋಗನಿರೋಧಕ ಶಕ್ತಿಯನ್ನು ಕುಗ್ಗಿಸಬೇಕಾಗುತ್ತದೆ. ಮೂತ್ರಪಿಂಡಗಳ ಕಸಿ ಮಾಡುವುದು ಅಥವಾ ವಾರಕ್ಕೆ ಎರಡು ಬಾರಿ ಡಯಾಲಿಸಿಸ್ ಮಾಡಿಸಿಕೊಳ್ಳುವುದು ನಮ್ಮ ಜೀವನದ ಗುಣಮಟ್ಟವನ್ನು ಕುಗ್ಗಿಸಬಹುದು. ನಮ್ಮ ಮೂತ್ರಪಿಂಡಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದರತ್ತ ಹೆಚ್ಚಿನ ಗಮನಹರಿಸುವುದು ಉತ್ತಮ. ಸೂಕ್ತ ಪ್ರಮಾಣದ ನೀರನ್ನು ಸೇವಿಸುವುದು ಮತ್ತು ಮೂತ್ರಪಿಂಡಗಳ ಸ್ಥಿತಿಗತಿಗಳನ್ನು ಕಾಲಕಾಲಕ್ಕೆ ಪರೀಕ್ಷೆ ಮಾಡಿಸಿಕೊಳ್ಳುವುದು ಒಳ್ಳೆಯದು.

ಆನ್‌ಲೈನ್ ಆರೋಗ್ಯ!

ಡಾ. ಶ್ರೀನಿವಾಸ ಹರಪನಹಳ್ಳಿ

ಸಾಮಾಜಿಕ ಜಾಲತಾಣಗಳು ಈಗ ನಮ್ಮ ಜೀವನದ ಅವಿಭಾಜ್ಯ ಅಂಗಗಳಾಗಿಬಿಟ್ಟಿವೆ. ಅದು ಕೆಲಮಟ್ಟಿಗೆ ಅನಿವಾರ್ಯವೂ ಹೌದು. ಸ್ನೇಹಿತರು, ಸಹೋದ್ಯೋಗಿಗಳು ಅಪ್ಲೋಡ್ ಮಾಡಿದ ಫೋಟೊಗಳನ್ನು ಲೈಕ್ ಮಾಡುವುದರಿಂದ ಹಿಡಿದು ಚರ್ಚೆ, ಆನ್‌ಲೈನ್ ಮೀಟಿಂಗ್, ಅಡುಗೆ ರೆಸಿಪಿ, ಆಹ್ವಾನಗಳು ಕೊನೆಗೆ ಒಬ್ಬರನ್ನೊಬ್ಬರು ದೂಷಿಸುವವರೆಗೂ ನಾವು ಸಾಮಾಜಿಕ ಜಾಲತಾಣಗಳನ್ನು ಉಪಯೋಗಿಸುತ್ತಿದ್ದೇವೆ. ದೇಶ-ವಿದೇಶಗಳ ಸುದ್ದಿ, ಮನೋರಂಜನೆ-ಕ್ರೀಡೆಗಳ ಸುದ್ದಿಗಳ ಜೊತೆಗೆ ಅನೇಕ ಗಾಳಿಸುದ್ದಿಗಳೂ ಸಾಮಾಜಿಕ ಜಾಲತಾಣಗಳ ಮೂಲಕ ಪ್ರಪಂಚದಾದ್ಯಂತ ಕ್ಷಣಮಾತ್ರದಲ್ಲಿ ಪ್ರಸಾರಗೊಳ್ಳುತ್ತಿವೆ. ಇದರ ಜೊತೆಗೆ ಆನ್‌ಲೈನ್ ಮೋಸ-ವಂಚನೆ, ಗೋಪ್ಯತೆಯ ಸೋರುವಿಕೆ, ತೇಜೋವಧೆ ಮತ್ತು ಮತೀಯ ಸೌಹಾರ್ದತೆಗೆ ಧಕ್ಕೆ ತರುವ ಕೆಲ ಅನಿಷ್ಟಗಳ ಮೂಟೆಯನ್ನೂ ಸಾಮಾಜಿಕ ಜಾಲತಾಣಗಳು ನಮ್ಮೆದುರಿಗೆ ತೆರೆದಿಟ್ಟಿವೆ.

ಇದೇ ಸಮಯದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಕಾಣಬರುವ ಮತ್ತೊಂದು ಪ್ರಮುಖ ವಿಷಯವೆಂದರೆ ಆರೋಗ್ಯಸಂಬಂಧಿ ವಿಷಯಗಳ ಚರ್ಚೆ. ಆರೋಗ್ಯದ ಕಾಳಜಿ ಎಲ್ಲರಿಗೂ ಇದ್ದೇ ಇರುತ್ತದೆ. ಅದೇ ರೀತಿ ತಮಗೆ ಅಥವಾ ತಮ್ಮ ಕುಟುಂಬದಲ್ಲಿ ಉಂಟಾದ ಅನಾರೋಗ್ಯದ ಬಗ್ಗೆ ಇತರರಲ್ಲಿ ಚರ್ಚಿಸುವುದು ತುಂಬಾ ಸಾಮಾನ್ಯ ವಿಷಯ. ಮೊದಲು ಜಗಲಿಯ ಹರಟೆಗೆ ಸೀಮಿತವಾಗಿದ್ದ ಚರ್ಚೆ, ಬಳಿಕ ದೂರವಾಣಿ ಮೂಲಕ ದೂರದ ಊರಿನವರೊಡನೆಯೂ ಪ್ರಾರಂಭವಾಗಿ ಈಗ ಫೇಸ್‌ಬುಕ್, ವಾಟ್ಸ್ ಆ್ಯಪ್‌ನಂಥ ಜಾಲತಾಣಗಳಲ್ಲಿ ಹಂಚಿಕೊಳ್ಳುವರೆಗೆ ಬಂದಿದೆ. ಇನ್ನೊಬ್ಬರೊಡನೆ ಆರೋಗ್ಯ ತೊಂದರೆಗಳನ್ನು ಹಂಚಿಕೊಳ್ಳುವುದು, ಸಹಾಯ ಕೇಳುವುದು ಉತ್ತಮವಾದರೂ ಸಾಮಾಜಿಕ ಜಾಲತಾಣಗಳಲ್ಲಿ ಇಂಥ ವಿಷಯ ಹಂಚಿಕೊಳ್ಳುವಾಗ ಕೊಂಚ ಜಾಗರೂಕರಾಗಿರುವುದು ಉತ್ತಮ.

ಉದಾಹರಣೆಗೆ, 'ನಮ್ಮತ್ತೆಗೆ ಕೆಲ ದಿನಗಳಿಂದ ಕೀಲುನೋವಿದೆ, ಯಾವ ಡಾಕ್ಟ್ರು ಉತ್ತಮ?' ಎಂದು ನೀವು ನಿಮ್ಮ ಪರಿಚಯದ ಗುಂಪಿನಲ್ಲಿ ಪೋಸ್ಟ್ ಮಾಡಿದಿರೋ ಅದಕ್ಕೆ ಹಲವಾರು ಪ್ರತ್ಯುತ್ತರಗಳು ದೊರಕುತ್ತವೆ. 'ಅಯ್ಯೋ, ಅದಕ್ಕೆಲ್ಲ ಡಾಕ್ಟ್ರ ಬೇಕಾ? ಇಂಥ ಎಣ್ಣೆಯನ್ನು ಉಜ್ಜಿ, ಒಂದೇ ವಾರದಲ್ಲಿ ನೋವು ಹೊರಟೋಗುತ್ತೆ ನೋಡಿ! ನಾನು ಮನೇಲಿ ಅದನ್ನೇ ಮಾಡಿದ್ದು' ಎಂತಲೋ, ಅಥವಾ 'ಆ ಡಾಕ್ಟ್ರು ಚೆನ್ನಾಗಿದ್ದಾರೆ' ಎಂತಲೋ ಸಲಹೆಗಳಂತೂ ತುಂಬ ಸಿಗುತ್ತವೆ. ಕೆಲವರು ಅದಕ್ಕೆ ಮತ್ತೆ, 'ಅಯ್ಯೋ, ಆ ಡಾಕ್ಟರ್ ಕಡೆ ಹೋಗಬೇಡಿ, ಕಾಲೇ ಕುಯ್ದುಬಿಟ್ಟಾರು' ಎಂಬಂಥ ಸಲಹೆಗಳನ್ನೂ ನೀಡುತ್ತಾರೆ. ಮುಖ್ಯವಾಗಿ ಎಲ್ಲರ ಕೀಲುನೋವಿನ ಮೂಲ ಒಂದೇ ಇರಬೇಕಂತಿಲ್ಲ. ಹಾಗಾಗಿ ಎಲ್ಲರಿಗೂ ಒಂದೇ ಚಿಕಿತ್ಸೆಯನ್ನು ಸೂಚಿಸಲಾಗುವುದಿಲ್ಲ. ಇಲ್ಲಿ ಕೂಲಂಕಷವಾಗಿ ರೋಗಿಯನ್ನು ಪರೀಕ್ಷಿಸದೇ ಚಿಕಿತ್ಸೆ ನೀಡುವುದು ಸಮರ್ಪಕವಾಗುವುದಿಲ್ಲ. ಯಾವುದೋ ಎಣ್ಣೆಯನ್ನು ಹಚ್ಚಿ ನೋವು ಉಲ್ಬಣವಾದರೆ ಯಾರು ಹೊಣೆ? ಅಲ್ಲದೇ ಆ ವೈದ್ಯ ಬೇರೊಂದು ರೋಗಿಗೆ ಕಾಲಿನ ಶಸ್ತ್ರಚಿಕಿತ್ಸೆ ಏಕೆ ಮಾಡಿದ್ದ ಎನ್ನುವುದನ್ನು ತಿಳಿದುಕೊಳ್ಳದೆ ಟೀಕಿಸುವುದು ಆತನ ತೇಜೋವಧೆಯನ್ನು ಮಾಡಿದಂತೆಯೂ ಆಗುತ್ತದೆ.

ಕೆಲವೊಮ್ಮೆ ರೋಗಿಯ ಚಿತ್ರಗಳನ್ನು, ತಪಾಸಣೆಯ ವಿವರಗಳನ್ನೂ ಜನರು ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಾರೆ. ಗುಂಪಿನಲ್ಲಿರೋ ಎಲ್ಲರಿಗೂ ಇವು ಕಾಣುವುದರಿಂದ ಕೆಲವು ಬಾರಿ ಇಂಥ ವಿವರಗಳ ದುರುಪಯೋಗವೂ ಆಗಬಹುದು. ಆದ್ದರಿಂದ ವೈಯುಕ್ತಿಕವಾದ ವಿಚಾರಗಳನ್ನು, ವಿವರಗಳನ್ನು ಜಾಲತಾಣಗಳಲ್ಲಿ ತೆರೆದಿಡುವುದು ಜಾಣತನವಲ್ಲ. ಹಲವು ಬಾರಿ ಜಾಹೀರಾತುದಾರರು ಕೂಡ ಈ ವಿವರಗಳನ್ನು ಶೋಧಿಸಿ ತಮ್ಮ ಸರಕನ್ನು ಖರೀದಿಸುವಂತೆ ನಮಗೆ ದುಂಬಾಲು ಬೀಳುತ್ತಾರೆ.

ವೈದ್ಯರ ಭೇಟಿಗಾಗಿಯೇ ಕೆಲವು ಆ್ಯಪ್‌ಗಳು ಇರುತ್ತವೆ. ವೈದ್ಯರ ಅರ್ಹತೆ, ಸಮಯ ಹಾಗೂ ಸಂದರ್ಶನದ ದರಗಳೂ ಇಲ್ಲಿ ಲಭ್ಯವಿರುತ್ತವೆ. ಇವುಗಳಲ್ಲಿ ನಮಗೆ ಬೇಕಾದ ವೈದ್ಯರ ಜೊತೆ ಸಮಾಲೋಚನೆಗಾಗಿ ವೇಳೆಯನ್ನು ನಿಗದಿಪಡಿಸಬಹುದು. ಆದರೆ ಎಲ್ಲ ಆ್ಯಪ್‌ಗಳೂ ಪಾರದರ್ಶಕವಾಗಿ ಕೆಲಸ ಮಾಡುತ್ತವೆ ಎಂದು ಹೇಳುವಂತಿಲ್ಲ. ಕೆಲ ವೈದ್ಯರೂ ಆ್ಯಪ್‌ಗಳಿಗೆ ಹೆಚ್ಚಿನ ದುಡ್ಡನ್ನು ನೀಡಿ ತಮ್ಮ ಹೆಸರೇ ಮುಖ್ಯವಾಗಿ ಕಾಣುವಂತೆ ಮಾಡುತ್ತಾರೆ.

ಅನೇಕರು ಗೂಗಲ್‌ನಲ್ಲಿ ಅರೋಗ್ಯ-ಅನಾರೋಗ್ಯದ ವಿವರಗಳ ಬಗ್ಗೆ ಹುಡುಕಾಟವನ್ನು ನಡೆಸುತ್ತಾರೆ. ಗೂಗಲ್ ತುಂಬ ಜನಪ್ರಿಯ ಕೂಡ. ಆದರೆ ಇಲ್ಲಿ ಕೂಡ ಈಗಾಗಲೇ ತಿಳಿಸಿದಂತೆ ಗೋಪ್ಯತೆಯ ಸೋರಿಕೆ ಆಗಬಹುದು. ಜೊತೆಗೆ ಸಾಗರದಷ್ಟು ಮಾಹಿತಿ ಒಮ್ಮೆಲೇ ದೊರಕುವುದರಿಂದ ಯಾವುದು ಉಪಯೋಗಿ, ಯಾವುದು ನಿರುಪಯುಕ್ತ ಎಂಬ ಗೊಂದಲ ಮೂಡುತ್ತದೆ.

ಈಗ ಜಾಲತಾಣಗಳಲ್ಲಿ 'ಎಐ' (AI) ಎಂಬ ನವತಾರೆಯ ಉಗಮವಾಗಿದೆ. ಕ್ಯಾಲ್ಕ್ಯುಲೇಟರ್ ಮತ್ತು ಕಂಪ್ಯೂಟರ್‌ಗಳನ್ನು ಬಳಸುವವರಿಗೆ ಎಐನ ಸರಳರೂಪದ ಅನುಭವ ಆಗೇ ಆಗಿರುತ್ತದೆ. ಆದರಿದು ಅವೆಲ್ಲಕ್ಕಿಂತ ಮಿಗಿಲಾದ ಬುದ್ಧಿಮತ್ತೆಯ ಹುಡುಕಾಟದ ಸಂಗಾತಿ. ನಮ್ಮ ವೈದ್ಯಕೀಯದ ವಿವರಗಳನ್ನು ಎಐಗೆ ನೀಡಿದಾಗ ಅದು ಕ್ಷಣಾರ್ಧದಲ್ಲಿ ಸಾವಿರಾರು ಸಾಧ್ಯತೆಗಳನ್ನು ಹುಡುಕಿ ನಮ್ಮ ವಿವರಗಳಿಗೆ ಸರಿಹೊಂದುವ ಮಾಹಿತಿಯನ್ನು ನೀಡುತ್ತದೆ. ಆದರೆ ಇದಕ್ಕೂ ಅದರದ್ದೇ ಆದ ಇತಿಮಿತಿಗಳಿವೆ. ಡೇಟಾ ಸೋರಿಕೆ ಬಹುಮುಖ್ಯ ವಿಷಯ. ಇದರೊಂದಿಗೆ ತನ್ನಲ್ಲೊಗೆ ಈಗಾಗಲೇ ಇರದೇ ಇದ್ದ ವಿಷಯದ ಮಾಹಿತಿ ನೀಡುವ ಬಗ್ಗೆ ಇನ್ನೂ ಗೊಂದಲಗಳಿವೆ. ಆದಾಗ್ಯೂ ಮುಂದಿನ ದಿನಗಳಲ್ಲಿ ಎಐ ವೈದ್ಯಕೀಯ ಕ್ಷೇತ್ರಕ್ಕೆ ಮಹತ್ತರ ಕೊಡುಗೆ ನೀಡಬಹುದಾದ ಸಾಧ್ಯತೆಗಳಿವೆ.

ಜಾಲತಾಣಗಳು ಅಥವಾ ಆ್ಯಪ್‌ಗಳನ್ನು ಸಂಪರ್ಕಿಸಿ, ಸಲಹೆಗಳನ್ನು ಪಡೆಯುವ ಮೊದಲು ಅವುಗಳ ಸತ್ಯಾಸತ್ಯತೆಯನ್ನು ಪರಾಮರ್ಶಿಸಿ ಮತ್ತು ಆದಷ್ಟೂ ವೈಯುಕ್ತಿಕ ವಿವರಗಳನ್ನು ನೀಡದೇ ಸಲಹೆಗಳನ್ನು ಪಡೆಯುವುದು ಸೂಕ್ತ. ಆದರೆ ಮುಖಾಮುಖಿಯಾಗಿ ಸಮಾಲೋಚನೆ ನಡೆಸುವ, ವೈದ್ಯ-ರೋಗಿಯ ಪವಿತ್ರ ಸಂಬಂಧವನ್ನು ಕಾಪಾಡುವ ಗುಣಗಳು ಇಲ್ಲಿಲ್ಲವೆಂಬುದೇ ಒಂದು ದುರದೃಷ್ಟದ ಸಂಗತಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ - ಗಣಿತ

ವಾಸ್ತವ ಸಂಖ್ಯೆಗಳು

ಅಭ್ಯಾಸ 1.2

1) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– (…. ಹಿಂದಿನ ಸಂಚಿಕೆಯಿಂದ)

ಸಮೀಕರಣ 1ರಲ್ಲಿ b^2 ಆದೇಶಿಸಿದಾಗ

$5b^2 = (5c)^2$

$5b^2 = 25c^2$

$b^2 = 5c^2$

ಅಂದರೆ 5 ಇದು $5b^2$ ಅನ್ನು ಭಾಗಿಸುತ್ತದೆ

5 ಇದು b ಅನ್ನು ಭಾಗಿಸುತ್ತದೆ

a ಮತ್ತು b ಗಳು ಕನಿಷ್ಠ 5 ಸಾಮಾನ್ಯ ಅಪವರ್ತನ ಹೊಂದಿವೆ

a ಮತ್ತು b ಗಳು ಭಾಗಲಬ್ಧ ಸಂಖ್ಯೆಗಳಲ್ಲ ಹೀಗಾಗಿ $\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

2) $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ

ಉತ್ತರ:– $3+2\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

$3+2\sqrt{5} = x/y$ {ಇಲ್ಲಿ co-prime x and y $(y \neq 0)$ }

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

$2\sqrt{5} = \frac{x}{y} - 3$

$\sqrt{5} = \frac{1}{2}(\frac{x}{y} - 3)$

Since, x and y are integers, ಹೀಗಾಗಿ $\frac{1}{2}(\frac{x}{y} - 3)$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಅಂದರೆ ಇದರರ್ಥ $\sqrt{5}$ ಭಾಗಲಬ್ಧ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ! ಆದುದ್ದರಿಂದ $3+2\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

3) ಈ ಕೆಳಗಿನ ಸಂಖ್ಯೆಗಳನ್ನು ಅಭಾಗಲ್ಧ ಸಂಖ್ಯೆಗಳೆಂದು ಸಾಧಿಸಿ

(i) $1/\sqrt{2}$
(ii) $7\sqrt{5}$
(iii) $6 + \sqrt{2}$

ಉತ್ತರ:–

(i) $1/\sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$1/\sqrt{2} = x/y$

$\therefore \sqrt{2} = y/x$

Since, x and y are integers,ಹೀಗಾಗಿ $\sqrt{2}$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $1/\sqrt{2}$ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

(ii) $7\sqrt{5}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$7\sqrt{5} = x/y$

$\therefore \sqrt{5} = x/7y$

Since, x and y are integers, ಹೀಗಾಗಿ $\sqrt{5}$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ. ಆದರೆ ನಿಜ ಹೇಳಬೇಕೆಂದರೆ $\sqrt{5}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $7\sqrt{5}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

(iii) $6 + \sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂದು ಭಾವಿಸಿ

co-prime x and y $(y \neq 0)$

$6 + \sqrt{2} = x/y$.

$\therefore \sqrt{2} = (x/y) - 6$

Since, x and y are integers,ಹೀಗಾಗಿ $(x/y) - 6$ ಒಂದು ಭಾಗಲಬ್ಧ ಸಂಖ್ಯೆಯಾಗಿದೆ ಹೀಗಾಗಿ $\sqrt{2}$ ಭಾಗಲಬ್ಧ ಸಂಖ್ಯೆಯಾಗಿದೆ ಆದರೆ ನಿಜ ಹೇಳಬೇಕೆಂದರೆ $\sqrt{2}$ ಇದೂ ಭಾಗಲಬ್ಧ ಸಂಖ್ಯೆಯಲ್ಲ!

ಆದುದ್ದರಿಂದ $6 + \sqrt{2}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ.

ಬಹುಪದೋಕ್ತಿಗಳು

ಈ ಅಧ್ಯಾಯದಲ್ಲಿ ಬರುವ ಸಮಸ್ಯೆಗಳನ್ನು ಬಿಡಿಸುವ ಮೊದಲು ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಿ

(*) $P(x)$ ಎಂಬುದು xಎಂಬ ಚರಾಕ್ಷರವುಳ್ಳ ಬಹುಪದೋಕ್ತಿಯಾದರೆ $P(x)$ ದಲ್ಲಿನ x ದ ಗರಿಷ್ಠ ಘಾತಸೂಚಿಯನ್ನು ಆ ಬಹುಪದೋಕ್ತಿಯ $P(x)$ ದ ಮಹತ್ತಮ ಘಾತ ಅಥವಾ ಡಿಗ್ರಿ ಎನ್ನುತ್ತಾರೆ. ಉದಾ:– $4x+2$ ಎಂಬುದು x ಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು ಇದರ ಡಿಗ್ರಿ1 ಆಗಿದೆ, ಅದೇ ರೀತಿ $2y^2+4y+3$ಎಂಬುದು yಚರಾಕ್ಷರವುಳ್ಳ ಒಂದು ಬಹುಪದೋಕ್ತಿಯಾಗಿದ್ದು ಇದರ ಡಿಗ್ರಿ 2 ಆಗಿದೆ.

(*) ಡಿಗ್ರಿ 1 ಆಗಿರುವ ಬಹೋಕ್ತಿಗೆ ರೇಖಾತ್ಮಕ ಪದೋಕ್ತಿ ಎನ್ನುವರು

(*) ಡಿಗ್ರಿ 2 ಆಗಿರುವ ಬಹೋಕ್ತಿಗೆ ವರ್ಗ ಬಹುಪದೋಕ್ತಿ Quadratic Polynomials ಎನ್ನುವರು, Quadratic ಎಂಬ ಪದವು Quadrate ವ್ಯುತ್ಪತ್ತಿಯಾಗಿದೆ Quadrate ಎಂದರೆ ಸ್ಕೇರ್ ಅಥವಾ ವರ್ಗ ಎಂದರ್ಥ

(*) ಎಲ್ಲಾ ವರ್ಗ ಬಹುಪದೋಕ್ತಿಗಳು ರೀತಿ $ax^2 + bx + c$ ರೂಪದಲ್ಲಿರುತ್ತವೆ, ಇಲ್ಲಿ a, b cಗಳು ವಾಸ್ತವ ಸಂಖ್ಯೆಗಳಾಗಿದ್ದು a #0 ಆಗಿದೆ

(*) ಎಲ್ಲಾ ಘನ ಬಹುಪದೋಕ್ತಿಗಳು ರೀತಿ $ax^3 + bx^2 + cx+d$ ರೂಪದಲ್ಲಿರುತ್ತವೆ, ಇಲ್ಲಿ a, b c dಗಳು ವಾಸ್ತವ ಸಂಖ್ಯೆಗಳಾಗಿದ್ದು a #0 ಆಗಿದೆ

ಬಹುಪದೋಕ್ತಿಯ ವಿಧಗಳು

(*) ಸ್ಥಿರ ಬಹುಪದೋಕ್ತಿ:– ಒಂದು ಸ್ಥಿರಾಂಕ ಮಾತ್ರವುಳ್ಳ ಬಹುಪದೋಕ್ತಿಯನ್ನು ಸ್ಥಿರಬಹುಪದೋಕ್ತಿ ಎನ್ನುತ್ತಾರೆ. ಉದಾ:– $P(x)=8$

(*) ಶೂನ್ಯ ಬಹುಪದೋಕ್ತಿ:– ಬಹುಪದೋಕ್ತಿಯ ಎಲ್ಲಾ ಸಹಗುಣಕಗಳು ಶೂನ್ಯಕ್ಕೆ ಸಮನಾಗಿದ್ದರೆ ಆ ಬಹುಪದೋಕ್ತಿಯನ್ನು ಶೂನ್ಯ ಬಹುಪದೋಕ್ತಿ ಎನ್ನುತ್ತಾರೆ. ಉದಾ:– $f(x)=0$, $P(x)=0$

(*) ವರ್ಗ ಬಹುಪದೋಕ್ತಿ:– ಡಿಗ್ರಿ 2 ಅನ್ನು ಹೊಂದಿರುವ ಬಹುಪದೋಕ್ತಿಯನ್ನು ವರ್ಗ ಬಹುಪದೋಕ್ತಿ ಎನ್ನುವರು. ಉದಾ:– y^2+4y+3

(*) ಘನ ಬಹುಪದೋಕ್ತಿ:– ಡಿಗ್ರಿ 3 ಅನ್ನು ಹೊಂದಿರುವ ಬಹುಪದೋಕ್ತಿಯನ್ನು ಘನ ಬಹುಪದೋಕ್ತಿ ಎನ್ನುವರು. ಉದಾ:– $2y^3+4y^2+3y-2$

ಅಭ್ಯಾಸ 2.1

$y=P(x)$ ದ ನಕ್ಷೆಗಳನ್ನು ಕೆಳಗೆ ಚಿತ್ರ 2.10ರಲ್ಲಿ ನೀಡಿದ್ದು $P(x)$ ಇಲ್ಲಿ ಉಂಬುದು ಬಹುಪದೋಕ್ತಿಯಾಗಿದೆ. ಪ್ರತಿ ಸಂದರ್ಭದಲ್ಲಿಯೂ $P(x)$ ದ ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ

(ಮುಂದುವರಿಯುವುದು)

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

PUC: MATHS

MATRICES

Answer the following:-

1. What is Negative of a matrix?

Ans:- The negative of a matrix A is denoted by – A. i.e., $-A = (-1)A$

2. What is Symmetric matrix?

Ans:- A square matrix $A = [a_{ij}]$ is said to be symmetric if $A^T = A$, that is, $a_{ij} = a_{ji}$ for all possible values of i and j.

Eg:- In general $\begin{bmatrix} a & h & g \\ h & b & f \\ g & f & c \end{bmatrix}$ is a symmetric matrix.

Problems:-

1. If $A = \begin{bmatrix} 7 & 6 \\ -3 & -4 \end{bmatrix}$ **then find A^1?**

Ans : – Given, $A = \begin{bmatrix} 7 & 6 \\ -3 & -4 \end{bmatrix}$

By interchanging the rows and columns we get, $A` = \begin{bmatrix} 7 & -3 \\ 6 & -4 \end{bmatrix}$

2. Given that $\begin{bmatrix} 1 & 3 \\ 5 & -2 \end{bmatrix}\begin{bmatrix} x \\ y \end{bmatrix} = \begin{bmatrix} -2 & 3 \\ 0 & 1 \end{bmatrix}\begin{bmatrix} 2 \\ -1 \end{bmatrix}$;

Find x & y.

Soln : – $\begin{bmatrix} 1 & 3 \\ 5 & -2 \end{bmatrix}\begin{bmatrix} x \\ y \end{bmatrix} = \begin{bmatrix} -2 & 3 \\ 0 & 1 \end{bmatrix}\begin{bmatrix} 2 \\ -1 \end{bmatrix}$

$\begin{bmatrix} x+3y \\ 5x-2y \end{bmatrix} = \begin{bmatrix} -7 \\ -1 \end{bmatrix}$

$\Rightarrow x + 3y = -7$ ……..(i)

& $5x - 2y = -1$ ……..(ii)

Solving eqns (i) and (ii) we get,

$x = -1$ and $y = -2$

3. If $A = \begin{bmatrix} \cos\theta & \sin\theta \\ -\sin\theta & \cos\theta \end{bmatrix}$ **prove that** $A^2 = \begin{bmatrix} \cos 2\theta & \sin 2\theta \\ -\sin 2\theta & \cos 2\theta \end{bmatrix}$

Soln:- $A^2 = A \times A$

$= \begin{bmatrix} \cos\theta & \sin\theta \\ -\sin\theta & \cos\theta \end{bmatrix} \times \begin{bmatrix} \cos\theta & \sin\theta \\ -\sin\theta & \cos\theta \end{bmatrix}$

$= \begin{bmatrix} \cos^2\theta - \sin^2\theta & \cos\theta\sin\theta + \sin\theta\cos\theta \\ -\sin\theta\cos\theta - \sin\theta\cos\theta & -\sin^2\theta + \cos^2\theta \end{bmatrix}$

$= \begin{bmatrix} \cos 2\theta & 2\sin\theta\cos\theta \\ -2\sin\theta\cos\theta & \cos 2\theta \end{bmatrix}$

$\therefore A^2 = \begin{bmatrix} \cos 2\theta & \sin 2\theta \\ -\sin 2\theta & \cos 2\theta \end{bmatrix}$

4. If $A = \begin{bmatrix} 5 \\ 4 \\ 3 \end{bmatrix}$, $B = \begin{bmatrix} 3 \\ -1 \\ 2 \end{bmatrix}$;

Show that $AB^T \neq A^TB$

Soln : – Given, $A = \begin{bmatrix} 5 \\ 4 \\ 3 \end{bmatrix}$ and $B = \begin{bmatrix} 3 \\ -1 \\ 2 \end{bmatrix}$

$\therefore B^T = [3 \quad -1 \quad 2]$

$\Rightarrow AB^T = \begin{bmatrix} 5 \\ 4 \\ 3 \end{bmatrix}[3 \quad -1 \quad 2]\downarrow$

$= \begin{bmatrix} 15 & -5 & 10 \\ 12 & -4 & 8 \\ 9 & -3 & 6 \end{bmatrix}$

and $A^T = [5 \quad 4 \quad 3]$

$\Rightarrow A^TB = [5 \quad 4 \quad 3]\begin{bmatrix} 3 \\ -1 \\ 2 \end{bmatrix}\downarrow$

$= [15 - 4 + 6] = [17]$

Hence, $AB^T \neq A^TB$

5. If $A = \begin{bmatrix} 5 & -3 \\ -1 & 2 \end{bmatrix}$ **and** $B = \begin{bmatrix} -2 & -1 \\ 4 & 7 \end{bmatrix}$;

Prove that $AB \neq BA$

Soln : – Given, $A = \begin{bmatrix} 5 & -3 \\ -1 & 2 \end{bmatrix}$ & $B = \begin{bmatrix} -2 & -1 \\ 4 & 7 \end{bmatrix}$

$\therefore AB = \begin{bmatrix} 5 & -3 \\ -1 & 2 \end{bmatrix} \times \begin{bmatrix} -2 & -1 \\ 4 & 7 \end{bmatrix}$

$AB = \begin{bmatrix} -10-12 & -5-21 \\ 2+8 & 1+14 \end{bmatrix} = \begin{bmatrix} -22 & -26 \\ 10 & 15 \end{bmatrix}$

$BA = \begin{bmatrix} -2 & -1 \\ 4 & 7 \end{bmatrix} \times \begin{bmatrix} 5 & -3 \\ -1 & 2 \end{bmatrix}$

$BA = \begin{bmatrix} -10+1 & 6-2 \\ 20-7 & -12+14 \end{bmatrix} = \begin{bmatrix} -9 & 4 \\ 13 & 2 \end{bmatrix}$

$\begin{bmatrix} -22 & -26 \\ 10 & 15 \end{bmatrix} \neq \begin{bmatrix} -9 & 4 \\ 13 & 2 \end{bmatrix}$

$\therefore AB \neq BA$

6. If $A = \begin{bmatrix} 0 & c & -b \\ -c & 0 & a \\ b & -a & 0 \end{bmatrix}$ & $B = \begin{bmatrix} a^2 & ab & ac \\ ab & b^2 & bc \\ ac & bc & c^2 \end{bmatrix}$;

Show that AB is a zero matrix.

Soln : – $AB = \begin{bmatrix} 0 & c & -b \\ -c & 0 & a \\ b & -a & 0 \end{bmatrix} \times \begin{bmatrix} a^2 & ab & ac \\ ab & b^2 & bc \\ ac & bc & c^2 \end{bmatrix}$

$\Rightarrow \begin{bmatrix} 0+abc-abc & 0+b^2c-b^2c & 0+b^2c-b^2c \\ -a^2c+0+a^2c & -abc+0+abc & -ac^2+0+ac^2 \\ a^2b-a^2b+0 & -ab^2-ab^2+0 & abc-abc+0 \end{bmatrix}$

$\Rightarrow \begin{bmatrix} 0 & 0 & 0 \\ 0 & 0 & 0 \\ 0 & 0 & 0 \end{bmatrix} \Rightarrow$ zero matrix

7. If $A = \begin{bmatrix} 3 & 1 \\ 2 & 5 \end{bmatrix}$ **prove that**

$A^2 - 8A + 13I = 0$

Soln : – Given, $A = \begin{bmatrix} 3 & 1 \\ 2 & 5 \end{bmatrix}$

(Contd…..)

'ಪಾಕಿಸ್ತಾನಿಯರ ಜೊತೆ ವಿವಾಹ ಸಂಬಂಧ ಸರಿಯಲ್ಲ'

ಬಾಗಲಕೋಟೆ: ಭಾರತೀಯರು ಪಾಕಿಸ್ತಾನಿ ಮಹಿಳೆಯರ ಜೊತೆ ವಿವಾಹ ಸಂಬಂಧ ಬೆಳೆಸುತ್ತಿರುವ ವಿಷಯಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದ್ದು, 'ಭಾರತೀಯರಿಗೆ ನಮ್ಮಲ್ಲಿ ಗಂಡು-ಹೆಣ್ಣು ಸಿಗುವುದಿಲ್ಲವೇ? ಅಲ್ಲಿಯವರನ್ನೇಕೆ ವಿವಾಹ ಮಾಡಿಕೊಳ್ಳಬೇಕು' ಎಂದು ಪ್ರಶ್ನಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಭಾರತೀಯರ ಜೊತೆ ಪಾಕಿಸ್ತಾನಿಯರು ಸಂಬಂಧ ಬೆಳೆಸುವುದರ ಉದ್ದೇಶವೇ ಬೇರೆ ಆಗಿರುತ್ತದೆ. ಭಾರತಕ್ಕೆ ಏನಾದರೂ ಧಕ್ಕೆ ಮಾಡಬೇಕು ಎಂಬುದೇ ಅವರ ಮೂಲ ಉದ್ದೇಶವಾಗಿರುತ್ತದೆ. ಅಲ್ಲಿಯ ಸಂಬಂಧ ಬೆಳೆಸುವ ಅವಶ್ಯಕತೆ ಏನಿದೆ? ಅವರು ಉಗ್ರಗಾಮಿ ಚಟುವಟಿಕೆಗಳಲ್ಲಿ ತೊಡಗಿರುವಾಗ ನಾವು ಅವರ ಜೊತೆ ಸಂಬಂಧ ಬೆಳೆಸುವುದು ಸರ್ವಥಾ ಸರಿಯಲ್ಲ' ಎಂದು ಹೇಳಿದರು.

ಸಿಆರ್‌ಪಿಎಫ್ ಯೋಧ ಒಬ್ಬರು ಪಾಕಿಸ್ತಾನಿ ಪ್ರಜೆಯನ್ನು ವಿವಾಹವಾಗಿರುವ ವಿಚಾರವಾಗಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಹೊರಟ್ಟಿ, 'ಇದೊಂದು ಪ್ರಕರಣ ಈಗ ಪತ್ತೆಯಾಗಿದೆ. ಇಂತಹ ಇನ್ನೆಷ್ಟೋ ಪ್ರಕರಣಗಳು ಇರ ಬಹುದು. ನಮ್ಮ ಗುಪ್ತಚರ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಇದೆಲ್ಲ ಗೊತ್ತಿದ್ದರೂ ಅವರು ಸುಮ್ಮನಿರುತ್ತಾರೆ' ಎಂದರು.

ಹೊಸಪೇಟೆಯಲ್ಲಿ ₹37.11 ಕೋಟಿ ವೆಚ್ಚದ ಸುಸಜ್ಜಿತ ಟ್ರಕ್ ಟರ್ಮಿನಲ್ ಉದ್ಘಾಟನೆ

'ಟ್ರಕ್ ಟರ್ಮಿನಲ್: ಕೇಂದ್ರ ನಿರ್ಮಿಸಲಿ'

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ರಾಜ್ಯದಲ್ಲಿ ಟ್ರಕ್ ಟರ್ಮಿನಲ್ ನಿರ್ಮಾಣಕ್ಕೆ ಜೀವ ತುಂಬಿದ್ದೇ ಕಾಂಗ್ರೆಸ್ ಸರ್ಕಾರ. ಅದರಂತೆ ಕೇಂದ್ರ ಸರ್ಕಾರವೂ ಅಗತ್ಯ ಇರುವ ಕಡೆ ಟ್ರಕ್ ಟರ್ಮಿನಲ್ ನಿರ್ಮಿಸಲು ಕ್ರಮ ಕೈಗೊಳ್ಳಬೇಕು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದ ಹೊರವಲಯದ ಅಮರಾವತಿ ಗ್ರಾಮದಲ್ಲಿ ಚಿತ್ರದುರ್ಗ–ವಿಜಯಪುರ ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ದೇವರಾಜ ಅರಸ್ ಟ್ರಕ್ ಟರ್ಮಿನಲ್ ಸಂಸ್ಥೆ (ಡಿಡಿಟಿಟಿಎಲ್) ವತಿಯಿಂದ ₹37.11 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಸುಸಜ್ಜಿತ ಟ್ರಕ್ ಟರ್ಮಿನಲ್ ಅನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದ ಮೂರನೇ ಅತಿ ದೊಡ್ಡ ಸುಸಜ್ಜಿತ ಟ್ರಕ್ ಟರ್ಮಿನಲ್ ಇಲ್ಲಿ ನಿರ್ಮಾಣಗೊಂಡಿದೆ. ಇದರ ಜತೆಗೆ ಇನ್ನೂ ಆರು ಟ್ರಕ್ ಟರ್ಮಿನಲ್ ನಿರ್ಮಿಸಲಾಗುತ್ತಿದೆ. ಬಿಜೆಪಿ ಸರ್ಕಾರವು ಟ್ರಕ್ ಟರ್ಮಿನಲ್ ಅಭಿವೃದ್ಧಿಗೆ ಆದ್ಯತೆ ನೀಡಲಿಲ್ಲ' ಎಂದರು.

'ಲಾರಿ ಚಾಲಕರು ಮತ್ತು ಕ್ಲೀನರ್‌ಗಳ ಬಗ್ಗೆ ಸಚಿವ ರಾಮಲಿಂಗಾರೆಡ್ಡಿ ಕಾಳಜಿ ಹೊಂದಿದ್ದಾರೆ' ಎಂದು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ ತಿಳಿಸಿದರು. ಲಾರಿ ಮಾಲೀಕರ ಫೆಡರೇಷನ್ ಅಧ್ಯಕ್ಷ ನವೀನ್ ರೆಡ್ಡಿ, ಶಾಸಕ ಎಚ್.ಆರ್.ಗವಿಯಪ್ಪ ವಿಧಾನ ಪರಿಷತ್ ಸದಸ್ಯ ರಾಮೋಜಿ ಇದ್ದರು.

ಮೇ ತಿಂಗಳು ಉಚಿತ ನಿಲುಗಡೆ: 'ಒಟ್ಟು 37.82 ಎಕರೆ ಪೈಕಿ 20 ಎಕರೆ ಪ್ರದೇಶದಲ್ಲಿ ಮೊದಲ ಹಂತದ ಟ್ರಕ್ ಟರ್ಮಿನಲ್ ನಿರ್ಮಾಣವಾಗಿದೆ. 400 ಟ್ರಕ್‌ಗಳು ಏಕಕಾಲಕ್ಕೆ ಇಲ್ಲಿ ತಂಗಬಹುದು. 128 ಬೆಡ್‌ಗಳ ಡಾರ್ಮೆಟರಿ, ಕ್ಯಾಂಟೀನ್, ಶೌಚಾಲಯ, 39 ಏಜೆಂಟ್ ಕೊಠಡಿಗಳು, 9 ಗ್ಯಾರೇಜ್ ಮಳಿಗೆಗಳು, 22 ಗೋದಾಮು ಸಹಿತ ಹಲವು ಸೌಲಭ್ಯಗಳು ಇವೆ. ಸಚಿವರ ಸೂಚನೆಯಂತೆ ಇಲ್ಲಿ ಮೇ ತಿಂಗಳ ಅವಧಿಗೆ ಟ್ರಕ್‌ಗಳು ಉಚಿತವಾಗಿ ನಿಲುಗಡೆ ಮಾಡಬಹುದು' ಎಂದು ಡಿಡಿಟಿಟಿಎಲ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ತಿಳಿಸಿದರು.

ಹೊಸಪೇಟೆಯ ಅಮರಾವತಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ಟ್ರಕ್ ಟರ್ಮಿನಲ್ ಅನ್ನು ಸೋಮವಾರ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಉದ್ಘಾಟಿಸಿದರು. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಲಾರಿ ಮಾಲೀಕರ ಸಂಘದ ನವೀನ್ ರೆಡ್ಡಿ, ಶಾಸಕ ಎಚ್.ಆರ್.ಗವಿಯಪ್ಪ, ಲಾರಿ ಚಾಲಕರ ಸಂಘದ ಷಣ್ಮುಖಪ್ಪ, ಕೆಪಿಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಬಿ.ಶ್ರೀನಿವಾಸ ರೆಡ್ಡಿ, ಎಂಎಲ್‌ಸಿ ರಾಮೋಜಿ ಇದ್ದರು –ಪ್ರಜಾವಾಣಿ ಚಿತ್ರ

'ಬಿಜೆಪಿ ಸರ್ಕಾರದಿಂದ ಬಾಕಿ'

'ಕೆಎಸ್‌ಆರ್‌ಟಿಸಿ ನೌಕರರ ಸಂಬಳ ಬಾಕಿ ಸಮಸ್ಯೆಗೆ ಬಿಜೆಪಿ ಸರ್ಕಾರವೇ ಕಾರಣ. ಅವರ ಅವಧಿಯಲ್ಲಿ ಬಾಕಿ ಉಳಿಸಿದ ಹಣವೇ ಹೆಚ್ಚಾಗಿದೆ. ಬಜೆಟ್ ಇಲ್ಲದೆ ಘೋಷಣೆ ಮಾಡಿದ್ದರಿಂದ ಹೀಗಾಗಿದೆ. ಈ ಸಮಸ್ಯೆ ಶೀಘ್ರವೇ ಬಗೆಹರಿಸುತ್ತೇವೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

'ಅವಧಿ ಮುಗಿದ ಯಾವುದೇ ವಾಹನವನ್ನು ಓಡಿಸಲ್ಲ, 15 ವರ್ಷ ದಾಟಿದ ಯಾವುದೇ ವಾಹನವನ್ನು ರಸ್ತೆಗೆ ಇಳಿಸಲ್ಲ. ಕಲ್ಯಾಣ ಕರ್ನಾಟಕ ಭಾಗಕ್ಕೆ 700 ಹೊಸ ಬಸ್ ನೀಡುತ್ತೇವೆ. ಬಿಜೆಪಿ ಅವಧಿಯಲ್ಲಿ ಒಂದೇ ಒಂದು ಬಸ್ ಕೊಟ್ಟರಲ್ಲಿಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಸಾರಿಗೆ ಇಲಾಖೆ ಈ ಬಾರಿ ₹15 ಸಾವಿರ ಕೋಟಿ ವರಮಾನದ ಗುರಿ ಹಾಕಿಕೊಂಡಿದೆ. ಕಳೆದ ಬಾರಿ ₹13,500 ಕೋಟಿ ಗುರಿ ನಿಗದಿಪಡಿಸಲಾಗಿತ್ತು
ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ರಾಜ್ಯದಲ್ಲಿ ಸಾರಿಗೆ ಮಂಡಳಿ ರಚಿಸಬೇಕು. ಸಾರಿಗೆ ಕುಂದುಕೊರತೆ ನಿವಾರಣೆ ಘಟಕ ತೆರೆಯಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಆಲೋಚಿಸಬೇಕು
ನವೀನ್ ರೆಡ್ಡಿ, ಅಧ್ಯಕ್ಷ, ಲಾರಿ ಮಾಲೀಕರ ಫೆಡರೇಷನ್

ತುಂಗಭದ್ರಾ: ಟೆಂಡರ್ ಮತ್ತೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ 32 ಕ್ರಸ್ಟ್‌ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್ ಅಳವಡಿಕೆ ಸಂಬಂಧ ಕರೆಯಲಾದ ಇ-ಟೆಂಡರ್ ಅವಧಿಯನ್ನು ಮತ್ತೆ ಒಂದು ವಾರ ವಿಸ್ತರಿಸಲಾಗಿದೆ.



'ಇನ್ನಷ್ಟು ಕಾಲಾವಕಾಶ ಬೇಕು ಎಂದು ಹಲವು ಕಂಪನಿಗಳು ಕೋರಿದ ಕಾರಣ ಈ ವಿಸ್ತರಣೆ ಮಾಡಲಾಗಿದೆ. ಮೇ 12ರಂದು ಟೆಂಡರ್ ತೆರೆಯಲಾಗುವುದು' ಎಂದು ತುಂಗಭದ್ರಾ ಮಂಡಳಿ ಮೂಲಗಳು ತಿಳಿಸಿವೆ. ಈ ಮಧ್ಯೆ, 19ನೇ ಗೇಟ್‌ಗೆ ಕ್ರಸ್ಟ್‌ಗೇಟ್ ಅಳವಡಿಸುವ ಕಾರ್ಯ ಶೀಘ್ರ ಆರಂಭವಾಗುವ ನಿರೀಕ್ಷೆ ಇದೆ.

ಒಳಹರಿವು ಆರಂಭ: ತುಂಗಭದ್ರಾ ನದಿಯ ಅಚ್ಚುಕಟ್ಟು ಪ್ರದೇಶಗಳಲ್ಲಿ ಈಚೆಗೆ ಮಳೆಯಾದ ಕಾರಣ ಏಪ್ರಿಲ್ 25ರಿಂದ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. ಸೋಮವಾರ ಸರಾಸರಿ ಒಳಹರಿವಿನ ಪ್ರಮಾಣ 827 ಕ್ಯುಸೆಕ್ ಇತ್ತು. ಒಳಹರಿವಿನ ಕಾರಣ ಜಲಾಶಯದಲ್ಲಿ 10 ದಿನಗಳಿಂದ ನೀರಿನ ಸಂಗ್ರಹ ಪ್ರಮಾಣ 6.90 ಟಿಎಂಸಿ ಅಡಿ ಆಸುಪಾಸಿನಲ್ಲಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ–ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ,ವಿಜಯಪುರ

ಟೆಂಡರ್ ಪ್ರಕಟಣೆ

2024–25 ನೇ ಶೈಕ್ಷಣಿಕ ಸಾಲಿಗೆ ವಿಜಯಪುರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆಯ, ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಜಿಲ್ಲಾ ಮತ್ತು ಬ್ಲಾಕ್ ಹಂತದ ಕಂಪ್ಯೂಟರ್ ಪ್ರೋಗ್ರ್ಯಾಮರ್, ಡಾಟಾ ಎಂಟ್ರಿ ಆಪರೇಟರ್, ಲೆಕ್ಕ ಸಹಾಯಕರ ಒಟ್ಟು 24 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ICT-SMART CLASS & COMPUTER ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಈ ಕೆಳಗಿನಂತೆ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ https:// kppp.karnataka.gov.in ಹಾಗೂ ಕಛೇರಿಯ ದೂರವಾಣಿ ಸಂಖ್ಯೆ: 9448999389 & 9448999331 ಕ್ಕೆ ಸಂಪರ್ಕಿಸಬಹುದು. Tender No: 1. SSK/2024-25/SE0201, 2. SSK/2024-25/IND0088

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ–ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ವಿಜಯಪುರ

ವಾಸಾಸಂಇ/ವಿಜಯಪುರ/49/ಕೆಎಸ್‌ಎಂಸಿಎ/2025–26

ಒಳಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ದತ್ತಾಂಶ ಸಂಗ್ರಹ ಸಮೀಕ್ಷೆ

ಹೊಸ ಎಪಿಕೆ ಆ್ಯಪ್‌ನಲ್ಲೂ ಸಮಸ್ಯೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಒಳಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ಸಮಗ್ರ ದತ್ತಾಂಶ ಸಂಗ್ರಹಿಸಲು ಅಭಿವೃದ್ಧಿ ಪಡಿಸಿ ಅಪ್‌ಡೇಟ್ ಮಾಡಿದ ಹೊಸ ಎಪಿಕೆ ಆ್ಯಪ್‌ನಲ್ಲೂ ತಾಂತ್ರಿಕ ದೋಷ ಕಂಡುಬಂದಿದ್ದು, ಸಮೀಕ್ಷೆಗೆ ನಿಯೋಜನೆಗೊಂಡ ಶಿಕ್ಷಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ನೇತೃತ್ವದ ಆಯೋಗವು ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯ ಸಮಗ್ರ ಮಾಹಿತಿ ಕಲೆಹಾಕಲು ಸಮೀಕ್ಷೆಯ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಇದನ್ನು ಆಧರಿಸಿ ರಾಜ್ಯದ ಇಡಿಸಿಎಸ್ ಮನೆ–ಮನೆಗೆ ಭೇಟಿ ನೀಡಿ ದತ್ತಾಂಶ ಸಂಗ್ರಹಿಸಲು ಎರಡು ವಾರಗಳ ಅವಧಿಯಲ್ಲಿ ಎಪಿಕೆ ಆ್ಯಪ್ ಅಭಿವೃದ್ಧಿಪಡಿಸಿದೆ.

'ತರಬೇತಿಯ ಅವಧಿಯಲ್ಲಿ ಪರಿಚಯಿಸಿದ ಡೆಮೊ ಎಪಿಕೆ ಆ್ಯಪ್‌ನಲ್ಲಿ ತಾಂತ್ರಿಕ ಸಮಸ್ಯೆ ಕಂಡುಬಂದು ಹಲವರ ಮೊಬೈಲ್‌ಗಳಲ್ಲಿ ಡೌನ್‌ಲೋಡ್ ಆಗಿರಲಿಲ್ಲ. ಸೋಮವಾರ ಅಪ್‌ಡೇಟ್ ಮಾಡಿ ಬಿಡುಗಡೆಯಾದ ಹೊಸ ಎಪಿಕೆ ಆ್ಯಪ್‌ನಲ್ಲೂ ತಾಂತ್ರಿಕ ಸಮಸ್ಯೆ ಮುಂದುವರಿದಿದೆ. ಕೆಲವು ಶಿಕ್ಷಕರ ಮೊಬೈಲ್‌ಗಳಲ್ಲಿ ಲಾಗ್‌ಇನ್ ಆಗುತ್ತಿಲ್ಲ. ಮತ್ತೆ ಕೆಲವರಲ್ಲಿ ಲಾಗ್‌ಇನ್ ಆಗಿದ್ದರೆ ದತ್ತಾಂಶ ಪಡೆಯುವಾಗ ಮಧ್ಯದಲ್ಲಿಯೇ ಸ್ಥಗಿತವಾಗುತ್ತಿದೆ. ಇದರಿಂದಾಗಿ ಮಾಹಿತಿಯನ್ನು ಮತ್ತೆ ಆರಂಭದಿಂದ ಭರ್ತಿ ಮಾಡುವಂತಾಗಿದೆ' ಎಂದು ಸಮೀಕ್ಷೆಗೆ ನಿಯೋಜನೆಗೊಂಡ ಶಿಕ್ಷಕ ಮಹೇಶ ಅಲವತ್ತುಕೊಂಡರು.

'ತರಬೇತಿಯ ಅವಧಿಯಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆ (ಕೆಜಿಐಡಿ) ನಂಬರ್ ಮೂಲಕ ಲಾಗ್‌ಇನ್ ಆಗುವ ವ್ಯವಸ್ಥೆ ಮಾಡುವುದಾಗಿ ಹೇಳಿದ್ದರು. ಈಗ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಎಪಿಕೆ ಆ್ಯಪ್ ಲಿಂಕ್ ಕಳುಹಿಸಿದ್ದು, ಮೊಬೈಲ್ ನಂಬರ್ ಒಟಿಪಿಯಿಂದ ಲಾಗ್‌ಇನ್ ಆಗುತ್ತಿದೆ. ಎಪಿಕೆ ಆ್ಯಪ್‌ನಿಂದ ದತ್ತಾಂಶ ಸೋರಿಕೆಯ ಆತಂಕವಿದೆ' ಎಂದರು.

ಕೆಜಿಐಡಿ ಜೋಡಣೆ ಮೊಬೈಲ್ ನಂಬರ್‌ಗೆ ಲಾಗ್‌ಇನ್: 'ಸರ್ಕಾರಿ ನೌಕರಿಗೆ ಸೇರುವಾಗ ಶಿಕ್ಷಕರು ನೀಡಿದ್ದ ಮೊಬೈಲ್ ನಂಬರ್‌ಗೆ ಮಾತ್ರವೇ ಲಾಗ್‌ಇನ್ ಆಗುವಂತೆ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಲಾಗ್‌ಇನ್ ವೇಳೆ ಕೆಜಿಐಡಿಗೆ ನೀಡಿದ್ದರ ಬದಲು ಬೇರೆ ನಂಬರ್ ನಮೂದಿಸಿದ್ದರೆ ಒಟಿಪಿ ಬರುವುದಿಲ್ಲ. ಕೆಜಿಐಟಿ ಜೋಡಣೆ ಬದಲು ಬೇರೆ ಮೊಬೈಲ್ ಹೊಂದಿದ್ದವರು ಅಥವಾ ಹಳೇ ಮೊಬೈಲ್ ನಂಬರ್ ಕಳೆದುಕೊಂಡವರು ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿನ ಕಂಟ್ರೋಲ್ ರೂಮ್ ಅಥವಾ ಅಧಿಕಾರಿಗಳ ಗಮನಕ್ಕೆ ತರಬೇಕು. ಚಾಲ್ತಿಯಲ್ಲಿರುವ ಮೊಬೈಲ್ ನಂಬರ್ ಕೊಟ್ಟರೆ ತಕ್ಷಣವೇ ಲಾಗ್‌ಇನ್ ಆಗುವಂತೆ ಮಾಡುತ್ತಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಯೋಜನೆಯ ಮ್ಯಾನೇಜರ್ ಒಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಎಂ ಅಲ್ಲಾಬಕಾಶ್, 'ಕೆಲವು ಶಿಕ್ಷಕರ ಮೊಬೈಲ್‌ಗಳಲ್ಲಿ ಲಾಗ್‌ಇನ್ ಸಮಸ್ಯೆ ಬರುತ್ತಿರುವುದಾಗಿ ಗಮನಕ್ಕೆ ತಂದಿದ್ದಾರೆ. ತಾಂತ್ರಿಕ ತಂಡದವರು ಬಗೆಹರಿಸುವಲ್ಲಿ ನಿರತವಾಗಿದ್ದಾರೆ. ಕೆಲವು ಶಿಕ್ಷಕರು ಹಳೇ ಆ್ಯಪ್, ಆ್ಯಪ್‌ಗೆ ಬೆಂಬಲಿಸದ ಮೊಬೈಲ್ ಬಳಸುತ್ತಿರುವುದರಿಂದ ಆರಂಭಿಕ ಹಂತದಲ್ಲಿ ತೊಡಕಾಗಿದೆ' ಎಂದರು.

> **ಜಿಲ್ಲಾ, ತಾಲ್ಲೂಕು, ಸ್ಥಳೀಯ ಹಂತದಲ್ಲಿ ತಂಡ ಮಾಡಿ ಸಮೀಕ್ಷೆ ನಡೆಸಲಾಗುತ್ತಿದೆ. ಸರ್ಕಾರವೇ ಆ್ಯಪ್ ಅಭಿವೃದ್ಧಿ ಪಡಿಸಿದ್ದರಿಂದ ದತ್ತಾಂಶ ಸೋರಿಕೆ ಆಗುವುದಿಲ್ಲ**
> **ಬಿ.ಫೌಜಿಯಾ ತರನ್ನುಮ್**, ಜಿಲ್ಲಾಧಿಕಾರಿ

'ಡಿಕೆಶಿಯನ್ನು ಸಿ.ಎಂ ಮಾಡಿಯೇ ಸಿದ್ಧ'

ಲಕ್ಷ್ಮೇಶ್ವರ (ಗದಗ ಜಿಲ್ಲೆ): 'ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿಸಿ, ಅವರಿಂದಲೇ ಲಕ್ಷ್ಮೇಶ್ವರ ತಾಲ್ಲೂಕಿನ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ತ್ರಿಕೋಟಿ ಶಿವಲಿಂಗ ಸ್ಥಾಪಿಸುವೆ' ಎಂದು ನೊಣವಿನಕೆರೆ ಕಾಡಸಿದ್ದೇಶ್ವರಮಠದ ಕರಿವೃಷಭ ದೇಶೀಕೇಂದ್ರ ಶಿವಯೋಗೀಶ್ವರ ಶಿವಾಚಾರ್ಯರ ಸ್ವಾಮೀಜಿ ಹೇಳಿದರು.

'ಕಳೆದ ವರ್ಷ ಹೇಳಿದ್ದನ್ನೇ ಮತ್ತೊಮ್ಮೆ ಹೇಳಿರುವೆ. ಶಿವಕುಮಾರ್ ಅವರು ತ್ರಿಕೋಟಿ ಲಿಂಗ ಸ್ಥಾಪನೆಗೆ ಬೇಕಾದ ಕೋಟ್ಯಂತರ ರೂಪಾಯಿ ಅನುದಾನ ಕಲ್ಪಿಸಿದ್ದಾರೆ. ಆದಷ್ಟು ಬೇಗ ಶಿವಕುಮಾರ್ ಮುಖ್ಯಮಂತ್ರಿ ಆಗುವರು' ಎಂದು ಅವರು ಹೇಳಿದರು.

ಕರ್ನಾಟಕ ರಾಜ್ಯ ಪೋಲಿಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

#59, ರಿಚ್‌ಮಂಡ್ ರಸ್ತೆ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆ, ಬೆಂಗಳೂರು – 560025.
ದೂರವಾಣಿ ಸಂಖ್ಯೆ: 080–25584102/25594893 ವೆಬ್‌ಸೈಟ್: www.ksphc.org
ಇ–ಮೇಲ್: eecontractksphc@gmail.com

ಸಂ: ಇಇ/ಕೆಎಸ್‌ಪಿಹೆಚ್&ಐಡಿಸಿಎಲ್/ಸಿಎನ್‌ಟಿ/ಟಿಎನ್‌ಡಿ/05/2025–26/27
ದಿನಾಂಕ: 05.05.2025

ಟೆಂಡರ್ ಪ್ರಕಟಣೆ

ಕೆಎಸ್‌ಪಿಹೆಚ್ & ಐಡಿಸಿಎಲ್ ಕೆಟಿಪಿಪಿ 2000 ಕಾಯ್ದೆಯ ಪ್ರಕಾರ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ದಸ್ತಾವೇಜು ಪ್ರಕಾರ ಕೆ.ಪಿ.ಪಿ ಪೋರ್ಟಲ್ https:// kppp.karnataka.gov.in ಮೂಲಕ ಈ ಕೆಳಕಂಡ ಕಾಮಗಾರಿಗಾಗಿ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಬೆಂಗಳೂರಿನ ನಾಗವಾರ ಗ್ರಾಮದ ಸ.ನಂ. 76/3 ರಲ್ಲಿ ಗೋವಿಂದಪುರ ಪೋಲೀಸ್ ಠಾಣೆ ನಿರ್ಮಾಣ ಕಾಮಗಾರಿ. **(ಎಪಿಟಿ ರೂ.245.97 ಲಕ್ಷಗಳು ಜಿಎಸ್‌ಟಿ ಹೊರತುಪಡಿಸಿ).**

ಇಚ್ಛೆಯುಳ್ಳ ಮತ್ತು ಅರ್ಹತೆವುಳ್ಳ ಗುತ್ತಿಗೆದಾರರು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ ದಿನಾಂಕ: 08–05–2025 ರಿಂದ ಲಭ್ಯವಿರುತ್ತದೆ.

"ಕೆಎಸ್‌ಪಿಹೆಚ್ & ಐಡಿಸಿಎಲ್ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣ ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ."

ಸೂಚನೆ: ಯಾವುದೇ ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು–ಗುತ್ತಿಗೆ
DIPR/CP/486/2025-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಎನ್.ಆರ್. ಚೌಕ, ಬೆಂಗಳೂರು – 560002.

ಸಂಖ್ಯೆ: ಕಾಅ/ರಮೂಸೌ–ಟಿಇಸಿ/ಟೆಂಡರ್/18/2025–26 ದಿನಾಂಕ: 05–05–2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಪಶ್ಚಿಮ ಮತ್ತು ರಾಜರಾಜೇಶ್ವರಿನಗರ ವಲಯದ ಆರ್ಟೀರಿಯಲ್ ಮತ್ತು ಸಬ್–ಆರ್ಟೀರಿಯಲ್ ರಸ್ತೆಗಳಲ್ಲಿ ಸೈಂಟಿಫಿಕ್ ಹಂಪ್‌ಗಳು, ಹೆಚ್‌ಆರ್‌ಪಿಸಿ, ಲೇನ್ ಡಿವೈಡರ್‌ಗಳು, ಥರ್ಮೋಪ್ಲಾಸ್ಟಿಕ್ ಪೇಂಟ್ ಹಾಗೂ ಇತರೆ ರಸ್ತೆ ಸುರಕ್ಷತಾ ಕಾರ್ಯವನ್ನು ಒದಗಿಸುವ ಕಾಮಗಾರಿ **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 167.90 (ಜಿ.ಎಸ್.ಟಿ ಹೊರತುಪಡಿಸಿ), ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ): 2,50,000/– (ರೂ. 1.00 ಲಕ್ಷ ಇ–ಪಾವತಿ ಮೂಲಕ ಮತ್ತು ಬಾಕಿ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ).**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ದಿನಾಂಕ: 08–05–2025 ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವ ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 13–05–2025 ರಂದು 15.00 ಗಂಟೆವರೆಗೆ. 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: 13–05–2025 ರಂದು 16.30 ಗಂಟೆಗೆ. 4) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 17–05–2025 ರಂದು 16.00 ಗಂಟೆವರೆಗೆ. 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 19–05–2025 ರಂದು 16.30 ಗಂಟೆಗೆ. 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ಟೆಂಡರ್‌ದಾರರಿಗೆ ಮುಂದೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ.

'ಒಳಮೀಸಲು: 2 ತಿಂಗಳಲ್ಲಿ ವರದಿ'

ಒಂದನೇ ಪುಟದಿಂದ...

'46 ಪ್ರಶ್ನೆಗಳು ಮತ್ತು ಉಪ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನಾವಳಿಗಳ ಕೈಪಿಡಿ ಸಿದ್ಧಪಡಿಸಲಾಗಿದೆ. ಈಗ ನಡೆಸುತ್ತಿರುವ ಸಮೀಕ್ಷೆ ಈ ಎಲ್ಲಾ ಗೊಂದಲಗಳಿಗೂ ಪರಿಹಾರ ನೀಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ನ್ಯಾ. ನಾಗಮೋಹನ ದಾಸ್ ಅಧ್ಯಕ್ಷತೆಯ ಆಯೋಗವು ಗಣತಿ ದತ್ತಾಂಶ ಆಧಾರಿಸಿ 60 ದಿನಗಳಲ್ಲಿ ಶಿಫಾರಸು ಮಾಡಲಿದೆ. ಮಾಡಿದ ತಕ್ಷಣ ಒಳಮೀಸಲಾತಿ ಜಾರಿಗೊಳಿಸಲಾಗುವುದು. ಎಲ್ಲ ಪರಿಶಿಷ್ಟ ಜಾತಿಯ ಜನರು ಸಮೀಕ್ಷೆಯಲ್ಲಿ ಭಾಗವಹಿಸಬೇಕು. ಖಚಿತ ಮಾಹಿತಿ ನೀಡಬೇಕು' ಎಂದು ಕೋರಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್.ಸಿ. ಮಹದೇವಪ್ಪ, ಕೆ.ಎಚ್. ಮುನಿಯಪ್ಪ, ಶಿವರಾಜ್ ತಂಗಡಗಿ, ಶಿವಾನಂದ ಪಾಟೀಲ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಸಮೀಕ್ಷೆಗೆ ಮೊಬೈಲ್ ಆ್ಯಪ್ ಬಳಕೆ: ಮೊಬೈಲ್ ಆ್ಯಪ್ ಮೂಲಕವೂ ಸಮೀಕ್ಷೆಗೆ ಅವಕಾಶ ಮಾಡಿಕೊಡಲಾಗಿದೆ. ಬೆಳಿಗ್ಗೆ 6:30ರಿಂದ ಸಂಜೆ 6:30ರವರೆಗೆ ಮೊಬೈಲ್ ಆ್ಯಪ್ ಬಳಸಬಹುದು. ಸ್ವಯಂ ಘೋಷಣೆಗೆ ಆಧಾರ್ ನಂಬರ್ ಮತ್ತು ಜಾತಿ ಪ್ರಮಾಣಪತ್ರದ ಆರ್.ಡಿ. ಸಂಖ್ಯೆ ಕಡ್ಡಾಯವಾಗಿದೆ.

ವಲಸೆ ಹೋಗಿರುವ ಸಮುದಾಯಗಳು ಆನ್‌ಲೈನ್ ಸೌಲಭ್ಯ ಬಳಸಿ ಕೊಳ್ಳಬೇಕು. ಸಮೀಕ್ಷೆ ಕುರಿತು ವಿವಿಧ ಸಂಘಟನೆಗಳು ನೆರವಾಗಬೇಕು. ದತ್ತಾಂಶ ಸಂಗ್ರಹ ಸಮೀಕ್ಷೆಯಲ್ಲಿ ಎಲ್ಲರೂ ಪೂರ್ಣವಾಗಿ ತೊಡಗಿಸಿಕೊಂಡು ಮಾಹಿತಿ ನೀಡಬೇಕು ಎಂದು ಸಿದ್ದರಾಮಯ್ಯ ಸಲಹೆ ನೀಡಿದರು

ಅಖಿಲ ಕರ್ನಾಟಕ ಕೊರಚ ಮಹಾಸಭಾ ಮನವಿ

'ಕೊರಚ ಎಂದೇ ನಮೂದಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವುದಕ್ಕಾಗಿ ನಡೆಯುತ್ತಿರುವ ಜಾತಿ ಜನಗಣತಿಯ ಸಮೀಕ್ಷೆಯಲ್ಲಿ ತಮ್ಮ ಸಮುದಾಯದ ಜನರು ಕೊರಚ, ಕೊರಚರ್ ಎಂದು ನೋಂದಾಯಿಸಿಕೊಳ್ಳಬೇಕು ಎಂದು ಅಖಿಲ ಕರ್ನಾಟಕ ಕೊರಚ ಮಹಾಸಭಾ ಮನವಿ ಮಾಡಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಆದರ್ಶ ಯಲ್ಲಪ್ಪ, 'ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಕೊರಚ ಸಮುದಾಯದವರು ರಾಜ್ಯದಾದ್ಯಂತ ವಾಸಿಸುತ್ತಿದ್ದಾರೆ. ಅಧಿಕಾರಿಗಳು ದತ್ತಾಂಶ ಸಂಗ್ರಹಿಸಲು ಮನೆ–ಮನೆಗೆ ಭೇಟಿ ನೀಡುವ ಸಂದರ್ಭದಲ್ಲಿ ಜಾತಿ ಕಾಲಂನಲ್ಲಿ ಕೊರಚ, ಕೊರಚರ್ ಎಂದು ನಮೂದಿಸಬೇಕು' ಎಂದು ಮನವಿ ಮಾಡಿದರು.

'ಕೊರಚ ಸಮುದಾಯದಲ್ಲಿ ದಬ್ಬೆ ಕೊರಚ, ಹಗ್ಗ ಕೊರಚ, ಕುಂಚಿ ಕೊರಚ ಎಂಬ ಉಪ ಪಂಗಡಗಳಿದ್ದು, ಈ ಮೂರೂ ಉಪ ಪಂಗಡಗಳನ್ನು ಕೊರಚ ಎಂದು ಪರಿಗಣಿಸಬೇಕು. ಇದರಿಂದ ನಮ್ಮ ಸಮುದಾಯವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಿಂದುಳಿದಿರುವುದನ್ನು ಪತ್ತೆ ಹಚ್ಚಲು ಸಹಾಯಕವಾಗಲಿದೆ' ಎಂದರು.

'ಪ್ರತಿ ಜಿಲ್ಲೆಯಲ್ಲೂ ಕೊರಚ ಸಮುದಾಯ ಭವನ, ವಸತಿ ನಿಲಯಗಳ ನಿರ್ಮಿಸಬೇಕು. ವಚನಕಾರ ನುಲಿಯ ಚಂದಯ್ಯ ಅವರ ಹೆಸರಿನಲ್ಲಿ ಶರಣ ನುಲಿಯ ಚಂದಯ್ಯ ಅಭಿವೃದ್ಧಿ ನಿಗಮ ಸ್ಥಾಪಿಸಿ, ಸಮುದಾಯದ ಏಳಿಗೆಗೆ ಸಹಕರಿಸಬೇಕು. ಕೊರಚ ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ನಡೆಸಬೇಕು' ಎಂದು ಆಗ್ರಹಿಸಿದರು.

ಮಹಾಸಭಾದ ಖಜಾಂಚಿ ಗಂಗಪ್ಪ ಕೆ., ಮುಖಂಡರಾದ ವಿನಾಯಕ ಪೆನುಗೊಂಡ, ಧನಂಜಯ ಎನ್., ಪದಾಧಿಕಾರಿಗಳಾದ ಸಿದ್ದೇಶ್ ಮಾದಪುರ, ಮಾರುತಿ ಮಾಕಡವಾಲೆ, ಕುಂಸಿ ಶ್ರೀನಿವಾಸ್, ಪುರುಷೋತ್ತಮ ಯಲ್ಲಾಪುರ ಸುದ್ದಿಗೋಷ್ಠಿಯಲ್ಲಿದ್ದರು.

'ಬೌದ್ಧ ಧರ್ಮದ ಕಾಲಂ ರಚಿಸಿ'

ಒಳ ಮೀಸಲಾತಿ ಸಮೀಕ್ಷೆಯಯಲ್ಲಿ ಪ್ರತ್ಯೇಕ ಬೌದ್ಧ ಧರ್ಮದ ಕಾಲಂ ರಚಿಸಬೇಕು. ಜಾತಿ ರಹಿತ ಬೌದ್ಧರೆಂದು ಸೇರಿಸಲು ಯಾವುದೇ ದತ್ತಾಂಶಗಳಿಲ್ಲದ ಕಾರಣ ಈ ಸಮಸ್ಯೆಗೆ ಕೂಡಲೇ ಪರಿಹಾರ ಕಲ್ಪಿಸಬೇಕು ಎಂದು ಭಾರತೀಯ ಬೌದ್ಧ ಮಹಾಸಭಾ ಯುವ ಘಟಕ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯುವ ಘಟಕದ ರಾಜ್ಯಾಧ್ಯಕ್ಷ ದರ್ಶನ್ ಬಿ. ಸೋಮಶೇಖರ್, 'ರಾಜ್ಯದಲ್ಲಿ ಮೇ 5ರಿಂದ 17ರವರೆಗೆ ಒಳ ಮೀಸಲಾತಿ ವರ್ಗೀಕರಣ ಮಾಡಲು ಸಮೀಕ್ಷೆ ನಡೆಸಿ, ದತ್ತಾಂಶಗಳನ್ನು ಸಂಗ್ರಹಿಸುವ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ದತ್ತಾಂಶ ಸಂಗ್ರಹಿಸಲು ಬೌದ್ಧ ಧರ್ಮದ ಕಾಲಂ ಇಲ್ಲ' ಎಂದು ಒತ್ತಾಯಿಸಿದರು.

'ಡಾ.ಬಿ.ಆರ್. ಅಂಬೇಡ್ಕರ್ ಅವರು ಬುದ್ಧನ ಅನುಯಾಯಿಗಳಾಗಿದ್ದರು. ಆದ್ದರಿಂದ ನಾವೆಲ್ಲರೂ ಬೌದ್ಧ ಧರ್ಮವನ್ನು ಅನುಸರಿಸುತ್ತಿದ್ದೇವೆ. ಈ ಬಗ್ಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅವರಿಗೆ ಬೌದ್ಧ ಧರ್ಮದ ಕಾಲಂ ಹಾಗೂ ಜಾತಿರಹಿತ ಬೌದ್ಧರೆಂದು ಸೇರಿಸಲು ಅವಕಾಶ ಕಲ್ಪಿಸುವಂತೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ' ಎಂದು ದೂರಿದರು.

'ಬೌದ್ಧ ಧರ್ಮ ಅನುಸರಿಸುವವರಿಗೆ ದತ್ತಾಂಶ ಸಂಗ್ರಹಿಸುವ ಸಂದರ್ಭದಲ್ಲಿ ಸರಳೀಕರಣದ ದಾಖಲೆಗಳನ್ನು ಪಡೆಯಲು ಅವಕಾಶ ಕಲ್ಪಿಸಬೇಕು. ಜಾತಿ ರಹಿತ ಬೌದ್ಧ ಧರ್ಮೀಯರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಅವರ ಸಾಂವಿಧಾನಿಕ ಹಕ್ಕುಗಳನ್ನು ನೀಡಬೇಕು. ಒಳ ಮೀಸಲಾತಿ ಸಮೀಕ್ಷೆಯಲ್ಲಿ ದ್ರಾವಿಡ, ಆದಿ ದ್ರಾವಿಡ ಸೇರಿದಂತೆ ಒಳ ಪಂಗಡಗಳಿಗೆ ಪ್ರತ್ಯೇಕ ಕಾಲಂ ಇದೆ. ಆದ್ದರಿಂದ ಬೌದ್ಧ ಧರ್ಮ ಅನುಸರಿಸುವವರಿಗೆ ಒಂದು ಕಾಲಂ ಮೀಸಲಿಡಬೇಕು' ಎಂದು ಒತ್ತಾಯಿಸಿದರು.

ಪಂಚಾಚಾರ್ಯರ ಸಭೆ ನಾಳೆ

ಬಾಳೆಹೊನ್ನೂರು (ಚಿಕ್ಕಮಗಳೂರು): ಜನ ಗಣತಿ, ಜಾತಿ ಗಣತಿ ಸಂದರ್ಭದಲ್ಲಿ ಪಂಚ ಪೀಠಗಳ ನಿಲುವನ್ನು ಸ್ಪಷ್ಟಪಡಿಸುವ ಉದ್ದೇಶದಿಂದ ಮೇ 7ರಂದು ಸಂಜೆ 7 ಗಂಟೆಗೆ ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕಿನ ಮುಕ್ತಿಮಂದಿರ ಕ್ಷೇತ್ರದಲ್ಲಿ ಪಂಚ ಪೀಠಾಧೀಶರ ಸಭೆ ನಡೆಯಲಿದೆ.

ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ಉಜ್ಜಯಿನಿ, ಕೇದಾರ, ಶ್ರೀಶೈಲ ಮತ್ತು ಕಾಶಿ ಪೀಠದ ಮಠಾಧೀಶರಿಗೆ ವಿನಂತಿಸಲಾಗಿದೆ ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದ್ದಾರೆ. ಪೀಠಾಭಿಮಾನಿಗಳ, ಭಕ್ತರ ಒತ್ತಾಸೆಯ ಮೇರೆಗೆ ಈ ಸಭೆ ಕರೆಯಲಾಗಿದೆ. ಆಂತರಿಕ ಸಮಸ್ಯೆಗಳನ್ನು ತಾರ್ಕಿಕವಾಗಿ ಅಂತ್ಯಗೊಳಿಸುವ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–5/2025–26/505 ದಿನಾಂಕ:03–05–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2025-26/BD/WORK_INDENT15308	295.00
2)	PWD/2025-26/BR/WORK_INDENT20948	226.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ **12–05–2025 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **15–05–2025 ರಂದು 12.00 ಗಂಟೆಯ ವರೆಗೆ.** ಇ) ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **19–05–2025 ರಂದು 16.00 ಗಂಟೆಯ ವರೆಗೆ.** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **20–05–2025 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/77/ಕೆಎಸ್‌ಎಂಸಿಎ/2025–26

ಬೆಳಗಾವಿ ಮಹಾನಗರ ಪಾಲಿಕೆ
ಸಿಟಿಎಸ್.ನಂ.4821/26, 4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ : 0831–2405304,
Email : itstaff_ulb_belgaum@yahoo.com, Website : www.belgaumcity.mrc.gov.in

ಸಂಖ್ಯೆ : ಮ.ನ.ಪಾ./ಆ.ಶಾ./ಘ.ವ.ನಿ./ಟಿ.ಎನ್.ಡಿ./ಕೆ.ಪಿ.ಪಿ.ಪಿ./02/2025–26
ದಿನಾಂಕ : 03–05–2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್)

ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999 – 2000 ಪ್ರಕಾರ ಆ್ಯಕ್ಟ 2000 ನಿಯಮದಂತೆ ಮಹಾನಗರ ಪಾಲಿಕೆ ಬೆಳಗಾವಿ ಇವರಿದ ಸ್ವಚ್ಛ ಭಾರತ ಮಿಶನ – 2.0 ಯೋಜನೆಯಡಿ ಮಂಜೂರಾದ **Supply Installation & Commissioning of Fire Fighting Equipment for 109 TPD Capacity Material Recovery Facility (MRF) in City Corporation Belagavi,** ಹಾಗೂ **Supply Installation & Commissioning of Processing Equipment for 109 TPD Capacity Material Recovery Facility (MRF) in City Corporation Belagavi** ಕಾಮಗಾರಿಗಳಿಗೆ ಟೆಂಡರ್‌ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 14–05–2025 ರಂದು ಇರುತ್ತದೆ.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **ವೆಬ್‌ಸೈಟ್ : https://www.kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪಡೆಯಬಹುದಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಟೆಂಡರಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/181/ಮಣಿಪಾಲ್/2025–26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು

ಸಂ.: ಕರಾಸಾ/ವಿನಿ/ಕೆಂಬನಿ/ವಾ/110/2025–26 ದಿನಾಂಕ: 03/05/2025

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 01/2025–26

ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ / ಖಾಲಿಯಾಗಲಿರುವ ಮಳಿಗೆ ಸಂಖ್ಯೆ 06 (ನೂತನ ಮಳಿಗೆ), 07 (ನೂತನ ಮಳಿಗೆ), 23, 48, 60, 118 (ನೂತನ ಮಳಿಗೆ), 114, 05 (ನೂತನ ಮಳಿಗೆ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ 06, 11, 12, 31 & 03 (ನೂತನ ಮಳಿಗೆ, ತೆರೆದ ಸ್ಥಳ) ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಕೆಪಿಪಿ ಪೋರ್ಟಲ್ ಮೂಲಕ ಮತ್ತು ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ 46, ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟೀನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ), ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 13 & 30 ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಎರಡನೇ ಮಹಡಿ ಮತ್ತು ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ ದಿನಾಂಕ: 06.05.2025 ರಿಂದ 26.05.2025 ರವರೆಗೆ ಇ–ಟೆಂಡರ್ / ಸಂಧಾನದ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ. ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ ಸಂಖ್ಯೆ : 080–8046010000 / 080 –

ಸಹಿ/– ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಬನಿ ವಿಭಾಗ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/491/ಆಕಾರ್/2025–26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–03/ಎಇ–1/2025–26/208 ದಿನಾಂಕ:– 22.04.2025

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ–03/ಎಇ–1/2025–26 ದಿನಾಂಕ: 22.04.2025.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಜಗಳೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ **ಲೆಕ್ಕಶೀರ್ಷಿಕೆ : 5054–03–337–0–17–160 ಯೋಜನೆ(ರಾಜ್ಯ ಹೆದ್ದಾರಿ ನವೀಕರಣ) ಅಡಿ 1) ಜಗಳೂರು ತಾಲ್ಲೂಕು ಮಲ್ಪೆ–ಮೊಳಕಾಲ್ಮೂರು ರಾಜ್ಯ ಹೆದ್ದಾರಿ–65 ರಸ್ತೆಯ ಕಿ.ಮೀ 292.00 ರಿಂದ 300.00 ವರೆಗೆ ರಸ್ತೆ ಮರು ಡಾಂಬರೀಕರಣ. (18591) (2ನೇ ಕರೆ) ಕಾಮಗಾರಿಗೆ ಮೊತ್ತ ರೂ. 500.00 ಲಕ್ಷ ಮತ್ತು ಲೆಕ್ಕಶೀರ್ಷಿಕೆ : 3054–04–105–0–01–200 ಜಿಲ್ಲಾ ರಸ್ತೆಗಳು ಸೇತುವೆಗಳು–ನಿರ್ವಹಣಾ ಅಡಿ 2) ಜಗಳೂರು ತಾಲ್ಲೂಕು ಅಣಜಿ–ಸೊಕ್ಕೆ ರಸ್ತೆಯ ಕಿ.ಮೀ. 7.50 ಎಲ್.ಎಲ್.ಸಿ ದುರಸ್ತಿ ಕಾಮಗಾರಿ (2ನೇ ಕರೆ)ರೂ. 35.00 ಲಕ್ಷ ಮತ್ತು 3) ಜಗಳೂರು ತಾಲ್ಲೂಕು ಜಗಳೂರು–ಕಡಬಕಟ್ಟೆ ರಸ್ತೆ ಕಿ.ಮೀ. 5.90 ಮತ್ತು 6.30ರಲ್ಲಿನ ಅಡ್ಡ ಮೋರಿಗಳ ಮರು ನಿರ್ಮಾಣ ಹಾಗೂ ಕಿ.ಮೀ. 14.50 ರಿಂದ 17.40ರವರೆಗೆ ಅಡ್ಡ ಮೋರಿಗಳ ದುರಸ್ತಿ ಕಾಮಗಾರಿ (ಅರಿಶಿನಗುಂಡಿ ಗ್ರಾಮದ ಹತ್ತಿರ) (2ನೇ ಕರೆ) ರೂ. 25.00 ಲಕ್ಷ** ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 06.05.2025 ಸಂಜೆ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ 07.05.2025 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/43/ ಕೆಎಸ್‌ಎಂಸಿಎ/2025–26
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಉಡುಪಿ
ಟೆಂಡರ್ ಪ್ರಕಟಣೆ ಸಂ:ಕಾಇಂ/ಪಂರಾಇಂವಿಉ/ಟೆಂಡರ್ ಪ್ರಕಟಣೆ ನಂ 02/2025–26:ಎಇ–1/257, ದಿನಾಂಕ: 05.05.2025

ಟೆಂಡರ್ ಪ್ರಕಟಣೆ
(ಇ–ಪೋರ್ಟಲ್ ಪದ್ಧತಿಯಲ್ಲಿ e-portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಇಂಜನಿಯರವರಿಂದ ಗ್ರಾಮ ಪಂಚಾಯತ್‌ನ 2021–22 ಹಾಗೂ 2022–23ನೇ ಸಾಲಿನ 15ನೇ ಹಣಕಾಸು ಯೋಜನೆ ಮತ್ತು 2023–24ನೇ ಸಾಲಿನ ಮರಳು ರಾಜಧನ ಹಾಗೂ ಸ್ವಂತ ಅನುದಾನದ ಯೋಜನೆಯಡಿಯಲ್ಲಿನ ಈ ಕೆಳಗಿನ ಕಾಮಗಾರಿಗಳಿಗೆ ಇ–ಪೋರ್ಟಲ್ ಪದ್ಧತಿಯಲ್ಲಿ (Standard Tender Documents for Procument of Goods)ನ ನಿಬಂಧನೆಗೊಳಪಟ್ಟಂತೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಇ–ಪೋರ್ಟಲ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procument portal WEB site https://www.kppp.karnataka.gov.in ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ	ಇ.ಎಂ.ಡಿ. ಮೊತ್ತ ರೂ.ಗಳಲ್ಲಿ	ಗುತ್ತಿಗೆದಾರರ ಅರ್ಹತೆ
1.	ಉಡುಪಿ ಜಿಲ್ಲೆ ಬ್ರಹ್ಮಾವರ ತಾಲೂಕು ಉಪ್ಪೂರು ಗ್ರಾಮ ಪಂಚಾಯತ್ ಹೊಸ ಕಟ್ಟಡ ರಚನೆ	65.00	130000.00	ಕ್ಲಾಸ್–3 ಮತ್ತು ಮೇಲ್ಪಟ್ಟು

1. ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿದ ದಿನಾಂಕ: 05.05.2025 ರಿಂದ 13.05.2025ರ 4.00 (PM) ಗಂಟೆಯವರೆಗೆ.
2. ಟೆಕ್ನಿಕಲ್ ಬಿಡ್ಡುಗಳನ್ನು ತೆರೆಯುವ ದಿನಾಂಕ: 14.05.2025ರ 4.30 (PM) ಗಂಟೆಯ ನಂತರ
3. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 16.05.2025ರ 11.00 (AM) ಗಂಟೆಯ ನಂತರ.

ಇನ್ನಿತರೆ ನಿಬಂಧನೆಗಳು, ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ವೆಬ್‌ಸೈಟ್ https://www.kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ ಕಛೇರಿಯವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜನಿಯರ್, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಉಡುಪಿ

ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗಬಾರದು: ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

‘ಮುಂಗಾರು ತಡವಾದರೆ 6,319 ಹಳ್ಳಿಗೆ ಸಮಸ್ಯೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷ ಮುಂಗಾರು ತಡವಾದರೆ 6,319 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಆಗಬಹುದು. ಶುದ್ಧ ಕುಡಿಯುವ ನೀರಿಗೆ ಒಂದೇ ಒಂದು ಗ್ರಾಮದಲ್ಲೂ ಸಮಸ್ಯೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ಸೋಮವಾರ ವಿಡಿಯೊ ಸಂವಾದ ನಡೆಸಿ ಅವರು ಕೆಲವು ಸೂಚನೆ ನೀಡಿದರು.

ಈಗ 551 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. 123 ಗ್ರಾಮಗಳಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ಅಗತ್ಯ ಸಂದರ್ಭದಲ್ಲಿ ನೀರು ಪಡೆಯಲು ಈಗಾಗಲೇ ಮೂರು ಸಾವಿರ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಲಾಗಿದೆ. 480 ಕೊಳವೆ ಬಾವಿಗಳನ್ನು ಖಾಸಗಿಯವರಿಂದ ಬಾಡಿಗೆ ಪಡೆದು ನೀರು ಒದಗಿಸಲಾಗುತ್ತಿದೆ ಎಂದು ಹೇಳಿದರು.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಕುರಿತು ಜಿಲ್ಲಾಧಿಕಾರಿಗಳ ಜತೆ ನಡೆಸಿದ ವಿಡಿಯೊ ಸಂವಾದದಲ್ಲಿ ಸಿದ್ದರಾಮಯ್ಯ ಹಾಗೂ ಕೃಷ್ಣಬೈರೇಗೌಡ ಸಮಾಲೋಚನೆಯಲ್ಲಿ ತೊಡಗಿದ್ದರು. ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ್ ಪಾಟೀಲ, ಡಿ. ಸುಧಾಕರ್ ಪಾಲ್ಗೊಂಡಿದ್ದರು

ಪ್ರಮುಖ ಸೂಚನೆಗಳು

- ಕುಡಿಯುವ ನೀರಿನ ನಿರ್ವಹಣೆಗೆ ಹಣಕಾಸಿನ ಕೊರತೆ ಇಲ್ಲ. ಪಂಚಾಯತ್ ರಾಜ್ ಇಲಾಖೆಗೆ ₹60 ಕೋಟಿ ಈಗಾಗಲೇ ಬಿಡುಗಡೆ ಮಾಡಲಾಗಿದೆ.
- ಜಿಲ್ಲೆಗಳಲ್ಲಿ ತುರ್ತು ಕುಡಿಯುವ ನೀರಿನ ಪೂರೈಕೆಗೆ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆ ರೂಪಿಸಿ, ಕಾರ್ಯಪಡೆಯಿಂದ ಅನುಮೋದನೆ ಪಡೆದುಕೊಂಡು ಜಾರಿಗೊಳಿಸಬೇಕು.
- ಪ್ರತಿ ವರ್ಷ ಕುಡಿಯುವ ನೀರಿನ ತೊಂದರೆ ಎದುರಿಸುತ್ತಿರುವ ಗ್ರಾಮಗಳಲ್ಲಿ ಸಮಸ್ಯೆಯನ್ನು ಶಾಶ್ವತವಾಗಿ ನೀಗಿಸಲು ಯೋಜನೆ ರೂಪಿಸಬೇಕು.
- ಅಗತ್ಯವಿದ್ದರಷ್ಟೇ ಕೊಳವೆ ಬಾವಿ ಕೊರೆಸಬೇಕು. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಕೊಳವೆ ಬಾವಿ ಕೊರೆಸಿ ಅನಗತ್ಯ ವೆಚ್ಚ ಮಾಡಬಾರದು.
- ರಾಜ್ಯದಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಮುಂಗಾರು ಪೂರ್ವದಲ್ಲಿ ವಾಡಿಕೆಗಿಂತ ಶೇ 55 ರಷ್ಟು ಹೆಚ್ಚು ಮಳೆಯಾಗಿದೆ. ವಾಡಿಕೆಗಿಂತ ಯಾವುದೇ ಜಿಲ್ಲೆಯಲ್ಲಿ ವಾಡಿಕೆಗಿಂತ ಕಡಿಮೆ ಮಳೆ ದಾಖಲಾಗಿಲ್ಲ
- 27 ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದೆ. ಎಲ್ಲಾ ಜಲಾಶಯಗಳಲ್ಲಿ ಶೇ 50 ರಿಂದ ಶೇ 60 ರಷ್ಟು ಹೆಚ್ಚಿನ ನೀರಿನ ಸಂಗ್ರಹವಿದೆ.

ಸುದ್ದಿ 2 ನಿಮಿಷ

ಸಿ.ಎಂ. ವಿರುದ್ಧ ಪ್ರಚೋದನಕಾರಿ ಹೇಳಿಕೆ: ಗೃಹರಕ್ಷಕ ಬಂಧನ

ಉಡುಪಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಇನ್‌ಸ್ಟಾಗ್ರಾಂನಲ್ಲಿ ಪ್ರಚೋದನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಗೃಹರಕ್ಷಕ ದಳದ ಬೆಂಗಳೂರು ಕಚೇರಿಯ ಉದ್ಯೋಗಿ ಸಂಪತ್ ಸಾಲಿಯಾನ್ ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

‘ಸಿ.ಎಂ. ಸಿದ್ದರಾಮಯ್ಯರನ್ನು ಕೊಂದರೆ ಹಿಂದೂಗಳಿಗೆ ನೆಮ್ಮದಿ’ ಎಂದು ಈತ ಮೇ 2ರಂದು ಇನ್‌ಸ್ಟಾಗ್ರಾಂನಲ್ಲಿ ಸಂಪು ಎಸ್. ಸಾಲಿನ್ ಎಂಬ ಖಾತೆಯಲ್ಲಿ ಪೋಸ್ಟ್ ಮಾಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ದ್ವೇಷ ಭಾವನೆ ಹರಡುವ ಉದ್ದೇಶದಿಂದ ಸಾಮಾಜಿಕ ಮಾಧ್ಯಮದಲ್ಲಿ ಪ್ರಚೋದನಕಾರಿ ಪೋಸ್ಟ್ ಮಾಡಿರುವ ಕಾರಣಕ್ಕೆ ಈತನನ್ನು ಬಂಧಿಸಲಾಗಿದೆ ಎಂದೂ ಹೇಳಿದ್ದಾರೆ.

ಕುಕ್ಕುಂದೂರಿನ ಸೂರಜ್ ಎಂಬುವವರು ನೀಡಿರುವ ದೂರಿನ ಆಧಾರದಲ್ಲಿ ಸಂಪತ್ ವಿರುದ್ಧ ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯವು ಆತನಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದೆ.

‘ಅಭಿವೃದ್ಧಿ ಜತೆಗೆ ಪ್ರಕೃತಿಯ ಪೋಷಣೆಯೂ ತುರ್ತು ಅಗತ್ಯ’



ಕಾರವಾರ/ಶಿರಸಿ: ‘ಪರಿಸರ ನಾಶ ಮಾಡಿ ಅಭಿವೃದ್ಧಿ ಚಟುವಟಿಕೆ ನಡೆಸುವ ಬದಲು ಪ್ರಕೃತಿಯನ್ನು ಪೋಷಿಸಿ ಉಳಿಸುವುದು ತುರ್ತು ಅಗತ್ಯ’ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಪ್ರತಿಪಾದಿಸಿದರು.

ಶಿರಸಿಯ ಅರಣ್ಯ ಕಾಲೇಜು ಆವರಣದಲ್ಲಿ ಸೋಮವಾರ ‘ದೇಶ ಕಟ್ಟುವಿಕೆಯಲ್ಲಿ ಅರಣ್ಯ ವಿಜ್ಞಾನದ ಪಾತ್ರ’ ವಿಷಯದ ಕುರಿತಾಗಿ ಅರಣ್ಯ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಯದ ಅಭಾವದಿಂದ ಸಂವಾದ ಬದಲು ಉಪ ರಾಷ್ಟ್ರಪತಿ ಅವರೇ ಮಾತನಾಡಿದರು. ಆದರೆ, ವಿದ್ಯಾರ್ಥಿಗಳನ್ನು ಸಂಸತ್ ಭವನಕ್ಕೆ ಕರೆತರುವಂತೆ ವೇದಿಕೆಯಲ್ಲಿದ್ದ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ಪಿ.ಎಲ್.ಪಾಟೀಲ ಅವರಿಗೆ ಸೂಚಿಸಿದರು. ಅಲ್ಲಿಯೇ ಸಂವಾದ ನಡೆಸುವ ಭರವಸೆಯನ್ನೂ ನೀಡಿದರು.

ಇದೇ ಸಂದರ್ಭದಲ್ಲಿ ಜಗದೀಪ್ ಧನಕರ್, ಅವರ ಪತ್ನಿ ಸುದೇಶ ಧನಕರ್ ಮತ್ತು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ತಮ್ಮ ತಾಯಂದಿರ ಹೆಸರಿನಲ್ಲಿ ನೆಟ್ಟ ಸಸಿಗಳಿಗೆ ನೀರೆರೆದರು.

ಬಳಿಕ ಉಪರಾಷ್ಟ್ರಪತಿಯವರು ಸಿದ್ದಾಪುರ ಪಟ್ಟಣದಲ್ಲಿರುವ ತಮ್ಮ ಆಪ್ತ ಕಾರ್ಯದರ್ಶಿ, ಹಿರಿಯ ಐಎಫ್‌ಎಸ್ ಅಧಿಕಾರಿ ರಾಜೇಶ ನಾಯ್ಕ ಅವರ ಮನೆಗೆ ತೆರಳಿದರು. ತಾಯಿಯನ್ನು ಕಳೆದುಕೊಂಡ ರಾಜೇಶ ನಾಯ್ಕ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಚಿಕ್ಕಮಗಳೂರು ಬಂದ್

ಚಿಕ್ಕಮಗಳೂರಿನಲ್ಲಿ ಪ್ರತಿಭಟನೆ ನಡೆಸಲು ಮುಂದಾದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಪಹಲ್ಗಾಮ್‌ನಲ್ಲಿ ಉಗ್ರರ ದಾಳಿ ಮತ್ತು ಮಂಗಳೂರಿನ ಹಿಂದುತ್ವಾದಿ ಸಂಘಟನೆ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ನೀಡಿದ್ದ ಚಿಕ್ಕಮಗಳೂರು ಬಂದ್ ಕರೆಗೆ ಜಿಲ್ಲೆಯ ಮಲೆನಾಡು ಭಾಗದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾದರೆ, ಬಯಲು ಸೀಮೆಯಲ್ಲಿ ನೀರಸ ಪ್ರತಿಕ್ರಿಯೆ ಕಂಡು ಬಂತು.

ಚಿಕ್ಕಮಗಳೂರು ನಗರ, ಮೂಡಿಗೆರೆ, ಕೊಟ್ಟಿಗೆಹಾರ, ಕೊಪ್ಪ, ಶೃಂಗೇರಿ, ಕಳಸ, ಬಾಳೆಹೊನ್ನೂರು, ಎನ್.ಆರ್. ಪುರದಲ್ಲಿ ಅಂಗಡಿಗಳು ಸೋಮವಾರ ಮಧ್ಯಾಹ್ನದ ತನಕ ಮುಚ್ಚಿದ್ದವು. ಬಸ್, ಆಟೊರಿಕ್ಷಾ ಸೇರಿ ವಾಹನ ಸಂಚಾರ ಎಲ್ಲೆಡೆ ಸಹಜ ಸ್ಥಿತಿಯಲ್ಲಿತ್ತು. ಸರ್ಕಾರಿ ಕಚೇರಿಗಳು, ಕಾಲೇಜುಗಳು ಎಂದಿನಂತೆ ತೆರೆದಿದ್ದವು. ಕಡೂರು, ಅಜ್ಜಂಪುರ, ತರೀಕೆರೆಯಲ್ಲಿ ಬಂದ್‌ಗೆ ಬೆಂಬಲ ದೊರೆಯಲಿಲ್ಲ. ಅಂಗಡಿಗಳು ಎಂದಿನಂತೆ ತೆರೆದಿದ್ದವು.

ಚಿಕ್ಕಮಗಳೂರಿನಲ್ಲಿ ಪ್ರತಿಭಟನೆ ನಡೆಸಲು ಮುಂದಾದ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಪೊಲೀಸರ ನೇರ ಕೈವಾಡ: ಕೋಟ್ಯಾನ್

ಸುಹಾಸ್ ಹತ್ಯೆ: ಸಮಗ್ರ ತನಿಖೆಗೆ ಎನ್‌ಐಎಗೆ ಹಸ್ತಾಂತರಿಸಲು ಸರ್ಕಾರಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಪೊಲೀಸರು ನೇರವಾಗಿ ಭಾಗಿಯಾಗಿದ್ದಾರೆ. ಸಮಗ್ರ ತನಿಖೆಗಾಗಿ ಈ ಪ್ರಕರಣವನ್ನು ಎನ್‌ಐಎಗೆ ಹಸ್ತಾಂತರಿಸಬೇಕು’ ಎಂದು ಮೂಡುಬಿದಿರೆ ಶಾಸಕ ಉಮಾನಾಥ ಕೋಟ್ಯಾನ್ ಆರೋಪಿಸಿದರು.

ಉಮಾನಾಥ ಕೋಟ್ಯಾನ್

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸುಹಾಸ್ ಹತ್ಯೆ ನಡೆಯುವ ವೇಳೆ ಆರೋಪಿಗಳಿಗೆ ರಕ್ಷಣೆ ಕೊಡುವ ರೀತಿಯಲ್ಲಿ 25 ಜನರು ಸುತ್ತ ಕೋಟೆ ನಿರ್ಮಿಸಿದ್ದರು. ಸ್ಥಳೀಯ ಕೆಲವರ ಸಹಕಾರದಲ್ಲಿ ಈ ಹತ್ಯೆ ನಡೆದಿದೆ. ಹತ್ಯೆಗೂ ಮುನ್ನ ಪೊಲೀಸರು ಮತ್ತು ಆರೋಪಿಗಳ ನಡುವೆ ಒಡಂಬಡಿಕೆ ನಡೆದಿರುವ ಸಾಧ್ಯತೆ ಇದೆ. ಹೀಗಾಗಿ, ಪೊಲೀಸ್ ವಾಹನ ಸ್ಥಳಕ್ಕೆ ಬಂದರೂ, ಸುಹಾಸ್ ರಕ್ಷಣೆ ಮಾಡಿಲ್ಲ. ಸ್ಥಳೀಯರು ಆತನನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ’ ಎಂದರು.

‘ಸುಹಾಸ್ ಆತ್ಮರಕ್ಷಣೆಗಾಗಿ ವಾಹನದಲ್ಲಿ ಇಟ್ಟುಕೊಂಡಿದ್ದ ಆಯುಧವನ್ನು ಪೊಲೀಸರು ಒತ್ತಾಯದಿಂದ ಖಾಲಿ ಮಾಡಿಸಿದ್ದರು. ಪೊಲೀಸರ ಸಹಕಾರದಲ್ಲಿ ಈ ಕೊಲೆ ನಡೆದಿದೆ. ಆರೋಪಿಗಳೇ ಪೊಲೀಸರಿಗೆ ಶರಣಾಗಿದ್ದಾರೆ. ಬಂಧನವಾದ ಬಳಿಕ ಪೊಲೀಸರು ಆರೋಪಿಗಳ ಮೈಮುಟ್ಟಿಲ್ಲ. ಸುಹಾಸ್ ಹತ್ಯೆಗೆ ಫಾಝಿಲ್ ಸಹೋದರ ₹5 ಲಕ್ಷ ನೀಡಿದ್ದ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ. ಆದರೆ, ದುಬೈನಿಂದ ಇದಕ್ಕೆ ₹50 ಲಕ್ಷ ಹಣ ಸಂದಾಯವಾಗಿದೆ’ ಎಂಬ ಮಾಹಿತಿ ಇದೆ ಎಂದರು.

ಬಜಪೆ, ಸುರತ್ಕಲ್, ಪಣಂಬೂರು ಪೊಲೀಸ್ ಠಾಣೆಯ ಕೆಲ ಪೊಲೀಸರ ಮೊಬೈಲ್ ಫೋನ್ ಕರೆಗಳನ್ನು ಪರಿಶೀಲಿಸಿದರೆ ಎಲ್ಲ ವಿಷಯ ಬಹಿರಂಗವಾಗಲಿದೆ ಎಂದು ಹೇಳಿದರು.

‘ಬಜಪೆ ಸಮೀಪದ ಫ್ಲ್ಯಾಟ್‌ವೊಂದರಲ್ಲಿ ಹತ್ಯೆ ಪ್ರಕರಣದ ಆರೋಪಿಗಳು ವಾಸಿಸುತ್ತಿದ್ದಾರೆ. ಪ್ರಶಾಂತ್, ಸುಖಾನಂದ ಶೆಟ್ಟಿ ಹತ್ಯೆ ಆರೋಪಿಗಳು ಇದೇ ಫ್ಲ್ಯಾಟ್‌ನಲ್ಲಿ ಇದ್ದರು. ಸುಹಾಸ್ ಕೊಲೆ ಆರೋಪಿಗಳು ಕೂಡ ಇದೇ ಫ್ಲ್ಯಾಟ್‌ನಿಂದ ತೆರಳಿದ್ದಾರೆ ಎಂಬ ಮಾಹಿತಿ ಇದೆ. ಪೊಲೀಸರು, ಯಾಕೆ ಈ ಫ್ಲ್ಯಾಟ್ ಪರಿಶೀಲನೆ ಮಾಡುತ್ತಿಲ್ಲ’ ಎಂದರು.

ಎಸ್‌ಡಿಪಿಐ ಮುಖಂಡಗೆ ಜೀವ ಬೆದರಿಕೆ: ಸಾಮಾಜಿಕ ಮಾಧ್ಯಮಗಳ ಮೂಲಕ ತಮಗೆ ಜೀವ ಬೆದರಿಕೆ ಒಡ್ಡಲಾಗಿದೆ ಎಂದು ಎಸ್‌ಡಿಪಿಐ ರಾಜ್ಯ ಘಟಕದ ಕಾರ್ಯದರ್ಶಿ ರಿಯಾಜ್ ಕಡಂಬು ದೂರು ನೀಡಿದ್ದು ನಗರದ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸರ್ಕಾರದ ವಿರುದ್ಧ ಹಕ್ಕುಚ್ಯುತಿ: (ಚಿತ್ರದುರ್ಗ ವರದಿ) ರಾಜ್ಯ ಸರ್ಕಾರ 16,000 ರೌಡಿಶೀಟರ್‌ಗಳ ಪಟ್ಟಿಯನ್ನು ಹಿಂದಕ್ಕೆ ಪಡೆದಿದೆ. ರಾಜ್ಯದಲ್ಲಿ ಗಲಭೆ, ಘರ್ಷಣೆ, ಕೊಲೆಗಳು ಹೆಚ್ಚುತ್ತಿರುವುದಕ್ಕೆ ಇದೇ ಕಾರಣ. ರೌಡಿಶೀಟರ್ ಪಟ್ಟಿಯಿಂದ ಮುಕ್ತರಾದವರೇ ಈ ಘಟನೆಗಳಲ್ಲಿ ನೇರವಾಗಿ ಭಾಗಿಯಾಗುತ್ತಿದ್ದಾರೆ' ಎಂದು ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್ ಆರೋಪಿಸಿದರು.

‘ರೌಡಿ ಶೀಟರ್ ಪಟ್ಟಿ ಹಿಂದಕ್ಕೆ ಪಡೆದಿದ್ದರ ಕುರಿತು ಜಿಲ್ಲಾವಾರು ಮಾಹಿತಿ ನೀಡುವಂತೆ ವಿಧಾನ ಮಂಡಲದ ಅಧಿವೇಶನದಲ್ಲಿ ಪ್ರಶ್ನೆ ಕೇಳಿದ್ದೆ. ಸಿ.ಡಿ. ಮೂಲಕ ಮಾಹಿತಿ ಒದಗಿಸಲಾಗಿದೆ ಎಂದು ಗೃಹ ಸಚಿವರು ತಿಳಿಸಿದ್ದರು. ಇಲ್ಲಿಯವರೆಗೂ ಸಿ.ಡಿ. ನನ್ನ ಕೈಸೇರಿಲ್ಲ. ಹೀಗಾಗಿ ಸರ್ಕಾರದ ವಿರುದ್ಧ ಹಕ್ಕುಚ್ಯುತಿ ಮಂಡಿಸಲಾಗುವುದು ತಿಳಿಸಿದರು.

ವಿದೇಶಿ ಸಂಪರ್ಕದ ತನಿಖೆ: ಸಚಿವ

ಬೆಂಗಳೂರು: ‘ಸುಹಾಸ್ ಶೆಟ್ಟಿಯ ಹತ್ಯೆಯಲ್ಲಿ ವಿದೇಶಿ ಸಂಪರ್ಕ ಇರುವ ಬಗ್ಗೆ ತನಿಖೆಯ ಬಳಿಕವಷ್ಟೇ ಗೊತ್ತಾಗಬೇಕಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

‘ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆ ಕೊಡುತ್ತಿದ್ದಾರೆ. ತನಿಖೆ ಮುಗಿದ ನಂತರ ಸಂಪೂರ್ಣ ಮಾಹಿತಿ ಸಿಗುತ್ತದೆ. ಯಾರು ಸುಪಾರಿ ಕೊಟ್ಟಿದ್ದು, ಎಷ್ಟು ಕೊಟ್ಟರು ಎಲ್ಲವೂ ತನಿಖೆಯಿಂದ ಗೊತ್ತಾಗಬೇಕು’ ಎಂದು ಅವರು ಸುದ್ದಿಗಾರರಿಗೆ ಹೇಳಿದರು.

‘ಸುಹಾಸ್ ಶೆಟ್ಟಿ ಹೆಸರು ರೌಡಿಶೀಟರ್ ವಿಭಾಗದಲ್ಲಿ ದಾಖಲಾಗಿದೆ. ಒಮ್ಮೆ ಹೆಸರು ದಾಖಲಾದ ಮೇಲೆ ಇನ್ನೇನಂದು ಕರೆಯಬೇಕು? ಯಾವುದೇ ಪಕ್ಷದವರು ಆದರೂ ಅಷ್ಟೇ, ಒಮ್ಮೆ ರೌಡಿಶೀಟ್‌ಗೆ ಸೇರಿದ ನಂತರ ರೌಡಿಶೀಟರ್ ಎಂದೇ ಕರೆಯಬಹುದು’ ಎಂದರು.

> ಸುಹಾಸ್ ಶೆಟ್ಟಿ ಹತ್ಯೆಗಾಗಿ ₹50 ಲಕ್ಷ ಸಂಗ್ರಹಿಸಿರುವ ಮಾಹಿತಿ ಇದೆ. ಕೊಲೆಗೆ ನಿಷೇಧಿತ ಪಿಎಫ್‌ಐ ಸಂಘಟನೆಯಿಂದ ಹಣಕಾಸು ನೆರವು ದೊರೆತಿದೆ
>
> **ಕೆ.ಟಿ. ಉಲ್ಲಾಸ್,** ಹಿಂದೂ ಜಾಗರಣ ವೇದಿಕೆಯ ಪ್ರಾಂತ ಪ್ರಮುಖ

ಶರಣ್ ಪಂಪ್‌ವೆಲ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಖಂಡಿಸಿ ಮೇ 2ರಂದು ದಕ್ಷಿಣ ಕನ್ನಡ ಜಿಲ್ಲೆಯ ಬಂದ್‌ಗೆ ಕರೆ ನೀಡಿದ್ದ ವಿಶ್ವ ಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ವಿರುದ್ಧ ಮಂಗಳೂರು ಪೂರ್ವ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕುಂಟಿಕಾನ ಎ.ಜೆ. ಆಸ್ಪತ್ರೆಯ ಹೊರಾಂಗಣದಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡುವಾಗ ಶರಣ್ ಪಂಪ್‌ವೆಲ್, ಮೇ 2ರಂದು ಬೆಳಿಗ್ಗೆ 6ರಿಂದ ಸಂಜೆ 6 ಗಂಟೆವರೆಗೆ ದಕ್ಷಿಣ ಕನ್ನಡ ಜಿಲ್ಲೆ ಬಂದ್‌ಗೆ ಕರೆ ನೀಡಿದ್ದಲ್ಲದೆ, ಪ್ರಚೋದನಕಾರಿ ಹೇಳಿಕೆ ನೀಡಿದ್ದರು. ಅಂಗಡಿಗಳು ಮುಚ್ಚಿದ್ದರೂ, ವಾಹನ ಸಂಚಾರ ಎಂದಿನಂತೆ ಇತ್ತು. ಈ ವೇಳೆ ಶರಣ್ ಅನುಯಾಯಿಗಳು ನಗರದ ವಿವಿಧ ಪ್ರದೇಶಗಳಲ್ಲಿ ಬಸ್‌ಗೆ ಕಲ್ಲು ತೂರಾಟ ನಡೆಸಿ, ಪ್ರಕ್ಷುಬ್ಧ ವಾತಾವರಣ ನಿರ್ಮಾಣ ಮಾಡಿ, ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟ ಉಂಟು ಮಾಡಿದ್ದಾರೆ. ಇದರಿಂದ ಎರಡು ಕೋಮುಗಳ ನಡುವೆ ಸಂಘರ್ಷ, ಸಾರ್ವಜನಿಕ ಅಶಾಂತಿ ಉಂಟಾದ ಕಾರಣ ಪ್ರಕರಣ ದಾಖಲಿಸಲಾಗಿದೆ’ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಎರಡೂ ಕಡೆ ಭಯೋತ್ಪಾದಕರು: ಸಚಿವ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಮಂಗಳೂರಿನಲ್ಲಿ ಸುಹಾಸ್ ಶೆಟ್ಟಿ ಕೊಲೆ ಪ್ರಕರಣವು ಹಿಂದೂ ಮತ್ತು ಮುಸ್ಲಿಂ ಸಂಘಟನೆಗಳಲ್ಲಿ ಭಯೋತ್ಪಾದಕರು ಇರುವುದನ್ನು ತೋರಿಸಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಹೇಳಿದರು.

ನಗರದ ಹೊರವಲಯದಲ್ಲಿ ಸೋಮವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ದಕ್ಷಿಣ ಕನ್ನಡದ ಚರಿತ್ರೆ ಅವಲೋಕಿಸಿದರೆ, ಯಾರೇನೂ ಕಡಿಮೆ ಇಲ್ಲ ಎಂಬುದು ಗೊತ್ತಾಗುತ್ತದೆ. ಯಾರ ಕಡೆಯೇ ಇರಲಿ, ಗಲಾಟೆ ಮಾಡಿಸಿದವರಿಗೆ ಶಿಕ್ಷೆ ಆಗಲೇಬೇಕು’ ಎಂದರು.

‘ಒಂದು ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ. ಇವರೆಷ್ಟು ಸಂಖ್ಯೆಯಲ್ಲಿ ಕೊಲೆ ಮಾಡಿದ್ದಾರೋ, ಅವರೂ ಅಷ್ಟೇ ಸಂಖ್ಯೆಯಲ್ಲಿ ಕೊಲೆ ಮಾಡಿದ್ದಾರೆ. ಗಲಾಟೆ ಮತ್ತು ಕೊಲೆ ಮಾಡಿದವರು ಬಂಧಿತರಾಗುತ್ತಾರೆ. ಆದರೆ, ಅವರ ಹಿಂದಿರುವ ಶಕ್ತಿಗಳ ಬಂಧನ ಆಗುತ್ತಿಲ್ಲ. ನಾನು ಗೃಹಸಚಿವನಾಗಿದ್ದಾಗ ಗಲಭೆಯ ಹಿಂದೆ ಯಾರಿದ್ದಾರೋ ಅವರನ್ನು ಹುಡುಕಲು ಪ್ರಯತ್ನಿಸಿ, ಕಾನೂನು ಕ್ರಮ ಕೈಗೊಂಡಿದ್ದೆ. ಬಷೀರ್, ದೀಪಕ್ ರಾವ್ ಪ್ರಕರಣಗಳು ಇದಕ್ಕೆ ಸಾಕ್ಷಿ. ಐದಾರು ವರ್ಷ ಯಾವುದೇ ಕೊಲೆಗಳು ಆಗಿರಲಿಲ್ಲ. ಈಗ ಮತ್ತೆ ಆರಂಭವಾಗಿದೆ’ ಎಂದು ಅವರು ಹೇಳಿದರು.

‘ನಾನು ಗೃಹ ಸಚಿವನಾಗಿದ್ದಾಗ ‘ನಗ್ನ ಸತ್ಯ’ ಎಂಬ ಪುಸ್ತಕ ಬಿಡುಗಡೆ ಮಾಡಿದ್ದೆ. ಅದನ್ನು ಓದಿದರೆ ಗಲಭೆ ನಡೆಯುವ ಹಿನ್ನೆಲೆ, ಕಾರಣಗಳು ಗೊತ್ತಾಗುತ್ತವೆ’ ಎಂದರು.

ರೌಡಿ ಶೀಟರ್: ‘ಸುಹಾಸ್ ಶೆಟ್ಟಿಯನ್ನು ರೌಡಿ ಶೀಟರ್ ಮಾಡಿದ್ದು ಬಿಜೆಪಿ ಸರ್ಕಾರದ ಅವಧಿಯಲ್ಲಿ. ನಾವು ಯಾರಿಗೂ ಕುಮ್ಮಕ್ಕು ಕೊಡುವುದಿಲ್ಲ. ಇಲ್ಲಿ ನಮ್ಮ ಪಕ್ಷದವರು ಇದ್ದರೂ ಅವರನ್ನು ಒಳಗೆ ಹಾಕಿ ಎಂದೇ ಹೇಳುತ್ತೇವೆ. ಆರೋಪಿಗಳು ಜೈಲಿಗೆ ಹೋದಾಗ, ಕುಟುಂಬ ಸಂರಕ್ಷಣೆ ಮಾಡೋರು, ಕೋರ್ಟ್‌ಗೆ ಓಡಾಡುವವರು ಯಾರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಅವರು ಹೇಳಿದರು.

‘ಸಾಹಿತ್ಯ ಸೇವೆಗೆ ದಿನಭತ್ಯೆ, ವೇತನವೇಕೆ?’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಕನ್ನಡ ಸಾಹಿತ್ಯ ಪರಿಷತ್ತಿನ 108 ವರ್ಷಗಳ ಇತಿಹಾಸದಲ್ಲಿ ಯಾವ ಅಧ್ಯಕ್ಷರೂ ದಿನಭತ್ಯೆ, ವೇತನ ಪಡೆಯದೆ ಸಾಹಿತ್ಯ ಸೇವೆ ಮಾಡಿದ್ದಾರೆ. ಆದರೆ, ಮಹೇಶ ಜೋಶಿ ಅವರೇ ಸಿದ್ಧಪಡಿಸಿರುವ ಜಮಾ-ಖರ್ಚಿನ ವಿವರದಲ್ಲಿ ಲೋಪ-ದೋಷಗಳಿದ್ದು ಆರ್ಥಿಕ ಅಶಿಸ್ತು ಎದ್ದು ಕಾಣುತ್ತಿದೆ. ಸಾಹಿತ್ಯ ಸೇವೆಗೆ ದುಬಾರಿ ಎನಿಸುವಷ್ಟು ದಿನಭತ್ಯೆ, ವೇತನ ಪಡೆಯುವುದು ಸರಿಯೇ’ ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶಗೌಡ ಪ್ರಶ್ನಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಅಧ್ಯಕ್ಷರ ವೇತನ ₹4.20 ಲಕ್ಷ, ದಿನಭತ್ಯೆ ₹7.62 ಲಕ್ಷ, ಪ್ರಯಾಣ ವೆಚ್ಚ ₹6.70 ಲಕ್ಷ, ವಾಹನ ನಿರ್ವಹಣೆ ₹93 ಸಾವಿರ, ಮನೆಯ ದಿನಪತ್ರಿಕೆಗಳ ವೆಚ್ಚ- ₹33 ಸಾವಿರ, ದೂರವಾಣಿ, ಮೊಬೈಲ್ ಕರೆಗಳ ವೆಚ್ಚ-₹43 ಸಾವಿರ, ಕಾರು ಇಂಧನ ವೆಚ್ಚ-₹18 ಸಾವಿರ ಸೇರಿದಂತೆ ಒಟ್ಟು ₹22 ಲಕ್ಷ ಪಡೆದಿದ್ದಾರೆ’ ಎಂದು ಹೇಳಿದರು.

‘2023–24ನೇ ಸಾಲಿನ ವಾರ್ಷಿಕ ವರದಿಯಲ್ಲಿ ಮತ್ತು ಲೆಕ್ಕ ಪರಿಶೋಧಕರ ತನಿಖಾ ವರದಿಯಲ್ಲಿ ಸದಸ್ಯತ್ವ ನೋಂದಣಿ ಬಗ್ಗೆ, ಕಾಮಗಾರಿಗಳ ಬಗ್ಗೆ, ಕಟ್ಟಡ ನವೀಕರಣದ ಬಗ್ಗೆ ಇನ್ನಿತರ ಲೋಪದೋಷಗಳನ್ನು ಈಗಾಗಲೇ ಎತ್ತಿ ಹಿಡಿದಿದ್ದಾರೆ. ಇದಕ್ಕೆ ಅಧ್ಯಕ್ಷರು ಸರಿಯಾದ ಉತ್ತರ ನೀಡದೆ ಮುಂದೆ ಸರಿಪಡಿಸಿಕೊಳ್ಳುತ್ತೇನೆ ಎಂಬ ತಾತ್ಸಾರದ ಮಾತುಗಳನ್ನು ಆಡಿದ್ದಾರೆ. ಅವ್ಯವಹಾರ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ನಿಖರವಾದ ಮಾಹಿತಿ ಕೊಡಬೇಕು ಎಂದು ಹೋರಾಟ ಮಾಡುತ್ತೇವೆ’ ಎಂದು ಹೇಳಿದರು.

‘2022ನೇ ಸಾಲಿನ ಸಮಗ್ರ ಬೈಲಾ ತಿದ್ದುಪಡಿಗೆ ಸಂಬಂಧಿಸಿದ ಪ್ರಕರಣ ಬೆಂಗಳೂರು ಮಹಾನಗರದ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿದೆ. ಆ ಬೈಲಾ ತಿದ್ದುಪಡಿ ಪ್ರಕಾರವೇ ಅಧ್ಯಕ್ಷರು ವ್ಯವಹಾರ ನಡೆಸುತ್ತಿದ್ದಾರೆ. ನ್ಯಾಯಾಲಯದಲ್ಲಿ ತೀರ್ಪು ಬೈಲಾ ತಿದ್ದುಪಡಿಗೆ ವಿರುದ್ಧವಾಗಿ ಬಂದರೆ, ತಿದ್ದುಪಡಿ ಬೈಲಾ ಪ್ರಕಾರ ನಡೆಸಿಕೊಂಡು ಬಂದಿರುವ ಅಧ್ಯಕ್ಷರ ಕಾರ್ಯಗಳಿಗೆ ಯಾರು ಹೊಣೆ’ ಎಂದು ಪ್ರಶ್ನಿಸಿದರು.

ಮಳೆಯಲ್ಲೂ ಸಂಚಾರ... ಚಿಕ್ಕಮಗಳೂರಿನಲ್ಲಿ ಸೋಮವಾರ ಮಳೆಯಲ್ಲೇ, ಕಾರ್ಮಿಕರು ಕಾಫಿತೋಟಗಳಿಗೆ ವಾಹನದಲ್ಲಿ ತೆರಳಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಎಸ್‌ಎಸ್‌ಎಲ್‌ಸಿ ಪಾಸಾದ ವೃದ್ಧೆ

ತೀರ್ಥಹಳ್ಳಿ: ಇಲ್ಲಿನ ದೊಡ್ಡಮನೇಕೇರಿ ನಿವಾಸಿ ಪ್ರಮೀಳಾ ನಾರಾಯಣ ಭಟ್ ಅವರು ತಮ್ಮ 63ನೇ ವಯಸ್ಸಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದು ಉತ್ತೀರ್ಣರಾಗಿದ್ದಾರೆ.

ಪ್ರಮೀಳಾ ನಾರಾಯಣ ಭಟ್

‘ಶಿರಸಿ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪಡೆದು ಅನುತ್ತೀರ್ಣಳಾಗಿದ್ದೆ. ಬಡತನದ ಕಾರಣಕ್ಕೆ ಪುನಃ ಪರೀಕ್ಷೆ ಬರೆಯಲು ಸಾಧ್ಯವಾಗಿರಲಿಲ್ಲ. ನಂತರ ಮದುವೆ ಆಗಿದ್ದರಿಂದ ಶಿಕ್ಷಣದ ಕನಸುಗಳು ಅಲ್ಲಿಗೆ ಮುಗಿದಂಗಾಗಿದ್ದವು. ಕಳೆದ ವರ್ಷ ಮೊಮ್ಮಗನಿಗೆ ಮನೆ ಪಾಠಕ್ಕೆ ಕಳಿಸುವ ಸಂದರ್ಭ ತಮಾಷೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುತ್ತೇನೆ ಎಂದು ಹೇಳಿದ್ದೆ. ಮನೆ ಪಾಠ ಮಾಡುತ್ತಿದ್ದ ಮಾನಸಾ ಮತ್ತು ಶ್ರೀದತ್ತ ಅವರಿಬ್ಬರೂ ನೀವು ಪರೀಕ್ಷೆ ಬರೆಯಲೇಬೇಕು ಎಂದು ಒತ್ತಾಯಿಸಿದ್ದರಿಂದ ನಾನೀಗ ಈ ಸಾಧನೆ ಮಾಡುವಂತಾಯಿತು’ ಎಂದು ಪ್ರಮೀಳಾ ಹೇಳಿದರು.

‘ಪರೀಕ್ಷೆ ತಯಾರಿಗೆ ಬೇಕಾದ ಪುಸ್ತಕ, ನೋಟ್ಸ್, ಹಳೆಯ ಪ್ರಶ್ನೆ ಪತ್ರಿಕೆಗಳನ್ನು ಸಂಗ್ರಹಿಸಿ ಕೊಟ್ಟರು. 6 ತಿಂಗಳು ವ್ಯಾಸಂಗ ಮಾಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 44 ಅಂಕ ಪಡೆದಿದ್ದೇನೆ. ಇದೆಲ್ಲದಕ್ಕೂ ನನ್ನ ಪತಿ ಪ್ರಕಾಶ್ ಜಿ. ನಾಯಕ್ ಬೆಂಬಲ ಕೊಟ್ಟರು. 6 ತಿಂಗಳು ಅಡುಗೆ ಮಾಡುವಂತೆ ಒತ್ತಾಯಿಸುವ ಬದಲು ಹೋಟೆಲ್ ಊಟದ ಮೊರೆ ಹೋದರು. ನನಗೆ ಓದಲು ಇದು ಸಹಕಾರಿಯಾಯಿತು’ ಎಂದು ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಭಾರತ ಗೌರವ ಶಿಬಿರ ಜೂನ್ 14ರಿಂದ

ಬೆಂಗಳೂರು: ಸಾಕ್ಷಿ ಟ್ರಸ್ಟ್ ವತಿಯಿಂದ ಜೂನ್ 14ರಿಂದ 22ರವರೆಗೆ ಬೆಂಗಳೂರಿನ ಹೊರ ವಲಯದಲ್ಲಿರುವ ಅರೋವೇದ ತೋಟದಲ್ಲಿ (ಎಡಮಡು ಗ್ರಾಮ) ‘ಭಾರತ ಗೌರವ ಶಿಬಿರ’ ಆಯೋಜಿಸಲಾಗಿದೆ.

ಈ ಶಿಬಿರದಲ್ಲಿ 30ರಿಂದ 35 ಆಸಕ್ತರಿಗೆ ಮಾತ್ರ ಅವಕಾಶವಿದೆ. 20ರಿಂದ 50 ವರ್ಷದೊಳಗಿನ ವಯಸ್ಸಿನವರು ಭಾಗವಹಿಸಬಹುದು. ಪ್ರವೇಶ ಉಚಿತವಾಗಿದ್ದು, ಊಟ, ವಸತಿ ವ್ಯವಸ್ಥೆಯೂ ಇದೆ. ಶಿಬಿರದಲ್ಲಿ ಯೋಗ, ಪ್ರಾಣಾಯಾಮ, ಧ್ಯಾನ ಇರಲಿದೆ. ಆಸಕ್ತಿ ಇರುವವರು ಮೇ 25ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ www.vedah.com ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಶಿಬಿರದ ಸಂಯೋಜಕ ಬಿಂದುಮಾಧವ ವಿ.ಜೆ. ತಿಳಿಸಿದ್ದಾರೆ. ಮಾಹಿತಿಗೆ: 90088 33886

ಜನಾಕ್ರೋಶ ಯಾತ್ರೆ ಸಮಾರೋಪ 11ರಂದು

ಹುಬ್ಬಳ್ಳಿ: ‘ಪ್ರತಿ ವಸ್ತುವಿನ ಬೆಲೆ ಹಾಗೂ ತೆರಿಗೆ ಹೆಚ್ಚಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ರಾಜ್ಯವ್ಯಾಪಿ ಹಮ್ಮಿಕೊಳ್ಳಲಾಗಿರುವ ಜನಾಕ್ರೋಶ ಯಾತ್ರೆಯ ಸಮಾರೋಪ ಸಮಾರಂಭ ಹುಬ್ಬಳ್ಳಿಯಲ್ಲಿ ಮೇ 11ರಂದು ಸಂಜೆ 4ಕ್ಕೆ ನಡೆಯಲಿದೆ’ ಎಂದು ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಹೇಳಿದರು.

‘ಮೈಸೂರಿನಲ್ಲಿ ಆರಂಭಗೊಂಡ ಜನಾಕ್ರೋಶ ಯಾತ್ರೆಯನ್ನು ಉತ್ತರ ಕರ್ನಾಟಕದಲ್ಲಿ ಕೊನೆಗೊಳಿಸಲು ನಿರ್ಧರಿಸಲಾಗಿದೆ. ಹುಬ್ಬಳ್ಳಿಯಲ್ಲಿ ನಡೆಯುವ ಸಮಾರೋಪದಲ್ಲಿ ರಾಜ್ಯದ ಮೂವರು ಕೇಂದ್ರ ಸಚಿವರು, ವಿಧಾನ ಪರಿಷತ್ ವಿಪಕ್ಷ ನಾಯಕ ನಾರಾಯಣಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಶಾಸಕರು, ಸಂಸದರು ಭಾಗವಹಿಸುವರು’ ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಜನಿವಾರ ವಿವಾದ: ಇಬ್ಬರ ವಿಚಾರಣೆ

ಕಲಬುರಗಿ: ‘ನೀಟ್ ಪರೀಕ್ಷೆಯ ಕೇಂದ್ರದಲ್ಲಿ ಬ್ರಾಹ್ಮಣ ವಿದ್ಯಾರ್ಥಿಯ ಜನಿವಾರ ತೆಗೆಯಿಸಿ ಪರೀಕ್ಷೆಗೆ ಅನುಮತಿಸಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಬಳಿಕ ಠಾಣೆಯ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ’ ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ತಿಳಿಸಿದರು.

‘ವಿದ್ಯಾರ್ಥಿ ನೀಡಿದ ದೂರಿನ ಅನ್ವಯ ಶರಣಗೌಡ ಹಾಗೂ ಗಣೇಶ ವಿರುದ್ಧ ಪ್ರಕರಣ ದಾಖಲಾಗಿತ್ತು. ಈ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿದ್ದು, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ. ಪರೀಕ್ಷಾ ಕೇಂದ್ರದಲ್ಲಿ ಆಗಿರುವ ಲೋಪದ ಬಗ್ಗೆಯೂ ತನಿಖೆ ನಡೆಸಲಾಗುವುದು’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಬೆಳಿಗ್ಗೆ ಮಂಜು, ಸಂಜೆ ಮಳೆ

ಚಿಕ್ಕಮಗಳೂರು: ನಗರದಲ್ಲಿ ಸೋಮವಾರ ಸಂಜೆ ಒಂದು ಗಂಟೆಗೂ ಹೆಚ್ಚು ಕಾಲ ಭರ್ಜರಿ ಮಳೆ ಸುರಿಯಿತು.

ಗುಡುಗು, ಸಿಡಿಲಿನ ಆರ್ಭಟವೂ ಇತ್ತು. ಬೆಳಿಗ್ಗೆ 8 ಗಂಟೆ ತನಕ ಮಂಜು ಕವಿದ ವಾತಾವರಣ ಇತ್ತು. ಮಧ್ಯಾಹ್ನ ಉರಿ ಬಿಸಿಲು, ನಂತರ ಸಂಜೆ 4ರ ವೇಳೆಗೆ ಧಾರಾಕಾರ ಮಳೆ ಸುರಿದು ಇಳೆಯನ್ನು ತಂಪಾಗಿಸಿತು. ನಗರದ ಹಲವು ರಸ್ತೆಗಳಲ್ಲಿ ನೀರು ಉಕ್ಕಿ ಹರಿಯಿತು.

ವಿವಿಧೆಡೆ ಮಳೆ: (ಮೈಸೂರು ವರದಿ) ಮಡಿಕೇರಿ ಸೇರಿದಂತೆ, ಕೊಡಗು ಜಿಲ್ಲೆಯ ಕೆಲವೆಡೆ ಹಾಗೂ ಮೈಸೂರು ನಗರದಲ್ಲಿ ಮಳೆಯಾಗಿದೆ.

ಮಹತ್ವದ ಸಭೆ ನಡೆಸಿದ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ಅಸಹಕಾರದ ಬೆನ್ನಲ್ಲೇ ಸೋನು ನಿಗಮ್ ಕ್ಷಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳಕು ಹಾಕಿದ ಗಾಯಕ ಸೋನು ನಿಗಮ್‌ಗೆ ಅಸಹಕಾರ ತೋರಲು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಿರ್ಧರಿಸಿದ ಬೆನ್ನಲ್ಲೇ, ಇನ್‌ಸ್ಟಾಗ್ರಾಮ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು ‘ಕ್ಷಮಿಸು ಕರ್ನಾಟಕ. ನಿನ್ನ ಮೇಲಿನ ಪ್ರೀತಿ ನನ್ನ ಸ್ವಪ್ರತಿಷ್ಠೆಗಿಂತ ದೊಡ್ಡದು. ನಿನ್ನನ್ನು ಸದಾ ಪ್ರೀತಿಸುತ್ತೇನೆ’ ಎಂದು ಹೇಳಿದ್ದಾರೆ.

ಸೋನು ನಿಗಮ್

ಮಂಡಳಿಯ ಕಚೇರಿಯಲ್ಲಿ ಸೋಮವಾರ (ಮೇ 5) ಸಂಗೀತ ನಿರ್ದೇಶಕರು, ನಿರ್ಮಾಪಕರು, ನಿರ್ದೇಶಕರ ಸಂಘ ಹಾಗೂ ಮಂಡಳಿಯ ಇತರ ಅಂಗ ಸಂಸ್ಥೆಗಳ ಅಧ್ಯಕ್ಷರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಸೋನು ಅವರಿಗೆ ಅಸಹಕಾರ ತೋರಲು ತೀರ್ಮಾನಿಸಲಾಯಿತು ಎಂದು ಮಂಡಳಿ ಅಧ್ಯಕ್ಷ ನರಸಿಂಹಲು ಎಂ. ತಿಳಿಸಿದ್ದರು.

‘ಯಾರೂ ಸೋನು ನಿಗಮ್ ಅವರನ್ನು ಹಾಡಲು ಕರೆಯಬಾರದು, ಸಂಗೀತ ಸಂಜೆ ಸೇರಿದಂತೆ ಯಾವುದೇ ಸಂಗೀತ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಳ್ಳಬಾರದು. ಸಂಬಂಧಿಸಿದ ಎಲ್ಲರಿಗೂ ಮಂಡಳಿಯಿಂದ ಪತ್ರದ ಮೂಲಕ ಈ ಸೂಚನೆ ನೀಡಲಾಗುವುದು’ ಎಂದು ಹೇಳಿದ್ದರು. ಈ ಬೆಳವಣಿಗೆಗಳ ನಡುವೆಯೇ ಸೋನು ಅವರು ಕ್ಷಮೆ ಕೋರಿದ್ದಾರೆ.

ನರಸಿಂಹಲು ಎಂ.

‘ತಪ್ಪು ಯಾರದ್ದು ಹೇಳಿ?’: ಇದಕ್ಕೂ ಮುನ್ನ ಮಾಡಿದ್ದ ಒಂದು ಪೋಸ್ಟ್‌ನಲ್ಲಿ ಸೋನು ಅವರು, ‘ಕನ್ನಡ ಭಾಷೆಗೆ, ರಾಜ್ಯಕ್ಕೆ, ಸಂಸ್ಕೃತಿಗೆ, ಜನರಿಗೆ, ಸಂಗೀತ ಹಾಗೂ ಕನ್ನಡದ ಸಂಗೀತಗಾರರಿಗೆ ಅಪಾರ ಪ್ರೀತಿಯನ್ನು ಕೇವಲ ಕರ್ನಾಟಕದಲ್ಲಿರುವಾಗಷ್ಟೇ ಅಲ್ಲದೆ ಹೊರಗಡೆ ಇರುವಾಗಲೂ ನೀಡಿದ್ದೇನೆ. ನನ್ನ ಕನ್ನಡದ ಹಾಡುಗಳನ್ನು ಹಿಂದಿ ಸೇರಿದಂತೆ ಇತರೆ ಭಾಷೆಗಳಿಗಿಂತ ಹೆಚ್ಚಾಗಿ ಗೌರವಿಸಿದ್ದೇನೆ. ಇದಕ್ಕೆ ಸಾಕ್ಷಿಯಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ನೂರಾರು ವಿಡಿಯೊಗಳಿವೆ. ಕರ್ನಾಟಕಕ್ಕೆ ಕಾರ್ಯಕ್ರಮ ನೀಡಲು ಬರುವ ಸಂದರ್ಭದಲ್ಲಿ ಒಂದು ಗಂಟೆಗೂ ಅಧಿಕ ಸಮಯದ ಕನ್ನಡ ಹಾಡುಗಳನ್ನು ಸಿದ್ಧಪಡಿಸಿ ತರುತ್ತೇನೆ. ಆದರೆ ನಾನು ಯಾರಿಂದಲೂ ಅವಮಾನವನ್ನು ಸ್ವೀಕರಿಸುವಷ್ಟು ಚಿಕ್ಕ ಹುಡುಗನಲ್ಲ. ನಾನೀಗ ನನ್ನ ಜೀವನದ ದ್ವಿತೀಯಾರ್ಧದಲ್ಲಿದ್ದೇನೆ. ಕೆಲಸದ ವಿಚಾರದಲ್ಲಿ ಕನ್ನಡ ನನ್ನ ಎರಡನೇ ಭಾಷೆ. ಸಾವಿರಾರು ಜನರ ಎದುರು ನನ್ನ ಮಗನಷ್ಟು ಕಿರಿಯವನು ಭಾಷೆಯ ಹೆಸರಿನಲ್ಲಿ ಬೆದರಿಸಲು ಯತ್ನಿಸಿದಾಗ ಸ್ವಲ್ಪ ಕೋಪ ಬರುವುದು ಸಹಜ. ಅದು ಕೂಡ ಆ ಕಾರ್ಯಕ್ರಮದ ಮೊದಲ ಹಾಡು ಮುಗಿದ ಬೆನ್ನಲ್ಲೇ!’ ಎಂದು ಹೇಳಿದ್ದರು.

‘ಈಗಷ್ಟೇ ಕಾರ್ಯಕ್ರಮ ಪ್ರಾರಂಭವಾಗಿದೆ. ಒಂದು ಹಾಡು ಹಾಡಿದ್ದೇನಷ್ಟೇ. ನಿಮ್ಮನ್ನು ನಿರಾಸೆಗೊಳಿಸುವುದಿಲ್ಲ ಎಂದು ಬಹಳ ವಿನಮ್ರವಾಗಿ ಮತ್ತು ಪ್ರೀತಿಯಿಂದ ಕೇಳಿದ್ದೆ. ನಾನು ಯೋಜಿಸಿದ ರೀತಿಯಲ್ಲಿ ಸಂಗೀತ ಕಾರ್ಯಕ್ರಮ ಮುಂದುವರಿಸಲು ಅವಕಾಶ ನೀಡಬೇಕು ಎಂದು ಕೇಳಿದೆ. ಪ್ರತಿಯೊಬ್ಬ ಕಲಾವಿದನು ಹಾಡಿನ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುತ್ತಾನೆ. ಈ ಮೂಲಕ ಸಂಗೀತಗಾರರು ಹಾಗೂ ತಂತ್ರಜ್ಞರು ಸಮನ್ವಯ ಸಾಧಿಸಲು ಸಾಧ್ಯ. ಆದರೆ ಅವರು ಗದ್ದಲ ಸೃಷ್ಟಿಸುವುದಕ್ಕೇ ಪಣತೊಟ್ಟಂತಿದ್ದರು. ಜೊತೆಗೆ ನನ್ನನ್ನು ಬೆದರಿಸುತ್ತಿದ್ದರು. ಇಲ್ಲಿ ತಪ್ಪು ಯಾರದ್ದು ಎಂದು ನೀವೇ ಹೇಳಿ’ ಎಂದು ಸೋನು ನಿಗಮ್ ಪ್ರಶ್ನಿಸಿದ್ದರು.

> ಈ ಕ್ಷಣದಿಂದಲೇ ಸೋನು ನಿಗಮ್ ಅವರನ್ನು ಬ್ಯಾನ್ ಮಾಡಬೇಕು ಎಂದು ವಾಣಿಜ್ಯ ಮಂಡಳಿಗೆ ಕೇಳಿಕೊಂಡಿದ್ದೇವೆ. ಅವರಿಗೆ ಕನ್ನಡ ಚಿತ್ರರಂಗದಿಂದ ಅತಿಯಾದ ಅವಕಾಶ ನೀಡಿದ್ದೇವೆ
>
> **ಎನ್ನಾರ್ ಕೆ.ವಿಶ್ವನಾಥ್**, ನಿರ್ದೇಶಕರ ಸಂಘದ ಅಧ್ಯಕ್ಷ

ಸೋನುಗೆ ನೋಟಿಸ್ ರವಾನೆ

ಬೆಂಗಳೂರು : ಕನ್ನಡಿಗರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪದಡಿ ಬಾಲಿವುಡ್ ಗಾಯಕ ಸೋನು ನಿಗಮ್ ಅವರಿಗೆ ಆವಲಹಳ್ಳಿ ಠಾಣೆ ಪೊಲೀಸರು ಇ-ಮೇಲ್ ಹಾಗೂ ನೋಂದಾಯಿತ ಅಂಚೆ ಮೂಲಕ ನೋಟಿಸ್ ರವಾನಿಸಿದ್ದಾರೆ.

‘ಕನ್ನಡ ಹಾಡು ಹಾಡುವಂತೆ ಕೇಳಿರುವುದಕ್ಕೂ, ಅವರ ಪ್ರತಿಕ್ರಿಯೆಗೂ ಸಂಬಂಧವಿಲ್ಲ. ಮುಂದಿನ ವಾರ ವಿಚಾರಣೆಗೆ ಹಾಜರಾಗುವಂತೆ ಸೋನು ನಿಗಮ್ ಅವರಿಗೆ ನೋಟಿಸ್ ನೀಡಿದ್ದೇವೆ ಹಾಗೂ ಕಾರ್ಯಕ್ರಮ ಆಯೋಜಕರನ್ನೂ ಕರೆದು ಮಾಹಿತಿ ಪಡೆಯಲಾಗುವುದು’ ಎಂದು ಬೆಂಗಳೂರು ಗ್ರಾಮಾಂತರ ಎಸ್‌ಪಿ ಸಿ.ಕೆ. ಬಾಬಾ ತಿಳಿಸಿದ್ದಾರೆ.

ಬೆಂಗಳೂರಿನ ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ಏಪ್ರಿಲ್ 25 ಹಾಗೂ 26ರಂದು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸೋನು ನಿಗಮ್, ಕನ್ನಡದ ಕುರಿತು ಆಕ್ಷೇಪಾರ್ಹ ಮತ್ತು ಭಾವನೆಗಳನ್ನು ಕೆರಳಿಸುವಂತಹ ಹೇಳಿಕೆ ನೀಡಿದ್ದರು ಎಂದು ವರದಿಯಾಗಿತ್ತು. ಸೋನು ನಿಗಮ್ ಅವರ ಹೇಳಿಕೆಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ. ಧರ್ಮರಾಜ ದೂರು ಆಧರಿಸಿ, ಭಾರತೀಯ ನ್ಯಾಯ ಸಂಹಿತೆಯ ಅಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವಕ್ಫ್ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳು

ಗವಾಯಿ ಪೀಠದಿಂದ 15ಕ್ಕೆ ವಿಚಾರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಕ್ಫ್ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯನ್ನು ನಿಯೋಜಿತ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಹೊಸ ಪೀಠವು ಇದೇ 15ರಂದು ನಡೆಸಲಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿದೆ.

ಆದಾಗ್ಯೂ, ದೇಶದಲ್ಲಿ 39.21ಲಕ್ಷ ಎಕರೆ ವಕ್ಫ್ ಭೂಮಿ ಇದೆ ಎಂದು ಕೇಂದ್ರ ಸರ್ಕಾರ ನೀಡಿರುವ ಅಂಕಿ ಅಂಶಗಳನ್ನು ಪರಿಗಣಿಸಲಾಗುವುದು ಎಂದು ಪೀಠವು ತಿಳಿಸಿದೆ. ಈ ಅಂಕಿಅಂಶಕ್ಕೆ ಪ್ರತಿವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ಪೀಠವು ಸೋಮವಾರ ಪ್ರಕರಣದ ವಿಚಾರಣೆ ನಡೆಸಬೇಕಿತ್ತು.

ಸಂಜೀವ್ ಖನ್ನಾ ಅವರು ಇದೇ 13ರಂದು ನಿವೃತ್ತರಾಗಲಿದ್ದಾರೆ. ಗವಾಯಿ ಅವರು 14ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

ವಿಚಾರಣೆ ಆರಂಭವಾದ ಕೂಡಲೇ ಸಿಜೆಐ, 'ನಾವು ಪ್ರಮಾಣಪತ್ರ ಹಾಗೂ ಪ್ರತಿ ಪ್ರಮಾಣಪತ್ರಗಳನ್ನು ಪರಿಶೀಲಿಸಿದ್ದೇವೆ. ಆದರೆ, ಅವುಗಳಿಗೆ ಸ್ಪಷ್ಟೀಕರಣದ ಅಗತ್ಯ ಇದೆ. ಈ ಮಧ್ಯಂತರ ಹಂತದಲ್ಲಿ ಯಾವುದೇ ತೀರ್ಪು ಅಥವಾ ಆದೇಶ ನೀಡಲು ನಾನು ಬಯಸುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

'ನಾವು ಕೇಂದ್ರದ ಪ್ರತಿ ಪ್ರಮಾಣ ಪತ್ರವನ್ನು ಆಳವಾಗಿ ಪರಿಶೀಲಿಸಿಲ್ಲ. ಹೌದು, ನೀವು (ವಕ್ಫ್ ಆಸ್ತಿಗಳ) ನೋಂದಣಿಗೆ ಸಂಬಂಧಿಸಿದಂತೆ ಕೆಲವೊಂದು ವಿಷಯಗಳನ್ನು ಎತ್ತಿದ್ದೀರಿ ಹಾಗೂ ಕೆಲವು ವಿವಾದಾತ್ಮಕ ಅಂಕಿ-ಅಂಶಗಳನ್ನು ನೀಡಿದ್ದೀರಿ. ಅವುಗಳನ್ನು ಸ್ವಲ್ಪ ಪರಿಗಣಿಸುವ ಅಗತ್ಯ ಇದೆ' ಎಂದು ಸಿಜೆಐ ಹೇಳಿದರು.

'ಪ್ರತಿಯೊಂದು ವಾದಕ್ಕೂ ಉತ್ತರ ಇರುವುದರಿಂದ ನಾವು ನಿಮ್ಮ ಪೀಠದಲ್ಲೇ (ಸಿಜೆಐ) ಮುಂದುವರಿಸಲು ಇಷ್ಟಪಡುತ್ತಿದ್ದೆವು. ಆದರೆ, ಸಮಯವಿಲ್ಲದ ಕಾರಣ ನಾವು ನಿಮ್ಮನ್ನು ಮುಜುಗರಕ್ಕೀಡು ಮಾಡಲು ಸಾಧ್ಯವಿಲ್ಲ' ಎಂದು ಕೇಂದ್ರದ ಪರವಾಗಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

'ನಿಮ್ಮ ನಿವೃತ್ತಿಯ ಬಗ್ಗೆ ನೆನಪಿಸುವುದು ನೋವಿನ ಸಂಗತಿ' ಎಂದು ಅವರು ಹೇಳಿದರು.

'ಇಲ್ಲ ಇಲ್ಲ... ನಾನು ನಿವೃತ್ತಿಯನ್ನು ಎದುರು ನೋಡುತ್ತಿದ್ದೇನೆ' ಎಂದು ಸಿಜೆಐ ಪ್ರತಿಕ್ರಿಯಿಸಿದರು.

'ಕೇಂದ್ರದ ಪ್ರಮಾಣಪತ್ರ ಸಮಗ್ರವಾಗಿದೆ ಮತ್ತು ಹಿಂದಿನ ವಿಚಾರಣೆ ಸಂದರ್ಭದಲ್ಲಿ ವ್ಯಕ್ತಪಡಿಸಿದ ಕಳವಳಗಳಿಗೆ ಉತ್ತರ ನೀಡುವ ಪ್ರಯತ್ನ ಆಗಿದೆ' ಎಂದು ಸಿಜೆಐ ಹೇಳಿದರು.

ಏಪ್ರಿಲ್ 17ರ ವಿಚಾರಣೆಯ ಸಂದರ್ಭದಲ್ಲಿ ಕೇಂದ್ರ ಸರ್ಕಾರವು, 'ಕೇಂದ್ರ ವಕ್ಫ್ ಪರಿಷತ್ತು ಮತ್ತು ರಾಜ್ಯ ವಕ್ಫ್ ಮಂಡಳಿಗಳಿಗೆ ಮುಂದಿನ ವಿಚಾರಣೆಯವರೆಗೆ ಯಾವುದೇ ನೇಮಕಾತಿ ನಡೆಸುವುದಿಲ್ಲ ಮತ್ತು ನ್ಯಾಯಾಲಯಗಳು ವಕ್ಫ್ ಎಂದು ಘೋಷಿಸಿರುವ ಆಸ್ತಿಗಳನ್ನು ಡಿ-ನೋಟಿಫೈ ಮಾಡುವುದಿಲ್ಲ' ಭರವಸೆ ನೀಡಿತ್ತು.

ಏಪ್ರಿಲ್ 25ರಂದು ಸುಪ್ರೀಂ ಕೋರ್ಟ್‌ಗೆ 1,332 ಪುಟಗಳ ಪ್ರಾಥಮಿಕ ಪ್ರಮಾಣಪತ್ರ ಸಲ್ಲಿಸಿದ್ದ ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವಾಲಯ, 'ಕಾಯ್ದೆಯ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾಗಿರುವ ಮೇಲ್ಮನವಿಗಳನ್ನು ವಜಾಗೊಳಿಸಬೇಕು' ಎಂದು ಕೋರಿತ್ತು. 'ಕಾಯ್ದೆಯಲ್ಲಿನ ಕೆಲ ಅವಕಾಶಗಳ ಕುರಿತು ದುರುದ್ದೇಶದಿಂದ ಕೂಡಿದ ಸುಳ್ಳು ಸಂಕಥನಗಳನ್ನು ಈ ಮೇಲ್ಮನವಿಗಳು ಒಳಗೊಂಡಿವೆ. ಹೀಗಾಗಿ ಕಾಯ್ದೆಯಲ್ಲಿರುವ ಅವಕಾಶಗಳಿಗೆ ತಡೆ ನೀಡಬಾರದು' ಎಂದೂ ಕೇಂದ್ರ ಸರ್ಕಾರ ಪ್ರತಿಪಾದಿಸಿತ್ತು.

ಸಮಯ್ ರೈನಾ, ಇತರರಿಗೆ ನೋಟಿಸ್

ಸಮಯ್ ರೈನಾ

ನವದೆಹಲಿ (ಪಿಟಿಐ): 'ಇಂಡಿಯಾಸ್ ಗಾಟ್ ಲೇಟೆಂಟ್' ಕಾರ್ಯಕ್ರಮ ನಡೆಸುವ ಸಮಯ್ ರೈನಾ ಸೇರಿದಂತೆ ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರ ಮೇಲೆ ಪ್ರಭಾವ ಬೀರುವ ಐದು ಮಂದಿಗೆ ವಿಚಾರಣೆಗೆ ಹಾಜರಾಗುವಂತೆ ಸುಪ್ರೀಂ ಕೋರ್ಟ್ ಸೋಮವಾರ ಸೂಚಿಸಿದೆ.

ವಿರಳ ಕಾಯಿಲೆಯಾದ 'ಎಸ್‌ಎಂಎ'ಯಿಂದ (ಸ್ಪೈನಲ್ ಮಸ್ಕ್ಯುಲರ್ ಎಟ್ರೋಫಿ) ಬಳಲುತ್ತಿರುವವರನ್ನು ಈ ಐದು ಮಂದಿ ತಮ್ಮ ಕಾರ್ಯಕ್ರಮದಲ್ಲಿ ಗೇಲಿ ಮಾಡಿದ್ದಾರೆ ಎಂದು ಸರ್ಕಾರೇತರ ಸಂಘಟನೆ (ಎನ್‌ಜಿಒ) 'ಕ್ಯೂರ್ ಎಸ್‌ಎಂಎ ಫೌಂಡೇಷನ್ ಆಫ್ ಇಂಡಿಯಾ' ದೂರಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು, ಐದು ಮಂದಿಗೆ ನೋಟಿಸ್ ತಲುಪಿಸಬೇಕು ಎಂದು ಮುಂಬೈ ಪೊಲೀಸ್ ಆಯುಕ್ತರಿಗೆ ಸೂಚಿಸಿದೆ. ಈ ಐವರು ವಿಚಾರಣೆಗೆ ನ್ಯಾಯಾಲಯಕ್ಕೆ ಹಾಜರಾಗದೆ ಇದ್ದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ಪೀಠವು ಎಚ್ಚರಿಕೆ ನೀಡಿದೆ.

ಅಂಗವಿಕಲರು ಮತ್ತು ವಿರಳ ಕಾಯಿಲೆಗೆ ತುತ್ತಾದವರ ವಿಚಾರದಲ್ಲಿ ಸಾಮಾಜಿಕ ಜಾಲತಾಣಗಳ ವಸ್ತು-ವಿಷಯದ ಮೇಲೆ ನಿಯಂತ್ರಣ ವಿಧಿಸುವ ಸಂಬಂಧ ನಿರ್ದೇಶನ ನೀಡಬೇಕು ಎಂದು ಎನ್‌ಜಿಒ ಸಲ್ಲಿಸಿರುವ ಅರ್ಜಿಯಲ್ಲಿ ಮನವಿ ಮಾಡಲಾಗಿದೆ. ಈ ದಿಸೆಯಲ್ಲಿ ನೆರವು ಒದಗಿಸಬೇಕು ಎಂದು ಪೀಠವು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರನ್ನು ಕೋರಿದೆ.

ಸಾಮಾಜಿಕ ಜಾಲತಾಣಗಳ ಮೂಲಕ ಪ್ರಭಾವ ಬೀರುವ ಶಕ್ತಿ ಹೊಂದಿರುವವರು ಇಂತಹ ವ್ಯಕ್ತಿಗಳನ್ನು ಗೇಲಿ ಮಾಡುವುದು ನೈತಿಕ ಸ್ಥೈರ್ಯವನ್ನು ಕುಗ್ಗಿಸುವಂತಹ ಕೆಲಸ ಎಂದು ಪೀಠವು ಹೇಳಿದೆ. ಇಂತಹ ಪ್ರಕರಣ ಮುಂದೆ ಆಗದಂತೆ ಮಾಡಲು ಶಿಕ್ಷೆಯ ಅಗತ್ಯ ಇದೆ ಎಂದು ಹೇಳಿದೆ.

ತೃತೀಯ ಲಿಂಗಿಗಳಿಗೆ ಮೀಸಲು: ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ತೃತೀಯ ಲಿಂಗಿಗಳಿಗೆ ನೀಟ್-ಪಿಜಿ 2025ರ ಪರೀಕ್ಷೆಯಲ್ಲಿ ವಿವಿಧ ಮೀಸಲಾತಿ ವರ್ಗಗಳ ನಡುವೆ ಸಮತಳ ಮೀಸಲಾತಿಯ ಸೌಲಭ್ಯ ಕಲ್ಪಿಸಬೇಕು ಎಂಬ ಅರ್ಜಿಯ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೋಮವಾರ ಸೂಚಿಸಿದೆ. ಪರೀಕ್ಷೆಯು ಜೂನ್ 15ಕ್ಕೆ ನಿಗದಿಯಾಗಿದೆ. ಮೂವರು ತೃತೀಯ ಲಿಂಗಿಗಳು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ವಿಭಾಗೀಯ ಪೀಠವು ಒಪ್ಪಿದೆ.

'ಸುಪ್ರೀಂ'ಗೆ ವರದಿ ಸಲ್ಲಿಸಿದ ಸಮಿತಿ

ನ್ಯಾ. ಯಶವಂತ ವರ್ಮಾ ನಿವಾಸದಲ್ಲಿ ನೋಟು ಪತ್ತೆ ಪ್ರಕರಣ

ನ್ಯಾ. ಯಶವಂತ ವರ್ಮಾ

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ ವರ್ಮಾ ಅವರ ನಿವಾಸದಲ್ಲಿ ನೋಟಿನ ಕಂತೆಗಳು ಪತ್ತೆಯಾದ ಆರೋಪದ ಬಗ್ಗೆ ವಿಚಾರಣೆ ನಡೆಸಿರುವ ಮೂವರು ನ್ಯಾಯಮೂರ್ತಿಗಳ ಸಮಿತಿಯು, ವರದಿಯನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಅವರಿಗೆ ಸಲ್ಲಿಸಿದೆ.

ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಶೀಲ್ ನಾಗು, ಹಿಮಾಚಲ ಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಿ.ಎಸ್. ಸಂಧಾವಾಲಿಯಾ ಮತ್ತು ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿ ಅನು ಶಿವರಾಮನ್ ಅವರು ಈ ಸಮಿತಿಯಲ್ಲಿ ಇದ್ದಾರೆ. ಸಮಿತಿಯು ಮೇ 3ರಂದು ವರದಿಗೆ ಅಂತಿಮ ರೂಪ ನೀಡಿದೆ.

ನ್ಯಾಯಮೂರ್ತಿ ವರ್ಮಾ ಅವರ ದೆಹಲಿ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡ ನಂತರದಲ್ಲಿ, ನೋಟಿನ ಕಂತೆಗಳು ಅರ್ಧ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದವು ಎನ್ನಲಾಗಿದೆ. ಈ ಕುರಿತಾಗಿ ವಿಚಾರಣೆ ನಡೆಸಿರುವ ಸಮಿತಿಯು ತನ್ನ ವರದಿಯನ್ನು ಸಿಜೆಐ ಅವರಿಗೆ ಭಾನುವಾರ ಸಲ್ಲಿಸಿದೆ.

ನೋಟುಗಳು ಅರ್ಧ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಆರೋಪ ಬಗ್ಗೆ ದೆಹಲಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಅವರು ಪ್ರಾಥಮಿಕ ವಿಚಾರಣೆ ನಡೆಸಿದ್ದರು. ನಂತರದಲ್ಲಿ ನ್ಯಾಯಮೂರ್ತಿ ವರ್ಮಾ ಅವರಿಂದ ನ್ಯಾಯಾಂಗದ ಹೊಣೆಗಾರಿಕೆ ಹಿಂಪಡೆಯಲಾಯಿತು. ಅವರನ್ನು ದೆಹಲಿ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಯಿತು.

'ಅಂಗವೈಕಲ್ಯ: ಮನಃಸ್ಥಿತಿ ಬದಲಾಗಲಿ'

ನವದೆಹಲಿ (ಪಿಟಿಐ): ಕನಿಷ್ಠ ಶೇಕಡ 40ರಷ್ಟು ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು ವ್ಯವಸ್ಥೆಯಲ್ಲಿ ತಾರತಮ್ಯಕ್ಕೆ ಗುರಿಯಾಗುವುದನ್ನು ಇನ್ನಿಲ್ಲವಾಗಿಸಬೇಕು ಎಂದು ಹೇಳಿರುವ ಸುಪ್ರೀಂ ಕೋರ್ಟ್, 2024ರ ಎಂಬಿಬಿಎಸ್ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾದ ಅಂಗವಿಕಲ ವಿದ್ಯಾರ್ಥಿಯೊಬ್ಬನಿಗೆ ಸೀಟು ನೀಡಬೇಕು ಎಂದು ಹೇಳಿದೆ.

ಅಂಗವಿಕಲರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲು 'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ-2016'ರಲ್ಲಿ ಸೂಚಿಸಿರುವ ಹೊಂದಾಣಿಕೆಗಳು ಸೇವಾಕಾರ್ಯದಂತೆ ಅಲ್ಲ; ಅವು ಮೂಲಭೂತ ಹಕ್ಕುಗಳ ಭಾಗ ಎಂದು ನ್ಯಾಯಮೂರ್ತಿಗಳಾದ ವಿಕ್ರಮ ನಾಥ್ ಮತ್ತು ಸಂದೀಪ್ ಮೆಹ್ತಾ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಕಬೀರ್ ಪಹಾರಿಯಾ ಎನ್ನುವವರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ಪೀಠವು ಈ ಮಾತು ಹೇಳಿದೆ. ಕಬೀರ್ ಅವರ ಐದು ಬೆರಳುಗಳು ಅರ್ಧ ಮಾತ್ರವೇ ಬೆಳವಣಿಗೆ ಕಂಡಿವೆ, ಈ ಕಾರಣಕ್ಕಾಗಿ ಅವರಿಗೆ ಎಂಬಿಬಿಎಸ್ ಪ್ರವೇಶ ನಿರಾಕರಿಸಲಾಗಿತ್ತು.

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ರಚಿಸಿದ ವೈದ್ಯಕೀಯ ಮಂಡಳಿಯು ಕಬೀರ್ ಅವರ ಸಾಮರ್ಥ್ಯವನ್ನು ಹೊಸದಾಗಿ ಪರೀಕ್ಷಿಸಬೇಕು ಎಂದು ಏಪ್ರಿಲ್ 2ರಂದು ಕೋರ್ಟ್ ನಿರ್ದೇಶನ ನೀಡಿತ್ತು. ಕಬೀರ್ ಅವರು ತಮ್ಮ ಬೆರಳುಗಳನ್ನು ಬಳಸಿಕೊಂಡು ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸಬಲ್ಲರು ಎಂದು ಮಂಡಳಿಯು ಹೇಳಿತ್ತು.

ಕಬೀರ್ ಅವರಿಗೆ ಎಂಬಿಬಿಎಸ್ ಸೀಟು ನಿರಾಕರಿಸಿರುವುದು ಅಕ್ರಮ, ಅದು ಅವರಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅವರಿಗೆ ಸೀಟು ನಿರಾಕರಿಸಿದ ಕ್ರಮವು ವ್ಯವಸ್ಥಿತ ತಾರತಮ್ಯವನ್ನು, ಸಾಂಸ್ಥಿಕವಾಗಿರುವ ಪೂರ್ವಗ್ರಹಗಳನ್ನು ತೋರಿಸುತ್ತಿದೆ ಎಂದು ಕೂಡ ಕೋರ್ಟ್ ಹೇಳಿದೆ.

ಅಂಗವಿಕಲರು ಹಾಗೂ ಶೇಕಡ 40ರಷ್ಟು ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳನ್ನು ವ್ಯವಸ್ಥೆಯಿಂದ ಹೊರಗೆ ಇರಿಸುವ ಬದಲು, ಒಂದಿಷ್ಟು ಹೊಂದಾಣಿಕೆಗಳನ್ನು ಮಾಡಿಕೊಂಡು ಅವರಿಗೆ ಅವಕಾಶ ಕಲ್ಪಿಸಬೇಕು ಎಂದು ಸಂವಿಧಾನ ಹೇಳುತ್ತದೆ ಎಂಬುದಾಗಿ ಪೀಠವು ಮೇ 2ರಂದು ನೀಡಿರುವ ತೀರ್ಪಿನಲ್ಲಿ ಹೇಳಿದೆ. ತೀರ್ಪಿನ ಪ್ರತಿಯನ್ನು ಸೋಮವಾರ ಪ್ರಕಟಿಸಲಾಗಿದೆ.

ಸಂಭ್ರಮ 'ತ್ರಿಶ್ಶೂರ್ ಪೂರಂ'ಗೆ ಮುನ್ನಾದಿನವಾದ ಸೋಮವಾರ ತ್ರಿಶ್ಶೂರ್‌ನ ವಡಕ್ಕುನಾಥನ್ ದೇವಸ್ಥಾನದಲ್ಲಿ 'ಎರ್ನಾಕುಳಂ ಶಿವಕುಮಾರ್' ಆನೆಯ ಫೋಟೊ ತೆಗೆಯಲು ಜನರು ಮುಗಿಬಿದ್ದರು –ಪಿಟಿಐ ಚಿತ್ರ

ಕೇಂದ್ರದ ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಯೂಟ್ಯೂಬ್ ಚಾನೆಲ್ '4-ಪಿಎಂ' ನಿರ್ಬಂಧ ಹೇರಿದನ್ನು ತೆರವುಗೊಳಿಸುವಂತೆ ಸಲ್ಲಿಸಲಾದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಸಂಬಂಧ ಕೇಂದ್ರ ಸರ್ಕಾರದ ಅಭಿಪ್ರಾಯವನ್ನು ಕೇಳಿದೆ.

'ಪತ್ರಿಕೋದ್ಯಮ ಸ್ವಾತಂತ್ರ್ಯ ಹಾಗೂ ಸಾರ್ವಜನಿಕ ಮಾಹಿತಿ ಪಡೆಯುವುದರ ಮೇಲೆ ದಾಳಿ' ನಡೆಸಲಾಗಿದೆ ಎಂದು ಆರೋಪಿಸಿ '4-ಪಿಎಂ' ಯೂಟ್ಯೂಬ್ ಚಾನೆಲ್‌ನ ಸಂಪಾದಕ ಸಂಜಯ್ ಶರ್ಮಾ ಅವರು ಸುಪ್ರೀಂಕೋರ್ಟ್‌ನ ಮೆಟ್ಟಿಲೇರಿದ್ದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ಯೂಟ್ಯೂಬ್ ಚಾನೆಲ್ ಮೇಲೆ ನಿರ್ಬಂಧ ಹೇರುವ ಮುನ್ನ ಯಾವುದೇ ನೋಟಿಸ್ ನೀಡಿಲ್ಲ. ಮೇಲ್ನೋಟಕ್ಕೆ ಇದು ಸಂವಿಧಾನಬಾಹಿರ' ಎಂದು ನ್ಯಾಯಾಲಯದ ಗಮನ ಸೆಳೆದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಕೆ.ವಿ. ವಿಶ್ವನಾಥನ್ ನೇತೃತ್ವದ ನ್ಯಾಯಪೀಠವು, ಈ ಸಂಬಂಧ ಅಭಿಪ್ರಾಯ ಸಲ್ಲಿಸುವಂತೆ ಕೇಂದ್ರ ಸರ್ಕಾರಕ್ಕೆ ತಿಳಿಸಿ, ಅರ್ಜಿ ವಿಚಾರಣೆಯನ್ನು ಮುಂದಿನ ವಾರಕ್ಕೆ ಮುಂದೂಡಿತು.

ಪರ್ಯಾಯ ಕಾನೂನು ಹೋರಾಟಕ್ಕೆ ಅವಕಾಶ

ರಾಹುಲ್ ಪೌರತ್ವ: ಅರ್ಜಿ ವಿಲೇವಾರಿ

ಲಖನೌ (ಪಿಟಿಐ): ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಭಾರತೀಯ ಪೌರತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸೋಮವಾರ ವಿಲೇವಾರಿ ಮಾಡಿದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠವು, ಅರ್ಜಿದಾರರಿಗೆ ಪರ್ಯಾಯ ಕಾನೂನು ಹೋರಾಟ ನಡೆಸಲು ಅವಕಾಶ ನೀಡಿದೆ.

'ದೂರನ್ನು ಪರಿಹರಿಸಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹೀಗಾಗಿ ಈ ಅರ್ಜಿಯನ್ನು ಬಾಕಿ ಉಳಿಸಿಕೊಳ್ಳಲು ಯಾವುದೇ ಕಾರಣಗಳಿಲ್ಲ' ಎಂದು ನ್ಯಾಯಮೂರ್ತಿಗಳಾದ ಎ.ಆರ್ ಮಸೂದಿ ಮತ್ತು ರಾಜೀವ್ ಸಿಂಗ್ ಅವರ ಪೀಠ ಹೇಳಿದೆ.

'ರಾಹುಲ್ ಗಾಂಧಿ ಅವರು ಬ್ರಿಟನ್ ಪ್ರಜೆ ಎನ್ನುವುದನ್ನು ದೃಢೀಕರಿಸಲು ಅಗತ್ಯವಾದ ದಾಖಲೆಗಳು ಮತ್ತು ಬ್ರಿಟನ್ ಸರ್ಕಾರದ ಇ-ಮೇಲ್‌ಗಳು ಇವೆ. ಭಾರತದಲ್ಲಿ ಚುನಾವಣೆಗೆ ಸ್ಪರ್ಧಿಸಲು ಮತ್ತು ಲೋಕಸಭಾ ಸದಸ್ಯರಾಗಲು ರಾಹುಲ್ ಗಾಂಧಿ ಅರ್ಹರಲ್ಲ' ಎಂದು ಅರ್ಜಿದಾರ, ಕರ್ನಾಟಕದ ಬಿಜೆಪಿ ಕಾರ್ಯಕರ್ತ ಎಸ್.ವಿಘ್ನೇಶ್ ಶಿಶಿರ್ ಅವರು ಹೇಳಿದ್ದರು.

ರಾಹುಲ್ ಗಾಂಧಿಯವರ ಭಾರತೀಯ ಪೌರತ್ವದ ಬಗ್ಗೆ ಮಾಹಿತಿ ನೀಡುವಂತೆ ನಿರ್ದೇಶಿಸಿ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಮೇ 5ರವರೆಗೆ ಕಾಲಾವಕಾಶ ನೀಡಿತ್ತು. 'ರಾಹುಲ್ ಗಾಂಧಿಯವರು ದ್ವಿಪೌರತ್ವ ಹೊಂದಿದ್ದಾರೆ ಎಂದು ಆರೋಪಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಎರಡು ಬಾರಿ ದೂರು ನೀಡಿದ್ದೇನೆ. ಆದರೆ, ಕ್ರಮ ಜರುಗಿಸಿಲ್ಲ' ಎಂದು ಅರ್ಜಿದಾರರು ನ್ಯಾಯಾಲಯಕ್ಕೆ ತಿಳಿಸಿದ್ದರು.

ಗಲಭೆಗೆ ಪ್ರಚೋದಿಸುವವರು ಬಂಗಾಳದ ವೈರಿಗಳು: ಮಮತಾ

ಮಮತಾ ಬ್ಯಾನರ್ಜಿ

ಮುರ್ಶಿದಾಬಾದ್ (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕೋಮು ದ್ವೇಷಕ್ಕೆ ಪ್ರಚೋದನೆ ನೀಡುತ್ತಿದೆ ಮತ್ತು ದೇಶದ ಗಡಿಯನ್ನು ರಕ್ಷಣೆ ಮಾಡಲು ವಿಫಲವಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಆರೋಪಿಸಿದ್ದಾರೆ.

ಇತ್ತೀಚೆಗೆ ಮುರ್ಶಿದಾಬಾದ್‌ನಲ್ಲಿ ನಡೆದ ಹಿಂಸಾಚಾರದಿಂದ ಸಂಕಷ್ಟಕ್ಕೊಳಗಾದ ಕುಟುಂಬಗಳು ತಮ್ಮನ್ನು ಭೇಟಿಯಾಗದಂತೆ ಕೇಸರಿ ಪಾಳಯ ತಡೆದಿದೆ ಎಂದು ದೂರಿದರು.

ಕಳೆದ ತಿಂಗಳು ಹಿಂಸಾಚಾರ ಆರಂಭವಾದ ಬಳಿಕ ಇದೇ ಮೊದಲ ಬಾರಿಗೆ ಮುರ್ಶಿದಾಬಾದ್‌ಗೆ ಭೇಟಿ ನೀಡಿದ ಅವರು, 'ಹೊರಗಿನ ಕೆಲವರು ಮತ್ತು ಕೆಲವು ಧಾರ್ಮಿಕ ಮುಖಂಡರು ಹಿಂಸಾಚಾರಕ್ಕೆ ಪ್ರಚೋದಿಸುತ್ತಿದ್ದಾರೆ. ಅಲ್ಲದೆ, ಸಮುದಾಯಗಳ ಮಧ್ಯೆ ದ್ವೇಷ ಸೃಷ್ಟಿಸುತ್ತಿದ್ದಾರೆ. ಗಲಭೆಗೆ ಪ್ರಚೋದನೆ ನೀಡುವವರು ಪಶ್ಚಿಮ ಬಂಗಾಳದ ವೈರಿಗಳು' ಎಂದು ಪ್ರತಿಪಾದಿಸಿದರು.

'ಆರೋಪ ರಾಜಕೀಯ ಪ್ರೇರಿತ': ಇಲ್ಲಿನ ದಿಘಾ ಪಟ್ಟಣದಲ್ಲಿ ನಿರ್ಮಿಸಲಾದ ದೇವಸ್ಥಾನದ ಪ್ರತಿಮೆಗಳನ್ನು ಒಡಿಶಾದ ಪುರಿ ಜಗನ್ನಾಥ ದೇವಸ್ಥಾನದಿಂದ ಕಳ್ಳತನ ಮಾಡಿದ ಬೇವಿನ ಮರದಿಂದ ಕೆತ್ತಲಾಗಿದೆ ಎಂಬ ಆರೋಪವನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಲ್ಲಗಳೆದಿದ್ದಾರೆ.

ಪುರಿ ಜಗನ್ನಾಥ ದೇವಸ್ಥಾನದಲ್ಲಿ ಕಳ್ಳತನವಾಗಿದ್ದ ಬೇವಿನ ಮರವನ್ನು ನಮ್ಮ ರಾಜ್ಯದಲ್ಲಿ ದೇವಸ್ಥಾನದ ಮೂರ್ತಿ ಕೆತ್ತನೆಗೆ ಬಳಸಿಕೊಳ್ಳುವ ಅನಿವಾರ್ಯ ಸರ್ಕಾರಕ್ಕೆ ಇಲ್ಲ. ಈ ಆರೋಪ ರಾಜಕೀಯ ಪ್ರೇರಿತ ಎಂದರು.

ಪಾಕಿಸ್ತಾನದ ಪ್ರಜೆ ಬಂಧನ

ಗುರುದಾಸಪುರ (ಪಿಟಿಐ): ಗಡಿ ದಾಟಿ ಭಾರತದೊಳಕ್ಕೆ ಬಂದಿದ್ದ ಪಾಕಿಸ್ತಾನಿ ಪ್ರಜೆಯನ್ನು ಗಡಿ ಭದ್ರತಾ ಪಡೆ (ಬಿಎಸ್ಎಫ್) ಸೋಮವಾರ ಬಂಧಿಸಿದೆ.

ಸಹಾಪುರ ಬಳಿಯ ಗಡಿ ಔಟ್ ಪೋಸ್ಟ್‌ನಲ್ಲಿ ಮೇ 3ರಂದು ರಾತ್ರಿ ಕರ್ತವ್ಯದಲ್ಲಿದ್ದ ಬಿಎಸ್ಎಫ್ ಯೋಧರು, ಗಡಿ ಬೇಲಿಯಿಂದ ಸುಮಾರು 250 ಮೀ. ನಷ್ಟು ಒಳಭಾಗದಲ್ಲಿ ವ್ಯಕ್ತಿಯೊಬ್ಬನ ಅನುಮಾನಾಸ್ಪದ ಚಲನವಲನ ಗಮನಿಸಿದ್ದಾರೆ. ಪಾಕಿಸ್ತಾನಿ ಪ್ರಜೆ ಎಂದು ಗುರುತಿಸಲಾದ ಆ ವ್ಯಕ್ತಿ ಯೋಧರನ್ನು ಕಂಡಾಗ ಸಮೀಪದ ಪೊದೆಯಲ್ಲಿ ಅಡಗಿ ಕುಳಿತಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಷಿಪ್ರ ಕಾರ್ಯಾಚರಣೆ ಪಡೆಯ ಜೊತೆಗೆ ಬಿಎಸ್ಎಫ್ ಸಿಬ್ಬಂದಿ ಆ ಪ್ರದೇಶವನ್ನು ಸುತ್ತುವರಿದು ತಡರಾತ್ರಿಯಲ್ಲಿ ಆತನನ್ನು ಬಂಧಿಸುವಲ್ಲಿ ಯಶಸ್ವಿಯಾದರು ಎಂದಿದ್ದಾರೆ.

ಬಂಧಿತ ಪಾಕ್ ಪ್ರಜೆಯನ್ನು ಗುಜ್ರಾನ್‌ವಾಲಾ ಗ್ರಾಮದ ನಿವಾಸಿ ಹಸ್ನೈನ್ ಎಂದು ಗುರುತಿಸಲಾಗಿದೆ. ಅಧಿಕಾರಿಗಳು ಆತನನ್ನು ವಿಚಾರಣೆಗೆ ಒಳಪಡಿಸಿದ್ದು, ಪಾಕ್ ಕರೆನ್ಸಿ ಮತ್ತು ಗುರುತಿನ ಚೀಟಿಯನ್ನು ವಶಪಡಿಸಿಕೊಂಡಿದ್ದಾರೆ.

ಕಾಶ್ಮೀರ ಶಾಂತ: ಸಂಕಥನಕ್ಕೆ ದಾಳಿ ಪೆಟ್ಟು

ಶಾಂತಿ ಸ್ಥಾಪನೆಗೆ ಇಲ್ಲ ನೇರ ಮಾರ್ಗ, ಅಡ್ಡಿಗಳೇ ಹೆಚ್ಚು: ರಾಜ್ಯಶಾಸ್ತ್ರ ಪರಿಣತ

• ಝುಲ್ಫೀಕರ್ ಮಜೀದ್

ಮುಖ್ಯಾಂಶಗಳು

- ಶಾಂತಿ ಸ್ಥಾಪನೆಯ ಎಲ್ಲ ಯತ್ನಗಳ ಮೇಲೆ ಮಣ್ಣೆರಚಿದ ಪಹಲ್ಗಾಮ್ ದಾಳಿ
- ಭದ್ರತೆ ದೃಷ್ಟಿಯಿಂದ ಒಂದಿಷ್ಟು ಹೊಂದಾಣಿಕೆ ಆಗಬೇಕಿತ್ತು: ಪ್ರೊ. ಗುಲ್ ವಾನಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಯು ಬಹಳ ದೀರ್ಘಾವಧಿಯ ಪ್ರಕ್ರಿಯೆ ಆಗಬಹುದು ಎಂಬುದನ್ನು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ನಂತರದ ಆಡಳಿತ ಹಾಗೂ ಭದ್ರತಾ ವ್ಯವಸ್ಥೆಯನ್ನು ಈ ದಾಳಿಯು ಬದಲಾಯಿಸುವುದಿಲ್ಲ. ಆದರೆ, 2019ರ ಆಗಸ್ಟ್ ನಂತರದಲ್ಲಿ ಪರಿಸ್ಥಿತಿ ಶಾಂತವಾಗುತ್ತಿದೆ ಎಂದು ಕೇಂದ್ರ ಸರ್ಕಾರ ಕಟ್ಟಿದ್ದ ಸಂಕಥನವನ್ನು ದಾಳಿಯು ಸುಳ್ಳಾಗಿಸಿದೆ.

ಕಣಿವೆಯಲ್ಲಿ ಭಯೋತ್ಪಾದನೆಯನ್ನು ಪೋಷಿಸುವ ಹಾಗೂ ಪ್ರತ್ಯೇಕತಾ ವಾದವನ್ನು ಬೆಳೆಸುವ ವ್ಯವಸ್ಥೆಯು ವಿಶೇಷ ಸ್ಥಾನಮಾನ ಹಿಂಪಡೆದಿದ್ದರಿಂದಾಗಿ ಇನ್ನಿಲ್ಲವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಮತ್ತೆ ಮತ್ತೆ ಹೇಳಿದ್ದರು. ವಿಶೇಷ ಸ್ಥಾನಮಾನ ರದ್ದುಪಡಿಸಿದ ಪರಿಣಾಮವಾಗಿ ಅಲ್ಲಿಗೆ ಹೂಡಿಕೆ ಬರುತ್ತದೆ, ಶಾಂತಿ ನೆಲಸುತ್ತದೆ ಎಂದೂ ಅವರು ಹೇಳಿದ್ದರು.

ಒಂದಿಷ್ಟು ಪ್ರಗತಿ ಆಗಿರುವುದು ನಿಜ. ಕಾಶ್ಮೀರದ ನಗರ ಪ್ರದೇಶಗಳಲ್ಲಿ ಹಿಂದೊಮ್ಮೆ ಪ್ರತಿನಿತ್ಯ ವರದಿಯಾಗುತ್ತಿದ್ದ ಕಲ್ಲು ತೂರಾಟ, ಪ್ರತಿಭಟನೆಗಳು ಈಗ ಬಹುತೇಕ ಇಲ್ಲವಾಗಿವೆ. ಉಗ್ರರ ಸಂಘಟನೆಗಳಿಗೆ ಇಲ್ಲಿನವರು ಸೇರುವುದು ಗಣನೀಯವಾಗಿ ಕಡಿಮೆಯಾಗಿದೆ. ಗಡಿಯಾಚೆಯಿಂದ ನುಸುಳುವಿಕೆಯು ಕೂಡ ಕಡಿಮೆ ಆಗಿದೆ.

ನಿರಂತರವಾಗಿ ನಡೆದ ಭಯೋತ್ಪಾದನಾ ವಿರೋಧಿ ಕಾರ್ಯಾಚರಣೆಗಳ ಫಲವಾಗಿ ಉಗ್ರರ ಹಲವು ಜಾಲಗಳು ಧ್ವಂಸಗೊಂಡಿವೆ. ಹಿಂಸಾಚಾರ ಮತ್ತು ಬಂದ್‌ಗಳಿಂದಾಗಿ ಪೆಟ್ಟು ತಿಂದಿದ್ದ ಇಲ್ಲಿನ ಪ್ರವಾಸೋದ್ಯಮವು 2022, 2023, 2024 ಮತ್ತು ಈ ವರ್ಷದ ಆರಂಭದಲ್ಲಿ ದಾಖಲೆಯ ಮಟ್ಟ ತಲುಪಿತ್ತು.

ಕಣಿವೆ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿದ ನಂತರದಲ್ಲಿ 2024ರಲ್ಲಿ ಮೊದಲ ವಿಧಾನಸಭಾ ಚುನಾವಣೆ ನಡೆಯಿತು. ಅದು ಶಾಂತಿಯುತವಾಗಿ ಮುಕ್ತಾಯಗೊಂಡಿದ್ದುದನ್ನು ಐತಿಹಾಸಿಕ ಎಂದು ಬಣ್ಣಿಸಲಾಗಿದೆ. ಆದರೆ, ಈ ಎಲ್ಲ ಯಶಸ್ಸುಗಳ ಮೇಲೆ ಪಹಲ್ಗಾಮ್ ದಾಳಿಯು ಮಣ್ಣೆರಚುವ ಕೆಲಸ ಮಾಡಿದೆ.

ಬಹುಕಾಲದಿಂದ ಸುರಕ್ಷಿತ ಎಂಬ ಭಾವಿಸಿದ್ದ ಪ್ರದೇಶದಲ್ಲಿ, ಅಮರನಾಥ ಯಾತ್ರೆ ಆರಂಭವಾಗುವ ಕೆಲವು ವಾರಗಳ ಮೊದಲು ನಡೆದಿರುವ ಈ ದಾಳಿಯು ಗುಪ್ತಚರ ಮಾಹಿತಿ ಕಲೆ ಹಾಕುವಲ್ಲಿನ ಲೋಪಗಳನ್ನು, ಭದ್ರತಾ ಏಜೆನ್ಸಿಗಳ ನಡುವಿನ ಸಮನ್ವಯದಲ್ಲಿ ಕೊರತೆಗಳು ಇರುವುದನ್ನು ತೋರಿಸಿದೆ.

ಪೂಂಛ್ ಜಿಲ್ಲೆಯಲ್ಲಿ ನಿಯಂತ್ರಣ ರೇಖೆಯ ಬಳಿ ಬಂದೋಬಸ್ತ್ ಹೆಚ್ಚಿಸಲಾಗಿದೆ –ಪಿಟಿಐ ಚಿತ್ರ

ಇವೆಲ್ಲಕ್ಕಿಂತ ಹೆಚ್ಚಾಗಿ, ಕಾಶ್ಮೀರದಲ್ಲಿ ಶಾಂತಿಗೆ ಭಂಗ ಇಲ್ಲ ಎಂಬ ಭರವಸೆಗೆ ಪೆಟ್ಟು ಕೊಟ್ಟಿದೆ.

'ಯಶಸ್ಸುಗಳಿಗೆ ಅನುಗುಣವಾಗಿ ರಾಜಕೀಯವಾಗಿ ಹಾಗೂ ಭದ್ರತಾ ದೃಷ್ಟಿಯಿಂದ ಒಂದಿಷ್ಟು ಹೊಂದಾಣಿಕೆಗಳು ಆಗಬೇಕಿತ್ತು' ಎಂದು ಕಾಶ್ಮೀರ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮಾಜಿ ಮುಖ್ಯಸ್ಥ ಪ್ರೊ. ಗುಲ್ ವಾನಿ ಹೇಳುತ್ತಾರೆ. 'ಪ್ರಜಾತಂತ್ರ ಬೇರುಬಿಡಬೇಕು ಎಂದಾದರೆ ಜನರ ಪ್ರಾತಿನಿಧ್ಯದ ಸಂಸ್ಥೆಗಳಿಗೆ ನಿಜವಾದ ಅಧಿಕಾರ ಸಿಗಬೇಕು' ಎನ್ನುವುದು ಅವರ ವಿಶ್ಲೇಷಣೆ.

ಸ್ಥಿರತೆ ಮತ್ತು ಅವಕಾಶವನ್ನು ಕಾಶ್ಮೀರದ ಯುವಕರು ಬಹಳ ಬಯಸುತ್ತಿದ್ದಾರೆ. ಆದರೆ, ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಗೆ ಬಹಳ ನೇರವಾದ ಮಾರ್ಗ ಇಲ್ಲ; ಅಡ್ಡಿಗಳು ಬಹಳಷ್ಟಿವೆ ಎಂದು ಪ್ರೊ. ವಾನಿ ಹೇಳಿದರು.

ಪಹಲ್ಗಾಮ್ ದಾಳಿಯನ್ನು ಮುಂದಿಟ್ಟುಕೊಂಡು ಕಾಶ್ಮೀರದಲ್ಲಿ ಉಗ್ರರ ಚಟುವಟಿಕೆಗಳು ವ್ಯಾಪಕವಾಗಿವೆ ಎನ್ನುವುದು ಕೂಡ ಸರಿಯಲ್ಲ ಎಂದು ಹಿರಿಯ ಭದ್ರತಾ ಅಧಿಕಾರಿಗಳು ಹೇಳುತ್ತಾರೆ. 'ಒಂದು ಭಯೋತ್ಪಾದಕ ದಾಳಿಯು 1990ರ ದಶಕದಲ್ಲಿ ಇದ್ದಂತಹ ಉಗ್ರಗಾಮಿ ಚಟುವಟಿಕೆಗಳನ್ನಾಗಲೀ, 2016ರಲ್ಲಿ ಬುರ್ಹಾನ್ ವಾನಿ ಹತ್ಯೆಯ ನಂತರ ಕಂಡುಬಂದ ಅಶಾಂತಿಯನ್ನಾಗಲೀ ಬಿಂಬಿಸುವುದಿಲ್ಲ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಒಂದು ಘಟನೆಯನ್ನು ಅಥವಾ ಕೆಲವು ಘಟನೆಗಳನ್ನು ಆಧಾರವಾಗಿ ಇರಿಸಿಕೊಂಡು, ಇತರ ಸಂದರ್ಭಗಳಲ್ಲಿ ಶಾಂತಿ ನೆಲಸಿದ್ದುದನ್ನು ಅಲ್ಲಗಳೆಯುವುದು ಸರಿಯಲ್ಲ. ಹಾಗೆ ಮಾಡಿದಾಗ, ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆ ಆಗುವುದಿಲ್ಲ ಎಂದು ಚಿತ್ರಿಸಲು ಬಯಸುವವರ ತಾಳಕ್ಕೆ ತಕ್ಕಂತೆ ಕುಣಿದಂತೆ ಆಗುತ್ತದೆ' ಎಂದು ಅವರು ಹೇಳಿದರು.

ಕೆಪಿಎಸ್‌ಸಿ ಪ್ರಶ್ನೆಪತ್ರಿಕೆ ಸೋರಿಕೆ ಶಂಕೆ...

ಒಂದನೇ ಪುಟದಿಂದ...

'ಪರೀಕ್ಷೆಯ ನಂತರ ಕೇಂದ್ರಕ್ಕೆ ಬಂದ ಅಧಿಕಾರಿಗಳು, ಪ್ರಶ್ನೆ ಮಾಡಿದ ಅಭ್ಯರ್ಥಿಯೊಬ್ಬರ ಮೇಲೆ ಹಲ್ಲೆ ನಡೆಸಿದ್ದಾರೆ. ಇದು ಪರೀಕ್ಷಾ ಸಿಬ್ಬಂದಿ ಮತ್ತು ಅಭ್ಯರ್ಥಿಗಳ ಮಧ್ಯೆ ಜಟಾಪಟಿಗೆ ದಾರಿ ಮಾಡಿಕೊಟ್ಟಿತು. ಕೇಂದ್ರದ ಒಳಗೆ ಮೊಬೈಲ್ ನಿಷೇಧವಿದ್ದರೂ ಪ್ರಕರಣವನ್ನು ಚಿತ್ರೀಕರಿಸಲಾಗಿದೆ. ಮೊಬೈಲ್ ತರಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕುರಿತು ಸಮಗ್ರ ತನಿಖೆ ನಡೆಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ಅಭ್ಯರ್ಥಿಯ ಮೇಲೆ ನಡೆದ ಹಲ್ಲೆ ಪ್ರಕರಣದ ವಿರುದ್ಧ ಪೊಲೀಸ್ ಠಾಣೆಗೂ ದೂರು ನೀಡಲಾಗುವುದು. ಕೆಪಿಎಸ್‌ಸಿ ಎಡವಟ್ಟುಗಳ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಅಭ್ಯರ್ಥಿಗಳು ಹೇಳಿದರು.

ಸಾಮಾನ್ಯ ಅಧ್ಯಯನ-2 ಪರೀಕ್ಷೆ ನಾಳೆ: ಮೇ 7ರಂದು ಬೆಳಿಗ್ಗೆ 9ರಿಂದ 12, ಸಾಮಾನ್ಯ ಅಧ್ಯಯನ-2; ಮೇ 7ರಂದು ಮಧ್ಯಾಹ್ನ 2ರಿಂದ 5, ಸಾಮಾನ್ಯ ಅಧ್ಯಯನ-3; ಮೇ 9ರಂದು ಬೆಳಿಗ್ಗೆ 9ರಿಂದ 12, ಸಾಮಾನ್ಯ ಅಧ್ಯಯನ-4; ಮೇ 9ರಂದು ಮಧ್ಯಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ನಡೆಯಲಿದೆ.

ವಂಚನೆ: ತಲೆಮರೆಸಿಕೊಂಡಿದ್ದ ಮಾಜಿ ಶಾಸಕ ಬಂಧನ



ಧರ್ಮಸಿಂಗ್ ಛೋಕ್ಕರ್

ನವದೆಹಲಿ (ಪಿಟಿಐ): ವಂಚನೆ ಪ್ರಕರಣ ಸಂಬಂಧ ತಲೆಮರೆಸಿಕೊಂಡಿದ್ದ, ಹರಿಯಾಣದ ಕಾಂಗ್ರೆಸ್ ಮಾಜಿ ಶಾಸಕ ಧರ್ಮಸಿಂಗ್ ಛೋಕರ್ ಅವರನ್ನು ಜಾರಿ ನಿರ್ದೇಶನಾಲಯವು ಭಾನುವಾರ ಬಂಧಿಸಿದೆ.

ಛೋಕರ್ ಅವರನ್ನು ದೆಹಲಿಯ ಹೋಟೆಲ್‌ವೊಂದರಲ್ಲಿ ಬಂಧಿಸಿದ್ದು, ಗುರುಗ್ರಾಮದ ನ್ಯಾಯಾಲಯಕ್ಕೆ ಸೋಮವಾರ ಹಾಜರುಪಡಿಸಲಾಗುವುದು ಎಂದು ತಿಳಿದುಬಂದಿದೆ.

ಮನೆ ಖರೀದಿದಾರರಿಂದ ₹500 ಕೋಟಿ ಪಡೆದು ವಂಚಿಸಿದ ಆರೋಪ ಸಂಬಂಧ, ಧರ್ಮಸಿಂಗ್ ಅವರ ಇಬ್ಬರು ಮಕ್ಕಳಾದ ವಿಕಾಸ್ ಛೋಕರ್ ಹಾಗೂ ಸಿಕಂದರ್ ಛೋಕರ್ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು. ಸಿಕಂದರ್ ಅವರನ್ನು ಇ.ಡಿ ಕಳೆದ ವರ್ಷ ಬಂಧಿಸಿತ್ತು. ಆ ಬಳಿಕ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು. ವಿಕಾಸ್ ತಲೆಮರೆಸಿಕೊಂಡಿದ್ದಾರೆ.

ಪಾಣಿಪತ್ ಜಿಲ್ಲೆಯ ಸಮಾಲಖ ಕ್ಷೇತ್ರದ ಮಾಜಿ ಶಾಸಕರಾಗಿರುವ ಧರ್ಮ ಸಿಂಗ್, ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದರು.

ಕೆಂಪು ಕೋಟೆ ಸ್ವಾಧೀನ: ಅರ್ಜಿ ವಜಾ

ನವದೆಹಲಿ (ಪಿಟಿಐ): ಐತಿಹಾಸಿಕ ಕೆಂಪು ಕೋಟೆಯನ್ನು ತನ್ನ ಸ್ವಾಧೀನಕ್ಕೆ ನೀಡಬೇಕು ಎಂಬ ಕೋರಿಕೆಯೊಂದಿಗೆ ಸುಲ್ತಾನಾ ಬೇಗಂ ಎಂಬವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಮೊಘಲ್ ಸಾಮ್ರಾಟ ಎರಡನೆಯ ಬಹದ್ದೂರ್ ಶಾ ಜಾಫರನ ಮರಿಮಗನ ಪತ್ನಿ ತಾನು, ಕೆಂಪು ಕೋಟೆಯ ಕಾನೂನುಬದ್ಧ ವಾರಸುದಾರಿಕೆ ತನಗೆ ಸೇರಿದ್ದು ಎಂದು ಸುಲ್ತಾನಾ ಬೇಗಂ ಹೇಳಿಕೊಂಡಿದ್ದಾರೆ.

ಸ್ವಾತಂತ್ರ್ಯಾ ನಂತರ ಒಂಡಿದೀ ಪೀಳಿಗೆಗೆ ದಾರಿದೀಪವಾದ ನಿಜಾಮಪುರದ ರಾಮಕೇವಲ್‌ನ ಸಾಧನೆ

ಇಡೀ ಹಳ್ಳಿಯಲ್ಲಿ 10ನೇ ತರಗತಿ ಪಾಸಾದ ಮೊದಲಿಗ

ಬಾರಾಬಂಕಿ (ಪಿಟಿಐ): ಉತ್ತರ ಪ್ರದೇಶದ ಬಾರಾಬಂಕಿ ಜಿಲ್ಲೆಯ ಹಳ್ಳಿಯೊಂದರಲ್ಲಿ ವಿದ್ಯಾರ್ಥಿಯೊಬ್ಬ 10ನೇ ತರಗತಿ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ 77 ವರ್ಷಗಳ ನಂತರ ಈ ಗ್ರಾಮದ ವಿದ್ಯಾರ್ಥಿಯೊಬ್ಬ 10ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಪಾಸಾಗುತ್ತಿರುವುದು ಇದೇ ಮೊದಲು.

ಜಿಲ್ಲಾ ಕೇಂದ್ರದಿಂದ 30 ಕಿ.ಮೀ. ದೂರದಲ್ಲಿರುವ ಹಳ್ಳಿ ನಿಜಾಮಪುರ. ಬಹುತೇಕ ದಲಿತರೇ ವಾಸವಿರುವ ಇಲ್ಲಿನ ವಿದ್ಯಾರ್ಥಿ ರಾಮಕೇವಲ್ ಈ ಸಾಧನೆ ಮಾಡಿದವ. ಈತನ ಕುಟುಂಬವು ಆರ್ಥಿಕವಾಗಿ ಹಿಂದುಳಿದಿದೆ. ಖುದ್ದು ಅವನೂ ಕೂಲಿ ಕೆಲಸ ಮಾಡುತ್ತಲೇ ಓದಿ, ಪರೀಕ್ಷೆ ಪಾಸಾಗಿದ್ದಾನೆ.

ಮದುವೆ ಸಮಾರಂಭ ನಡೆವಾಗ ದೀಪ ಹೊತ್ತೊಯ್ಯುವ ಕೆಲಸ ಮಾಡಿ, ₹250-₹300 ಕೂಲಿ ಪಡೆಯುತ್ತಿದ್ದುದಾಗಿ ಅವನು ಹೇಳಿದ್ದಾನೆ.

'ಕೂಲಿಮುಗಿಸಿಮನೆಗೆಬರುವಷ್ಟರಲ್ಲಿ ತಡರಾತ್ರಿಯಾಗಿರುತ್ತಿತ್ತು. ಆದರೂ ಎರಡು ಗಂಟೆ ಅಭ್ಯಾಸ ಮಾಡಿ, ಆಮೇಲೆ ಮಲಗುತ್ತಿದ್ದೆ. ಎಂದಿಗೂ 10ನೇ ತರಗತಿ ಪರೀಕ್ಷೆ ಪಾಸಾಗಲು ನನಗೆ ಆಗದು ಎಂದೇ ಗ್ರಾಮದ ಕೆಲವರು ಕುಹಕವಾಡುತ್ತಿದ್ದರು' ಎಂದು ರಾಮಕೇವಲ್ ಭಾವುಕನಾಗಿ ಪ್ರತಿಕ್ರಿಯಿಸಿದ್ದಾನೆ.

ರಾಮಕೇವಲ್‌ನ ತಾಯಿ ಪುಷ್ಪಾ ಸರ್ಕಾರಿ ಶಾಲೆಯಲ್ಲಿ ಬಿಸಿಯೂಟಕ್ಕೆ ಅಡುಗೆ ಮಾಡುವ ಕೆಲಸ ನಿರ್ವಹಿಸುತ್ತಾರೆ. ಅವರು 5ನೇ ತರಗತಿಯವರೆಗೆ ಮಾತ್ರ ಓದಿದ್ದರು. ತಂದೆ ಜಗದೀಶ್ ಅವರಿಗೂ ಓದಲು ಆಗಿರಲಿಲ್ಲ. ಅವರ ಜೊತೆಗೇ ರಾಮಕೇವಲ್ ಕೂಲಿ ಕೆಲಸಕ್ಕೆ ಹೋಗುತ್ತಿದ್ದ. ತಂದೆಯೂ ಓದಲು ಅವನಿಗೆ ಉತ್ತೇಜನ ನೀಡುತ್ತಿದ್ದರು.

ಜಿಲ್ಲಾಧಿಕಾರಿ ಶಶಾಂಕ್ ತ್ರಿಪಾಠಿ ಅವರು ಈ ವಿದ್ಯಾರ್ಥಿಯ ಸಾಧನೆಯನ್ನು ಗುರುತಿಸಿ, ಸನ್ಮಾನಿಸಿದ್ದಾರೆ. ಆತನ ಶಿಕ್ಷಣಕ್ಕೆ ಎಲ್ಲ ರೀತಿಯ ನೆರವು ನೀಡುವುದಾಗಿ ಭರವಸೆ ನೀಡಿದ್ದಾರೆ.

ಶಿಕ್ಷಣಾಧಿಕಾರಿ (ಡಿಐಒಎಸ್) ಒ.ಪಿ. ತ್ರಿಪಾಠಿ, 'ರಾಮಕೇವಲ್ 10ನೇ ತರಗತಿ ಪಾಸಾಗುವ ಮೂಲಕ ಊರಿನ ಒಂದು ಪೀಳಿಗೆಗೇ ದಾರಿದೀಪವಾಗಿದ್ದಾನೆ. ಅವನ ಮುಂದಿನ ಓದಿಗೆ ಎಲ್ಲ ರೀತಿಯ ನೆರವು ನೀಡುತ್ತೇವೆ' ಎಂದಿದ್ದಾರೆ.

ಇತರರಿಗೆ ಸ್ಫೂರ್ತಿ

ಪ್ರೌಢಶಾಲೆಯ ಮೆಟ್ಟಿಲು ಹತ್ತಿದ ಎಷ್ಟೋ ಜನರು ತುತ್ತೂಟಕ್ಕೆ ಕೂಲಿಗೆ ಹೋಗುವ ಅನಿವಾರ್ಯಕ್ಕೆ ಒಳಗಾಗಿ, ಈ ಹಳ್ಳಿಯಲ್ಲಿ ಓದನ್ನು ಮುಂದುವರಿಸಲು ಆಗಲೇ ಇಲ್ಲ. ಬಹುತೇಕ ವಿದ್ಯಾರ್ಥಿಗಳಿಗೆ ಕೂಲಿ ಕೆಲಸವನ್ನೂ ಮಾಡಿಕೊಂಡು, ಪರೀಕ್ಷೆಯಲ್ಲಿ ಪಾಸಾಗುವುದು ಸವಾಲೇ ಆಗಿತ್ತು. ಹೀಗಾಗಿ ರಾಮಕೇವಲ್‌ನ ಸಾಧನೆಯು, ಗ್ರಾಮದ ಇತರ ವಿದ್ಯಾರ್ಥಿಗಳಿಗೆ ಸ್ಫೂರ್ತಿಯಾಗಲಿದೆ ಎಂದು ಗ್ರಾಮಸ್ಥರು ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

10ನೇ ತರಗತಿ ಪರೀಕ್ಷೆ ಬರೆದಿದ್ದರೂ ಫೇಲಾಗಿರುವ ಲವಕೇಶ್, ಮುಕೇಶ್ ಎಂಬಿಬ್ಬರು ಈ ಹುಡುಗನ ಸಾಧನೆಯಿಂದ ಪ್ರೇರಣೆ ಪಡೆದು ಮತ್ತೆ ಪರೀಕ್ಷೆ ಕಟ್ಟಲು ನಿರ್ಧರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

7 ವರ್ಷದ ಬಾಲಕಿ ರೇಬಿಸ್‌ನಿಂದ ಸಾವು

ತಿರುವನಂತಪುರ (ಪಿಟಿಐ): ನಾಯಿ ಕಚ್ಚಿದ ಬಳಿಕ ಲಸಿಕೆ ತೆಗೆದುಕೊಂಡಿದ್ದರೂ ರೇಬಿಸ್ ಸೋಂಕು ತಗುಲಿದ ಪರಿಣಾಮ ಏಳು ವರ್ಷದ ಬಾಲಕಿ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ಕೊಲ್ಲಂ ಜಿಲ್ಲೆಯ ಕುನ್ನಿಕ್ಕೋಡ್ ಮೂಲದ ನಿಯಾ ಫೈಸಲ್ ಮೃತಪಟ್ಟ ಬಾಲಕಿ. ಇಲ್ಲಿನ ಶ್ರೀ ಅವಿಟ್ಟಂ ತಿರುನಾಳ್ (ಎಸ್‌ಎಟಿ) ಆಸ್ಪತ್ರೆಯಲ್ಲಿ ಕೆಲ ದಿನಗಳಿಂದ ಬಾಲಕಿಯನ್ನು ವೆಂಟಿಲೇಟರ್‌ನಲ್ಲಿ ಇಡಲಾಗಿತ್ತು. ರೇಬಿಸ್ ಸೋಂಕು ತಗುಲಿರುವುದು ಇತ್ತೀಚೆಗಷ್ಟೇ ದೃಢಪಟ್ಟಿತ್ತು.

ಬೀದಿ ನಾಯಿಗಳು ದಾಳಿ ನಡೆಸಿದ ಬೆನ್ನಲ್ಲೇ ರೇಬಿಸ್ ಲಸಿಕೆ ಪಡೆದ ಬಳಿಕವೂ ಮಕ್ಕಳು ಮೃತಪಡುತ್ತಿರುವ ಪ್ರಕರಣಗಳು ಕೇರಳದಲ್ಲಿ ನಡೆಯುತ್ತಿದ್ದು, ಕಳೆದ ತಿಂಗಳಿಂದ ಈ ರೀತಿಯ ಮೂರು ಪ್ರಕರಣಗಳು ನಡೆದಿವೆ.

ಸಿಬಿಐ ನಿರ್ದೇಶಕರ ಆಯ್ಕೆಗೆ ಸಭೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಕೇಂದ್ರೀಯ ತನಿಖಾ ದಳದ (ಸಿಬಿಐ) ನಿರ್ದೇಶಕರ ನೇಮಕ ಕುರಿತ ಸಮಿತಿ ಸಭೆಯು ಸೋಮವಾರ ನಡೆಯಿತು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಸಭೆಯಲ್ಲಿ ಭಾಗಿಯಾಗಿದ್ದರು. ಪ್ರಧಾನಿ ಕಚೇರಿಯಲ್ಲಿ ಸಂಜೆ ಸಭೆ ನಡೆಯಿತು.

ಸದ್ಯ ಸಿಬಿಐ ನಿರ್ದೇಶಕರಾಗಿರುವ ಪ್ರವೀಣ್ ಸೂದ್ ಅವರ ಅಧಿಕಾರಾವಧಿಯು ಮೇ 25ರಂದು ಕೊನೆಗೊಳ್ಳಲಿದೆ. 1986ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಸೂದ್ ಅವರು 2023ರಲ್ಲಿ ಸಿಬಿಐ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದರು.

ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಮುಖ್ಯ ನ್ಯಾಯಮೂರ್ತಿ ಅವರನ್ನೊಳಗೊಂಡ ಸಮಿತಿಯು ಸಿಬಿಐ ನಿರ್ದೇಶಕರನ್ನು ಆಯ್ಕೆ ಮಾಡುತ್ತದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಅರ್ಹರ ಮುಂದೆ ಕೊಂಕಿಲ್ಲದ ತಪ್ಪೊಪ್ಪಿಗೆ, ಮತ್ತೆ ಮಾಡೆನೆಂಬ ಭರವಸೆ– ಇದೇ ಪರಿಶುದ್ಧವಾದ ಪಶ್ಚಾತ್ತಾಪ.
-ಮಹಾತ್ಮ ಗಾಂಧಿ

ಎಲ್ಲರಿಗೂ ಡಿಜಿಟಲ್ ಸೇವೆ ಲಭ್ಯತೆ ಹಕ್ಕಿನ ವ್ಯಾಪ್ತಿ ವಿಸ್ತರಿಸಿದ ಕೋರ್ಟ್

ಮೂಲಭೂತ ಹಕ್ಕುಗಳ ಪರಿಧಿಯನ್ನು ವಿಸ್ತರಿಸಿರುವ ಸುಪ್ರೀಂ ಕೋರ್ಟ್, ಇ-ಆಡಳಿತ ಸೌಲಭ್ಯಗಳು ಹಾಗೂ ಅಭಿವೃದ್ಧಿ ವ್ಯವಸ್ಥೆಗಳ ಲಭ್ಯತೆಯು ಸಂವಿಧಾನದ 21ನೇ ವಿಧಿಯಲ್ಲಿ ಹೇಳಿರುವ ಜೀವಿಸುವ ಸ್ವಾತಂತ್ರ್ಯದ ಭಾಗ ಎಂದು ಸಾರಿದೆ. ಇ-ಆಡಳಿತ ಸೌಲಭ್ಯಗಳು ಹಾಗೂ ಅಭಿವೃದ್ಧಿ ವ್ಯವಸ್ಥೆಗಳ ಲಭ್ಯತೆಯು ಅರ್ಥಪೂರ್ಣವಾಗಿರಬೇಕು, ಎಲ್ಲರನ್ನೂ ಒಳಗೊಳ್ಳುವಂತೆ ಇರಬೇಕು ಎಂದು ಅದು ಹೇಳಿದೆ. ಸಮಾಜದಲ್ಲಿ ಅವಕಾಶ ವಂಚಿತರಿಗೆ, ದುರ್ಬಲ ವರ್ಗಗಳಿಗೆ, ಅಂಗವಿಕಲರಿಗೆ ಡಿಜಿಟಲ್ ವ್ಯವಸ್ಥೆ ಲಭ್ಯವಾಗುವಂತೆ ಮಾಡುವ ಹೊಣೆಯು ಸರ್ಕಾರಗಳ ಮೇಲಿದೆ ಎಂದು ಅದು ಸ್ಪಷ್ಟಪಡಿಸಿದೆ. ಈ ಮಾತಿಗೆ ಅನುಗುಣವಾಗಿ ಅದು, ಕೆವೈಸಿ ಪ್ರಕ್ರಿಯೆಯಲ್ಲಿ (ವಿವಿಧ ಯೋಜನೆಗಳಿಗೆ ಗ್ರಾಹಕರ, ಬಳಕೆದಾರರ ವಿವರಗಳನ್ನು ಪಡೆಯುವ ಪ್ರಕ್ರಿಯೆ) ಸುಧಾರಣೆ ತರಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರಕ್ಕೆ ಕೆಲವು ನಿರ್ದೇಶನಗಳನ್ನು ನೀಡಿದೆ. ಈ ನಿರ್ದೇಶನಗಳ ಪರಿಣಾಮವಾಗಿ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮತ್ತು ಸರ್ಕಾರದ ಇಲಾಖೆಗಳು ತಮ್ಮ ಡಿಜಿಟಲ್ ಕೆವೈಸಿ ಪ್ರಕ್ರಿಯೆಯಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗುತ್ತದೆ. ಮುಖ ಊನಗೊಂಡವರು, ದೃಷ್ಟಿದೋಷ ಇರುವವರು, ಕಿವಿಯ ಸಮಸ್ಯೆ ಇರುವವರು, ಡಿಜಿಟಲ್ ಸಾಕ್ಷರತೆಯನ್ನು ಪೂರ್ಣ ಪ್ರಮಾಣದಲ್ಲಿ ಹೊಂದಿಲ್ಲದಿರುವವರ ಅಗತ್ಯಗಳಿಗೆ ಅನುಗುಣವಾಗಿ ಬದಲಾವಣೆಗಳನ್ನು ತರಬೇಕಿದೆ. ಡಿಜಿಟಲ್ ಕೆವೈಸಿ ಪ್ರಕ್ರಿಯೆಯು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ಬ್ರೈಲ್ ಮತ್ತು ಧ್ವನಿ ಆಧಾರಿತ ಸೇವೆಗಳನ್ನು ರೂಪಿಸಬೇಕಿದೆ.

ಡಿಜಿಟಲ್ ಕಂದಕವನ್ನು ಮುಚ್ಚಬೇಕಿರುವುದು ಸಾಂವಿಧಾನಿಕ ಅನಿವಾರ್ಯ ಎಂಬುದನ್ನು ಸ್ಪಷ್ಟಪಡಿಸುವ ಮೂಲಕ ಕೋರ್ಟ್ ಒಳ್ಳೆಯ ಕೆಲಸ ಮಾಡಿದೆ

ಆ್ಯಸಿಡ್ ದಾಳಿಗೆ ಗುರಿಯಾದ ವ್ಯಕ್ತಿಯೊಬ್ಬರು ಸೇರಿದಂತೆ ಇತರ ಕೆಲವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್ ಈ ಮಾತುಗಳನ್ನು ಹೇಳಿದೆ. ಆ್ಯಸಿಡ್ ದಾಳಿಗೆ ತುತ್ತಾದ ವ್ಯಕ್ತಿಯ ಕಣ್ಣುಗಳು ಊನಗೊಂಡಿದ್ದರ ಪರಿಣಾಮವಾಗಿ ಅವರಿಗೆ 2023ರಲ್ಲಿ ಬ್ಯಾಂಕ್ ಖಾತೆ ತೆರೆಯಲು ಆಗಿರಲಿಲ್ಲ. ಈಗಿರುವ ಕೆವೈಸಿ ನಿಯಮಗಳನ್ನು ಅಂಗವೈಕಲ್ಯದ ಕಾರಣಕ್ಕೆ ಪಾಲಿಸಲು ಸಾಧ್ಯವಾಗದೇ ಇರುವವರಿಗೆ ಹಲವು ಸೌಲಭ್ಯಗಳ ನಿರಾಕರಣೆ ಆಗುತ್ತಿದೆ. ಇಂಥವರು ಹಲವರಿದ್ದಾರೆ. ಡಿಜಿಟಲ್ ಕಂದಕದ ಪರಿಣಾಮವಾಗಿ ತೊಂದರೆಗೆ ಒಳಗಾಗಿರುವವರು ಗ್ರಾಮಾಂತರ ಪ್ರದೇಶಗಳಲ್ಲಿ, ಹಿರಿಯ ನಾಗರಿಕರಲ್ಲಿ, ಆರ್ಥಿಕವಾಗಿ ದುರ್ಬಲವಾಗಿರುವ ಸಮುದಾಯಗಳಲ್ಲಿ ಹಲವರಿದ್ದಾರೆ ಎಂದು ಕೋರ್ಟ್ ಹೇಳಿದೆ. ಎಲ್ಲ ವರ್ಗಗಳ ಜನರಿಗೆ 'ಘನತೆಯ ಬದುಕನ್ನು ಖಾತರಿಪಡಿಸಲು' ಡಿಜಿಟಲ್ ಕಂದಕವನ್ನು ಮುಚ್ಚುವ ಕೆಲಸ ಆಗಬೇಕು, ಏಕೆಂದರೆ ಎಲ್ಲರಿಗೂ ಡಿಜಿಟಲ್ ಹಕ್ಕುಗಳು ಇವೆ. ಸರ್ಕಾರದ ಎಲ್ಲ ಪೋರ್ಟಲ್‌ಗಳು, ಕಲಿಕಾ ವೇದಿಕೆಗಳು, ಹಣಕಾಸು ಸೇವೆಗಳನ್ನು ಒದಗಿಸುವ ಸಂಸ್ಥೆಗಳು ದುರ್ಬಲರಿಗೆ, ಸಮಾಜದಲ್ಲಿ ಉಪೇಕ್ಷೆಗೆ ಒಳಗಾದವರಿಗೆ ಸೇರಿ 'ಎಲ್ಲರಿಗೂ ಲಭ್ಯವಾಗುವಂತೆ' ಆದಾಗ ಮಾತ್ರ ನಿಜವಾದ ಸಮಾನತೆಯ ಸಾಕಾರ ಆಗುತ್ತದೆ. ಮಾನಸಿಕ ಅಥವಾ ಅಂಗ ವೈಕಲ್ಯಕ್ಕೆ ತುತ್ತಾದವರಿಗೆ ಸೇವೆಗಳನ್ನು ನಿರಾಕರಿಸಿರುವುದು ತಾರತಮ್ಯದ ನಡೆಯಾಗುತ್ತದೆ.

ಆದರೆ, ಇಂಥದ್ದೊಂದು ಅನ್ಯಾಯ ಮತ್ತು ತಾರತಮ್ಯವು ಇಷ್ಟು ದಿನ ವ್ಯವಸ್ಥೆಯ ಗಮನ ಸೆಳೆಯದೇ ಮುಂದುವರಿದಿದ್ದವು ಎಂಬುದೇ ಬಹಳ ಗಂಭೀರವಾದ ಸಂಗತಿ. ಡಿಜಿಟಲ್ ಕಂದಕವನ್ನು ಮುಚ್ಚಬೇಕಿರುವುದು ನೀತಿ ನಿರೂಪಣೆಗೆ ಮಾತ್ರ ಸಂಬಂಧಿಸಿದ್ದಲ್ಲ, ಅದು ಸಾಂವಿಧಾನಿಕ ಅನಿವಾರ್ಯ ಎಂಬುದನ್ನು ಸ್ಪಷ್ಟಪಡಿಸುವ ಮೂಲಕ ನ್ಯಾಯಾಲಯವು ಒಳ್ಳೆಯ ಕೆಲಸ ಮಾಡಿದೆ. ತಂತ್ರಜ್ಞಾನದಲ್ಲಿನ ಮುನ್ನಡೆಯು ಎಲ್ಲ ಪ್ರಜೆಗಳ ಜೀವನದಲ್ಲಿ ಬದಲಾವಣೆ ತಂದಿರುವುದನ್ನು ಗುರುತಿಸಿರುವ ಸುಪ್ರೀಂ ಕೋರ್ಟ್, ಜೀವಿಸುವ ಸ್ವಾತಂತ್ರ್ಯವನ್ನು ಮರುವ್ಯಾಖ್ಯಾನಿಸಿ ಡಿಜಿಟಲ್ ಸೇವೆಗಳ ಲಭ್ಯತೆಯ ಹಕ್ಕನ್ನು ಅದರಲ್ಲಿ ಸೇರಿಸಿದೆ. ಡಿಜಿಟಲ್ ಸೇವೆಗಳ ಲಭ್ಯತೆಯನ್ನು ಮೂಲಭೂತ ಹಕ್ಕು ಎಂದು ಕೋರ್ಟ್ ಗುರುತಿಸಿರುವುದರಿಂದಾಗಿ, ಆ ಹಕ್ಕನ್ನು ನ್ಯಾಯಾಲಯಗಳ ಮೂಲಕ ಪಡೆದುಕೊಳ್ಳಲು ಅವಕಾಶ ಇರುವ ಕಾರಣದಿಂದಾಗಿ, ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿಸುವ ಆದೇಶ ಹೊರಡಿಸುವುದು ಮುಂದಿನ ದಿನಗಳಲ್ಲಿ ಸರ್ಕಾರಗಳಿಗೆ ಕಷ್ಟವಾಗಬಹುದು. ಸುಪ್ರೀಂ ಕೋರ್ಟ್‌ನ ತೀರ್ಪು ಜನರಿಗೆ ಹೊಸ ಶಕ್ತಿ ನೀಡಿದೆ. ಏಕೆಂದರೆ, ಡಿಜಿಟಲ್ ಸಂಪರ್ಕವನ್ನು ಒದಗಿಸುವಲ್ಲಿನ ವೈಫಲ್ಯವನ್ನು ಇನ್ನು ಮುಂದೆ ನ್ಯಾಯಾಲಯಗಳ ಮೂಲಕ ಪ್ರಶ್ನಿಸಲು ಅವಕಾಶ ಇರಲಿದೆ.

ದಿನದ ಟ್ವೀಟ್

ಎಲ್ಲೆಲ್ಲೂ ಅಸಹನೆ!

...ದರ್ಶನಕ್ಕಾಗಿ, ಪ್ರಸಾದಕ್ಕಾಗಿ ಕ್ಯೂ ನಿಲ್ಲಲಾರದೆ ನೂಕುವುದು, ಕಂಬಿಗಳ ಕೆಳಗಿಂದ ನುಗ್ಗುವುದು... ಕನಿಷ್ಠ ಪ್ರಜ್ಞೆ ಇಲ್ಲ. ಸ್ನಾನ ಘಟ್ಟಗಳಲ್ಲಿ ಎಲ್ಲೆಂದರಲ್ಲಿ ಕಸ, ಉಟ್ಟ ಬಟ್ಟೆ ಎಸೆದು ಹೋಗುತ್ತಾರೆ. ಪರಿಸರದ ಬಗ್ಗೆ ಕಿಂಚಿತ್ ಕಾಳಜಿಯೂ ಇಲ್ಲದ ಇಂಥವರು ದೇವರನ್ನು ಹುಡುಕಿ ಭೂಮಿಯೆಲ್ಲ ಸುತ್ತಿದರೂ ಪ್ರಯೋಜನ ಏನು?

ರಕ್ಷಿತ್

ಕಿಡಿನುಡಿ

ಅಮೆಜಾನ್ ಮೂಲಕ ಒಂದಿಷ್ಟು ನಾಚಿಕೆಯನ್ನು ದಯಮಾಡಿ ಖರೀದಿಸಿ.

(ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರಲ್ಲಿ ಕೆಲವರ ಪತ್ನಿಯರನ್ನು ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನ ಮಾಡುತ್ತಿರುವವರ ಬಗ್ಗೆ ಆಕ್ರೋಶ)

ಪ್ರೇಮ್ ದೋಷಿ

25 ವರ್ಷಗಳ ಹಿಂದೆ

ಶನಿವಾರ, 6-5-2000

• ಕರುಳುಬೇನೆ: ಕರ್ತವ್ಯಲೋಪ ಐವರು ಅಧಿಕಾರಿಗಳ ಸಸ್ಪೆಂಡ್

ಧಾರವಾಡ, ಮೇ 5– ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿರುವ ಕರುಳುಬೇನೆ ಹಾಗೂ ಕಾಲರಾ ನಿಯಂತ್ರಣ ಕಾರ್ಯಾಚರಣೆಯಲ್ಲಿ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಇಬ್ಬರು ವೈದ್ಯರು, ಒಬ್ಬರು ಕಿರಿಯ ಎಂಜಿನಿಯರ್ ಸೇರಿದಂತೆ ಐವರು ಅಧಿಕಾರಿಗಳನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

• ಹಾಲು ಕೊಡದ 'ಹನಿ'ಗೆ ಆರನೇ ಮರಿ

ಮೈಸೂರು, ಮೇ 5– ಶ್ರೀ ಚಾಮರಾಜೇಂದ್ರ ಮೃಗಾಲಯದ ಹೆಣ್ಣು ಜಿರಾಫೆ 'ಹನಿ' ಇಂದು ಮಧ್ಯಾಹ್ನ ಮರಿ ಹಾಕಿತು. 'ಹನಿ'ಗೆ ಇದು ಆರನೇ ಮರಿಯಾಗಿದ್ದು, ಈ ಗಂಡು ಜಿರಾಫೆ ಮರಿ ಆರೋಗ್ಯವಾಗಿದೆ.

ವಿಪರ್ಯಾಸವೆಂದರೆ 'ಹನಿ' ಪ್ರತಿ ಬಾರಿ ಮರಿ ಹಾಕಿದ ನಂತರ ಅದಕ್ಕೆ 'ತಾಯಿಯ ಪ್ರೀತಿ' ತೋರಿಸುತ್ತಿಲ್ಲ. ತಂದೆ 'ಹೆನ್ರಿ' ಮಾತ್ರ ಪ್ರತಿ ಬಾರಿಯೂ ಮರಿಗಳಿಗೆ ಪ್ರೀತಿ ತೋರಿಸುತ್ತಾ ಬಂದಿದೆ. ಇದರಿಂದಾಗಿ ಮೃಗಾಲಯದ ಪಶುವೈದ್ಯರು ಅದರ ಮರಿಗಳ ಆರೋಗ್ಯ– ಆರೈಕೆಯಲ್ಲಿ ಹೆಚ್ಚಿನ ಮುತುವರ್ಜಿ ತೋರಬೇಕಾಗಿದ್ದು, ಸುಮಾರು 9 ತಿಂಗಳ ಕಾಲ ಈ ಕೆಲಸ ಮಾಡಬೇಕಾಗುತ್ತಿದೆ.

'ಹೆನ್ರಿ' ಮತ್ತು 'ಹನಿ' ಜೋಡಿಯನ್ನು 1987ರಲ್ಲಿ ಜರ್ಮನಿಯ ಕಾರ್ಲ್‌ಹೇಗನ್ ಬೆಕ್ ಮೃಗಾಲಯದಿಂದ ತರಿಸಿಕೊಳ್ಳಲಾಗಿತ್ತು.

15 ವರ್ಷ ವಯಸ್ಸಿನ 'ಹನಿ' ತನ್ನ ಮರಿಗಳನ್ನು ತಿರಸ್ಕರಿಸುವ ಅಭ್ಯಾಸದ ಕಾರಣ ಮೊದಲ ಮೂರು ಮರಿಗಳು ಉಳಿದಿರಲಿಲ್ಲ.

50 ವರ್ಷಗಳ ಹಿಂದೆ

ಮಂಗಳವಾರ, 6-5-1975

• ಅರಸು ವಿರುದ್ಧ ಕೇಂದ್ರಕ್ಕೆ ದೂರು

ನವದೆಹಲಿ, ಮೇ 5– ಕರ್ನಾಟಕದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರ ವಿರುದ್ಧ ಒಟ್ಟು 99 ದೂರುಗಳಿರುವ ಹಲವು ಮನವಿ ಪತ್ರಗಳು ಕೇಂದ್ರ ಸರ್ಕಾರಕ್ಕೆ ಬಂದಿವೆ ಎಂದು ಗೃಹ ಸಚಿವ ಬ್ರಹ್ಮಾನಂದ ರೆಡ್ಡಿ ಅವರು ತಮ್ಮ ಖಾತೆ ಕುರಿತ ಸಮಾಲೋಚನಾ ಸಮಿತಿಗೆ ಇಂದು ತಿಳಿಸಿದರು.

• ನಿರುದ್ಯೋಗಿಗಳಿಗೆ ಪುಸ್ತಕದ ಅಂಗಡಿ

ನವದೆಹಲಿ, ಮೇ 5– ಭಾರತೀಯ ರೈಲ್ವೆಯ ವಿವಿಧ ನಿಲ್ದಾಣಗಳಲ್ಲಿ ಪುಸ್ತಕ ಮಾರಾಟದ ಹತ್ತೊಂಬತ್ತು ಅಂಗಡಿಗಳ ಕಾಂಟ್ರಾಕ್ಟನ್ನು ನಿರುದ್ಯೋಗಿ ಪದವೀಧರರ ಸಹಕಾರ ಸಂಘ ಹಾಗೂ ಪ್ರತ್ಯೇಕ ನಿರುದ್ಯೋಗಿ ಪದವೀಧರರಿಗೆ ಸರ್ಕಾರ ಇದುವರೆಗೆ ನೀಡಿದೆ.

ಈ ವಿಷಯವನ್ನು ರಾಜ್ಯಸಭೆಗೆ ಇಂದು ತಿಳಿಸಿದ ರೈಲ್ವೆ ಉಪಸಚಿವ ಬೂಟಾ ಸಿಂಗ್ ಅವರು ಈಗ 642 ರೈಲು ನಿಲ್ದಾಣಗಳಲ್ಲಿ 744 ಪುಸ್ತಕದ ಅಂಗಡಿಗಳಿವೆ ಎಂದು ಹೇಳಿದರು.

• ಅಪಪ್ರಚಾರಕ್ಕೆ 'ಬಾಡಿಗೆ ಬಾಯಿ' ಕೆ.ಎಚ್. ಪಾಟೀಲ್ ಆರೋಪ

ಬೆಂಗಳೂರು, ಮೇ 5– ತಮ್ಮ ವಿರುದ್ಧ ಅಪಪ್ರಚಾರ ಮಾಡಲು 'ಬಾಡಿಗೆ ಬಾಯಿಗಳನ್ನು' ಬಳಸಲಾಗುತ್ತಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕೆ.ಎಚ್.ಪಾಟೀಲ್ ಅವರು ಇಂದು ಇಲ್ಲಿ ಆಪಾದಿಸಿದರು.

'ನನ್ನ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಬರೆದ ಭಾಷೆ ನೋಡಿದರೆ, ನನ್ನನ್ನು ಹಡೆದವರೂ ನಾನು ತಪ್ಪು ಮಾಡಿದ್ದೇನೆಂದು ಭಾವಿಸಬೇಕು' ಎಂದು ನುಡಿದ ಅವರು, 'ನನ್ನ ಜೀವನದಲ್ಲಿ ಇನ್ನೊಬ್ಬರ ಒಂದು ಕಾಸನ್ನೂ ಮೂಸಿ ನೋಡಿಲ್ಲ' ಎಂದು ಹೇಳಿದರು.

'ಸಮಾಜದಲ್ಲಿ ಇಲ್ಲದ್ದನ್ನು ಕಲ್ಪಿಸಿ ಹೇಳುವ ಭಂಡ ನಾಲಿಗೆ ಇರಬೇಕು. ಅದಕ್ಕೆ ಅಂಜಿದರೆ, ಅಳುಕಿದರೆ ಕೆಲಸ ಮಾಡಲು ಸಾಧ್ಯವಿಲ್ಲ' ಎಂದು ಪಾಟೀಲ್ ಹೇಳಿದರು.

ಮಾನವ ಅಭಿವೃದ್ಧಿಯ ಸಾಧನೆಗಾಗಿ ಸಮಾನತೆಯು ನಮ್ಮೆಲ್ಲರ ಆಯ್ಕೆಯಾಗಬೇಕಿದೆ

ಅಂತರದ ಅಳಿವು ಪ್ರಗತಿಯ ಉಳಿವು

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಕೆಲವು ದೇಶಗಳಲ್ಲಿ ಅಭಿವೃದ್ಧಿ ಉತ್ತಮ ರೀತಿಯಲ್ಲಿ ಆಗಿದೆ. ಜನ ಹೆಚ್ಚು ಸುಖವಾಗಿದ್ದಾರೆ. ಕೆಲವು ದೇಶಗಳಲ್ಲಿ ಜನ ಹೆಚ್ಚು ಸಂಕಷ್ಟದಲ್ಲಿದ್ದಾರೆ. ಹಾಗೆಯೇ ದೇಶದೊಳಗೆ ಕೆಲವು ರಾಜ್ಯಗಳು ಅಭಿವೃದ್ಧಿಯಾಗಿವೆ. ಕೆಲವು ಅಷ್ಟೇ ಹಿಂದುಳಿದಿವೆ. ಯಾಕೆ ಹೀಗೆ ಅನ್ನುವುದರ ಬಗ್ಗೆ ಪರಿಣತರಲ್ಲಿ ಒಮ್ಮತವಿಲ್ಲ.

ಕೆಲವರು ಆಯಾ ಪ್ರದೇಶದ ಚರಿತ್ರೆ ಕಾರಣ ಎನ್ನುತ್ತಾರೆ. ಕೆಲವರು ಹವಾಮಾನ, ತಂತ್ರಜ್ಞಾನ, ಸಂಪನ್ಮೂಲದಂತಹ ಅಂಶಗಳು ಕಾರಣ ಎನ್ನುತ್ತಾರೆ. ಆದರೆ ಈ ಅಂಶಗಳು ದೇಶದ ಪ್ರಗತಿಗೆ ಪೂರಕ ಆಗಬಹುದೇ ವಿನಾ ಅವುಗಳಿಂದಲೇ ಬೆಳವಣಿಗೆ ಸಾಧ್ಯವಿಲ್ಲ ಎನ್ನುತ್ತಾರೆ ನೊಬೆಲ್ ಪ್ರಶಸ್ತಿ ಪುರಸ್ಕೃತ ಡೆರೆನ್ ಅಸಿಮೊಗ್ಲು. ಅವರ ದೃಷ್ಟಿಯಲ್ಲಿ ದೇಶದ ಪ್ರಗತಿಯನ್ನು ಆಯಾ ದೇಶದಲ್ಲಿನ ಸಾಮಾಜಿಕ ಹಾಗೂ ರಾಜಕೀಯ ಸಂಸ್ಥೆಗಳು ನಿರ್ಧರಿಸುತ್ತವೆ.

ಸಂಶೋಧಕಿ ಪ್ರೇರಣಾ ಸಿಂಗ್ ಅವರು ಭಾರತದ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ, ಭಿನ್ನ ನೋಟವನ್ನು ನೀಡುತ್ತಾರೆ. ಅವರ ದೃಷ್ಟಿಯಲ್ಲಿ ಉಪರಾಷ್ಟ್ರೀಯತೆಯ ಪ್ರಜ್ಞೆ ಅಂದರೆ 'ನಾವೆಲ್ಲ ಒಂದೇ ರಾಜ್ಯಕ್ಕೆ ಸೇರಿದವರು. ಹಾಗಾಗಿ, ನಾವೆಲ್ಲ ಒಂದು' ಅನ್ನುವ ಪ್ರಾಂತೀಯ ಏಕತೆಯ ಭಾವನೆ ರಾಜ್ಯದ ಪ್ರಗತಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅಂತಹ 'ನಮ್ಮತನ'ದ ಪ್ರಜ್ಞೆ ತೀವ್ರವಾಗಿರುವ ಕಡೆ ಅಭಿವೃದ್ಧಿಯೂ ತೀವ್ರವಾಗಿರುತ್ತದೆ.

ಕೆಲವು ಶತಮಾನಗಳ ಹಿಂದೆ ಕೇರಳ, ತಮಿಳುನಾಡು, ಬಿಹಾರ, ಉತ್ತರಪ್ರದೇಶ ಎಲ್ಲವೂ ಒಂದೇ ಸ್ಥಿತಿಯಲ್ಲಿ ಇದ್ದವು. ಆರ್ಥಿಕವಾಗಿ ದುರ್ಬಲವಾಗಿದ್ದವು. ಹಾಗೆ ನೋಡಿದರೆ ಉತ್ತರಪ್ರದೇಶ ಹೆಚ್ಚು ಉತ್ತಮ ಸ್ಥಿತಿಯಲ್ಲಿತ್ತು. ನಂತರದ ದಿನಗಳಲ್ಲಿ ಕೇರಳ ಹಾಗೂ ತಮಿಳುನಾಡಿನ ಜನರಲ್ಲಿ ಕ್ರಮೇಣ ಪ್ರಾದೇಶಿಕತೆಯ ಭಾವನೆ ಬೆಳೆಯುತ್ತಾ ಹೋಯಿತು. ಒಟ್ಟಾರೆ, ರಾಜ್ಯದ ಹಿತ ಅವರ ಮುಖ್ಯ ಕಾಳಜಿಯಾಗುತ್ತಾ ಹೋಯಿತು. ಅಂತಹ ಪರಿಸ್ಥಿತಿಯಲ್ಲಿ ಸರ್ಕಾರಗಳು ಒಟ್ಟಾರೆ ರಾಜ್ಯದ ಹಿತಕ್ಕಾಗಿ ಕೆಲಸ ಮಾಡುವುದು ಅನಿವಾರ್ಯವಾಗುತ್ತದೆ.

ಕೆಲವು ನಿರ್ದಿಷ್ಟ ಸಮೂಹವನ್ನು ಸಂತೃಪ್ತಿಗೊಳಿಸುವುದಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ರಾಜಕೀಯವಾಗಿ ಲಾಭದಾಯಕ ಆಗುವುದಿಲ್ಲ. ಜನರ ಪ್ರಾಂತೀಯ ಪ್ರಜ್ಞೆಯಿಂದಾಗಿ ರಾಜ್ಯಗಳಲ್ಲಿ ಶಿಕ್ಷಣ, ಆರೋಗ್ಯದಂತಹ ಕ್ಷೇತ್ರಗಳಲ್ಲಿ ಸುಧಾರಣೆ ಸಾಧ್ಯವಾಗುತ್ತದೆ. ಈ ರೀತಿಯ ಪ್ರಾಂತೀಯ ಏಕತೆ ಬೆಳೆಯದೇ ಇದ್ದ ರಾಜ್ಯಗಳಲ್ಲಿ ಪ್ರಗತಿ ಸಾಧ್ಯವಾಗಿಲ್ಲ. ಉದಾಹರಣೆಗೆ, ಉತ್ತರಪ್ರದೇಶದಲ್ಲಿ ಉಪರಾಷ್ಟ್ರೀಯತೆಗಿಂತ ಹೆಚ್ಚಾಗಿ ಹಿಂದೂ ರಾಷ್ಟ್ರೀಯವಾದ ತೀವ್ರತೆ ಪಡೆದುಕೊಂಡಿತು. ಒಟ್ಟಾರೆಯಾಗಿ ಪ್ರಾದೇಶಿಕ ಪ್ರಜ್ಞೆ ಹಾಗೂ ಅಭಿವೃದ್ಧಿಗೂ ನೇರವಾದ ಸಂಬಂಧ ಇದೆ ಅನ್ನುವುದು ಪ್ರೇರಣಾ ಅವರ ಅಧ್ಯಯನದ ಸಾರಾಂಶ.

ಸ್ವಾತಿ ನಾರಾಯಣ್ ಇದೇ ಪ್ರಶ್ನೆಯನ್ನು ಇನ್ನೊಂದು ಮಗ್ಗುಲಿನಿಂದ ನೋಡಲು ಪ್ರಯತ್ನಿಸಿದ್ದಾರೆ. ಇದಕ್ಕಾಗಿ ಭಾರತದ ಕೆಲವು ರಾಜ್ಯಗಳಲ್ಲಿ ಹಾಗೂ ಪಕ್ಕದ ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶದಲ್ಲಿ ಕ್ಷೇತ್ರ ಸಮೀಕ್ಷೆ ನಡೆಸಿದ್ದಾರೆ. 1990ರ ಸಮಯದಲ್ಲಿ ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾಕ್ಕೆ ಹೋಲಿಸಿದರೆ ಭಾರತ ಬಹಳಷ್ಟು ಮುಂದಿತ್ತು. ಅವುಗಳಿಗಿಂತ ಆರ್ಥಿಕವಾಗಿ ಬಲಾಢ್ಯವಾಗಿತ್ತು. ಭಾರತದಲ್ಲಿ ಪ್ರಜಾಸತ್ತೆಯೂ ಬಲವಾಗಿತ್ತು. ಸಾಮಾಜಿಕ ಸುರಕ್ಷತೆಗಾಗಿ ಸರ್ಕಾರ ಹೆಚ್ಚು ಹಣವನ್ನು ಖರ್ಚು ಮಾಡುತ್ತಿತ್ತು. ಹಾಗಾಗಿ, ಅವುಗಳಿಗೆ ಮತ್ತು ಭಾರತಕ್ಕೆ ಹೋಲಿಕೆಯೇ ಇರಲಿಲ್ಲ. ಆದರೆ ಒಂದೆರಡು ದಶಕಗಳಲ್ಲೇ ಅವು ನಮ್ಮನ್ನು ಆರೋಗ್ಯ, ಪೌಷ್ಟಿಕತೆ, ನೈರ್ಮಲ್ಯ, ಲಿಂಗಸಮಾನತೆಯಂತಹ ಮಾನವ ಸಂಪನ್ಮೂಲದ ಹಲವು ಸೂಚಿಗಳಲ್ಲಿ ಹಿಂದೆ ಹಾಕಿಬಿಟ್ಟವು. ಅಲ್ಲಿ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳು ನಮ್ಮಲ್ಲಿ ಇರುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡತೊಡಗಿದವು.

ಬಾಂಗ್ಲಾದೇಶಕ್ಕೆ ಬಯಲು ಶೌಚಾಲಯ ಪದ್ಧತಿಯನ್ನು ಹೆಚ್ಚುಕಡಿಮೆ ನಿರ್ಮೂಲ ಮಾಡುವುದಕ್ಕೆ ಸಾಧ್ಯವಾಯಿತು. ಪ್ರತಿ ಮನೆಯಲ್ಲೂ ಸ್ವಚ್ಛ ಶೌಚಾಲಯ ಬಂದಿತು. ಅಲ್ಲಿ ಮಹಿಳೆಯರ ಜೀವಿತಾವಧಿ ನಮಗಿಂತ ಹೆಚ್ಚಾಗಿದೆ. ಮಕ್ಕಳು ಹೆಚ್ಚು ಆರೋಗ್ಯದಿಂದ ಇದ್ದಾರೆ. ಹೆಚ್ಚು ಜನ ಶಿಕ್ಷಣ ಪಡೆದಿದ್ದಾರೆ. ಹೆಚ್ಚು ಮಕ್ಕಳು ಶಾಲೆಗೆ ಹೋಗುತ್ತಾರೆ. ಕೆಲಸಕ್ಕೆ ಹೋಗುವ ಹೆಣ್ಣುಮಕ್ಕಳ ಸಂಖ್ಯೆಯೂ ಅಲ್ಲಿ ಹೆಚ್ಚಿಗೆ ಇದೆ.

ಯಾಕೆ ಹೀಗೆ? ಸ್ವಾತಿಯವರ ಅಧ್ಯಯನದ ಪ್ರಕಾರ, ಆ ದೇಶಗಳಿಗಿಂತ ಭಾರತದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಲಿಂಗಾಧಾರಿತ ಅಸಮಾನತೆ ಹೆಚ್ಚು ತೀವ್ರವಾಗಿದೆ. ಭಾರತ ಆರ್ಥಿಕವಾಗಿ ತುಂಬಾ ಮುಂದಿದೆ. ಆದರೆ ಜನರಿಗೆ ಅವಶ್ಯ ಸೌಕರ್ಯವನ್ನು ಒದಗಿಸುವುದರಲ್ಲಿ ಅವರಿಗಿಂತ ಹಿಂದಿದೆ. ನಮ್ಮಲ್ಲಿರುವ ವಿಭಿನ್ನ ಮಜಲಿನ ಅಸಮಾನತೆಗಳೇ ನಮಗೆ ಅಡ್ಡಿಯಾಗಿವೆ. ಬಹುಶಃ ಬಯಲಿನಲ್ಲಿ ಮಲ ವಿಸರ್ಜನೆ ಮಾಡುವ ಅಭ್ಯಾಸ ಇನ್ನೂ ಉಳಿದುಕೊಂಡು ಬಂದಿರುವುದಕ್ಕೂ ನೈರ್ಮಲ್ಯ ವೃತ್ತಿಯು ನಿರ್ದಿಷ್ಟ ಜಾತಿಗೆ ಮೀಸಲಿರುವುದಕ್ಕೂ ಸಂಬಂಧವಿದೆ. ಹಾಗೆಯೇ ಹೆಂಗಸರಿಗೆ ಹೆಚ್ಚಿನ ಅಧಿಕಾರ ಇದ್ದಿದ್ದರೆ ಮಕ್ಕಳು ಪೌಷ್ಟಿಕತೆಯ ಕೊರತೆಯಿಂದ ನರಳಬೇಕಾಗುತ್ತಿರಲಿಲ್ಲ. ಎಲ್ಲ ಮಕ್ಕಳಿಗೂ ಒಂದೇ ರೀತಿಯ ಶಿಕ್ಷಣ ಸಿಗಲು ಸಾಧ್ಯವಾಗಿದ್ದರೆ ಅಭಿವೃದ್ಧಿ ಬೇರೆಯದೇ ಹಾದಿ ಹಿಡಿಯುತ್ತಿತ್ತು. ಅಂಚಿನಲ್ಲಿರುವ ಮಕ್ಕಳಿಗೂ ಒಳ್ಳೆಯ ಶಿಕ್ಷಣ ಮುಖ್ಯ ಎಂದು ನಮಗಿನ್ನೂ ಅನ್ನಿಸಿಲ್ಲ. ಸಾಮಾಜಿಕ ಅಂತರವು ಸಾರ್ವತ್ರಿಕ ಗುಣಮಟ್ಟದ ಶಿಕ್ಷಣಕ್ಕೆ ಅಡ್ಡಿಯಾಗಿದೆ. ಸಾಮಾಜಿಕ ಅಸಮಾನತೆಗೂ ಮಾನವ ಅಭಿವೃದ್ಧಿಗೂ ಸಂಬಂಧವಿದೆ. ಮಾನವ ಅಭಿವೃದ್ಧಿಯು ಸಾಮಾಜಿಕ ಸಹಕಾರ ಬೇಡುತ್ತದೆ. ಹಲವು ರೀತಿಯ ಬಿರುಕುಗಳಿರುವ ಸಮಾಜದಲ್ಲಿ ಸಾಮಾಜಿಕ ಸಹಕಾರ ಕಷ್ಟ.

ಭಾರತದಲ್ಲಿ ಆರ್ಥಿಕ ಅಸಮಾನತೆ ತೀವ್ರವಾಗಿದೆ. ಬಡವರು ಹಾಗೂ ಶ್ರೀಮಂತರು ವಿಭಿನ್ನ ಭಾರತಗಳಲ್ಲಿ ಬದುಕುತ್ತಿದ್ದಾರೆ. ಅರ್ಧದಷ್ಟು ಜನ ದೇಶದ ಶೇ 6ರಷ್ಟು ಸಂಪತ್ತನ್ನಷ್ಟೇ ಹಂಚಿಕೊಂಡು ಬದುಕುತ್ತಿದ್ದಾರೆ. ಬಹುತೇಕ ಸಂಪತ್ತು ಮೇಲ್ವರ್ಗದವರ ಕೈಯಲ್ಲಿದೆ. ಭಾರತದಲ್ಲಿ ಲಿಂಗತಾರತಮ್ಯವು ಭ್ರೂಣದಲ್ಲೇ ಪ್ರಾರಂಭವಾಗುತ್ತದೆ. ದೇಶದಲ್ಲಿ ದುಡಿಯುತ್ತಿರುವ ಮಹಿಳೆಯರ ಪ್ರಮಾಣ ಕಡಿಮೆಯಾಗುತ್ತಿದೆ. ಬಹುಪಾಲು ಮಹಿಳೆಯರು ಶಿಕ್ಷಣ, ಸಂಪತ್ತಿನಂತಹ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇನ್ನೂ ದುರಂತವೆಂದರೆ, ಹಲವರು ಮೂರು ಬಗೆಯ ದೌರ್ಜನ್ಯಕ್ಕೆ ಒಳಗಾಗಿರುತ್ತಾರೆ. ಉದಾಹರಣೆಗೆ, ಅತ್ಯಾಚಾರಕ್ಕೆ ಒಳಗಾದ ಮಹಿಳೆ ಸಾಮಾನ್ಯವಾಗಿ ಬಡವಳೂ ದುರ್ಬಲ ವರ್ಗಕ್ಕೆ ಸೇರಿದವಳೂ ಆಗಿರುತ್ತಾಳೆ. ಅಂದರೆ, ಹೆಚ್ಚಾಗಿ ಅತ್ಯಾಚಾರಕ್ಕೆ ಒಳಗಾಗುವವರು ಬಡಮಹಿಳೆಯರಾಗಿರುತ್ತಾರೆ.

ಪಕ್ಕದ ಬಾಂಗ್ಲಾದೇಶ, ಶ್ರೀಲಂಕಾ ಹಾಗೂ ನೇಪಾಳವು ಅಸಮಾನತೆಯ ತೀವ್ರತೆಯನ್ನು ತಗ್ಗಿಸಿಕೊಳ್ಳುವಲ್ಲಿ ಬಹಳಷ್ಟು ಸಫಲವಾಗಿವೆ. ಸುದೀರ್ಘ ಸಾಮಾಜಿಕ ಚಳವಳಿಗಳು, ಸಾರ್ವಜನಿಕ ಸೇವೆ ಹಾಗೂ ಮಹಿಳೆಯರ ಪಾಲ್ಗೊಳ್ಳುವಿಕೆಯಿಂದಾಗಿ ಜನರ ಜೀವನಮಟ್ಟ ಬಹಳಷ್ಟು ಸುಧಾರಿಸಿದೆ. ಶಿಕ್ಷಣ, ಆರೋಗ್ಯದಂತಹ ಅವಶ್ಯ ಸೌಲಭ್ಯಗಳು ಉಚಿತವಾಗಿ ಸಿಗುತ್ತಿವೆ. ಆಸ್ಪತ್ರೆ ಹಾಗೂ ಶಾಲೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ. ಏಷ್ಯಾದಲ್ಲೇ ಮೊದಲಿಗೆ ಮತದಾನದ ಹಕ್ಕು ಪಡೆದವರು ಶ್ರೀಲಂಕಾದ ಮಹಿಳೆಯರು.

ಭಾರತದೊಳಗೆ ದಕ್ಷಿಣದ ರಾಜ್ಯಗಳು ಹೆಚ್ಚಿನ ಪ್ರಗತಿಯನ್ನು ಸಾಧಿಸಿವೆ. ಬಿಹಾರ, ಉತ್ತರಪ್ರದೇಶದಂತಹ ರಾಜ್ಯಗಳು ಮಾನವ ಸಂಪನ್ಮೂಲ ಸೂಚಿಯಲ್ಲಿ ಬಹಳಷ್ಟು ಹಿಂದಿವೆ. ಕನಿಷ್ಠ ಮಟ್ಟದ ಆರ್ಥಿಕ, ಶೈಕ್ಷಣಿಕ ಹಾಗೂ ಇತರ ಅವಶ್ಯ ಸೇವೆಗಳಿಂದ ವಂಚಿತರಾದವರ ಸಂಖ್ಯೆ ಕೇರಳ, ತಮಿಳುನಾಡಿಗೆ ಹೋಲಿಸಿದರೆ ಹಲವು ಪಟ್ಟು ಹೆಚ್ಚಿಗೆ ಇದೆ. ಕೇರಳ ಹಾಗೂ ತಮಿಳುನಾಡಿನಲ್ಲಿ ಸಾಮಾಜಿಕ ಚಳವಳಿಗಳು, ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ಚಳವಳಿಯಂತಹ ಕಾರಣಗಳಿಂದಾಗಿ ಅಸಮಾನತೆಯ ತೀವ್ರತೆ ಕಡಿಮೆಯಾಗಿದೆ. ಅದಕ್ಕೆ ವ್ಯತಿರಿಕ್ತವಾಗಿ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಜಾತಿ ದೌರ್ಜನ್ಯ, ಅತ್ಯಾಚಾರ ಪ್ರಕರಣಗಳು ಹೆಚ್ಚು ವರದಿಯಾಗುತ್ತಿವೆ. ಸರ್ಕಾರಗಳು ಸಾಮಾಜಿಕ ರಕ್ಷಣೆಗಾಗಿ ಮಾಡುತ್ತಿರುವ ಖರ್ಚು ಕೂಡ ಕಡಿಮೆ. ಹಾಗಾಗಿ, ಅಲ್ಲಿ ಆರೋಗ್ಯ ಹಾಗೂ ಶಿಕ್ಷಣ ಕ್ಷೇತ್ರಗಳು ಹಿಂದೆ ಬಿದ್ದಿವೆ. ಪ್ರಗತಿಯೂ ಕುಂಠಿತವಾಗಿದೆ.

ಹೆಚ್ಚಿನ ಆರ್ಥಿಕ ಬೆಳವಣಿಗೆ ಆಗದಿದ್ದಾಗಲೂ ಪ್ರಜೆಗಳಿಗೆ ಉತ್ತಮ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ ಹಾಗೂ ನೈರ್ಮಲ್ಯವನ್ನು ಒದಗಿಸುವುದಕ್ಕೆ ಬಡದೇಶಗಳಿಗೆ ಸಾಧ್ಯ. ಜಿಡಿಪಿ ಹೆಚ್ಚಳದಿಂದ ಇದೆಲ್ಲಾ ಅದರಷ್ಟಕ್ಕೆ ಅದೇ ಆಗಿಬಿಡುವುದಿಲ್ಲ. ಅಷ್ಟೇ ಅಲ್ಲ, ಇದನ್ನು ಸಾಧಿಸುವುದಕ್ಕೆ ಜಿಡಿಪಿಯ ಹೆಚ್ಚಳ ಅನಿವಾರ್ಯವೂ ಅಲ್ಲ. ಜನರ ನಡುವಿನ ಜಾತಿ, ವರ್ಗ, ಲಿಂಗ ಆಧಾರಿತ ಅಂತರಗಳನ್ನು ತಗ್ಗಿಸುವ ಮೂಲಕ ಸಾಮಾಜಿಕ ಸಹಕಾರವನ್ನು ಸಾಧಿಸುತ್ತಾ, ಅವರ ಒಳಿತಿಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಮಾನವ ಅಭಿವೃದ್ಧಿಯನ್ನು ಸಾಧಿಸಬೇಕಾಗಿದೆ. ಸಮಾನತೆ ನಮ್ಮ ಸಾಮೂಹಿಕ ಆಯ್ಕೆಯಾಗಬೇಕಾಗಿದೆ.

ಚುರುಮುರಿ



ಶಾಸಕರು ಎಲ್ಲವರೆ?

• ಡಿ.ಎಸ್.ಲಿಂಗರಾಜು

ಕೈಲಿದ್ದ ಮೊಬೈಲ್ ನೋಡಿಕ್ಯಂದು ಒಬ್ಬನೇ ಹೋಯ್ತಿದ್ದೆ. ಎದುರಿಗೆ ಬಂದ ತುರೇಮಣೆ 'ಏನ್ಲಾ, ನಿನಗೂ ಮೊಬೈಲ್ ರೀಲ್ಸ್ ಹುಚ್ಚು ಅಮರಿಕ್ಯಂಡದೇನೋ?' ಅಂತ ಬೋದರು.

'ಇಲ್ಲ ಸಾ, ನಾನು ರಾಜಕೀಯ ನಾಯಕರ ಹೆಜ್ಜೆ ಗುರುತು ಪಿಪಿಎಸ್ ಟ್ರಾಕ್ ಮಾಡ್ತಾ ಇದ್ವಿ' ಅಂತಂದೆ.

'ಜಿಪಿಎಸ್ ಗೊತ್ತದೆ, ಅದ್ಯಾವುದ್ಲಾ ಪಿಪಿಎಸ್ಸು ಟ್ರಾಕಿಂಗು?'

'ಸಾ, ಇದು ಪೊಲಿಟಿಕಲ್ ಪೊಸಿಶನಿಂಗ್ ಸಿಸ್ಟಂ ಅಂತ. ಯಾವ ನಾಯಕರು ಯಾವ ಪಕ್ಷದಲ್ಲಿ ಲಂಚು-ಡಿನ್ನರ್ ಮಾಡಿಕ್ಯಂದು ಹೊಟ್ಟೆ ಜೀವಣ ನಡೆಸ್ತಾವ್ರೆ ಅಂತ ನೋಡಕ್ಕೆ ಹೊಸಾ ಆಪ್ ಬಂದದೆ. ಅದರ ಲೈವ್ ಲೊಕೇಶನ್ ಮ್ಯಾಪ್ ಓಪನ್ ಮಾಡಿಕ್ಯಂಡ್ರೆ ಶಾಸಕರು ಎಲ್ಲಿ, ಏನು ಕಡಿದು ಕಟ್ಟೆ ಹಾಕ್ತಾವ್ರೆ ಅಂತ ಗೊತ್ತಾತದೆ' ಬಹಳ ಹೆಮ್ಮೆಯಿಂದ ಹೇಳಿದೆ.

'ನೀವೆಲ್ಲೋಗಿದ್ರಿ ಸಾ? ಇಕ್ಕಡಿಂದ ಬತ್ತುದರಿ' ಕೇಳಿದೆ.

'ನನ್ನ ಸ್ನೇಹಿತರ ಮಗ ಕಾಲೇಜಲ್ಲಿ ಅತಿಥಿ ಉಪನ್ಯಾಸಕ ಆಗ್ಯವನೆ ಕನೋ. 'ಒಂದು ಹೆಣ್ಣದೆ ಮದುವೆ ಮಾಡಿಕ್ಯಂದೀಲಾ' ಅಂತ ಕೇಳುಕ್ಕೆ ಹೋಗಿದ್ದೆ. ನನ್ನ ಮಾತು ಕೇಳ್ತಿದ್ದಂಗೇ ಕಣ್ಣಗೆ ನೀರಾಕ್ಯಂದ. 'ನಾವು ಪೌರಕಾರ್ಮಿಕರಿಗಿಂತ ಕಡೆಯಾಗೋದೋ ಕಣ ಚಿಗಪ್ಪ. ವತ್ತರಿಂದ ಸಂದೆಗಂಟ ಗೇದ್ರೂ ಬರೀ ಇಪ್ಪತ್ತೈದು ಸಾವಿರ ಸಂಬಳ. ಪರ್ಮನೆಂಟ್ ಆಗಕುಲ್ಲ. ನಾನು ಲಚ್ಚರ್ ಕೆಲಸ ಬುಟ್ಟು ಬಿಬಿಎಂಪಿಗೆ ಪೌರಕಾರ್ಮಿಕನಾಗಿ ಸೇರಿಕ್ಯತ್ತೀನಿ' ಅಂತ ಅತ್ತುಗಂದ ಕಲಾ'.

'ನೀವೇನಂದ್ರಿ?'

'ನೊಂದ್ಕಬ್ಯಾಡ ಮಗ, ಲಚ್ಚರುಗಳು ಮನಸ್ಸಿನ ಕೊಳೆ ತೊಳೆಯೋ ಜಲಗಾರರೇ ಅಂತ ಸಮಾಧಾನ ಮಾಡಿ 'ಶಾಸಕರ ತಾವು ಮಾತಾಡಿ ಬಿಬಿಎಂಪಿಲಿ ಸೇರಿಸ್ತೀನಿ' ಅಂತ ಹೇಳಿ ಬಂದಿವ್ನಿ. ಈಗ ಶಾಸಕರು ಎಲ್ಲವರೆ ನೋಡು' ತುರೇಮಣೆ ಸೂಚಿಸಿದರು.

'ಸಾ, ಶಾಸಕರು ಸೊಂಟಕ್ಕೆ ಬಾಂಬು ಕಟ್ಟಿಗ್ಯಂದು ಯುದ್ಧಕ್ಕೆ ಹೊಂಟವ್ರೋ ಏನೋ ಕಾಣೆ. ಆಪಲ್ಲಿ ನೋಡ್ತೀನಿ ಇರ್ರಿ' ಅಂತಂದು ಆಪು ತೆಗೆದ್ರೆ ಅದು ಯುದ್ಧಕ್ಕೆ ನಡಕೋಯ್ತಿರಾ, ಬೈಕಗೋಯ್ತಿರಾ ಅಂತ ಕೇಳಕ್ಕೆ ಮುಟ್ಟಿಗ್ಯತ್ತು.

ಸಂಗತ

'ಮನ್ಸ'ರಾದವರು ಪರಿಗಣಿಸಬೇಕಲ್ಲವೇ?

ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇಲ್ಲದ ಅಥವಾ ಬಿಟ್ಟುಹೋಗಿರಬಹುದಾದ ಸಮುದಾಯಗಳ ಅಳಲು ಯಾರಿಗೂ ಕೇಳದಂತಾಗಿದೆ

• ಸಿ.ಎಸ್.ದ್ವಾರಕಾನಾಥ್

ಒಳಮೀಸಲಾತಿ ಜಾರಿಗಾಗಿ ನ್ಯಾಯಮೂರ್ತಿ ನಾಗಮೋಹನದಾಸ್ ಅವರ ಏಕಸದಸ್ಯ ಆಯೋಗವು ಪರಿಶಿಷ್ಟ ಜಾತಿಗಳ ಸಮೀಕ್ಷೆಗೆ ಮುಂದಾಗಿದೆ. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಗಳ ವಿವರ ಪಡೆಯಲು ಸನ್ನದ್ಧವಾಗಿದೆ. ಸಮೀಕ್ಷೆಗೆ ಬಂದಾಗ ಆಯಾ ಜಾತಿಗಳ ಹೆಸರುಗಳನ್ನು ಸ್ಪಷ್ಟವಾಗಿ ಬರೆಸುವಂತೆ, ಈ ಪಟ್ಟಿಯಲ್ಲಿರುವ ಬಹುಸಂಖ್ಯಾತ, ಜಾಗೃತ ಮತ್ತು ಸಂಘಟಿತ ಜಾತಿಗಳ 'ವಿದ್ಯಾವಂತರು' ತಮ್ಮ ತಮ್ಮ ಜಾತಿಗಳಲ್ಲಿ ಅರಿವು ಮೂಡಿಸುತ್ತಿದ್ದಾರೆ. ಇಲ್ಲದಿದ್ದರೆ ಸೌಲಭ್ಯ ಸಿಗುವುದಿಲ್ಲ ಎಂದು ಎಚ್ಚರಿಸುತ್ತಿದ್ದಾರೆ.

ಆಯೋಗವು ಪರಿಶಿಷ್ಟ ಜಾತಿಯ ಪ್ರಸಕ್ತ ಅಧಿಸೂಚಿತ ಪಟ್ಟಿಯನ್ನೇ ಪರಿಗಣಿಸಿದರೆ, ಮಾದಿಗ, ಹೊಲೆಯ, ಲಂಬಾಣಿ, ಬೋವಿ ಮತ್ತು ಕೊರಮರಂತಹ (ಕೊರಚ) ಜನಸಂಖ್ಯಾ ಬಾಹುಳ್ಯವಿರುವ ಸಮುದಾಯಗಳಿಗೆ ಅನುಕೂಲವಾಗುತ್ತದೆ. ಆದರೆ ಈ ಸಮುದಾಯಗಳೊಂದಿಗೆ ಯಾವ ರೀತಿಯಿಂದಲೂ ಕುಲಶಾಸ್ತ್ರೀಯವಾಗಿ ಸೇರದ, ಸ್ವತಂತ್ರ ಅಸ್ತಿತ್ವವುಳ್ಳ ಸಣ್ಣ ಸಮುದಾಯಗಳನ್ನು ಈ ದೊಡ್ಡ ಸಮುದಾಯಗಳ ಅಡಿಯಲ್ಲಿ ಪರಿಗಣಿಸಿದರೆ ಅವುಗಳ 'ಅಸ್ಮಿತೆ' ಕಳೆದು ಹೋಗುತ್ತದೆ. ಉದಾಹರಣೆಗೆ, ಅಧಿಸೂಚಿತ ಪಟ್ಟಿಯ ಕ್ರಮಸಂಖ್ಯೆ 22ರಲ್ಲಿ 'ಭಾಂಬಿ' ಎಂಬ ಸಮುದಾಯದ ಕೆಳಗೆ ಬಾಂಭಿ, ಅಸಾದರು, ಅಸೋಡಿ, ಚಮಾಡಿಯ, ಚಮ್ಮಾರ್, ಚಂಭರ್, ಚಮ್ಗಾರ್, ಹರ್‍ಲಯ್ಯ, ಹರಳಿ, ಕಲ್ಪ, ಮಾಚಿಗೋರ್, ಮೋಚಿಗಾರ್, ಮಾದರ್-ಮಾದಿಗ್, ಮೋಚಿ, ಮುಚ್ಚಿ, ತೆಲುಗುಮೋಚಿ, ಕಮಾಟಿ, ರಾನಿಗಾರ್ ರೋಹಿದಾಸ್, ರೋಹಿತ್, ಸಮಗಾರ್ ಮುಂತಾಗಿ 23 ಜಾತಿಗಳಿವೆ. ಈ ಎಲ್ಲರನ್ನೂ ಒಟ್ಟಾಗಿಸಿ 'ಭಾಂಬಿ' ಜಾತಿಯಡಿ ಕ್ರಮಸಂಖ್ಯೆ 22ರ ಒಳಗೆ ಸೇರಿಸಿಬಿಟ್ಟರೆ, ಪ್ರತ್ಯೇಕ ಅಸ್ತಿತ್ವ ಹೊಂದಿರುವ ಕೆಲವು ಜಾತಿಗಳು ತಮ್ಮ ಅಸ್ಮಿತೆ ಕಳೆದುಕೊಳ್ಳುತ್ತವೆ. ಇದೇ ರೀತಿ ಪಟ್ಟಿಯ ಕ್ರಮಸಂಖ್ಯೆ 21ರ ಅಡಿಯಲ್ಲಿ 'ಭಂಗಿ' ಜಾತಿಯೊಂದಿಗೆ ಹತ್ತು ಜಾತಿಗಳನ್ನು ಸೇರಿಸಲಾಗಿದೆ. ಆಶ್ಚರ್ಯವೆಂದರೆ 'ಹಲಾಲ್‌ಕೋರ್' ಎಂಬ ಮುಸ್ಲಿಂ ಸಮುದಾಯವೂ ಇದರೊಂದಿಗೆ ಸೇರಿದೆ!

'ಭಂಗಿ' ಎಂಬುದು ಮಲ ಬಳಿಯುವ ಜಾಡಮಾಲಿ ಜಾತಿ. ಇದರ ಅಡಿ ಇರುವ ಎಲ್ಲ ಜಾತಿಗಳವರೂ ಇದೇ ಕುಲವೃತ್ತಿ ಮಾಡುತ್ತಿರುವವರಾದರೂ ಈ ಎಲ್ಲ ಜಾತಿಗಳಿಗೂ ಪ್ರತ್ಯೇಕ ಅಸ್ತಿತ್ವವಿದೆ ಎಂಬುದು ಗಮನಾರ್ಹ. ಈ ರೀತಿ ಪರಿಗಣಿಸುವುದಾದರೆ, ಪರಿಶಿಷ್ಟ ಜಾತಿ ಪಟ್ಟಿಯನ್ನು ವಿಸ್ತರಿಸಿ 181 ಜಾತಿಗಳಿಗೆ ಆಯೋಗ ಅವಕಾಶ ನೀಡಬೇಕಾಗುತ್ತದೆ.

ಇನ್ನು ಸಮೀಕ್ಷೆಗಾಗಿಯೇ ಹೊರತಂದಿರುವ ಪರಿಶಿಷ್ಟ ಜಾತಿ ಪಟ್ಟಿಯ ಕೈಪಿಡಿಯಲ್ಲಿ ಬಿಟ್ಟುಹೋಗಿರಬಹುದಾದ ಸಮುದಾಯಗಳ ಅಳಲು ಯಾರಿಗೂ ಕೇಳಿಸುತ್ತಿಲ್ಲ. ಉದಾಹರಣೆಗೆ, ಸರ್ಕಾರದ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬಿಟ್ಟುಹೋಗಿರುವ ತುಳುನಾಡಿನ 'ಮನ್ಸ' ಜಾತಿಯ ಆತಂಕ ನಿಜಕ್ಕೂ ಮಾನವೀಯತೆಯಿಂದ ಆಲಿಸಬೇಕಾದುದು! ಸುಮಾರು ಐದು ಲಕ್ಷ ಜನಸಂಖ್ಯೆ ಇರುವ ಈ ಪ್ರಮುಖ ಅಸ್ಪೃಶ್ಯ ಜಾತಿಯನ್ನೇ ಪರಿಗಣಿಸದಿರುವುದು ಅಕ್ಷಮ್ಯ. ಜಾತಿ ಪಟ್ಟಿಯಲ್ಲಿ ಹೆಸರು ಇಲ್ಲದ ಕಾರಣಕ್ಕೆ ಆದಿ ಕರ್ನಾಟಕ, ಆದಿ ದ್ರಾವಿಡ, ಹಸಲರು ಮುಂತಾಗಿ ಇಷ್ಟೂ ಕಾಲ ಜಾತಿ ಪ್ರಮಾಣಪತ್ರ ಪಡೆದು ಅಷ್ಟಿಷ್ಟು ಸವಲತ್ತು ಪಡೆಯುತ್ತಿದ್ದ 'ಮನ್ಸ'ರು ತಮ್ಮ ಅಸ್ಮಿತೆಗಾಗಿ ಮೂರು ದಶಕಗಳಿಂದ ಹೋರಾಡುತ್ತಿದ್ದಾರೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮೇಲ್ವರ್ಗಗಳು 'ಮನ್ಸ'ರನ್ನು ತೀರಾ ಕೀಳಾಗಿ ಕಾಣುವುದರಿಂದ ಕೆಲವು ಪ್ರದೇಶಗಳಲ್ಲಿ ತಮ್ಮ ಜಾತಿಯ ಗುರುತನ್ನು ಮರೆಮಾಚುವುದೂ ಈ ಜಾತಿಗೆ ಪ್ರತ್ಯೇಕ ಅಸ್ಮಿತೆ ಸಿಗದಿರುವುದಕ್ಕೆ ಕಾರಣವಾಗಿದೆ.

'ಮನ್ಸ' ಜಾತಿಯನ್ನು ಅನೇಕ ಮಾನವ ಶಾಸ್ತ್ರೀಯ ಸಂಶೋಧಕರು ಗುರುತಿಸಿದ್ದಾರೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯ ಹೊರತಂದಿರುವ ದಿವಂಗತ ಡೀಕಯ್ಯನವರ 'ತುಳುನಾಡಿನ ಮನ್ಸರು: ಒಂದು ಜನಾಂಗಿಕ ಅಧ್ಯಯನ' ಎಂಬ ಪುಸ್ತಕದಲ್ಲಿ ಮನ್ಸರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಐತಿಹಾಸಿಕ ವಿವರಗಳಿವೆ. ವಾಮನ ನಂದಾವರ ಅವರ 'ಕರ್ನಾಟಕ ಬುಡಕಟ್ಟುಗಳು', ಪ್ರೊ. ಲಕ್ಕಪ್ಪಗೌಡ ಅವರು ಸಂಪಾದಿಸಿರುವ 'ಕರ್ನಾಟಕ ಬುಡಕಟ್ಟುಗಳು: ಸಂಪುಟ ಒಂದು', ಕೆ.ಎಸ್.ಸಿಂಗ್ ಅವರ 'ಪ್ಯೂಪಿಲ್ಸ್ ಆಫ್ ಇಂಡಿಯಾ ಪ್ರಾಜೆಕ್ಟ್- 1998', 'ಆರ್.ಜಿ.ಕಾಕಡೆ ಅವರ 'ಡಿಪ್ರೆಸ್ಡ್ ಕ್ಲಾಸಸ್ ಆಫ್ ಸೌತ್ ಕೆನರ', ಎಲ್.ಜಿ.ಹಾವನೂರು ವರದಿ, ನ್ಯಾಯಮೂರ್ತಿ ಸದಾಶಿವ ವರದಿಯಲ್ಲೂ 'ಮನ್ಸ' ಸಮುದಾಯದ ಬಗ್ಗೆ ಮಾಹಿತಿಗಳಿವೆ.

ಮನ್ಸ ಜಾತಿಯ ಕೆಲವರು ಅನೇಕ ವರ್ಷಗಳಿಂದಲೂ ಬಂದಬಂದ ಮುಖ್ಯಮಂತ್ರಿಗಳಿಗೆ, ಸಮಾಜ ಕಲ್ಯಾಣ ಸಚಿವರಿಗೆ ಮನವಿ ನೀಡಿ ತಮ್ಮ ಜಾತಿಯ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ವಿನಂತಿಸಿದ್ದಾರೆ. ಒಮ್ಮೆ ಯಾವುದಾದರೂ ವಿಶ್ವವಿದ್ಯಾಲಯದಿಂದ ಕುಲಶಾಸ್ತ್ರೀಯ ಅಧ್ಯಯನವಾದರೆ ಇವರನ್ನು ಪರಿಶಿಷ್ಟ ಪಟ್ಟಿಗೆ ಸೇರಿಸಲು ಅನುಕೂಲ ಆಗುತ್ತದೆ. ಒಳಮೀಸಲಾತಿ ನೀಡುವಾಗ ತಮ್ಮ ಸಮುದಾಯವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಒಳಮೀಸಲಾತಿ ಏಕಸದಸ್ಯ ಆಯೋಗಕ್ಕೂ ಈಚೆಗೆ ಮನವಿ ನೀಡಿ ಬೇಡಿಕೊಂಡಿದ್ದಾರೆ. ಈ ನತದೃಷ್ಟ ಸಮುದಾಯದ ಮಾತನ್ನು ಕೇಳಿಸಿಕೊಳ್ಳಲು ಯಾರಿಗೂ ವ್ಯವಧಾನ ಇಲ್ಲದಿರುವುದು ದುರದೃಷ್ಟಕರ.

ಹೀಗೆ ಹಳೆಯ ಪಟ್ಟಿ ಹಿಡಿದು ಜಾತಿ ಸಮೀಕ್ಷೆಗೆ ಹೊರಟಿರುವುದು ನಾಳೆ ಸಮಸ್ಯೆಗಳನ್ನು ತಂದೊಡ್ಡುತ್ತದೆ. ಮನ್ಸದಂತಹ ಅನೇಕ ಜಾತಿಗಳು ಪಟ್ಟಿಯಿಂದ ಹೊರಗುಳಿದಿವೆ. ಇವಕ್ಕೆ ಧ್ವನಿಯಿಲ್ಲ, ಹೊರಬಂದು ಮಾತನಾಡಲಾರವು. ತಮ್ಮ ಕಣ್ಣ ಮುಂದೆಯೇ ನಡೆಯುವ ಅನುಕೂಲಸ್ಥ ಮತ್ತು ಸಂಘಟಿತ ಜಾತಿಗಳ ಅಟ್ಟಹಾಸವನ್ನು ನೋಡಿ ಅಸಹಾಯಕತೆಯಿಂದ ಯಾತನೆಪಡುತ್ತಲೇ ಮರೆಯಾಗಿಬಿಡುತ್ತವೆ.

ವಾಚಕರ ವಾಣಿ

ಭಾಷಾ ಕಲಿಕೆ: ತಾರತಮ್ಯ ದೂರವಾಗಲಿ

'ಪ್ರಥಮ ಭಾಷೆ ಮತ್ತು ನ್ಯಾಯದ ಗಂಟೆ' ಎಂಬ ಪು.ಸೂ.ಲಕ್ಷ್ಮೀನಾರಾಯಣ ರಾವ್ ಅವರ ಲೇಖನ (ಚರ್ಚೆ, ಮೇ 5) ಮತ್ತು ಅದೇ ವಿಷಯದ ಕುರಿತು ಪ್ರಕಟವಾದ ಜನಾರ್ದನ ಚ.ಶ್ರೀ. ಅವರ, ಪಿಯುಸಿ ಹಂತದ ಭಾಷಾ ಕಲಿಕೆ ಕುರಿತ ಮೂಲ ಲೇಖನ (ಸಂಗತ, ಮೇ 1) ಸಂಸ್ಕೃತ, ಹಿಂದಿ ಮತ್ತು ಕನ್ನಡ ಭಾಷೆಗಳ ಕಲಿಕೆ, ಪರಿಣತಿ ಹಾಗೂ ಮೌಲ್ಯಮಾಪನದಲ್ಲಿ ಐದಾರು ದಶಕಗಳಿಂದ ನಡೆಯುತ್ತಾ ಬಂದಿರುವ ತರತಮ ಧೋರಣೆಯನ್ನು ಸ್ಪಷ್ಟಪಡಿಸಿವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಓದಿ ಪೂರ್ಣಾಂಕ ಪಡೆದಿರುವ ವಿದ್ಯಾರ್ಥಿಗಳಿಗಿಂತ ತೃತೀಯ ಭಾಷೆಯಲ್ಲಿ ಪೂರ್ಣಾಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಸುಮಾರು ದುಪ್ಪಟ್ಟು ಇದೆ. ಭಾಷೆಗಳ ವಿಷಯದಲ್ಲಿ ತರತಮ ಕಲಿಕೆ ಮತ್ತು ತರತಮ ಮೌಲ್ಯಮಾಪನವನ್ನು ಇದು ಪ್ರತಿಫಲಿಸುತ್ತದೆ. ಸಂಸ್ಕೃತ ಮತ್ತು ಹಿಂದಿ ಭಾಷೆ ತೆಗೆದುಕೊಂಡು ಹೆಚ್ಚಿನ ಪರಿಣತಿ, ಪರಿಶ್ರಮ ಇಲ್ಲದೆ ಹೆಚ್ಚು ಅಂಕ ಪಡೆದು ಪಾಸಾಗಿಬಿಡಬಹುದು. ಅದರ ಪ್ರಯೋಜನ ಎಷ್ಟು, ಏನು ಎಂಬುದು ನಗಣ್ಯವಾಗಿದೆ. ಇದರಿಂದ ನಮ್ಮ ರಾಜ್ಯಭಾಷೆ ನಲುಗುವಂತಾಗಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಕಡ್ಡಾಯ ತೃತೀಯ ಭಾಷೆಯಾಗಿ, ಕಲಿಕೆಯಿಂದ ಅನುತ್ತೀರ್ಣವಾಗುತ್ತಿರುವ ಮಕ್ಕಳ ಸಂಖ್ಯೆ ದೊಡ್ಡದಿದೆ. ಮಕ್ಕಳ ಮೇಲೆ ಹಿಂದಿ ಭಾಷೆಯ ಕಲಿಕೆಯ ಭಾರವನ್ನು ಸ್ವಲ್ಪ ಕಡಿಮೆ ಮಾಡಿ ಕನ್ನಡ ಮತ್ತು ಇಂಗ್ಲಿಷ್ ಭಾಷೆ ಕಲಿಕೆಗೆ ಹೆಚ್ಚು ಒತ್ತು ನೀಡಬಹುದಾಗಿದೆ. ಪಿಯುಸಿ ಹಂತದಲ್ಲಿ ಬೇರೆ ಬೇರೆ ಭಾಷೆಗಳ ಕಲಿಕೆಯಲ್ಲಿ ಮತ್ತು ಮೌಲ್ಯಮಾಪನದಲ್ಲಿ ಆಗುತ್ತಿರುವ ತಾರತಮ್ಯವನ್ನು ಕೂಡಲೇ ದೂರ ಮಾಡಬೇಕಾಗಿದೆ. ಕನ್ನಡ ಮಾಧ್ಯಮಕ್ಕಿಂತ ಇಂಗ್ಲಿಷ್ ಮಾಧ್ಯಮ ಈಗ ಮುನ್ನೆಲೆಗೆ ಬರುತ್ತಿದೆ. ಎರಡೂ ಮಾಧ್ಯಮಗಳ ವಿದ್ಯಾರ್ಥಿಗಳ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ವಿಷಯವಾರು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ಇಂಗ್ಲಿಷ್ ಮತ್ತು ಕನ್ನಡ ಮಾಧ್ಯಮದ ಕಲಿಕೆಯ ಸಾಧಕ–ಬಾಧಕಗಳನ್ನೂ ಅರಿಯಬಹುದಾಗಿದೆ. ಶಿಕ್ಷಣ ಇಲಾಖೆ, ಪಿಯುಸಿ ಮಂಡಳಿ ಈ ಕುರಿತು ಗಮನಹರಿಸಬಹುದೇ?

ವೆಂಕಟೇಶ ಮಾಚಕನೂರ, ಧಾರವಾಡ

ಜೋಕೆ... ನಗೆ ಬಾಂಬ್‌ಗಳಿವೆ!

'ದೇಶಕ್ಕಾಗಿ ಯಾವುದೇ ತ್ಯಾಗಕ್ಕೆ ನಾನು ಸಿದ್ಧ. ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸಮ್ಮತಿಸಿದರೆ ಮೈಗೆ ಬಾಂಬ್ ಕಟ್ಟಿಕೊಂಡು ಯುದ್ಧಕ್ಕೆ ಹೋಗಲೂ ಸಿದ್ಧ' ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 4). ಇದಕ್ಕೆ ಖಂಡಿತ ಸಮ್ಮತಿ ಸಿಗುವುದಿಲ್ಲ ಎಂಬುದು ಜಮೀರ್ ಅವರಿಗೆ ಚೆನ್ನಾಗಿ ಗೊತ್ತಿದೆ! ಈ ರಾಜಕಾರಣಿಗಳು ಯಾವುದೇ ರಾಸಾಯನಿಕ ಬಳಸದೆ ತಮ್ಮ ಆಣಿಮುತ್ತುಗಳಿಂದ ಆಗಾಗ ಬಾಯಿಯಲ್ಲೇ ಹಸಿ, ಹುಸಿ ಬಾಂಬ್‌ಗಳನ್ನು ಸಿಡಿಸುತ್ತಾರೆ. ಯಾವುದೇ ಹಾನಿ ತಾರದ ಇವು 'ನಗೆ ಬಾಂಬ್'ಗಳಂತೂ ಹೌದು. ಇವನ್ನು 'ಟೈಂ ಪಾಸ್ ಬಾಂಬ್' ಎಂದು ನಾವು ನಗೆಚಟಾಕಿ ಹಾರಿಸಬಹುದು!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಅರಣ್ಯ ಪ್ರದೇಶದಲ್ಲಿ ಹೆದ್ದಾರಿ ಯೋಜನೆ ಸಲ್ಲ

ವನ್ಯಜೀವಿಗಳಿಗೆ ಹೆದ್ದಾರಿಗಳು ಉರುಳಾಗಿ ಪರಿಣಮಿಸಿರುವುದನ್ನು ಲೇಖನ (ಒಳನೋಟ, ಮೇ 4) ವಿವರಿಸಿದೆ. ಪ್ರಾಣಿ ಸಂಗ್ರಹಾಲಯಕ್ಕೆ ಭೇಟಿ ನೀಡಿ ಪ್ರಾಣಿಗಳ ಮೇಲೆ ಸಹಾನುಭೂತಿ ತೋರುವ ನಾವೇ ಹೀಗೆ ಪ್ರಾಣಿಗಳ ಹತ್ಯೆ ಮಾಡುತ್ತಿರುವುದು ಬೇಸರದ ಸಂಗತಿ. ಸಂರಕ್ಷಿತ ಮೀಸಲು ಅರಣ್ಯ ಪ್ರದೇಶ ಹಾಗೂ ಪರಿಸರ ಸೂಕ್ಷ್ಮ ವಲಯದಲ್ಲಿ ಹೆದ್ದಾರಿ ಯೋಜನೆಗಳನ್ನು ರೂಪಿಸುವುದು ನಮಗಿರುವ ಆಯ್ಕೆಯಾಗಬಾರದು. ವನ್ಯಜೀವಿಗಳ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಬೇಕು.

ಸುರೇಂದ್ರ ಪೈ, ಭಟ್ಕಳ

ಬೇಕಾಗಿದೆ ಪ್ರಗತಿಪರ ಚಿಂತನೆಯ ಕಿರುಚಿತ್ರ

ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದ ಅರ್ಚಕರಿಗೆ ಪ್ರಗತಿಪರ ಚಿಂತನೆಯನ್ನು ಪರಿಚಯಿಸಲು ಅನುಕೂಲವಾಗುವಂತೆ ಗುರುಕುಲ ಆರಂಭಿಸಲು ಚಿತ್ರದುರ್ಗದಲ್ಲಿ ಜಾಗ ಗುರುತಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿರುವುದಾಗಿ (ಪ್ರ.ವಾ., ಮೇ 4) ವರದಿಯಾಗಿದೆ. ಪ್ರಗತಿಪರ ಚಿಂತನೆಯ ಅಗತ್ಯವು ಹಿಂದುಳಿದ, ದಲಿತ ಸಮುದಾಯಗಳೆನ್ನದೆ ನಾಡಿನಾದ್ಯಂತ ಎಲ್ಲ ಸಮಾಜಗಳಿಗೂ ಬೇಕಾಗಿದೆ. ಅದಕ್ಕಾಗಿ ನಿರ್ದಿಷ್ಟ ಜಾಗ ಹುಡುಕಿ, ಅಲ್ಲಿ 'ದಲಿತ ಗುರುಕುಲ' ಮಾಡಿದರೆ, ಈಗ ನಾಡಿನಲ್ಲಿರುವ ಬಹುತೇಕ ಬಲಿತವರ ಮಠಗಳಂತಾಗಿ, ಅವುಗಳಲ್ಲಿ ಇದೂ ಒಂದಾಗಿ, ಮುಂದೆ ಜಡವಾದೀತೆಂಬ ಭವಿಷ್ಯದ ಭಯವೂ ಪ್ರಜ್ಞಾವಂತರಿಗೆ ಬರಬಹುದು.

ನಾವು ಮಕ್ಕಳಿದ್ದಾಗ ವಾರ್ತಾ ಇಲಾಖೆಯ ಸಂಚಾರ ವಾಹನ ಬಂದು ಊರಿನ ಮಧ್ಯ ಭಾಗದಲ್ಲಿ ನಿಲ್ಲುತ್ತಿತ್ತು. ಆ ವಾಹನದ ಬದಿಗೆ ಇಲ್ಲವೇ ಮನೆಯ ಗೋಡೆಯ ಮೇಲೆ ಕಪ್ಪು ಬಿಳುಪಿನ ಕಿರುಚಿತ್ರಗಳು ಮೂಡಿಬರುತ್ತಿದ್ದವು. ಮಲೇರಿಯಾ, ಸಿಡುಬು, ಪ್ಲೇಗ್, ಕಾಲರಾ, ಕಾಲುಬಾಯಿಯಂತಹ ರೋಗಗಳ ನಿವಾರಣೆ ಬಗ್ಗೆ ಅಗತ್ಯ ಮಾಹಿತಿ ಕೊಡುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರ ವ್ಯಕ್ತಿಚಿತ್ರಗಳು, ಸಾಮಾಜಿಕ ಕರ್ತವ್ಯ, ಜವಾಬ್ದಾರಿಗಳಿಗೆ ಸಂಬಂಧಿಸಿದ ವಿಷಯಗಳು ಮೂಡಿಬರುತ್ತಿದ್ದವು. ಅವುಗಳನ್ನು ನೋಡಿ ಅನಕ್ಷರಸ್ಥರಿಗೂ ಒಂದಷ್ಟು ತಿಳಿವಳಿಕೆ ಮೂಡುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಮನೆ ಮನೆಗೆ ಟಿ.ವಿ, ಮೊಬೈಲ್ ಫೋನ್, ಇಂಟರ್ನೆಟ್ ಬಂದಮೇಲೆ ಇಲಾಖೆ ತನ್ನ ಕೆಲಸವನ್ನು ಕಡಿಮೆ ಮಾಡಿದಂತಿದೆ. ಅಲ್ಲದೆ ಶಾಲಾ ಕಾಲೇಜುಗಳಲ್ಲಿ ಹೆಚ್ಚಾಗಿ ಅಂಕ ಗಳಿಕೆಯ ಕಡೆಗೆ ಶಿಕ್ಷಣ ಕೇಂದ್ರೀಕೃತವಾಗಿದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್ ಕಡೆಗೆ ಯುವಜನರ ಗಮನ ಹೋದಮೇಲೆ ಪುಸ್ತಕ ಓದುಗರ ಸಂಖ್ಯೆ ಕಡಿಮೆಯಾಗಿದೆ. ಹಲವು ಕಾರಣಗಳಿಂದಾಗಿ ವೈಜ್ಞಾನಿಕ ಮತ್ತು ವೈಚಾರಿಕ ಪ್ರಜ್ಞೆ ಇಲ್ಲವಾಗಿದೆ. ನಾವೀಗ ಮತ್ತೆ ಹಳೆಯದರ ಕಡೆಗೆ ಹೆಜ್ಜೆ ಹಾಕಬೇಕಾಗಿದೆ. ಪ್ರತಿ ಜಿಲ್ಲೆ, ತಾಲ್ಲೂಕು, ಗ್ರಾಮಕ್ಕೂ ಮುಟ್ಟುವಂತೆ ಮಹಾತ್ಮರ ವ್ಯಕ್ತಿಚಿತ್ರಗಳು ಮತ್ತು ಅವರ ಬೋಧನೆಗಳನ್ನು ಕಿರುಚಿತ್ರಗಳ ರೂಪದಲ್ಲಿ ಪ್ರತಿಯೊಬ್ಬರಿಗೂ ಮುಟ್ಟಿಸಲು ಸರ್ಕಾರ ಪ್ರಯತ್ನ ಮಾಡಲೇಬೇಕಾದ ತುರ್ತು ಅಗತ್ಯವಿದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತ, ಪಾಕ್ ವಾಯುಪ್ರದೇಶಗಳ ನಿರ್ಬಂಧ

ವಿಮಾನಯಾನ ಸಂಸ್ಥೆಗಳಿಗೆ ಹೊರೆ

ಪಹಲ್ಗಾಮ್ ದಾಳಿಯ ನಂತರ ಭಾರತವು ಪಾಕಿಸ್ತಾನದ ವಿರುದ್ಧ ಹಲವು ಕ್ರಮಗಳನ್ನು ಕೈಗೊಂಡಿತು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನವು ಶಿಮ್ಲಾ ಒಪ್ಪಂದ ಅಮಾನತಿನಲ್ಲಿ ಇಡುವುದರ ಜತೆಗೆ, ಅದರ ವಾಯುಪ್ರದೇಶವನ್ನು ಭಾರತದ ವಿಮಾನಗಳಿಗೆ ನಿರ್ಬಂಧಿಸಿದೆ. ಭಾರತ ಕೂಡ ಪಾಕಿಸ್ತಾನದ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ಮುಚ್ಚಿದೆ. ಎರಡೂ ದೇಶಗಳ ವಿಮಾನಯಾನ ಸಂಸ್ಥೆಗಳು ಮತ್ತು ಆರ್ಥಿಕತೆಯ ಮೇಲೆ ಇದು ವ್ಯತಿರಿಕ್ತ ಪರಿಣಾಮಗಳನ್ನು ಬೀರಲಿದೆ. ಭಾರತದ ವಿಮಾನಯಾನ ಸಂಸ್ಥೆಗಳು ತಿಂಗಳಿಗೆ ₹306 ಕೋಟಿ ರೂಪಾಯಿ ನಷ್ಟ ಭರಿಸಬೇಕಿದೆ. ಇನ್ನೊಂದೆಡೆ, ಏರ್‌ಫ್ರಾನ್ಸ್, ಜರ್ಮನಿಯ ಲುಫ್ತಾನ್ಸಾ ಸೇರಿದಂತೆ ವಿವಿಧ ದೇಶಗಳ ವಿಮಾನಯಾನ ಕಂಪನಿಗಳು ಕೂಡ ಪಾಕಿಸ್ತಾನದ ವಾಯುಪ್ರದೇಶವನ್ನು ಬಿಟ್ಟು ಪರ್ಯಾಯ ಮಾರ್ಗವನ್ನು ಅನುಸರಿಸುತ್ತಿವೆ

ಪ್ರಜಾವಾಣಿ ವಾರ್ತೆ

ಪಹಲ್ಗಾಮ್ ಘಟನೆಯ ನಂತರ ಭಾರತ–ಪಾಕಿಸ್ತಾನದ ನಡುವೆ ಉಂಟಾಗಿರುವ ಬಿಕ್ಕಟ್ಟಿನಲ್ಲಿ ವಾಯುಪ್ರದೇಶ ಬಳಕೆಗೆ ಸಂಬಂಧಿಸಿದ ನಿರ್ಬಂಧ ಪ್ರಮುಖವಾದುದು. ಮೊದಲು ಪಾಕಿಸ್ತಾನವು (ಏ.24) ಭಾರತದ ವಿಮಾನಗಳಿಗೆ ತನ್ನ ವಾಯು ಪ್ರದೇಶವನ್ನು ನಿರ್ಬಂಧಿಸಿತು. ಬಳಿಕ ಭಾರತವೂ (ಏ.30) ಅಂಥದ್ದೇ ಕ್ರಮ ಕೈಗೊಂಡಿತು. ಪಾಕಿಸ್ತಾನ ಗುತ್ತಿಗೆ ಪಡೆದಿರುವ, ಅಲ್ಲಿ ನೋಂದಾಯಿಸಲಾಗಿರುವ, ಅಲ್ಲಿಂದ ಕಾರ್ಯಾಚರಿಸುತ್ತಿರುವ ವಿಮಾನಗಳಿಗೆ ತನ್ನ ವಾಯು ಪ್ರದೇಶ ಬಳಸುವಂತಿಲ್ಲ ಎಂದು ಭಾರತವು 'ನೋಟಮ್' (ನೋಟಿಸ್ ಟು ಏರ್‌ಮನ್) ಹೊರಡಿಸಿದೆ. ಪ್ರಯಾಣಿಕ, ಸರಕು ಮತ್ತು ಸೇನಾ ವಿಮಾನಗಳಿಗೆ ಇದು ಅನ್ವಯಿಸುತ್ತಿದ್ದು, ಮೇ 23ರವರೆಗೆ ಜಾರಿಯಲ್ಲಿರಲಿದೆ.

ಈ ನಿರ್ಧಾರದಿಂದಾಗಿ ಎರಡು ದೇಶಗಳ ವಿಮಾನಯಾನ ಸಂಸ್ಥೆಗಳು ಭಾರಿ ನಷ್ಟವನ್ನು ಅನುಭವಿಸುವ ಸ್ಥಿತಿ ಎದುರಾಗಿದೆ. ಪಾಕಿಸ್ತಾನದ ವಿಮಾನಯಾನ ಕಂಪನಿಗಳ ಮೇಲೆ ಸ್ವಲ್ಪ ಹೆಚ್ಚೇ ಹೊರೆ ಬೀಳಲಿದೆ. ಅಂದಾಜಿನ ಪ್ರಕಾರ, ಅಂತರರಾಷ್ಟ್ರೀಯ ವಿಮಾನಯಾನ ಸೇವೆ ಒದಗಿಸುತ್ತಿರುವ ಭಾರತದ ವಿಮಾನಯಾನ ಸಂಸ್ಥೆಗಳಿಗೆ ತಿಂಗಳಿಗೆ ₹306 ಕೋಟಿ ನಷ್ಟವಾಗಲಿದೆ. ಒಂದು ವರ್ಷ ಇದೇ ಪರಿಸ್ಥಿತಿ ಇದ್ದರೆ ಏರ್ ಇಂಡಿಯಾಗೆ ₹5,000 ಕೋಟಿಗೂ ಹೆಚ್ಚು ನಷ್ಟವಾಗುತ್ತದೆ ಎಂದು ಸ್ವತಃ ಕಂಪನಿಯೇ ಹೇಳಿಕೊಂಡಿದೆ. ಹೊರೆ ಇಳಿಸಲು ಸರ್ಕಾರದ ನೆರವನ್ನೂ ಅದು ಕೇಳಿದೆ.

ಪಾಕಿಸ್ತಾನದ ಮೇಲೆ ಹಾರಾಡಲು ಅವಕಾಶ ಇಲ್ಲದಿರುವುದರಿಂದ ದೆಹಲಿ ಸೇರಿದಂತೆ ಉತ್ತರ ಭಾರತದ ವಿವಿಧ ವಿಮಾನ ನಿಲ್ದಾಣಗಳಿಂದ ಅಮೆರಿಕ, ಕೆನಡಾ ಸೇರಿದಂತೆ ಉತ್ತರ ಅಮೆರಿಕದ ರಾಷ್ಟ್ರಗಳು, ಯುರೋಪ್, ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಸಂಚರಿಸುವ ಭಾರತದ ವಿಮಾನಗಳು ಪರ್ಯಾಯ ಮಾರ್ಗದಲ್ಲಿ ಸಂಚರಿಸಬೇಕಾಗಿದೆ. ಸದ್ಯ ಬಹುತೇಕ ವಿಮಾನಗಳು ದಕ್ಷಿಣಕ್ಕೆ ಬಂದು ನಂತರ ಅರಬ್ಬೀ ಸಮುದ್ರದ ಆಗಸದಲ್ಲಿ ಸಾಗಿ ಗಮ್ಯ ತಲುಪುತ್ತಿವೆ. ಅದರಿಂದ ದೂರ ಹೆಚ್ಚಾಗಿದೆ. ಪ್ರಯಾಣದ ಅವಧಿಯೂ ಜಾಸ್ತಿಯಾಗಿದೆ. ವಿಮಾನಗಳು ಹೆಚ್ಚು ಇಂಧನವನ್ನೂ ಉರಿಸಬೇಕಿದೆ. ಇಂಧನ ತುಂಬಿಸಲು ಮಾರ್ಗ ಮಧ್ಯೆ ಇಳಿಯಬೇಕಾಗಿದೆ. ಇದು ಸಂಸ್ಥೆಗಳ ವೆಚ್ಚದ ಹೊರೆ ಹೆಚ್ಚಿಸಿದೆ. ಇದರಿಂದಾಗಿ ಪ್ರಯಾಣ ದರ ಜಾಸ್ತಿಯಾಗುವ ಸಾಧ್ಯತೆ ಇದ್ದು, ಪ್ರಯಾಣಿಕರ ಮೇಲೆ ಹೊರೆ ಬೀಳಲಿದೆ.

ಭಾರತದ ಸಂಸ್ಥೆಗಳ ಪೈಕಿ ಏರ್ ಇಂಡಿಯಾದ ಹೆಚ್ಚು ವಿಮಾನಗಳು ದೆಹಲಿಯಿಂದ ಉತ್ತರ ಅಮೆರಿಕದ ರಾಷ್ಟ್ರಗಳಿಗೆ ಸಂಚರಿಸುತ್ತಿವೆ. ಹೆಚ್ಚುವರಿ ವೆಚ್ಚದ ಹೊರೆಯನ್ನು ತಗ್ಗಿಸಲು ಅದು ಪರ್ಯಾಯ ದಾರಿಯ ಹುಡುಕಾಟ ನಡೆಸುತ್ತಿದೆ. ಕೇಂದ್ರ ಸರ್ಕಾರ ಕೂಡ ಈ ಬಗ್ಗೆ ಎಲ್ಲ ವಿಮಾನಯಾನ ಸಂಸ್ಥೆಗಳಿಗೆ ಸೂಚಿಸಿದೆ. ನಿದರ್ಶನಕ್ಕೆ, ದೆಹಲಿಯಿಂದ ದಕ್ಷಿಣ ಲೇಹ್ ತಲುಪಿ, ನಂತರ ಹಿಂದೂ ಕುಷ್ ಮೂಲಕ ಕಿರ್ಗಿಸ್ತಾನ, ತಜಕಿಸ್ತಾನ ತಲುಪಿ, ಅಲ್ಲಿಂದ ಯುರೋಪ್ ಮತ್ತು ಉತ್ತರ ಅಮೆರಿಕ ತಲುಪುವ ಮಾರ್ಗಗಳ ಬಗ್ಗೆ ಅಧ್ಯಯನ ಮಾಡುವಂತೆ ವಿಮಾನಯಾನ ಸಂಸ್ಥೆಗಳಿಗೆ ಸೂಚಿಸಿದೆ.

ಚೀನಾ ಮಾರ್ಗ ಬಳಕೆ?: 2021ರಲ್ಲಿ ಭಾರತದ ವಿಮಾನಗಳು 'ಪಾಪಾ 500' ಎನ್ನುವ ಮಾರ್ಗದ ಮೂಲಕ ಅಮೆರಿಕ, ಯುರೋಪ್‌ಗೆ ಹೋಗುತ್ತಿದ್ದವು. ಆದರೆ, ಈ ಮಾರ್ಗದಲ್ಲಿ ಹೋಗುವಾಗ ಅಲ್ಪಕಾಲ ಪಾಕಿಸ್ತಾನದ ವಾಯು ಪ್ರದೇಶದ ಮೂಲಕ ಹಾದುಹೋಗಬೇಕಾಗುತ್ತದೆ. ಅದನ್ನು ತಪ್ಪಿಸಬೇಕು ಎಂದರೆ, ದಕ್ಷಿಣಕ್ಕೆ ಹೆಚ್ಚು ಪ್ರಯಾಣಿಸಬೇಕಾಗುತ್ತದೆ ಮತ್ತು ಚೀನಾ ವಾಯು ಪ್ರದೇಶ ಪ್ರವೇಶಿಸಬೇಕಾಗುತ್ತದೆ. ಇಂಥ ಹಲವು ಮಾರ್ಗಗಳಿದ್ದು, ಅವುಗಳ ಹುಡುಕಾಟ ನಡೆಯುತ್ತಿದೆ. ವಿಮಾನಯಾನ ಸಂಸ್ಥೆಗಳು ಇಂಥ ಮಾರ್ಗಗಳನ್ನು ಪರೀಕ್ಷಿಸಿ, ಸಮ್ಮತಿ ಸೂಚಿಸಿದರೆ, ಚೀನಾ ಮತ್ತು ಸಂಬಂಧಪಟ್ಟ ದೇಶಗಳ ಬಳಿ ಅನುಮತಿ ಕೇಳಬಹುದು ಎನ್ನುವ ಲೆಕ್ಕಾಚಾರದಲ್ಲಿ ಭಾರತ ಇದೆ. ಆದರೆ, ಅದಕ್ಕೂ ಮುನ್ನ ಹೊಸ ಮಾರ್ಗಗಳಲ್ಲಿನ ಸಂಚಾರ ಎಷ್ಟರ ಮಟ್ಟಿಗೆ ಸುರಕ್ಷಿತವಾಗಿದೆ ಎನ್ನುವುದೂ ಸೇರಿದಂತೆ ಹಲವು ರೀತಿಯ ಅಧ್ಯಯನ, ಸಿದ್ಧತೆಗಳು ಆಗಬೇಕಿವೆ.

ಹಲವು ಸವಾಲು: ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ (ಡಿಜಿಸಿಎ) ನಿಯಮಗಳ ಪ್ರಕಾರ, ವಿಮಾನದಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಕೆಲಸದ ಅವಧಿ 8 ಗಂಟೆ. ಆದರೆ, ವಿಮಾನಗಳ ಪ್ರಯಾಣದ ಅವಧಿ ಹೆಚ್ಚಲಿರುವುದರಿಂದ, ಸಿಬ್ಬಂದಿ ಕೂಡ ಹೆಚ್ಚು ಅವಧಿ ಕೆಲಸ ಮಾಡಬೇಕಿದೆ. ಇದರಿಂದ ಅವರ ಫ್ಲೈಯಿಂಗ್ ಡ್ಯೂಟಿ ಟೈಮ್ ಲಿಮಿಟೇಷನ್ (ಎಫ್‌ಡಿಟಿಎಲ್) ಉಲ್ಲಂಘನೆಯಾಗಲಿದೆ.

ವಿಮಾನಗಳ ತಾಂತ್ರಿಕ ನಿಲುಗಡೆಯ ಸ್ಥಳವನ್ನೂ ಬದಲಾವಣೆ ಮಾಡಬೇಕಿದೆ. ಭಾರತದ ವಿಮಾನಗಳು ಉತ್ತರ ಅಮೆರಿಕದ ಕಡೆ ಸಾಗುವ ಮಾರ್ಗದಲ್ಲಿ ವಿಯೆನ್ನಾ, ಕೋಪನ್‌ಹೇಗನ್ ಸೇರಿದಂತೆ ಹಲವೆಡೆ ತಾಂತ್ರಿಕ ನಿಲುಗಡೆ ಮಾಡುತ್ತಿದ್ದವು. ಹೀಗೆ ನಿಲುಗಡೆ ಮಾಡುವುದರ ಉದ್ದೇಶ ವಿಮಾನಕ್ಕೆ ಇಂಧನ ತುಂಬಿಸಿಕೊಳ್ಳುವುದು. ನಿಲುಗಡೆ ವೆಚ್ಚವೂ ಸೇರಿದಂತೆ ಹಲವು ರೀತಿಯ ವೆಚ್ಚಗಳನ್ನು ಭರಿಸಬೇಕಾಗುತ್ತದೆ.

ಈಗ ಭಾರತದ ವಿಮಾನಯಾನ ಸಂಸ್ಥೆಗಳು ಆಡಳಿತಾತ್ಮಕ ವೆಚ್ಚವನ್ನು ಕಡಿಮೆ ಮಾಡಿಕೊಳ್ಳಲು ತಾಂತ್ರಿಕ ನಿಲುಗಡೆಗಾಗಿ ಭಾರತದಲ್ಲಿಯೇ ನಿಲ್ದಾಣ ಹುಡುಕಿಕೊಳ್ಳಲು ಯೋಚಿಸುತ್ತಿವೆ.

ಪಾಕ್ ವಾಯು ಪ್ರದೇಶದ ನಿರ್ಬಂಧದಿಂದ ಆಗುವ ಪರಿಣಾಮಗಳ ಬಗ್ಗೆ ಏರ್ ಇಂಡಿಯಾ, ಇಂಡಿಗೊ ಮುಂತಾದ ಸಂಸ್ಥೆಗಳು ನಾಗರಿಕ ವಿಮಾಯಾನ ಸಚಿವಾಲಯಕ್ಕೆ ವರದಿ ಸಲ್ಲಿಸಿವೆ. ಒಟ್ಟಾರೆ ಬೆಳವಣಿಗೆಯು ವಿಮಾನಯಾನ ಸಂಸ್ಥೆಗಳ ಮೇಲೆ ಯಾವ ರೀತಿಯ ಪರಿಣಾಮ ಉಂಟುಮಾಡಲಿದೆ, ಪ್ರಯಾಣಿಕರಿಗೆ ಎಷ್ಟು ಹೊರೆಯಾಗಲಿದೆ ಎನ್ನುವುದನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದೆ ಎಂದು ವರದಿಯಾಗಿದೆ.

ಆಧಾರ: ಪಿಟಿಐ, ರಾಯಿಟರ್ಸ್

₹77 ಕೋಟಿ ಪಾಕ್ ವಾಯು ಪ್ರದೇಶ ನಿರ್ಬಂಧಿಸಿರುವುದರಿಂದ ಭಾರತದ ವಿಮಾನಯಾನ ಕಂಪನಿಗಳಿಗೆ ವಾರದಲ್ಲಿ ಬೀಳುವ ಹೆಚ್ಚುವರಿ ಹೊರೆ

₹306 ಕೋಟಿ ಪ್ರಯಾಣದ ಅವಧಿ ಹೆಚ್ಚಳ, ಅಧಿಕ ಇಂಧನದ ಕಾರಣಕ್ಕೆ ವಿಮಾನಯಾನ ಕಂಪನಿಗಳಿಗೆ ತಿಂಗಳಲ್ಲಿ ಬೀಳುವ ಹೆಚ್ಚು ವೆಚ್ಚ

₹5,055 ಕೋಟಿ ಪಾಕಿಸ್ತಾನವು ತನ್ನ ವಾಯುಪ್ರದೇಶವನ್ನು ಒಂದು ವರ್ಷ ನಿರ್ಬಂಧಿಸಿದರೆ ಏರ್ ಇಂಡಿಯಾ ಕಂಪನಿಗೆ ಆಗಲಿರುವ ನಷ್ಟ

ಉತ್ತರ ಭಾರತದಿಂದ ಪಶ್ಚಿಮ ರಾಷ್ಟ್ರಗಳಿಗೆ ಸಂಚರಿಸುವ ವಿಮಾನಗಳು ಪಾಕ್ ವಾಯುಪ್ರದೇಶವನ್ನು ಬಿಟ್ಟು ಪರ್ಯಾಯ ದಾರಿಯಲ್ಲಿ ಸಾಗುತ್ತಿರುವುದನ್ನು ಬಿಂಬಿಸುವ ಚಿತ್ರ (ಫ್ಲೈಟ್ ರೇಡಾರ್24.ಕಾಮ್)

1,200 ಸಿರಿಯಂ ಅಸೆಂಡ್ ಪ್ರಕಾರ, ನವದೆಹಲಿಯಿಂದ ಯುರೋಪ್, ಪಶ್ಚಿಮ ಏಷ್ಯಾ ಮತ್ತು ಉತ್ತರ ಅಮೆರಿಕ ರಾಷ್ಟ್ರಗಳ ನಡುವೆ ಈ ವರ್ಷದ ಏಪ್ರಿಲ್‌ನಲ್ಲಿ ಸಂಚರಿಸಿದ್ದ ಇಂಡಿಗೊ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಗಳ ವಿಮಾನಗಳು

90 ನಿಮಿಷ ವಾಯುಪ್ರದೇಶ ನಿರ್ಬಂಧದಿಂದ ಉತ್ತರ ಅಮೆರಿಕ ರಾಷ್ಟ್ರಗಳ ನಗರಗಳಿಗೆ ಪ್ರಯಾಣಿಸಲು ಬೇಕಾಗುವ ಹೆಚ್ಚುವರಿ ಸಮಯ

45 ನಿಮಿಷ ಪರ್ಯಾಯ ಮಾರ್ಗ ಬಳಸಬೇಕಾಗಿರುವುದರಿಂದ ಪಶ್ಚಿಮ ಏಷ್ಯಾ ರಾಷ್ಟ್ರಗಳಿಗೆ ಪ್ರಯಾಣಿಸಲು ತಗಲುವ ಹೆಚ್ಚುವರಿ ಅವಧಿ

50 ಪಾಕ್ ವಾಯುಪ್ರದೇಶ ನಿರ್ಬಂಧದಿಂದಾಗಿ ತೊಂದರೆಗೆ ಒಳಗಾಗಿರುವ ಇಂಡಿಗೊ ವಿಮಾನಗಳ ಅಂತರರಾಷ್ಟ್ರೀಯ ಮಾರ್ಗಗಳ ಸಂಖ್ಯೆ

ಪಾಕ್ ವಾಯುಪ್ರದೇಶ ಬಳಸದ ವಿದೇಶಿ ವಿಮಾನಗಳು

ಈ ನಡುವೆ ಏರ್‌ಫ್ರಾನ್ಸ್, ಜರ್ಮನಿಯ ಲುಫ್ತಾನ್ಸಾ ಸೇರಿದಂತೆ ವಿವಿಧ ವಿಮಾನಯಾನ ಕಂಪನಿಗಳು ಕೂಡ ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸುತ್ತಿಲ್ಲ.

'ಮುಂದಿನ ಸೂಚನೆಯವರೆಗೂ ನಮ್ಮ ಸಂಸ್ಥೆಯ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಸಂಚರಿಸಲಿವೆ' ಎಂದು ಲುಫ್ತಾನ್ಸಾ ಸಮೂಹ ಹೇಳಿಕೆಯಲ್ಲಿ ತಿಳಿಸಿದೆ. ಭಾರತ ಮತ್ತು ಪಾಕಿಸ್ತಾನದ ನಡುವೆ ಉಂಟಾಗಿರುವ ಬಿಕ್ಕಟ್ಟನ್ನು ಪ್ರಸ್ತಾಪಿಸಿರುವ ಏರ್ ಫ್ರಾನ್ಸ್, 'ಮುಂದಿನ ಸೂಚನೆಯವರೆಗೂ ಪಾಕಿಸ್ತಾನದ ವಾಯುಪ್ರದೇಶದಲ್ಲಿ ಹಾರಾಟ ನಡೆಸದಿರಲು ತೀರ್ಮಾನಿಸಲಾಗಿದೆ' ಎಂದು ಹೇಳಿದೆ.

ಬ್ರಿಟಿಷ್ ಏರ್‌ವೇಸ್, ಸ್ವಿಸ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ ಮತ್ತು ಎಮಿರೇಟ್ಸ್ ವಿಮಾನಗಳು ಕೂಡ ಸೋಮವಾರ ಪಾಕಿಸ್ತಾನದ ವಾಯುಪ್ರದೇಶವನ್ನು ಬಿಟ್ಟು ಬೇರೆ ಮಾರ್ಗದಲ್ಲಿ ಹಾರಾಟ ನಡೆಸಿರುವುದನ್ನು ವಿಮಾನಗಳ ಹಾರಾಟ ಮೇಲ್ವಿಚಾರಣೆಗೆ ಸಂಬಂಧಿಸಿದ ದತ್ತಾಂಶಗಳು ತೋರಿಸಿವೆ. ದೆಹಲಿಗೆ ಬರುತ್ತಿದ್ದ ಬಹುತೇಕ ವಿಮಾನಗಳು ಅರಬ್ಬೀ ಸಮುದ್ರದ ಮೇಲೆ ಹಾರಾಟ ನಡೆಸಿ ನಂತರ ಉತ್ತರದತ್ತ ಸಾಗಿದ್ದವು.

ಏರ್ ಇಂಡಿಯಾ, ಇಂಡಿಗೊ, ಸ್ಪೈಸ್‌ಜೆಟ್ ಮತ್ತು ಆಕಾಸಾ ಏರ್ ಕಂಪನಿಗಳು ಅಂತರರಾಷ್ಟ್ರೀಯ ವಿಮಾನಯಾನ ಸೇವೆ ಒದಗಿಸುತ್ತಿವೆ. ಆಕಾಸಾ ಏರ್ ಇತ್ತೀಚೆಗಷ್ಟೇ ಅಂತರರಾಷ್ಟ್ರೀಯ ಮಟ್ಟದಲ್ಲಿ ಕಾರ್ಯಾಚರಣೆ ಆರಂಭಿಸಿದೆ. ನಾಲ್ಕು ಕಂಪನಿಗಳ ಪೈಕಿ ಏರ್ ಇಂಡಿಯಾ ಮತ್ತು ಇಂಡಿಗೊ ವಿಮಾನಗಳು ಪಾಕಿಸ್ತಾನದ ವಾಯುಪ್ರದೇಶವನ್ನು ಬಳಸಬೇಕಾದ ಮಾರ್ಗದಲ್ಲಿ ಹೆಚ್ಚು ಸಂಚರಿಸುತ್ತಿವೆ.

ನಿರ್ಬಂಧ ಇದೇ ಮೊದಲಲ್ಲ

ಪಾಕಿಸ್ತಾನವು ಭಾರತದ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ನಿರ್ಬಂಧಿಸುವುದು ಇದೇ ಮೊದಲೇನಲ್ಲ. 2019ರಲ್ಲಿ ಪುಲ್ವಾಮಾ ಭಯೋತ್ಪಾದನಾ ದಾಳಿಯ ನಂತರ ಭಾರತವು ಪಾಕಿಸ್ತಾನದ ಬಾಲಾಕೋಟ್ ಮೇಲೆ ವಾಯುದಾಳಿ ನಡೆಸಿತ್ತು. ಆ ಬಳಿಕ, ಫೆ.26ರಂದು ಪಾಕಿಸ್ತಾನವು ತನ್ನ ವಾಯುಪ್ರದೇಶವನ್ನು ಎಲ್ಲಾ ವಿಮಾನಯಾನ ಕಂಪನಿಗಳ ವಿಮಾನಗಳು ಬಳಸುವುದನ್ನು ನಿರ್ಬಂಧಿಸಿತ್ತು. ಬೇರೆ ದೇಶಗಳ ವಿಮಾನಗಳ ಮೇಲಿನ ನಿರ್ಬಂಧವನ್ನು ಹಂತ ಹಂತವಾಗಿ ತೆರವುಗೊಳಿಸಿದ್ದ ಪಾಕಿಸ್ತಾನವು, ಭಾರತದ ವಿಮಾನಗಳಿಗೆ 2019ರ ಜುಲೈ 16ರವರೆಗೂ ವಾಯುಪ್ರದೇಶ ಬಳಕೆಗೆ ಅವಕಾಶ ನೀಡಿರಲಿಲ್ಲ. ಐದು ತಿಂಗಳಲ್ಲಿ ಏರ್ ಇಂಡಿಯಾ, ಇಂಡಿಗೊ ಹಾಗೂ ಇನ್ನಿತರ ಭಾರತದ ವಿಮಾನಯಾನ ಕಂಪನಿಗಳು ಅಂದಾಜು ₹540 ಕೋಟಿಯಷ್ಟು ನಷ್ಟ ಅನುಭವಿಸಿದ್ದವು.

ಪಾಕ್ ಆದಾಯಕ್ಕೂ ಕತ್ತರಿ

ಭಾರತದ ವಿಮಾನಗಳಿಗೆ ತನ್ನ ವಾಯುಪ್ರದೇಶವನ್ನು ಮುಚ್ಚಿರುವುದರಿಂದ ಭಾರತಕ್ಕೆ ಅಷ್ಟೇ ಅಲ್ಲ, ಪಾಕಿಸ್ತಾನಕ್ಕೂ ನಷ್ಟವಾಗಲಿದೆ. ವಿದೇಶಿ ವಿಮಾನಗಳು ಕೂಡ ವಾಯುಪ್ರದೇಶವನ್ನು ಬಳಸದಿರುವುದರಿಂದ ಅದರ ನಷ್ಟದ ಮೊತ್ತ ಇನ್ನಷ್ಟು ಹೆಚ್ಚಲಿದೆ.

ಯಾವುದೇ ದೇಶದ ವಾಯುಪ್ರದೇಶವನ್ನು ಬಳಸುವುದಕ್ಕೆ ವಿಮಾನಯಾನ ಕಂಪನಿಗಳು ಆ ದೇಶಕ್ಕೆ 'ಓವರ್‌ಫ್ಲೈಟ್' (ದೇಶದ ಮೇಲೆ ಹಾರಾಟ) ಶುಲ್ಕ ಪಾವತಿಸಬೇಕಾಗುತ್ತದೆ. ಈ ಶುಲ್ಕದಿಂದ ದೇಶಗಳು ಗಮನಾರ್ಹ ಆದಾಯ ಗಳಿಸುತ್ತವೆ. ಪಾಕಿಸ್ತಾನವು ಭಾರತದ ವಿಮಾನಗಳ ಓವರ್‌ಫ್ಲೈಟ್ ಶುಲ್ಕದಿಂದ ಪ್ರತಿ ದಿನ ಕೋಟ್ಯಂತರ ರೂಪಾಯಿ ಆದಾಯ ಗಳಿಸುತ್ತಿತ್ತು.

ವಿಮಾನದ ಗಾತ್ರ ಮತ್ತು ವಾಯುಪ್ರದೇಶದಲ್ಲಿ ಅದು ಸಾಗುವ ದೂರವನ್ನು ಅವಲಂಬಿಸಿ ಈ ಶುಲ್ಕವನ್ನು ನಿಗದಿಪಡಿಸಲಾಗುತ್ತದೆ. ವಿವಿಧ ಮಾಧ್ಯಮ ವರದಿಗಳ ಪ್ರಕಾರ ಪಾಕಿಸ್ತಾನದ ಆಗಸದಲ್ಲಿ ಬೋಯಿಂಗ್ 737 ವಿಮಾನ ಹಾರಾಡಬೇಕಾದರೆ ಅಂದಾಜು ₹49 ಸಾವಿರ ಶುಲ್ಕ (580 ಡಾಲರ್) ಪಾವತಿಸಬೇಕಾಗುತ್ತದೆ. ವಿಮಾನ ಇನ್ನಷ್ಟು ದೊಡ್ಡದಾಗಿದ್ದರೆ, ಶುಲ್ಕವೂ ಹೆಚ್ಚುತ್ತದೆ. ವಾಯುಪ್ರದೇಶ ನಿರ್ಬಂಧದಿಂದಾಗಿ ಪಾಕಿಸ್ತಾನ ಪ್ರತಿ ದಿನ ₹1.95 ಕೋಟಿಯಷ್ಟು ನಷ್ಟ ಅನುಭವಿಸುತ್ತದೆ ಎಂದು ಹೇಳಲಾಗಿದೆ. ವಿಮಾನ ಇಳಿಯುವ, ನಿಲುಗಡೆ ಶುಲ್ಕಗಳನ್ನು ಸೇರಿಸಿದರೆ, ನಷ್ಟದ ಪ್ರಮಾಣ ಇನ್ನಷ್ಟು ಹೆಚ್ಚುತ್ತದೆ.

ವಿಮಾನಯಾನ ಸಂಸ್ಥೆಗಳಿಗೂ ಹೊರೆ: ಇದಲ್ಲದೇ, ಭಾರತ ಕೂಡ ತನ್ನ ವಾಯುಪ್ರದೇಶವನ್ನು ಪಾಕಿಸ್ತಾನದ ವಿಮಾನಗಳಿಗೆ ನಿರ್ಬಂಧಿಸಿರುವುದರಿಂದ ಮಲೇಷ್ಯಾ ಸೇರಿದಂತೆ ಆಗ್ನೇಯ ಏಷ್ಯಾದ ರಾಷ್ಟ್ರಗಳನ್ನು ಸಂಪರ್ಕಿಸಲು ಅಲ್ಲಿನ ವಿಮಾನಗಳು ಸುತ್ತಿ ಬಳಸಿ ಸಂಚರಿಸಬೇಕು. ಪಾಕಿಸ್ತಾನ್ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ (ಪಿಐಎ) ಅಲ್ಲಿನ ಪ್ರಮುಖ ವಿಮಾನಯಾನ ಸಂಸ್ಥೆ. ಪಿಐಎ ಅಡಿಯಲ್ಲಿ 32 ವಿಮಾನಗಳು ಕಾರ್ಯಾಚರಣೆ ಮಾಡುತ್ತಿದ್ದು, ಸಂಸ್ಥೆ ಈಗಾಗಲೇ ಹಲವು ಸಂಕಷ್ಟಗಳನ್ನು ಎದುರಿಸುತ್ತಿದೆ. ಭಾರತದ ನಿರ್ಧಾರದಿಂದಾಗಿ ಏಷ್ಯಾದ ಆಗ್ನೇಯ ಭಾಗಕ್ಕೆ ಹೋಗುವ ವಿಮಾನಗಳ ಪಥವನ್ನು ಅದು ಚೀನಾ ಇಲ್ಲವೇ ಶ್ರೀಲಂಕಾದ ವಾಯು ಪ್ರದೇಶದ ಆಧಾರದಲ್ಲಿ ಪುನರ್ ಸಿದ್ಧಪಡಿಸಬೇಕಿದೆ. ಪ್ರಯಾಣದ ಅವಧಿ ಒಂದೆರಡು ಗಂಟೆ ದೀರ್ಘವಾಗಲಿದೆ. ಇದಕ್ಕಾಗಿ ಪಿಐಎ ಹೆಚ್ಚು ಆಡಳಿತಾತ್ಮಕ ವೆಚ್ಚ ಭರಿಸಬೇಕಿದೆ. ಇದರಿಂದ ಕೆಲವು ವಿಮಾನಗಳ ಹಾರಾಟವನ್ನೇ ರದ್ದುಗೊಳಿಸಬೇಕಾದ ಸ್ಥಿತಿ ಪಿಐಎಗೆ ಎದುರಾಗಿದೆ.

ರಾಷ್ಟ್ರೀಯ

ಸಮುದ್ರ ಸೇರಿದ 2.29 ಲಕ್ಷ ಆಲಿವ್ ರಿಡ್ಲೆ ಆಮೆಗಳು

ಪ್ರಜಾವಾಣಿ ವಾರ್ತೆ

ಚೆನ್ನೈ: ಪ್ರಸಕ್ತ ಸಾಲಿನ ಸಂತಾನೋತ್ಪತ್ತಿ ಅವಧಿಯಲ್ಲಿ ಆಲಿವ್ ರಿಡ್ಲೆ ಆಮೆಗಳು ತಮಿಳುನಾಡಿನಲ್ಲಿ 2.29 ಲಕ್ಷ ಮರಿಗಳಿಗೆ ಜನ್ಮನೀಡುವ ಮೂಲಕ ಹೊಸ ದಾಖಲೆ ಸೃಷ್ಟಿಸಿವೆ.

2019–20ನೇ ಸಾಲಿಗೆ ಹೋಲಿಸಿದರೆ, 2024–25ನೇ ಸಾಲಿನಲ್ಲಿ ನಾಲ್ಕು ಪಟ್ಟು ಹೆಚ್ಚು ಮರಿಗಳಿಗೆ ಜನ್ಮನೀಡಿವೆ.

ತಮಿಳುನಾಡಿನ ಕರಾವಳಿಯಲ್ಲಿ ಆಲಿವ್ ರಿಡ್ಲೆ ಆಮೆಗಳು 3.19 ಲಕ್ಷ ಮೊಟ್ಟೆಗಳನ್ನಿಟ್ಟಿದ್ದವು. ಇವುಗಳಲ್ಲಿ ಚೆನ್ನೈ ಕಡಲತೀರದಿಂದ ಕಾಂಚೀಪುರವರೆಗೂ ಸಮುದ್ರಕ್ಕೆ ಸೇರಲ್ಪಟ್ಟಿದ್ದ ಒಂದು ಸಾವಿರಕ್ಕೂ ಹೆಚ್ಚು ಮರಿಗಳು ಮೃತಪಟ್ಟಿದ್ದವು. ಈ ಆತಂಕದ ನಡುವೆಯೂ ಪ್ರಸಕ್ತ ಬಾರಿ ದಾಖಲೆ ಸಂಖ್ಯೆಯ ಮರಿಗಳು ಬದುಕುಳಿದಿವೆ.

ರಾಜ್ಯದ ಕರಾವಳಿ ತೀರದಲ್ಲಿ 3,19,895 ಮೊಟ್ಟೆಗಳು ಪತ್ತೆಯಾಗಿದ್ದವು. ಇವುಗಳಲ್ಲಿ 2,29,432 ಮರಿಗಳು ಜನ್ಮ ತಾಳಿ ಸಮುದ್ರಕ್ಕೆ ಸೇರಲ್ಪಟ್ಟಿವೆ. ಕಡಲೂರು ತೀರದಲ್ಲಿ 81,662 ಮರಿಗಳು, ಮೈಲಾಡುತುರೈ–38,582 ಹಾಗೂ ಚೆನ್ನೈ ಕಡಲಿಗೆ 37,689 ಮರಿಗಳು ಸೇರಿವೆ ಎಂದು ಅರಣ್ಯ ಇಲಾಖೆ ಮಾಹಿತಿ ನೀಡಿದೆ.

2023–24ನೇ ಸಾಲಿನಲ್ಲಿ 2,15,778 ಮರಿಗಳು ಸಮುದ್ರ ಸೇರಿದ್ದವು. ಪ್ರಸಕ್ತ ಸಾಲಿನಲ್ಲಿ ಇದಕ್ಕಿಂತಲೂ ಹೆಚ್ಚಿನ ಮರಿಗಳು ಸಮುದ್ರ ಸೇರಿವೆ ಎಂದಿದೆ.

ಟ್ರಂಪ್ ಜತೆ ಭಾರತ ಮತ್ತೆ ಮಾತುಕತೆ ನಡೆಸಲಿ: ರಾಹುಲ್

ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಸುಂಕ ನೀತಿಯನ್ನು ಬದಲಾಯಿಸಲು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಯಸುತ್ತಿದ್ದಾರೆ. ಭಾರತ ಮತ್ತೆ ಅವರೊಂದಿಗೆ ಮಾತುಕತೆ ನಡೆಸಬೇಕು ಎಂದು ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಅಮೆರಿಕದ 'ಬ್ರೌನ್' ವಿಶ್ವವಿದ್ಯಾಲಯದಲ್ಲಿನ 'ವಾಟ್ಸನ್ ಇನ್‌ಸ್ಟಿಟ್ಯೂಟ್ ಫಾರ್ ಇಂಟರ್‌ನ್ಯಾಷನಲ್ ಆ್ಯಂಡ್ ಪಬ್ಲಿಕ್ ಅಫೇರ್ಸ್'ನಲ್ಲಿ ನಡೆಸಿದ್ದ ಸಂವಾದದ ವಿಡಿಯೊ ತುಣುಕನ್ನು ರಾಹುಲ್ ಸೋಮವಾರ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಅಮೆರಿಕ ಸುಂಕ ವಿಧಿಸಿರುವುದಕ್ಕೆ ಭಾರತದ ಪ್ರತಿಕ್ರಿಯೆ ಏನು ಎಂಬುದನ್ನು ನಮ್ಮ ಸರ್ಕಾರ ತಿಳಿಸಿಲ್ಲ. ಹಾಗಾಗಿ ನಮಗೆ ಗೊತ್ತಿಲ್ಲ. ಮಾತುಕತೆ ನಡೆಸಿದರೆ ಟ್ರಂಪ್ ಸುಂಕ ನೀತಿಯನ್ನು ಸಡಿಲಗೊಳಿಸಬಹುದು. ಮಾತುಕತೆಯ ಮೂಲಕ ಯೋಗ್ಯ ಒಪ್ಪಂದವನ್ನು ಮಾಡಿಕೊಳ್ಳಲು ನಾವು ಸಮರ್ಥರಾಗಿದ್ದೇವೆ' ಎಂದು ಹೇಳಿದರು.

'ಸಗಣಿ ಬಳಿಯುವುದು ಬಿಜೆಪಿ ಸಾಧನೆ'



ಅಖಿಲೇಶ್ ಯಾದವ್

ಲಖನೌ (ಪಿಟಿಐ): ಉತ್ತರ ಪ್ರದೇಶದ ಸರ್ಕಾರಿ ಕಟ್ಟಡಗಳಿಗೆ ಸಗಣಿಯಿಂದ ಮಾಡಿದ ಪೇಂಟ್ ಅನ್ನು ಬಳಿಯಲು ಹೇಳಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಸಲಹೆಯ ಕುರಿತು ಪ್ರತಿಕ್ರಿಯಿಸಿರುವ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, 'ಗೋಬರ್ನಾಮ: ಬಿಜೆಪಿ ಸರ್ಕಾರ ಹೊಸ ಸಾಧನೆ' ಎಂದು ವ್ಯಂಗ್ಯವಾಡಿದ್ದಾರೆ.

ಅಖಿಲೇಶ್ ಅವರ 'ಎಕ್ಸ್' ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಬಿಜೆಪಿ ವಕ್ತಾರ ರಾಕೇಶ್ ತ್ರಿಪಾಠಿ, 'ಅಖಿಲೇಶ್ ಅವರು ಗೋವುಗಳನ್ನು ಮತ್ತು ಸಗಣಿಯನ್ನು ದ್ವೇಷಿಸುತ್ತಾರೆ. ಆಸ್ಟ್ರೇಲಿಯಾಕ್ಕೆ ಹೋಗಿಬಂದ ನಂತರ ಅವರು ಭಾರತೀಯ ಸಂಸ್ಕೃತಿಯನ್ನು ಮರೆತಿದ್ದಾರೆ ಅಥವಾ ಅವರು ತಮ್ಮ ಓಲೈಕೆ ರಾಜಕಾರಣಕ್ಕಾಗಿ ಗೋವು, ಗಂಗೆ ಮತ್ತು ಗೀತೆಗೆ ಅವಮಾನ ಮಾಡುತ್ತಿದ್ದಾರೆ' ಎಂದರು.

ರಾಜ್ಯದ ಪಶುಪಾಲನೆ ಹಾಗೂ ಹೈನುಗಾರಿಕೆ ಇಲಾಖೆಯ ಕಾರ್ಯವೈಖರಿ ಕುರಿತು ಭಾನುವಾರ ಪರಿಶೀಲನೆ ನಡೆಸಿದ್ದ ಯೋಗಿ ಆದಿತ್ಯನಾಥ, 'ರಾಜ್ಯದಲ್ಲಿರುವ ಗೋ ರಕ್ಷಣಾ ಕೇಂದ್ರಗಳು ಸ್ವಾವಲಂಬಿಗಳಾಗಬೇಕು. ಗೋವಿನ ಸಗಣಿಯಿಂದ ಮಾಡಿದ ನೈಸರ್ಗಿಕ ಪೇಂಟ್ ಅನ್ನು ಸರ್ಕಾರಿ ಕಟ್ಟಡಗಳಿಗೆ ಬಳಿಯಬೇಕು. ಪೇಂಟ್‌ಗಳ ತಯಾರಿಕೆಯನ್ನೂ ಅಧಿಕಗೊಳಿಸಬೇಕು' ಎಂದಿದ್ದರು.

ಗುಂಡಣ್ಣ



ಗುರು ಎಂದರೆ ಯಾರು?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

188

ಜೀವನದಲ್ಲಿ ಏನೇ ಕಷ್ಟ ಬಂದರೂ ತಾಳ್ಮೆ ಇರಬೇಕು. ತಾಳ್ಮೆ ಇದ್ದವನು ಗುರು. ಯಾರ ಮನಸ್ಸು ದೊಡ್ಡದಿರುತ್ತದೆಯೋ ಅವನು ಗುರು. ಗುರು ಆಗಬೇಕು ಎಂದರೆ ಕಾವಿ ಹಾಕಬೇಕಿಲ್ಲ. ಹಿಮಾಲಯಕ್ಕೆ ಹೋಗಬೇಕಿಲ್ಲ. ಹಸಿದವನಿಗೆ ಒಂದು ತುತ್ತು ಅನ್ನ, ಬಾಯಾರಿದವನಿಗೆ ಒಂದು ಲೋಟ ನೀರು, ಕಷ್ಟ ಎಂದು ಬಂದವನ ಕಣ್ಣೀರು ಒರೆಸಿ ನಾನು ನಿನ್ನ ಜೊತೆ ಇದ್ದೇನೆ ಎಂದು ಹೇಳುವವನೇ ನಿಜವಾದ ಗುರು. ನನ್ನವರು ಎಂಬ ಭಾವನೆ ಬರಬೇಕು. 'ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು, ತನ್ನಂತೆಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ' ಎಂದು ಸರ್ವಜ್ಞ ಹೇಳುತ್ತಾರೆ. ಯಾರು ಇನ್ನೊಬ್ಬರನ್ನು ನನ್ನವರು ಎಂದು ಅಪ್ಪಿಕೊಳ್ಳುತ್ತಾರೋ ಅವರು ಗುರು ಆಗುತ್ತಾರೆ. ಎಲ್ಲರನ್ನು ಅಪ್ಪಿಕೊಳ್ಳುವ ಗುಣ ಬೇಕು. ಗುರು ಎಂದರೆ ಲೋಕಹಿತವನ್ನು ಬಯಸುವವ, ಸದಾ ಸಮಾಜವನ್ನು ಮೇಲೆತ್ತಲು ಪ್ರಯತ್ನ ಮಾಡುವವ. ಹಗಲಿರುಳೆನ್ನದೆ ಸಮಾಜಕ್ಕಾಗಿ ದುಡಿಯುವವ ಗುರು.

ನಿಮ್ಮ ಹೆಂಡತಿ ನಿಮಗೆ ಹೆಂಡತಿ ಯಾಕಾದಳು ಎಂದರೆ ನೀವು ಅವರಿಗೆ ತಾಳಿ ಕಟ್ಟಿದ್ದೀರಿ. ಅದೇ ರೀತಿ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ್ದಕ್ಕೆ ನಿಮ್ಮ ಮಕ್ಕಳು. ಅಂದರೆ ಈ ಎಲ್ಲ ಸಂಬಂಧಗಳಿಗೆ ಒಂದು ಕಾರಣ ಇದೆ. ಆದರೆ ಗುರು ಮಾತ್ರ ನಿಮಗೆ ಯಾವುದೇ ಕಾರಣ ಇಲ್ಲದೆ ಬಂಧು ಆಗಿರುತ್ತಾನೆ. ಅದಕ್ಕೆ ಗುರುವನ್ನು ಅನಿಮಿತ್ತ ಬಂಧು ಎನ್ನುತ್ತಾರೆ. ತಾನೂ ಬೆಳೆಯುತ್ತಾನೆ. ತನ್ನ ಜೊತೆಗೆ ಸಮಾಜವನ್ನೂ ಬೆಳೆಸುತ್ತಾನೆ ಗುರು. ಯಾರು ಸಮಾಜಕ್ಕೆ ಉಪಯೋಗಿಯೋ ಅವನೇ ನಿಜವಾದ ಯೋಗಿ. ಲೋಕೋಪಯೋಗಿ. ಕೇವಲ ಭೌತಿಕವಾಗಿ ಅಲ್ಲ, ಮಾನಸಿಕವಾಗಿ ವೈಚಾರಿಕವಾಗಿ ಮೇಲೆತ್ತಬೇಕು ಆತ. ಸಮಾಜದ ಎಲ್ಲರಲ್ಲಿ ಒಳ್ಳೆಯ ಭಾವನೆಯನ್ನು ತುಂಬಬೇಕು. ನಾನು ಸಣ್ಣವನಲ್ಲ. ಕನಿಷ್ಠ ಅಲ್ಲ. ನಾನು ಕೀಳಲ್ಲ. ನೀನು ದೊಡ್ಡವ, ನೀನು ಅತ್ಯಂತ ಉತ್ಸಾಹಿ, ನಿನ್ನಲ್ಲಿ ಸಾಮರ್ಥ್ಯ ಇದೆ ಎಂದು ಯಾವ ಗುರು ತನ್ನ ಶಿಷ್ಯರಲ್ಲಿ ವಿಚಾರ ಕ್ರಾಂತಿಯನ್ನು ತುಂಬುತ್ತಾನೆಯೋ ಅವನು ನಿಜವಾದ ಗುರು.

ಈ ಜಗತ್ತಿನಲ್ಲಿ ಯಾವುದೂ ಸಣ್ಣದು ಅಲ್ಲ. ಯಾವುದೂ ದೊಡ್ಡದು ಅಲ್ಲ. ಸೂರ್ಯ ಬಹಳ ದೊಡ್ಡವ, ದೀಪ ಸಣ್ಣದು ಎನ್ನುವುದಕ್ಕೆ ಆಗದು. ಸೂರ್ಯ ಜಗತ್ತನ್ನೇ ಬೆಳಗಬಹುದು. ಆದರೆ ಸೂರ್ಯ ಮುಳುಗಿದ ಮೇಲೆ ಮನೆ ಬೆಳಗಲು ದೀಪವೇ ಬೇಕಾಗುತ್ತದೆ. ಹೂವು ಬಹಳ ಚೆನ್ನಾಗಿದೆ. ಬೇರು ಕನಿಷ್ಠ ಎನ್ನಲಾಗದು. ಯಾಕೆಂದರೆ ಬೇರು ನೀರನ್ನು ಕಳಿಸದೇ ಇದ್ದರೆ ಹೂವು ಒಣಗಬೇಕಾಗುತ್ತದೆ. ನಮ್ಮಲ್ಲಿ ಕೀಳರಿಮೆ ಇರಬಾರದು. ಶಿಷ್ಯನಲ್ಲಿ ಅರಿವನ್ನು, ವಿಚಾರವನ್ನು ಮೂಡಿಸುವವನು ನಿಜವಾದ ಗುರುವಾಗುತ್ತಾನೆ. ದೇವರು ನಿಜವಾಗಿ ಎಲ್ಲಿದ್ದಾನೆ ಎನ್ನುವುದನ್ನು ಜನರ ಹೃದಯದಲ್ಲಿ ತುಂಬುವಂತಹ ಕೆಲಸವನ್ನು ಗುರುಗಳಾದವರು ಮಾಡಬೇಕು. ಸಮಾಜವನ್ನು ಮೇಲೆತ್ತುವ ಕಾರ್ಯ, ದೀನ ದಲಿತರು, ಬಡವರಿಗೆ ಅನ್ನ, ಆಶ್ರಯ, ಅಕ್ಷರ, ಅಧ್ಯಾತ್ಮ ಕೊಡುವ ಮೂಲಕ ಅವನನ್ನು ಮೇಲೆತ್ತುವುದೇ ನಿಜವಾದ ಪೂಜೆ. ಇದನ್ನೇ ಬಸವಾದಿ ಶರಣರು ಪ್ರತಿಪಾದಿಸಿದರು. ಬಿದ್ದವರನ್ನು ಮೇಲೆತ್ತುವ ಕಾಯಕವೇ ನಿಜವಾದ ಪೂಜೆ. ಸಮಾಜದ ಸಾವಿರ ತಂದೆತಾಯಿಗಳಿಗೆ ಮಕ್ಕಳಾಗುವ ಸೌಭಾಗ್ಯ ಸನ್ಯಾಸಿಗಳದ್ದು. ಇದನ್ನು ಗುರುಗಳೂ ಅರ್ಥಮಾಡಿಕೊಳ್ಳಬೇಕು. ಭಕ್ತರೂ ಅರ್ಥಮಾಡಿಕೊಳ್ಳಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಮೇ 6, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ನವಮಿ ಗಂ. 8-39 ನಕ್ಷತ್ರ: ಮಘಾ ಗಂ. 15-52 ಯೋಗ: ಧ್ರುವ ಗಂ. 24-30 ಕರಣ: ಕೌಲವ ಗಂ. 8-39, ಮೇಷ ಮಾಸದ 23 ನೇ ದಿನ.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-11 ಸೂರ್ಯಾಸ್ತ : 06-43

ಮುಸ್ಲಿಂ ದಿನಾಂಕ : 07 ಜುಲ್ಖಾಯದ್

ದಿನ ವಿಶೇಷ : ತ್ರಿಶೂರ್ ಪೂರಮ್ (ಕೇರಳ), ಅದೃಷ್ಟ ಸಂಖ್ಯೆ : 1, 5

ಮೇಷ: ಶತ್ರುಗಳ ಬಾಧೆ ದೂರಾಗಿ ಯೋಜನೆಗಳು ಈಡೇರಲಿವೆ. ಅನಿರೀಕ್ಷಿತವಾಗಿ ಆಗುವ ವರ್ಗಾವಣೆಯಿಂದ ಅನುಕೂಲ ಪಡೆದುಕೊಳ್ಳುವಿರಿ. ನಿರುದ್ಯೋಗಿಗಳು ಕೆಲಸದಲ್ಲೇ ತೃಪ್ತಿಪಡುವಂತೆ ಆಗುವುದು.

ವೃಷಭ: ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳ ಲಕ್ಷಣಗಳು ಗಮನಕ್ಕೆ ಬಂದಲ್ಲಿ, ತಕ್ಷಣವೇ ವೈದ್ಯರನ್ನು ಸಂಪರ್ಕಿಸಿ. ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಕಲಿಯಿರಿ.

ಮಿಥುನ: ಕನಸುಗಳು ಕನಸಾಗಿಯೇ ಉಳಿಯಲಿವೆ. ಸರ್ಕಾರಿ ಅಧಿಕಾರಿಗಳ ಅಥವಾ ಹಿರಿಯರಿಂದ ಸಹಕಾರಗಳನ್ನು ಅಪೇಕ್ಷಿಸುವಂತೆ ಆಗಲಿದೆ. ಶುಭ ಕಾರ್ಯಗಳ ಪೂರ್ವತಯಾರಿಯ ಸಂಭವವಿರುವುದು.

ಕರ್ಕಾಟಕ: ಆಲೋಚನೆಯಂತೆ ನೂತನ ಮನೆ ಕೊಳ್ಳಲು ಹಣದ ವ್ಯವಸ್ಥೆಯಾಗಲಿದೆ. ವೃತ್ತಿಯ ಕೆಲಸವನ್ನು ಆಲಸ್ಯದಿಂದಾಗಲಿ ಅಥವಾ ತಾಂತ್ರಿಕ ದೋಷದಿಂದಾಗಲಿ ಮುಂದೂಡುವುದು ಸರಿಯಲ್ಲ.

ಸಿಂಹ: ಆಫೀಸಿನಲ್ಲಿ ಉಂಟಾಗಿದ್ದ ಸಮಸ್ಯೆಗಳು ತನ್ನಂತಾನೆ ಬಗೆಹರಿದು ಮನಸ್ಸು ನಿರಾಳವಾಗಲಿವೆ. ಕಬ್ಬಿಣದ ಕೆಲಸ ಮಾಡುವವರು ಕೆಲಸದಲ್ಲಿ ಜಾಗ್ರತರಾಗಿರಿ. ರಾಜಕಾರಣಿಗಳಿಗೆ ಗೌರವ ಹಾಗೂ ಮನ್ನಣೆ ದೊರೆಯುತ್ತದೆ.

ಕನ್ಯಾ: ಹೋಟೆಲ್ ಉದ್ಯಮದಾರರಿಗೆ ಬಹುನಿರೀಕ್ಷಿತ ಲಾಭಗಳು ಎದುರಾಗುವುದು. ಕೆಲಸಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳುವುದು ಉತ್ತಮ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವ ಅವಕಾಶ ದೊರಕಲಿದೆ.

ತುಲಾ: ಪ್ರಿಯ ವ್ಯಕ್ತಿಯೊಂದಿಗೆ ವಿಚಾರ ವಿನಿಮಯ ಸೂಕ್ತ ರೀತಿ ಮಾಡಿಕೊಳ್ಳುವುದು ಒಳ್ಳೆಯದು. ಸಮೀಪವರ್ತಿಗಳ ಆಶ್ವಾಸನೆ ದೊರೆತು ಶುಭ ಕಾರ್ಯಗಳತ್ತ ಗಮನ ಹರಿಸುವಿರಿ.

ವೃಶ್ಚಿಕ: ಆತ್ಮಸ್ಥೈರ್ಯದಿಂದ ಕೆಲಸವನ್ನು ಪ್ರಾರಂಭಿಸಿದರೂ ಜಯ ಕಾಣುವಿರಿ. ಕಾರ್ಯವೈಖರಿ ಆಫೀಸಿನಲ್ಲಿ ಮೆಚ್ಚುವ ಮಾತಾಗುವುದು. ಯಾವುದೇ ವಿಚಾರಗಳಿಗೂ ಬೇಸರ ಪಡುವ ಅವಶ್ಯಕತೆ ಇಲ್ಲ.

ಧನು: ವಿಷಯಗಳಲ್ಲಿಯೂ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನದಿಂದಿರುವುದು ಉತ್ತಮ. ಕೇವಲ ಮನರಂಜನೆಗಾಗಿ ದೂರ ಪ್ರಯಾಣ ಸರಿಯಲ್ಲ. ದಿನಸಿ ವರ್ತಕರಿಗೆ ಉತ್ತಮ ಲಾಭ. ಆಲಸ್ಯವಾಗುವುದು.

ಮಕರ: ಇಂಧನ ಮಾರಾಟಗಾರರಿಗೆ ಹೆಚ್ಚಿನ ಕಮಿಷನ್ ಲಭ್ಯವಾಗಲಿದೆ. ಕೆಲಸಕ್ಕೆ ಆಲೋಚನೆಗಿಂತ ಹೆಚ್ಚಿನ ಸಮಯ ಬೇಕಾಗುವುದು. ಸರಿ-ತಪ್ಪುಗಳ ತೀರ್ಮಾನದಲ್ಲಿ ಗೊಂದಲಕ್ಕೆ ಒಳಗಾಗುವಿರಿ. ವಿವಾಹ ಅಪೇಕ್ಷಿಗಳಿಗೆ ಶುಭವಿದೆ.

ಕುಂಭ: ಸ್ನೇಹಿತರಿಗೆ ಸ್ವಯಂಪ್ರೇರಣೆಯಿಂದ ವ್ಯವಹಾರಿಕ ಸಲಹೆ ಕೊಡುವುದು ಸರಿಯಲ್ಲ. ವಿದ್ಯಾರ್ಥಿಗಳಿಗೆ ಶುಭ ದಿನ. ಅದರಲ್ಲೂ ಸಂಶೋಧನಾ ವಿದ್ಯಾರ್ಥಿಗಳಿಗೆ ಸಲಹೆಗಾರರಿಂದ ಉತ್ತಮ ಮಾರ್ಗದರ್ಶನ ಸಿಗುವುದು.

ಮೀನ: ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ. ಕಹಿ ಘಟನೆಗಳಿಂದ ಕಲಿತ ಪಾಠ ಉಪಯೋಗಕ್ಕೆ ಬರಲಿದೆ. ಸ್ನೇಹಿತರಲ್ಲಿನ ತಪ್ಪು ಕಲ್ಪನೆ ಹೋಗಲಾಡಿಸಿಕೊಳ್ಳುವಿರಿ.

ಪದಬಂಧ 6033

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮುರ ಹಾಕಿಕೊಳ್ಳಲು ತೋರಿದ ದಾಕ್ಷಿಣ್ಯ (4)
3.ಇದು ಸೂಕ್ತವಾದುದು (4)
5.ವರ ನೀಡಿರುವ ವಿಸ್ತೃತ ಹೇಳಿಕೆ (3)
6.ಜಳಕ ಮಾಡಿದ್ದಕ್ಕೇ ಈ ರೋಮಾಂಚನ! (3)
8.ಸಲಿಗೆ ತೋರುತ್ತಲೇ ಮಾಡಿರುವ ಡಕಾಯತಿ (3)
9.ತಾಪದ ಹೊತ್ತಿನಲ್ಲಿ ತೋಡಿಕೊಂಡಿರುವ ದುಃಖ (3)
10.ಬಣ್ಣ ಹಚ್ಚಿ ಮಾಡಿದ ಕೊಂಡಾಟ (3)
11.ವನವಿರುವುದಕ್ಕೇ ಇದು ಪವಿತ್ರ (3)
12.ಸೊಕ್ಕು ಹೀಗೆ ಬಂದಿದೆ (3)
14.ಕೊಲೆಗಾರ ಇಲ್ಲಿದ್ದಾನೆ (3)
16.ಈತ ಮೃತ್ಯುದೇವತೆಯ ಮಗ (4)
17.ತಕರಾರಿಲ್ಲದೆ ಬಂದಿರುವ ಹಂಚಿಕೆದಾರ (4)

ಮೇಲಿಂದ ಕೆಳಕ್ಕೆ

1.ಪ್ರತ್ಯೇಕವಾಗಿ ತೆಗೆದಿರಿಸಿದ್ದು (3)
2.ವಿತರಣೆ ಮಾಡುವಾಗ ಕಾಣಿಸಿದ ಸೂರ್ಯ (2)
3.ಸರಕ್ಕನೆ ಹೋಗಿ ತಂದು ಧರಿಸಿದ ಮಾಲೆ (2)
4.ಸುಲಿಗೆ ಮಾಡಲೆಂದೇ ಈ ಸದರ! (3)
7.ಕೈಯಿಂದ ತಟ್ಟಿದ ಚಪ್ಪಾಳೆ (5)
8.ಬಂಗಾರದಂಥಾ ಅವಕಾಶವಿದು (5)
11.ಕುಡಿಯಲು ಯೋಗ್ಯವಾದುದು (3)
13.ಅಪಹಾಸ್ಯವನ್ನು ಹೀಗೆನ್ನಿ (3)
14.ಹಂತಕನೇರಿದ ಮೆಟ್ಟಿಲು (2)
15.ಕಾವ್ಯದ ರಚನೆಗಾರನಿವನು (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	9			■	10			■
■	■		■	■	■		■	■
11			■	■	■	12		13
	■	■	14		15	■	■	
16				■	17			

6032ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಪರಂಜಿ 3.ಆಗಮಿಕ 5.ನಮೂನೆ 7.ಸುತ 8.ಪತ್ರ 10.ಮಂಕರಿ 11.ಮುಕುಟ 13.ತಮ 15.ರಾಶಿ 16.ಸಾವಿರ 18.ಸರೋವರ 19.ನಕ್ತಂಚರ

ಮೇಲಿಂದ ಕೆಳಕ್ಕೆ: 1.ಅಪರೂಪ 2.ಜಿನ 3.ಆನೆ 4.ಕಡಿತ 6.ಮೂಷಿಕ 7.ಸುಸಂಸ್ಕೃತ 9.ತ್ರಯೋದಶಿ 12.ಕುಲಾವಿ 14.ಮನ್ವಂತರ 15.ರಾಯಸ 16.ಸಾರ 17.ರನ

ಸುಡೊಕು 6418

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6417 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಷೇರುಪೇಟೆ ವಹಿವಾಟು 295



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,346
ಇಂದಿನ ಅಂತ್ಯ	24,461
▲	115
ದಿನದ ಗರಿಷ್ಠ	24,526

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹525
12 ಕ್ಕೆ	₹70
ಮೈಸೂರು	
100ಕ್ಕೆ	₹545

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-562
ದ್ವಿತಳಿ (ಬಿ.ವಿ)	₹220-670

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1310 (1310)
ಸೋಯಾ (ರಿಫೈನ್ಡ್)	₹1245 (1250)
ಸೂರ್ಯಕಾಂತಿ (ರಿಫೈನ್ಡ್)	₹1375 (1375)
ಪಾಮೋಲಿನ್	₹1210 (1210)

ವಿನಿಮಯ ದರ

$ ಡಾಲರ್	84.30
£ ಪೌಂಡ್	112.07
€ ಯುರೊ	95.54
¥ ಯೆನ್ (100ಕ್ಕೆ)	59

ಕಬ್ಬಿಣ ಅದಿರು ಉತ್ಪಾದನೆ ಹೆಚ್ಚಳ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ 28.9 ಕೋಟಿ ಟನ್‌ನಷ್ಟು ಕಬ್ಬಿಣದ ಅದಿರು ದೇಶದಲ್ಲಿ ಉತ್ಪಾದನೆ ಆಗಿದೆ ಎಂದು ಕೇಂದ್ರ ಗಣಿ ಸಚಿವಾಲಯ ಸೋಮವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ 27.7 ಕೋಟಿ ಟನ್‌ನಷ್ಟು ಉತ್ಪಾದನೆಯಾಗಿತ್ತು. ಈ ಉತ್ಪಾದನೆಗೆ ಹೋಲಿಸಿದರೆ ಶೇ 4.3ರಷ್ಟು ಏರಿಕೆಯಾಗಿದೆ. ಹೆಚ್ಚಿದ ಬೇಡಿಕೆಯಿಂದ ಉತ್ಪಾದನೆಯಲ್ಲಿ ಏರಿಕೆಯಾಗಿದೆ ಎಂದು ತಿಳಿಸಿದೆ.

ಮ್ಯಾಂಗನೀಸ್ ಅದಿರು ಉತ್ಪಾದನೆ 38 ಲಕ್ಷ ಟನ್ ಆಗಿದೆ. ಅಲ್ಯೂಮಿನಿಯಂ 42 ಲಕ್ಷ ಟನ್, ತಾಮ್ರ ಉತ್ಪಾದನೆ 5.73 ಲಕ್ಷ ಟನ್ ಆಗಿದೆ ಎಂದು ತಿಳಿಸಿದೆ.

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹1,000-1,300
ಮಧ್ಯಮ	₹600-1,000
ಸಣ್ಣ	₹300-600

ಮುಂಬೈ ಧಾರಣೆ

ಶೇಂಗಾ

05-05-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	7400-7500
ದಪ್ಪ ಗುಜರಾತ್(ಹೊಸ)	7700-7800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1320)
ಒಂದು ವಾರದ ಡೆಲಿವರಿ	1315 (1315)
ಪಾಮ್ ವಾರದ ಡೆಲಿವರಿ	1208 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1320)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹94,750 (93,150)

ಬೆಳ್ಳಿ ಕೆ.ಜಿ ₹94,000 (93,450)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

2025–26ರ ಆರ್ಥಿಕ ವರ್ಷದಲ್ಲಿ ಇಳಿಕೆ ಸಾಧ್ಯತೆ: ಎಸ್‌ಬಿಐ ವರದಿ

ಶೇ 1.5ರಷ್ಟು ರೆಪೊ ದರ ಕಡಿತ?

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶೇ 1.5ರಷ್ಟು ರೆಪೊ ದರ ಕಡಿತಗೊಳಿಸುವ ನಿರೀಕ್ಷೆ ಇದೆ ಎಂದು ಎಸ್‌ಬಿಐ ಸಂಶೋಧನಾ ವರದಿ ಸೋಮವಾರ ತಿಳಿಸಿದೆ.

ಆಹಾರ ಪದಾರ್ಥಗಳ ಬೆಲೆ ಇಳಿಕೆಯಿಂದ ಮಾರ್ಚ್ ತಿಂಗಳಿನಲ್ಲಿ ದೇಶದ ಚಿಲ್ಲರೆ ಹಣದುಬ್ಬರವು 67 ತಿಂಗಳ ಕನಿಷ್ಠ ಮಟ್ಟವಾದ ಶೇ 3.34ರಷ್ಟು ದಾಖಲಾಗಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರಾಸರಿ ಹಣದುಬ್ಬರವು ಶೇ 4ಕ್ಕಿಂತ ಕಡಿಮೆ ದಾಖಲಾಗುವ ಅಂದಾಜಿದೆ. ಮೊದಲ ತ್ರೈಮಾಸಿಕದಲ್ಲಿ ಶೇ 3ಕ್ಕಿಂತ ಕಡಿಮೆ ಇರಲಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಅಂದಾಜಿಸಿದೆ.

ದೇಶದ ಸಾಂಕೇತಿಕ (ನಾಮಿನಲ್) ಜಿಡಿಪಿ ಬೆಳವಣಿಗೆ ಶೇ 9ರಿಂದ ಶೇ 9.5ರಷ್ಟು ಇರಬಹುದು. ಆರ್ಥಿಕ ವರ್ಷದ ಮೊದಲ ಭಾಗವಾದ ಜೂನ್ ಮತ್ತು ಆಗಸ್ಟ್‌ನಲ್ಲಿ ಶೇ 0.75ರಷ್ಟು ರೆಪೊ ಕಡಿತ ಮಾಡಬಹುದು. ದ್ವಿತೀಯಾರ್ಧದಲ್ಲಿ ಶೇ 0.50ರಷ್ಟು ಕಡಿಮೆ ಮಾಡಬಹುದು, ಒಟ್ಟು ಕಡಿತವು ಶೇ 1.25ರಷ್ಟಾಗಲಿದೆ. ಪ್ರಸಕ್ತ ಫೆಬ್ರುವರಿಯಲ್ಲಿ ಶೇ 0.25ರಷ್ಟು ಕಡಿತ ಮಾಡಿದೆ. 2026ರ ಮಾರ್ಚ್ ವೇಳೆಗೆ ರೆಪೊ ದರವು ಶೇ 5ರಿಂದ ಶೇ 5.25ರಷ್ಟು ಆಗಲಿದೆ ಎಂದು ಹೇಳಿದೆ.

ಜಂಬೋ ಮಾದರಿಯಲ್ಲಿ (ಶೇ 0.50 ಅಥವಾ ಅದಕ್ಕಿಂತ ಹೆಚ್ಚು ರೆಪೊ ದರ ಕಡಿತ) ರಿಸರ್ವ್ ಬ್ಯಾಂಕ್ ಕಡಿತ ಮಾಡಬೇಕಿದೆ. ರಿಸರ್ವ್ ಬ್ಯಾಂಕ್‌ನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯು ಚಿಲ್ಲರೆ ಹಣದುಬ್ಬರದ ತಾಳಿಕೆ ಮಟ್ಟವನ್ನು ಶೇ 2ರಿಂದ ಶೇ 6ಕ್ಕೆ ನಿಗದಿಪಡಿಸಿದೆ. ಆದರೆ, ಸರಾಸರಿ ಹಣದುಬ್ಬರವು ಶೇಕಡಾ 4.7ರಷ್ಟಿದೆ.

ದೇಶದ ಹಣದುಬ್ಬರದ ಆಧಾರದ ಮೇಲೆ 2026ರ ಮಾರ್ಚ್ ವೇಳೆಗೆ ಒಟ್ಟು ಶೇ 1.5ರಷ್ಟು ಕಡಿತಗೊಳಿಸುವ ಸಾಧ್ಯತೆ ಇದೆ. ಫೆಬ್ರುವರಿಯಿಂದ ಇಲ್ಲಿಯವರೆಗೆ ಶೇ 0.50ರಷ್ಟು ರೆಪೊ ದರ ಕಡಿತ ಗೊಳಿಸಲಾಗಿದೆ. ಇದರಿಂದ ಬ್ಯಾಂಕ್‌ಗಳು ರೆಪೊ ಆಧಾರಿತ ಸಾಲದ ಮೇಲಿನ ಬಡ್ಡಿದರವನ್ನು ತಗ್ಗಿಸಿವೆ ಎಂದು ತಿಳಿಸಿದೆ.

2025ರಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯವು ₹85ರಿಂದ ₹87ರ ನಡುವೆ ಇರುವ ಅಂದಾಜು ಇದೆ ಎಂದು ಹೇಳಿದೆ.

ಆರ್‌ಬಿಐ ಬಳಿ 880 ಟನ್ ಚಿನ್ನ

ಮುಂಬೈ (ಪಿಟಿಐ): 2024–25ರ ಆರ್ಥಿಕ ವರ್ಷದ ದ್ವಿತೀಯಾರ್ಧದಲ್ಲಿ ಆರ್‌ಬಿಐ ತನ್ನ ಚಿನ್ನ ಸಂಗ್ರಹದ ಮೀಸಲಿಗೆ 25 ಟನ್ ಚಿನ್ನ ಸೇರ್ಪಡೆ ಮಾಡಿಕೊಂಡಿದೆ.

ಪ್ರಸ್ತುತ ಇರುವ ಚಿನ್ನದ ಸಂಗ್ರಹ ಪ್ರಮಾಣ 879.59 ಟನ್ ಆಗಿದೆ. 2024ರ ಸೆಪ್ಟೆಂಬರ್ ಅಂತ್ಯದ ವೇಳೆಗೆ 854.73 ಟನ್‌ನಷ್ಟಿತ್ತು. ಕಳೆದ ಆರ್ಥಿಕ ವರ್ಷದಲ್ಲಿ 57 ಟನ್ ಚಿನ್ನ ಖರೀದಿಸಲಾಗಿದೆ. ಈ ಅವಧಿಯಲ್ಲಿ ಹಳದಿ ಲೋಹದ ದರದಲ್ಲಿ ಶೇ 30ರಷ್ಟು ಏರಿಕೆಯಾಗಿದೆ ಎಂದು ಸೋಮವಾರ ಆರ್‌ಬಿಐ ತಿಳಿಸಿದೆ.

ಸ್ಥಳೀಯವಾಗಿ 512 ಟನ್ ಚಿನ್ನದ ದಾಸ್ತಾನು ಮಾಡಲಾಗಿದೆ. ವಿದೇಶದ ಬ್ಯಾಂಕ್‌ಗಳಲ್ಲಿ ಉಳಿದ ಚಿನ್ನದ ದಾಸ್ತಾನು ಮಾಡಲಾಗಿದೆ ಎಂದು ತಿಳಿಸಿದೆ.

ಚಿನ್ನದ ದರ ಏರಿಕೆ, ಬೆಳ್ಳಿ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನದ ಧಾರಣೆ ಏರಿಕೆಯಾಗಿದ್ದರೆ, ಬೆಳ್ಳಿ ದರ ಇಳಿದಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹550 ಹೆಚ್ಚಳವಾಗಿ, ₹97,350 ಆಗಿದೆ. ಆಭರಣ ಚಿನ್ನದ (ಶೇ 99.5 ಪರಿಶುದ್ಧತೆ) ಧಾರಣೆ ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ, ₹96,900 ಆಗಿದೆ.

ಬೆಳ್ಳಿ ದರವು ಕೆ.ಜಿಗೆ ₹400 ಇಳಿಕೆಯಾಗಿ, ₹96,700 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ಪ್ರತಿ ಔನ್ಸ್‌ಗೆ (28.34 ಗ್ರಾಂ) 46 ಡಾಲರ್ (₹3,905) ಹೆಚ್ಚಳವಾಗಿದೆ. ಹೀಗಾಗಿ ದೇಶದ ಮಾರುಕಟ್ಟೆಯಲ್ಲೂ ಹಳದಿ ಲೋಹದ ದರ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 295 ಅಂಶ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರ ನಡೆದ ವಹಿವಾಟಿನಲ್ಲಿ ಏರಿಕೆಯಾಗಿವೆ.

ವಿದೇಶಿ ಬಂಡವಾಳದ ನಿರಂತರ ಒಳಹರಿವು ಮತ್ತು ಕಚ್ಚಾತೈಲ ಬೆಲೆ ಇಳಿಕೆಯಿಂದ ಸೂಚ್ಯಂಕಗಳು ಏರಿಕೆಗೊಂಡಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 295 ಅಂಶ ಏರಿಕೆಯಾಗಿ, 80,796ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನಲ್ಲಿ 547 ಅಂಶ ಏರಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 115 ಅಂಶ ಹೆಚ್ಚಳವಾಗಿ, 24,461ಕ್ಕೆ ಕೊನೆಗೊಂಡಿತು.



ಸೆನ್ಸೆಕ್ಸ್ ಗುಚ್ಛದಲ್ಲಿ ಅದಾನಿ ಸಮೂಹದ ಕಂಪನಿಗಳು, ಬಜಾಜ್ ಫಿನ್‌ಸರ್ವ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಟರ್ನಲ್, ಪವರ್ ಗ್ರಿಡ್, ಐಟಿಸಿ, ಟಾಟಾ ಮೋಟರ್ಸ್, ಏಷ್ಯನ್ ಪೇಂಟ್ಸ್ ಮತ್ತು ಹಿಂದೂಸ್ತಾನ್ ಯುನಿಲಿವರ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಕೋಟಕ್ ಮಹೀಂದ್ರ ಬ್ಯಾಂಕ್, ಎಸ್‌ಬಿಐ, ಎಕ್ಸಿಸ್ ಬ್ಯಾಂಕ್, ಟೈಟನ್ ಮತ್ತು ಇಂಡಸ್‌ಇಂಡ್ ಬ್ಯಾಂಕ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹2,769 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 1.45ರಷ್ಟು ಕಡಿಮೆಯಾಗಿದೆ. ಪ್ರತೀ ಬ್ಯಾರೆಲ್ ದರ 60 ಡಾಲರ್ (₹5,090) ಆಗಿದೆ.

ಮಹೀಂದ್ರ ಲಾಭ ಶೇ 13ರಷ್ಟು ಹೆಚ್ಚಳ

ಮುಂಬೈ (ಪಿಟಿಐ): 2024–25ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ವಾಹನ ತಯಾರಿಕ ಕಂಪನಿ ಮಹೀಂದ್ರ ಆ್ಯಂಡ್ ಮಹೀಂದ್ರ ₹3,541 ಕೋಟಿ ತೆರಿಗೆ ನಂತರದ ಲಾಭ (ಪಿಎಟಿ) ಗಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹3,124 ಕೋಟಿ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 13ರಷ್ಟು ಏರಿಕೆಯಾಗಿದೆ ಎಂದು ಕಂಪನಿ ಸೋಮವಾರ ಷೇರುಪೇಟೆಗೆ ತಿಳಿಸಿದೆ.

ವರಮಾನ ₹42,585 ಕೋಟಿಯಾಗಿದೆ. ಒಟ್ಟು ವೆಚ್ಚ ₹39,113 ಕೋಟಿಯಷ್ಟಾಗಿದೆ. ವಾಹನಗಳ ಮಾರಾಟದಲ್ಲಿ ಶೇ 18ರಷ್ಟು ಏರಿಕೆಯಾಗಿದ್ದು, 2.53 ಲಕ್ಷ ವಾಹನಗಳು ಮಾರಾಟವಾಗಿವೆ.

2024–25ರ ಪೂರ್ಣ ಆರ್ಥಿಕ ವರ್ಷದಲ್ಲಿ ₹14,073 ಕೋಟಿ ತೆರಿಗೆ ನಂತರದ ಲಾಭ ಗಳಿಸಿದೆ. ವರಮಾನ ₹1.58 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹25.30 ಅಂತಿಮ ಲಾಭಾಂಶ ನೀಡಲು ಶಿಫಾರಸು ಮಾಡಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಚಿತ್ರದುರ್ಗ		ಸಾಗರ			
ಅಪಿ	52010-52490	ಬಿಳಿಗೋಟು	10199-26800	ಬಿಳಿಗೋಟು	19200-33699
ಬೆಟ್ಟೆ	29400-29800	ಚಾಲಿ	26899-39611	ಚಾಲಿ	35098-43299
ಕೆಂಪುಗೋಟು	20500-20900	ಕೋಕ	8569-24699	ಕೆಂಪುಗೋಟು	12001-22696
ರಾಶಿ	51500-51900	ಕೆಂಪುಗೋಟು	16989-29199	ರಾಶಿ	43099-48518
ಕಾರ್ಕಳ		ರಾಶಿ	32109-58099	ಯಲ್ಲಾಪುರ	
ಹೊಸತು	25000-47500	ಸಿಪ್ಪೆಗೋಟು	8832-19169	ಅಪಿ	62869-62869
ಹಳತು	30000-50000	ಶಿವಮೊಗ್ಗ		ಬಿಳಿಗೋಟು	15499-32001
ಕುಮಟ		ಬೆಟ್ಟೆ	51009-60119	ಚಾಲಿ	32845-43189
ಚಾಲಿ	40099-42339	ಗೊರಬಲು	18509-30669	ಕೋಕ	5899-16900
ಚಿಪ್ಪು	27869-32869	ರಾಶಿ	40009-57599	ಕೆಂಪುಗೋಟು	17705-25016
ಕೋಕ	7019-20189	ಸರಕು	59109-96540	ರಾಶಿ	40500-58599
ಫ್ಯಾಕ್ಟರಿ	4039-25429	ಶಿರಸಿ		ತಟ್ಟಿಬೆಟ್ಟೆ	27169-38211
ಹೊಸಚಾಲಿ	38869-43999	ಬೆಟ್ಟೆ	27989-38199		

‘ಹೂಡಿಕೆಯ ಆಕರ್ಷಣೆಗೆ ವಲಯವಾರು ನೀಲ ನಕ್ಷೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 30 ಮತ್ತು 31ರಂದು ಬೆಂಗಳೂರಿನಲ್ಲಿ ನಡೆಯುವ ‘ಉತ್ಪಾದನಾ ಮಂಥನ್’ ಕುರಿತ ಪೂರ್ವಭಾವಿ ಸಿದ್ಧತೆಗಳ ಕುರಿತು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅವರು ಸೋಮವಾರ ಹಿರಿಯ ಅಧಿಕಾರಿಗಳ ಸಭೆ ನಡೆಸಿದರು.

ಕರ್ನಾಟಕವನ್ನು ಜಾಗತಿಕ ತಯಾರಿಕಾ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಈ ಸಮಾವೇಶ ನಡೆಯಲಿದೆ. ಆಯ್ದ ಪ್ರಮುಖ ತಯಾರಿಕಾ ವಲಯಗಳು ಮತ್ತು ನವೋದ್ಯಮಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಹಿರಿಯ ಅಧಿಕಾರಿಗಳು ತಮ್ಮ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ. ರಾಜ್ಯದ ಹೂಡಿಕೆ ಆಕರ್ಷಣೆ ಹಾಗೂ ಆರು ಪ್ರಮುಖ ತಯಾರಿಕಾ ವಲಯಗಳಲ್ಲಿ ರಾಜ್ಯವು ಕ್ರಮಿಸಬೇಕಾದ ಅಭಿವೃದ್ಧಿ ಪಥದ ದಿಕ್ಸೂಚಿ ಆಗಲಿದೆ ಎಂದು ಎಂ.ಬಿ. ಪಾಟೀಲ ಹೇಳಿದರು.

ವಾಹನ ತಯಾರಿಕೆ, ವೈಮಾಂತರಿಕ್ಷ ಹಾಗೂ ರಕ್ಷಣೆ, ಎಲೆಕ್ಟ್ರಾನಿಕ್ಸ್ ಸಿಸ್ಟಮ್ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್, ಭಾರಿ ಯಂತ್ರೋಪಕರಣ, ಜೈವಿಕ ತಂತ್ರಜ್ಞಾನ, ಕೃಷಿ ಹಾಗೂ ಆಹಾರ ಸಂಸ್ಕರಣೆ ಕ್ಷೇತ್ರಗಳಲ್ಲಿನ ರಾಜ್ಯದ ಸಾಧನೆಯನ್ನು ಇನ್ನಷ್ಟು ಹೊಸ ಎತ್ತರಕ್ಕೆ ಕೊಂಡೊಯ್ಯಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಉದ್ಯಮ ಕ್ಷೇತ್ರದ ದಿಗ್ಗಜರು ಸರ್ಕಾರಕ್ಕೆ ಮಾರ್ಗದರ್ಶನ ನೀಡಲಿದ್ದಾರೆ ಎಂದರು.

ರಾಜ್ಯದಲ್ಲಿ ಬಂಡವಾಳ ಹೂಡಿಕೆಯ ಆಕರ್ಷಣೆ ಹೆಚ್ಚಿಸಲು ವಲಯವಾರು ನೀಲನಕ್ಷೆ ರೂಪಿಸುವುದು ಈ ಸಮಾವೇಶದ ಮುಖ್ಯ ಉದ್ದೇಶ. ಪ್ರಮುಖ ಆರು ತಯಾರಿಕಾ ವಲಯಗಳಲ್ಲಿ ಬಂಡವಾಳ ಹೂಡಿಕೆ ಆಕರ್ಷಿಸುವುದು ಮತ್ತು ತಯಾರಿಕಾ ಚಟುವಟಿಕೆ ಹೆಚ್ಚಳಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉದ್ಯಮ ಕ್ಷೇತ್ರದ ಪ್ರಮುಖರು ಸರ್ಕಾರಕ್ಕೆ ನೀಲ ನಕ್ಷೆ ಸಿದ್ಧ-ಪಡಿಸಿಕೊಡಲಿದ್ದಾರೆ ಎಂದು ಪಾಟೀಲ ಸಭೆಯ ಗಮನಕ್ಕೆ ತಂದರು.

ಸಭೆಯಲ್ಲಿ ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಮಹೇಶ್ ಭಾಗವಹಿಸಿದ್ದರು.

ಅದಾನಿ ಲಂಚ ಆರೋಪದ ದೂರು ವಜಾಕ್ಕೆ ಮನವಿ

ಬೆಂಗಳೂರು (ರಾಯಿಟರ್ಸ್): ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಆಡಳಿತಾಧಿಕಾರಿಗಳನ್ನು ಭೇಟಿಯಾಗಿರುವ ಅದಾನಿ ಸಮೂಹದ ಪ್ರತಿನಿಧಿಗಳು ಅಧ್ಯಕ್ಷ ಗೌತಮ್ ಅದಾನಿ ವಿರುದ್ಧ ಅಮೆರಿಕದ ನ್ಯಾಯಾಲ-ಯದಲ್ಲಿ ದಾಖಲಾಗಿರುವ ಸಾಗರೋತ್ತರ ಲಂಚ ಪ್ರಕರಣದ ಆರೋಪಗಳನ್ನು ವಜಾಗೊಳಿಸುವಂತೆ ಕೋರಿದ್ದಾರೆ ಎಂದು ಬ್ಲೂಮ್‌ಬರ್ಗ್ ನ್ಯೂಸ್ ವರದಿ ಉಲ್ಲೇಖಿಸಿ ಸುದ್ದಿಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ.

ಅದಾನಿ, ಅವರ ಅಣ್ಣನ ಮಗ ಸಾಗರ್ ಅದಾನಿ ಅವರು ಸೌರ ವಿದ್ಯುತ್ ಗುತ್ತಿಗೆ ಪಡೆಯಲು ಭಾರತದಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ್ದಾರೆ. ಅಲ್ಲದೆ ತಪ್ಪು ಮಾಹಿತಿ ನೀಡಿ ಅಮೆರಿಕದ ಹೂಡಿಕೆದಾರರಿಂದ ಬಂಡವಾಳ ಸಂಗ್ರಹಿಸಲಾಗಿದೆ ಎಂದು ಕಳೆದ ನವೆಂಬರ್ ತಿಂಗಳಿನಲ್ಲಿ ಅಮೆರಿಕದ ನ್ಯಾಯಾಲಯದಲ್ಲಿ ಲಂಚ ಪ್ರಕರಣ ಕುರಿತು ಆರೋಪ ಸಲ್ಲಿಕೆಯಾಗಿತ್ತು.

ಅದಾನಿ ಸಮೂಹದ ಪ್ರತಿನಿಧಿಗಳು, ಅಮೆರಿಕದ ನ್ಯಾಯಾಂಗ ಇಲಾಖೆ ವಕ್ತಾರರು ಮತ್ತು ಶ್ವೇತಭವನವು ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಾಹನಗಳ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ವಾಹನಗಳ ಚಿಲ್ಲರೆ ಮಾರಾಟವು ಏಪ್ರಿಲ್ ತಿಂಗಳಲ್ಲಿ ಶೇ 3ರಷ್ಟು ಏರಿಕೆಯಾಗಿದೆ ಎಂದು ವಾಹನ ವಿತರಕರ ಸಂಘಟನೆಗಳ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

2024ರ ಏಪ್ರಿಲ್‌ನಲ್ಲಿ 22.22 ಲಕ್ಷ ವಾಹನಗಳು ಮಾರಾಟವಾಗಿದ್ದವು. ಈ ಏಪ್ರಿಲ್‌ನಲ್ಲಿ 22.87 ಲಕ್ಷ ವಾಹನಗಳು ಮಾರಾಟವಾಗಿವೆ. ದ್ವಿಚಕ್ರ ವಾಹನಗಳ ಮಾರಾಟದಲ್ಲಿ ಶೇ 2ರಷ್ಟು ಏರಿಕೆಯಾಗಿದೆ. ತ್ರಿಚಕ್ರ ವಾಹನಗಳು (ಶೇ 24), ಪ್ರಯಾಣಿಕ ವಾಹನಗಳು (ಶೇ 1.5) ಮತ್ತು ಟ್ರ್ಯಾಕ್ಟರ್‌ಗಳ ಮಾರಾಟದಲ್ಲಿ ಶೇ 7ರಷ್ಟು ಹೆಚ್ಚಳವಾಗಿದೆ. ಆದರೆ, ವಾಣಿಜ್ಯ ವಾಹನಗಳ ಮಾರಾಟದಲ್ಲಿ ಶೇ 1ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹11000-11000
ದಾವಣಗೆರೆ	₹13000-14550
ತಿಪಟೂರು	₹17000-18000

ಗಾಜಾಪಟ್ಟಿ ಸಂಪೂರ್ಣ ವಶಕ್ಕೆ ಪಡೆಯಲು ಇಸ್ರೇಲ್ ನಿರ್ಧಾರ

ಟೆಲ್ ಅವೀವ್ (ಎಪಿ): ಪ್ಯಾಲೆಸ್ಟೀನ್‌ನ ಗಾಜಾಪಟ್ಟಿಯನ್ನು ಸಂಪೂರ್ಣವಾಗಿ ವಶಕ್ಕೆ ಪಡೆಯಲು ಇಸ್ರೇಲ್‌ನ ಭದ್ರತೆ ಕುರಿತಾದ ಸಂಪುಟವು ಸೋಮವಾರ ಒಪ್ಪಿಗೆ ನೀಡಿದೆ. ಸಾವಿರಾರು ಮೀಸಲು ಸೈನಿಕರನ್ನು ಗಾಜಾದತ್ತ ಹೊರಡುವಂತೆ ಸೇನಾ ಮುಖ್ಯಸ್ಥರು ಆದೇಶ ಹೊರಡಿಸಿದ್ದಾರೆ. ಆದರೆ, ಈ ಯೋಜನೆ ಯಾವಾಗ ಜಾರಿಯಾಗಲಿದೆ ಎಂಬುದನ್ನು ಖಚಿತಪಡಿಸಿಲ್ಲ.

ಹಮಾಸ್ ವಶದಲ್ಲಿರುವ ಒತ್ತೆಯಾಳುಗಳನ್ನು ಬಿಡುಗಡೆಗೊಳಿಸಲು ಒತ್ತಡ ಹೇರುವ ನಿಟ್ಟಿನಲ್ಲಿ ಇಸ್ರೇಲ್ ಈ ಪ್ರಯತ್ನಕ್ಕೆ ಮುಂದಾಗಿದೆ ಎಂದು ಹೇಳಲಾಗಿದೆ.

ಈ ಯೋಜನೆಯಡಿಯಲ್ಲಿ ಲಕ್ಷಾಂತರ ಪ್ಯಾಲೆಸ್ಟೀನಿಯನ್ನರನ್ನು ದಕ್ಷಿಣ ಗಾಜಾಕ್ಕೆ ಸ್ಥಳಾಂತರಿಸುವುದು ಸಹ ಸೇರಿದೆ ಎಂದು ಇಸ್ರೇಲ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದರಿಂದ, ಈಗಾಗಲೇ ಭೀಕರವಾಗಿರುವ ಮಾನವೀಯ ಬಿಕ್ಕಟ್ಟು ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯಿದೆ.

ಗಾಜಾಪಟ್ಟಿಯನ್ನು ಹಮಾಸ್ ಬಂಡುಕೋರರಿಂದ ಸಂಪೂರ್ಣವಾಗಿ ಮುಕ್ತಗೊಳಿಸುವ ನಿಟ್ಟಿನಲ್ಲಿ ಇಸ್ರೇಲ್ ಹೊಸ ಯೋಜನೆ ಕೈಗೆತ್ತಿಕೊಂಡಿದೆ.

ಇಸ್ರೇಲ್ ಹಾಗೂ ಹಮಾಸ್ ನಡುವಿನ ಕದನ ವಿರಾಮವು ಮಾರ್ಚ್ ಮಧ್ಯಭಾಗದಲ್ಲಿ ಕೊನೆಗೊಂಡಿತ್ತು. ಇದಾದ ಬಳಿಕ, ದಾಳಿ ತೀವ್ರಗೊಳಿಸಿದ ಇಸ್ರೇಲ್, ಗಾಜಾಪಟ್ಟಿಯ ಶೇಕಡಾ 50ರಷ್ಟು ಭಾಗವನ್ನು ತನ್ನ ವಶಕ್ಕೆ ಪಡೆದಿತ್ತು. ಕದನ ವಿರಾಮ ಮುಗಿಯುವ ಮೊದಲು ಗಾಜಾ ಪಟ್ಟಿಗೆ ಪೂರೈಕೆಯಾಗುತ್ತಿದ್ದ ನೀರು, ಆಹಾರ, ಇಂಧನವನ್ನು ಸ್ಥಗಿತಗೊಳಿಸಿತ್ತು. ಕಳೆದ 19 ತಿಂಗಳಿನಿಂದ ನಡೆಯುತ್ತಿದ್ದ ಯುದ್ಧದ ಸಂದರ್ಭದಲ್ಲಿ ಅತ್ಯಂತ ಭೀಕರ ಮಾನವೀಯ ಬಿಕ್ಕಟ್ಟು ಸೃಷ್ಟಿಸಿದೆ. ನೆರವು ಸ್ಥಗಿತಗೊಳಿಸಿದ್ದರಿಂದ ಆಹಾರ ಕೊರತೆಯುಂಟಾಗಿ, ಜನರು ಊಟಿಗೆ ಇಳಿಯುವ ಸ್ಥಿತಿ ನಿರ್ಮಾಣವಾಗಿದೆ.

ಸಂಕ್ಷಿಪ್ತ ಸುದ್ದಿ

ಪೋಪ್ ಆಯ್ಕೆ ನಾಳೆಯಿಂದ ರಹಸ್ಯ ಮತದಾನ ಸಭೆ

ವ್ಯಾಟಿಕನ್ ಸಿಟಿ (ಎಪಿ): ಪೋಪ್ ಫ್ರಾನ್ಸಿಸ್ ಅವರ ನಿಧನದಿಂದ ತೆರವಾಗಿರುವ ಪೋಪ್ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕು ಎಂಬ ಕುರಿತು ಚರ್ಚಿಸಲು ವಿಶ್ವದಾದ್ಯಂತ ಇರುವ ಕಾರ್ಡಿನಲ್‌ಗಳು ಈ ವಾರ ಸಭೆ ನಡೆಸಲಿದ್ದಾರೆ.

ವ್ಯಾಟಿಕನ್ ಸಿಟಿಯಲ್ಲಿರುವ ‘ಸಿಸ್ಟಿನ್ ಚಾಪೆಲ್’ನಲ್ಲಿ (ಪೋಪ್ ಅವರ ಅಧಿಕೃತ ನಿವಾಸ) ಮೇ 7ರಿಂದ ರಹಸ್ಯ ಸಭೆ ನಡೆಯಲಿದೆ.

135 ಕಾರ್ಡಿನಲ್‌ಗಳ ಪೈಕಿ 80 ಕಾರ್ಡಿನಲ್‌ಗಳು ಮತದಾನದ ಅಧಿಕಾರ ಹೊಂದಿದ್ದಾರೆ. ಇವರಲ್ಲಿ 71 ವಿವಿಧ ದೇಶಗಳ ಪ್ರತಿನಿಧಿಗಳಿದ್ದು, ‘ಇತಿಹಾಸದಲ್ಲೇ ವೈವಿಧ್ಯಮಯ ಭೌಗೋಳಿಕ ಸಭೆ’ ಎಂಬ ಕೀರ್ತಿಗೆ ಭಾಜನವಾಗಿದೆ.

ನೀಟ್ ಬರೆಯಲು ನಕಲಿ ಪ್ರವೇಶ ಪತ್ರ ವಿದ್ಯಾರ್ಥಿ ವಶಕ್ಕೆ

ಪತ್ತನಂತಿಟ್ಟ(ಕೇರಳ)(ಪಿಟಿಐ): ನಕಲಿ ಪ್ರವೇಶಪತ್ರವನ್ನು ಪಡೆದು ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯನ್ನು (ನೀಟ್) ಬರೆಯಲು ಹಾಜರಾಗಿದ್ದ ವಿದ್ಯಾರ್ಥಿಯೊಬ್ಬನನ್ನು ಇಲ್ಲಿನ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಆರಂಭಿಸಿರುವುದಾಗಿಯೂ ತಿಳಿಸಿದ್ದಾರೆ.

ತಿರುವನಂತಪುರದಲ್ಲಿರುವ ಅಕ್ಷಯಾ ಸೆಂಟರ್‌ನ ಆಪರೇಟರ್ ಒಬ್ಬರು ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದ ಪ್ರವೇಶ ಪ್ರತಿಯನ್ನು ಪ್ರಿಂಟ್ ತೆಗೆದುಕೊಂಡು ಪರೀಕ್ಷೆ ಬರೆಯಲು ಬಂದಿದ್ದಾಗಿ ವಿದ್ಯಾರ್ಥಿ ಒಪ್ಪಿಕೊಂಡಿ-ದ್ದಾನೆ. ಆತನ ಹೇಳಿಕೆಯನ್ನು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರವೇಶಪತ್ರದಲ್ಲಿ ನಮೂದಿಸಿದ ಹೆಸರು, ವಿಳಾಸ ಮತ್ತು ಪರೀಕ್ಷಾ ಕೇಂದ್ರದ ಮಾಹಿತಿಯಲ್ಲಿ ವ್ಯತ್ಯಾಸ ಕಂಡಬಂದ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದ ಮೇಲ್ವಿಚಾರಕರು ಪೊಲೀಸರಿಗೆ ದೂರು ನೀಡಿದರು. ಈ ಕಾರಣ ವಿದ್ಯಾರ್ಥಿಯನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದಿದ್ದರು.

ಐವರು ಪತ್ರಕರ್ತೆಯರಿಗೆ ಡ್ಯಾನಿಷ್ ಸಿದ್ದಿಕಿ ಪತ್ರಿಕೋದ್ಯಮ ಪ್ರಶಸ್ತಿ

ನವದೆಹಲಿ (ಪಿಟಿಐ): ಮುದ್ರಣ, ಡಿಜಿಟಲ್, ಪ್ರಸಾರ ಮತ್ತು ಛಾಯಾಗ್ರಾಹಕ ವಿಭಾಗದಲ್ಲಿ ಪ್ರಭಾವ ಬೀರುವ ವರದಿಗಾರಿಕೆಗಾಗಿ ಐವರು ಪತ್ರಕರ್ತರು 2025ನೇ ಸಾಲಿನ ‘ಡ್ಯಾನಿಷ್ ಸಿದ್ದಿಕಿ ಪತ್ರಿಕೋದ್ಯಮ’ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಛಾಯಾಗ್ರಾಹಕ ಡ್ಯಾನಿಷ್ ಸಿದ್ದಿಕಿ ಅವರಿಗೆ ಗೌರವ ಸಲ್ಲಿಸಲು ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ (ಐಐಸಿ) ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು.

ವೀಸಾ ವಂಚನೆಯಿಂದ ಆಸ್ಟ್ರೇಲಿಯಾದಲ್ಲಿ ಭಾರತದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ತನಿಖಾ ವರದಿಗಾಗಿ ಆಸ್ಟ್ರೇಲಿಯಾದ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ (ಎಬಿಸಿ) ಮೇಘನಾ ಬಾಲಿ, ಭಾರತದ ಹಿಂದುಳಿದ ಸಮುದಾಯಗಳ ಬಗ್ಗೆ ‘ದಿ ಲಾಸ್ಟ್ ಮ್ಯಾನ್’ ಎಂಬ ಹಿಂದಿ ಸರಣಿ ರೂಪಿಸಿದ್ದ ಬಿಬಿಸಿ ನ್ಯೂಸ್ ಇಂಡಿಯಾದ ಪತ್ರಕರ್ತೆ ಸರ್ವಪ್ರಿಯಾ ಸಂಗ್ವಾನ್ ಹಾಗೂ ಚಿತ್ರ ಸುದ್ದಿ ಮೂಲಕ ಮಹಾರಾಷ್ಟ್ರದ ಸಕ್ಕರೆ ಉದ್ಯಮದಲ್ಲಿ ಮಹಿಳೆಯರ ಶೋಷಣೆ ಬಗ್ಗೆ ಬೆಳಕು ಚೆಲ್ಲಿದ್ದ ದಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯ ಛಾಯಾಗ್ರಾಹಕಿ ಸೌಮ್ಯ ಖಾಂಡೇವಾಲ್ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮಣಿಪುರದ ಹಿಂಸಾಚಾರದ ಗುಂಪುಗಳ ಕುರಿತು ‘ದಿ ಕಾರವಾನ್’ನಲ್ಲಿ ತನಿಖಾ ವರದಿ ಪ್ರಕಟಿಸಿದ ಪತ್ರಕರ್ತೆ ಗ್ರೀಷ್ಮಾ ಕುಥಾರ್ ಹಾಗೂ ಗ್ರೇಟ್ ನಿಕೋಬಾರ್ ದ್ವೀಪದ ಮೇಲೆ ಅಭಿವೃದ್ಧಿಯ ಸಾಮಾಜಿಕ ಪರಿಣಾಮ ಮತ್ತು ಪರಿಸರದ ಬಗ್ಗೆ ವಿಸ್ತೃತ ವರದಿ ಮಾಡಿದ ‘ಸ್ಕ್ರಾಲ್.ಇನ್’ ವೆಬ್‌ಸೈಟ್‌ನ ವೈಷ್ಣವಿ ರಾಥೋಡ್ ಅವರಿಗೂ ಪ್ರಶಸ್ತಿ ಸಂದಿದೆ.

ಹಿರಿಯ ಪತ್ರಕರ್ತ ರಾಜದೀಪ್ ಸರ್ದೇಸಾಯಿ, ‘ಫ್ರಂಟ್‌ಲೈನ್’ ಸಂಪಾದಕ ವೈಷ್ಣ ರಾವ್, ರಾಯಿಟರ್ಸ್ ಪಿಕ್ಚರ್ಸ್‌ನ ಗ್ಯಾಬ್ರಿಯೆಲ್ ಫೊನ್ಸೆಕಾ ಅವರು ಪ್ರಶಸ್ತಿಯ ತೀರ್ಪುಗಾರರಾಗಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪುಣ್ಯ ಸ್ಮರಣೆ

ಶ್ರೀಮತಿ ಗಿರಿಜಾ ಶಿವರಾಜು
ನಿಧನ: 06.05.2024
ನೀವು ನಮ್ಮನ್ನು ಅಗಲಿ ಇಂದಿಗೆ ಒಂದು ವರ್ಷ ಕಳೆದರೂ ಸದಾ ನಿಮ್ಮ ಸವಿನೆನಪಿನಲ್ಲಿರುವ
ಪತಿ: ಶ್ರೀ ಶಿವರಾಜು
ಮಗ: ಮಂಜುನಾಥ ಹಾಗೂ ಕುಟುಂಬಸ್ಥರು

Vaikunta Samaradhane

V Doraiswamy
Retd Sr. Health Inspector BBMP,
DOD: 25 Apr 2025.
Vaikunta Samaradhane will be held on 07-05-25 at Yediyuru Vaidika Kendra, Jayanagar.
Kindly join us in praying for the departed soul.
Grief Stricken - Family
(6360032661 / 7507775065)

LOOKING TO BUILD, BUY OR SELL A PROPERTY
Please refer Classifieds on Sunday

ಹನ್ನೊಂದನೇ ವರ್ಷದ ಪುಣ್ಯಸ್ಮರಣೆ

ಶ್ರೀ. ಸಿ. ಟಿ. ರಾಮಚಂದ್ರನ್
ಕಾರ್ಯನಿರ್ವಾಹಕ ಇಂಜಿನಿಯರ್ (ನಿವೃತ್ತ), ಪಿಡಬ್ಲ್ಯೂಡಿ
12.04.1932 - 06.05.2014
ಸಂಸ್ಥಾಪಕ ಅಧ್ಯಕ್ಷರು
ಎಸ್. ಎಸ್. ಬಿ. ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ಸ್
ಇಂದಿರಾನಗರ, ಬೆಂಗಳೂರು – 560 038.
ಸದಾ ನಿಮ್ಮನ್ನು ಸ್ಮರಿಸುವ –
ಪ್ರೀತಿಯ ಮಗ, ಮಗಳು ಮತ್ತು ಕುಟುಂಬ ವರ್ಗ ಮ್ಯಾನೇಜ್‌ಮೆಂಟ್ ಕಮಿಟಿ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು

IN LOVING MEMORY

22-05-1996 - 06-05-2022
A.S. HARSHAVARDHAN, Advocate
S/o A. M Suresh Reddy
You live in our hearts ....always
Fondly Remembered by All

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

NDH-29.05.2025
HIGH COURT OF HIMACHAL PRADESH AT SHIMLA-171001
OMP No. 29 of 2025 Filed in C.S. No. 94 of 2016.
Ajay Kaushal ...Plaintiff.
Versus
M/S Rajpura Hydro Power Pvt. Ltd. & Ors. ...Defendants.
Notice to:- Proposed Defendant
P. D. No. 5 A.K, Raghu S/o A.V. Krishnamaraju, R/o No. 2, Balaji Layout, IOB Lane, Kodigenhalli, Main Road, Bengaluru- 560092.
...Defendant.
Whereas in the above noted case, it has been proved to the satisfaction of this Court that above name defendants can not be served in an ordinary way. Therefore, the proclamation under order 5 rule 20 of the code of Civil Procedure is hereby issued against him/them that he/she/they should appear in this Court either personally or through some duly authorized agent/pleader on 29 May, 2025 (29.05.2025) failing which exparte proceedings will be taken against him/them.
Given under my hand and seal of the court this 01st Day of April, 2025
Sd/- Section Officer (Judicial),
High Court of H.P. Shimla.

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್`ಸೌಲಭ್ಯವಿದೆ. 6366625808, 6366627808.

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/10 ದಿನಗಳು. 23.05.2025 ನವಗ್ರಹ ಮಂದಿರಗಳುಸೇರಿ 18 ಕ್ಷೇತ್ರಗಳು. 12.06.2025 ರಾಮೇಶ್ವರ ಕನ್ಯಾಕುಮಾರಿ ಮದುರೈ 12ಕ್ಷೇತ್ರಗಳು ಜುಲೈ ತಿಂಗಳಲ್ಲಿ ಕಾಶಿ,ಅಯೋಧ್ಯ ಪ್ರಯಾಗ್‌ರಾಜ್ ಇತ್ಯಾದಿ. 9448390735 9449721678

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

www.dhclassifieds.com
@ 500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164



ಜೂನ್ 20ಕ್ಕೆ ಸಿತಾರೆ ಜಮೀನ್ ಪರ್

ನಟ ಅಮೀರ್ ಖಾನ್ ನಿರ್ಮಾಣದ 'ಸಿತಾರೆ ಜಮೀನ್ ಪರ್' ಸಿನಿಮಾ ಜೂನ್ 20ರಂದು ಬಿಡುಗಡೆಯಾಗಲಿದೆ. ಸಿನಿಮಾದಲ್ಲಿ ಅಮೀರ್ ಖಾನ್ ಜೊತೆಗೆ ಹತ್ತು ಹೊಸ ಕಲಾವಿದರು ನಟಿಸಿದ್ದಾರೆ. ಸಿನಿಮಾವನ್ನು ಆರ್.ಎಸ್. ಪ್ರಸನ್ನ ನಿರ್ದೇಶಿಸಿದ್ದಾರೆ.

'ಯುದ್ಧ ಮಾಡದ ಸ್ಟಾರ್‌ಗಳು ನಾವಿಬ್ಬರೇ'

ಅಪೂರ್ವ

> ಚಿತ್ರರಂಗಕ್ಕೆ ನನ್ನನ್ನು ಪರಿಚಯಿಸಿದ ಗುರು ರವಿಚಂದ್ರನ್. 'ಅಪೂರ್ವ' ಸಿನಿಮಾದಲ್ಲಿ ಅವಕಾಶ ಸಿಗದೇ ಹೋಗಿದ್ದರೆ ನಾನು ಈ ವೇದಿಕೆ ಮೇಲೆ ಇರುತ್ತಿರಲಿಲ್ಲ.
> **ಅಪೂರ್ವ,** ನಟಿ

ಈಗಲ್ ಮೀಡಿಯಾ ಕ್ರಿಯೇಷನ್ಸ್ ಮೂಲಕ ನವರಸನ್ ನಿರ್ಮಾಣ ಮಾಡಿರುವ, ಕಿರಣ್ ಕುಮಾರ್ ನಿರ್ದೇಶನದ ಚಂದನ್ ಶೆಟ್ಟಿ–ಅಪೂರ್ವ ನಟಿಸಿರುವ 'ಸೂತ್ರಧಾರಿ' ಸಿನಿಮಾ ಮೇ 9ರಂದು ತೆರೆಕಾಣುತ್ತಿದೆ. ಚಿತ್ರದ ಪ್ರಿರಿಲೀಸ್ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ನಟರಾದ ಶಿವರಾಜ್‌ಕುಮಾರ್ ಹಾಗೂ ರವಿಚಂದ್ರನ್ ಜೊತೆಯಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

ಎಂದಿನಂತೆ ಒಂದಿಷ್ಟು ಕಿವಿಮಾತು, ಹಾಸ್ಯದೊಂದಿಗೆ ಮಾತು ಆರಂಭಿಸಿದ ರವಿಚಂದ್ರನ್, ಶಿವರಾಜ್‌ಕುಮಾರ್ ಅವರ ಜೊತೆಗಿನ ಸ್ನೇಹವನ್ನು ಮೆಲುಕು ಹಾಕಿದರು. 'ನನಗೆ ಶಿವಣ್ಣ ಬಂದಿರುವುದು ಖುಷಿಯಾಗಿದೆ. ನಾನು ಊಹಿಸಿರಲಿಲ್ಲ. ಸಾಮಾನ್ಯವಾಗಿ ನಾನಿದ್ದ ವೇದಿಕೆಗೆ ಶಿವಣ್ಣ ಬರುವುದಿಲ್ಲ. ಶಿವಣ್ಣ ಇದ್ದ ವೇದಿಕೆಗೆ ನಾನು ಹೋಗುವುದಿಲ್ಲ. ಏಕೆಂದರೆ ನಾನಿದ್ದರೆ ಅವರಿದ್ದ ಹಾಗೆ, ಅವರಿದ್ದರೆ ನಾನಿದ್ದ ಹಾಗೆ. ಪರಸ್ಪರ ಸ್ನೇಹವನ್ನು ಉಳಿಸಿಕೊಂಡಿದ್ದೇವೆ. ಯುದ್ಧ ಮಾಡದೇ ಇರುವ ಇಬ್ಬರೇ ಸ್ಟಾರ್‌ಗಳು ನಾವು. ನಾವಿಬ್ಬರೂ ಸಿನಿಮಾ ಕನಸು ಕಂಡವರು. ಇಬ್ಬರ ಸಿನಿಮಾಗಳು ಒಟ್ಟಿಗೆ ಬಂದರೂ ಒಬ್ಬರಿಗೊಬ್ಬರು ಹಾರೈಸಿದವರು' ಎಂದರು.

ಮಾತು ಮುಂದುವರಿಸಿ, 'ಸದ್ಯದ ಸ್ಥಿತಿಯಲ್ಲಿ ಸಿನಿಮಾ ಹಿಟ್ ಆಗಲು ಏನು ಮಾಡಬೇಕೋ ಅದನ್ನು ಮಾಡುವುದು ಈಗಿನ ತುರ್ತು. ಎಲ್ಲರೂ ಇನ್‌ಸ್ಟಾಗ್ರಾಂ, ವಾಟ್ಸ್‌ಆ್ಯಪ್ ಹಿಂದೆ ಬಿದ್ದಿದ್ದಾರೆ. ಚಿತ್ರಮಂದಿರಕ್ಕೆ ಜನರು ಬರುವಂತೆ ಸಿನಿಮಾ ಹೇಗೆ ಮಾಡಬೇಕು ಎನ್ನುವ ಪ್ರಯತ್ನದಲ್ಲಿರಬೇಕು. ಸಿನಿಮಾದ ಬಗ್ಗೆ ಕುತೂಹಲ ಮೂಡಿಸುವುದು ಬಹಳ ಮುಖ್ಯ. ಸಿನಿಮಾಗೆ ಬನ್ನಿ ಬನ್ನಿ ಎಂದು ಕರೆಯುವುದಲ್ಲ. ಸಿನಿಮಾವೇ ಜನರನ್ನು ಚಿತ್ರಮಂದಿರದತ್ತ ಕರೆಯಬೇಕು. ನಾನು, ಶಿವಣ್ಣ ಬಂದ ತಕ್ಷಣ ಜನರು ಸಿನಿಮಾಗೆ ಬರುತ್ತಾರೆ ಎನ್ನುವುದು ಸುಳ್ಳು. ಚಿತ್ರದ ಪ್ರೊಮೊಗಳಿಗೆ, ಪ್ರಚಾರಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತೀರೋ, ಕಥೆ ಬರೆಯುವಾಗಲೂ ಅಷ್ಟೇ ಸಮಯ ನೀಡಿ. ಆ ಕಥೆಯ ಮೇಲೆ ನಂಬಿಕೆ ಇಟ್ಟು ಮುಂದುವರಿದರೆ ಆ ಸಿನಿಮಾ ಗೆದ್ದೇ ಗೆಲ್ಲುತ್ತದೆ. ಸ್ಕ್ರಿಪ್ಟ್ ತಯಾರಿ ಸಂದರ್ಭದಲ್ಲಿ ಹೆಚ್ಚಿನ ಕೆಲಸ ಮಾಡಿ. ನಾವು ಹಿಂದೆ ಸಿನಿಮಾ ಮಾಡುವ ಸಂದರ್ಭದಲ್ಲಿ ಅದರ ಬಗ್ಗೆ ಮಾತನಾಡುತ್ತಿರಲಿಲ್ಲ. ಜನರು ಬಂದು ಸಿನಿಮಾ ವೀಕ್ಷಿಸಿ ಅದನ್ನು ಗೆಲ್ಲಿಸುತ್ತಿದ್ದರು' ಎಂದು ಕಿವಿಮಾತು ಹೇಳಿದರು.

ಲವಲವಿಕೆಯಿಂದ ಮಾತಿಗಿಳಿದ ಶಿವರಾಜ್‌ಕುಮಾರ್, 'ಚಂದನ್ ಶೆಟ್ಟಿ ಹಾಡುಗಳು ನನಗೆ ಇಷ್ಟ. ಆ ಹಾಡುಗಳನ್ನು ಗುನುಗುತ್ತಿರುತ್ತೇನೆ. 'ಟಗರು' ಸಿನಿಮಾ ಸಂದರ್ಭದಲ್ಲಿ ಹಾಡೊಂದನ್ನು ನನಗೆ ಬರೆದಿದ್ದರು. ಆತ ಅದ್ಭುತ ಸಂಗೀತ ನಿರ್ದೇಶಕ, ಹಾಡುಗಾರ. ಇದೀಗ ನಾಯಕನಾಗಿ ಹೆಜ್ಜೆ ಇಡುತ್ತಿದ್ದಾರೆ. ನಟನಾಗಿ ಅವರಿಗೆ ಅವರದೇ ಆದ ಸ್ಟೈಲ್ ಇದೆ' ಎಂದರು.

ಚಿತ್ರದ ನಿರ್ಮಾಪಕ ನವರಸನ್ ಮಾತನಾಡಿ, 'ಓರ್ವ ಹೀರೊಗೆ ಮೊದಲ ಸಿನಿಮಾ ಬಹಳ ಮುಖ್ಯ. ಸುಮಾರು 40 ಜನರಿಗೆ ಈ ಸಿನಿಮಾ ತೋರಿಸಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡು ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಂಡು ಅಂತಿಮ ಸಿನಿಮಾ ಪ್ರತಿ ಸಿದ್ಧಪಡಿಸಲಾಗಿದೆ' ಎಂದರು.

ಪ್ರಿರಿಲೀಸ್ ಕಾರ್ಯಕ್ರಮದಲ್ಲಿ ನವರಸನ್, ಶಿವರಾಜ್‌ಕುಮಾರ್, ರವಿಚಂದ್ರನ್, ಅಪೂರ್ವ, ಚಂದನ್ ಶೆಟ್ಟಿ

ಬಾಲಿವುಡ್‌ಗೆ ಪ್ರಿಯಾಂಕಾ

ಪ್ರಿಯಾಂಕಾ

ನಟಿ ಪ್ರಿಯಾಂಕಾ ಉಪೇಂದ್ರ ಇದೀಗ ಬಾಲಿವುಡ್‌ನತ್ತ ಹೆಜ್ಜೆ ಇಟ್ಟಿದ್ದಾರೆ. ಕರೆನ್ ಕ್ಷಿತಿ ಸುವರ್ಣ ನಿರ್ದೇಶಿಸುತ್ತಿರುವ 'ಸೆಪ್ಟೆಂಬರ್ 21' ಎಂಬ ಶೀರ್ಷಿಕೆಯುಳ್ಳ ಸಿನಿಮಾದಲ್ಲಿ ಪ್ರಿಯಾಂಕಾ ನಟಿಸುತ್ತಿದ್ದಾರೆ.

ಬೆಂಗಳೂರು ಮೂಲದ ಅಲ್ಜೈಮರ್ ರೋಗಿ ಮತ್ತು ಆತನನ್ನು ಆರೈಕೆ ಮಾಡುವ ನರ್ಸ್‌ವೊಬ್ಬಳ ಕಥೆಯನ್ನು ಈ ಸಿನಿಮಾ ಹೊಂದಿದೆ. ಬಹುತಾರಾಗಣದ ಈ ಸಿನಿಮಾದಲ್ಲಿ ಪ್ರಿಯಾಂಕಾ ಉಪೇಂದ್ರ ನರ್ಸ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಬಾಲಿವುಡ್‌ನ ಪ್ರವೀಣ್ ಸಿಂಗ್ ಸಿಸೋಡಿಯಾ, ಜರೀನಾ ವಹಾಬ್ ಮತ್ತು ಅಮಿತ್ ಬೆಹ್ಲ್ ಮುಖ್ಯಭೂಮಿಕೆಯಲ್ಲಿ ಇರಲಿದ್ದಾರೆ.

'ಖಿನ್ನತೆ ಮತ್ತು ಸ್ಮರಣಶಕ್ತಿ ಕಳೆದುಕೊಂಡ ಅರವತ್ತು ವರ್ಷದ ವ್ಯಕ್ತಿಯ (ರಾಜ್‌ಕುಮಾರ್) ಪಾತ್ರದಲ್ಲಿ ಪ್ರವೀಣ್ ಸಿಂಗ್ ಸಿಸೋಡಿಯಾ ನಟಿಸುತ್ತಿದ್ದಾರೆ. ರಾಜ್ ಸ್ಥಿತಿ ಹದಗೆಡುತ್ತಿದ್ದಂತೆ, ಆರೈಕೆ ಮಾಡುವ 'ಕಮಲಾ' ಅವರ ಜೀವನಾಡಿಯಾಗುತ್ತಾಳೆ. ಭಾವನಾತ್ಮಕ ಬೆಂಬಲದ ಜತೆಗೆ ಆಕೆ ಅವನನ್ನು ಆರೈಕೆ ಮಾಡುತ್ತಿರುತ್ತಾಳೆ. ರೋಗಿಯ ಆರೈಕೆ ಮಾಡುವ ಮಹಿಳೆಯ ಹೋರಾಟ, ಕಾಯಿಲೆಯನ್ನು ನಿಭಾಯಿಸುವಾಗ ಎದುರಾಗುವ ಸವಾಲುಗಳು, ರೋಗಿ ಗುಣಮುಖನಾಗಬೇಕು ಎಂದು ಆಕೆ ಮಾಡುವ ಕೆಲಸ ಚಿತ್ರದ ಕಥೆ' ಎಂದಿದ್ದಾರೆ ನಿರ್ದೇಶಕರು. ಕಥೆಯನ್ನು ಕೇರಳದ ಬರಹಗಾರ ನೆಲ್ಲೂಲಿ ಪಿ.ರಾಜಶೇಖರನ್ ಬರೆದಿದ್ದಾರೆ. ವಿನಯ್ ಚಂದ್ರ ಸಂಗೀತ, ಅನಿಲ್ ಕುಮಾರ್ ಕೆ. ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಚಿತ್ರದಲ್ಲಿ ನಾನಾ ಪಾಟೇಕರ್ ಅವರ ಸೋದರಳಿಯ ಸಚಿನ್ ಪಾಟೇಕರ್ ಕೂಡ ನಟಿಸಿದ್ದಾರೆ.

ಕರೆನ್ ಕ್ಷಿತಿ

ಕ್ಷಿತಿಗೆ ಇದು ಚೊಚ್ಚಲ ಸಿನಿಮಾ. ಈ ಹಿಂದೆ 'ಹೈಡ್ ಆ್ಯಂಡ್ ಸೀಕ್' ಎನ್ನುವ ಕಿರು ಚಿತ್ರವನ್ನು ಅವರು ನಿರ್ದೇಶಿಸಿದ್ದರು. 'ಸೆಪ್ಟೆಂಬರ್ 21' ಚಿತ್ರವನ್ನು ಬೆಲ್ಜಿಯಂ ಮೂಲದ ನಿರ್ಮಾಣ ಸಂಸ್ಥೆ 'ಫಾಕ್ಸ್ ಆನ್ ಸ್ಟೇಜ್ ಬೆಲ್ಜಿಯಂ', 'ವಿಕಿಕಾ ಫಿಲ್ಮ್ಸ್' ಮತ್ತು 'ಫಿಲ್ಮ್ ಮ್ಯಾಕ್ಸ್' ಜಂಟಿಯಾಗಿ ನಿರ್ಮಾಣ ಮಾಡುತ್ತಿದೆ. ಸದ್ಯ ಶೂಟಿಂಗ್ ಹಂತದಲ್ಲಿ ಈ ಸಿನಿಮಾವಿದೆ. ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿಗೆ ಸ್ಪರ್ಧಿಸಿದ ಬಳಿಕ ಚಿತ್ರವು ಪ್ಯಾನ್ ಇಂಡಿಯಾ ಮಟ್ಟದಲ್ಲಿ ತೆರೆಗೆ ಬರಲಿದೆ ಎಂದು ಚಿತ್ರತಂಡ ತಿಳಿಸಿದೆ.

ಗಣೇಶ್ ಹೊಸ ಸಿನಿಮಾ ಶೂಟಿಂಗ್

ಗಣೇಶ್

'**ಕೃಷ್ಣಂ ಪ್ರಣಯ ಸಖಿ**' ಸಿನಿಮಾ ಯಶಸ್ಸಿನ ಬೆನ್ನಲ್ಲೇ ನಟ ಗಣೇಶ್ ಎರಡು ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಂಡಿದ್ದರು. ಇವು, ನೃತ್ಯ ನಿರ್ದೇಶಕ ಧನಂಜಯ ನಿರ್ದೇಶನದ 'ಪಿನಾಕ' ಹಾಗೂ ಗೀತ ಸಾಹಿತಿ ಅರಸು ಅಂತಾರೆ ನಿರ್ದೇಶನದ ಸಿನಿಮಾಗಳು.

ಈ ಪೈಕಿ ಅರಸು ಅಂತಾರೆ ಆ್ಯಕ್ಷನ್ ಕಟ್ ಹೇಳುತ್ತಿರುವ ಚಿತ್ರದ ಮೊದಲ ಹಂತದ ಶೂಟಿಂಗ್ ಪೂರ್ಣಗೊಂಡಿದೆ. ಈ ಸಿನಿಮಾದ ಶೀರ್ಷಿಕೆ ಇನ್ನಷ್ಟೇ ಘೋಷಣೆಯಾಗಬೇಕಿದೆ. ಎಸ್.ಎನ್.ಟಿ. ಎಂಟರ್‌ಪ್ರೈಸಸ್ ಲಾಂಛನದಲ್ಲಿ ಎಸ್.ಸಿ.ರವಿ ಭದ್ರಾವತಿ ಅವರು ನಿರ್ಮಿಸುತ್ತಿರುವ ಈ ಸಿನಿಮಾದ ಮುಹೂರ್ತ ಕಳೆದ ತಿಂಗಳು ನಡೆದಿತ್ತು. ಬೆಂಗಳೂರಿನಲ್ಲೇ ಮೊದಲ ಹಂತದ ಚಿತ್ರೀಕರಣ ನಡೆದಿದೆ. 'ನಾಯಕ ಗಣೇಶ್, ನಾಯಕಿ ಅಮೃತ ಅಯ್ಯರ್, ರಂಗಾಯಣ ರಘು, ರವಿಶಂಕರ್ ಗೌಡ, ಕಾಕ್ರೋಚ್ ಸುಧಿ, ಅರುಣ ಬಾಲರಾಜ್ ಮುಂತಾದವರು ಮೊದಲ ಹಂತದ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು. ಸದ್ಯದಲ್ಲೇ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ' ಎಂದು ನಿರ್ಮಾಪಕ ರವಿ ಭದ್ರಾವತಿ ತಿಳಿಸಿದ್ದಾರೆ. ಚಿತ್ರಕ್ಕೆ ಸುಜ್ಞಾನ್ ಛಾಯಾಚಿತ್ರಗ್ರಹಣ, ಅಕ್ಷಯ್ ಪಿ.ರಾವ್ ಸಂಕಲನವಿದೆ. ಕ್ರಾಂತಿ ಕುಮಾರ್ ಹಾಗೂ ಶೈಲೇಶ್ ಕುಮಾರ್ ಸಂಭಾಷಣೆ ಬರೆದಿದ್ದಾರೆ.

ಬಿಲಿಯರ್ಡ್ಸ್: ಪಂಕಜ್‌ಗೆ ಪ್ರಶಸ್ತಿ

ಮುಂಬೈ (ಪಿಟಿಐ): ನಿಧಾನಗತಿಯ ಆರಂಭದ ನಂತರ ಲಯ ಕಂಡುಕೊಂಡ ಅನುಭವಿ ಪಂಕಜ್ ಅಡ್ವಾಣಿ ಅವರು ಧ್ರುವ್ ಸಿತ್ವಾಲಾ ಅವರನ್ನು 5–2 ರಿಂದ ಸೋಲಿಸಿ ಸಿಸಿಐ ಬಿಲಿಯರ್ಡ್ಸ್ ಕ್ಲಾಸಿಕ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಈ ಪ್ರಶಸ್ತಿಯನ್ನು ಅವರು ಸತತ ಮೂರನೇ ಬಾರಿ ಗೆದ್ದುಕೊಂಡರು.

ಭಾನುವಾರ ತಡರಾತ್ರಿ ನಡೆದ ಫೈನಲ್‌ನ ಮೊದಲ ಮೂರು ಫ್ರೇಮ್‌ಗಳಲ್ಲಿ ಪಂಕಜ್ ತಮ್ಮ ಎಂದಿನ ರೀತಿಯ ಆಟ ಕಂಡುಕೊಳ್ಳಲು ಪರದಾಡಿದರು. ಆದರೆ ನಂತರ ಹೊಂದಿಕೊಂಡು ಮೇಲುಗೈ ಸಾಧಿಸಿದರು.

ಪಂಕಜ್ ಅಂತಿಮವಾಗಿ ಫೈನಲ್ ಪಂದ್ಯವನ್ನು 10–150 (69,51), 150 (82)–148 (95), 81–150 (85), 150 (76, 48)–96 (46, 42), 150 (145)–136 (136), 150 (84)–147 (63, 35), 150 (69, 42)–137 (48, 36) ರಲ್ಲಿ ಗೆದ್ದರು.

ದಕ್ಷಿಣ ಕನ್ನಡದ ಮೂವರಿಗೆ ಅಗ್ರಸ್ಥಾನ

ಕ್ಲಾಸಿಕಲ್ ರೇಟೆಡ್ ಚೆಸ್: ಆರುಷಿ, ಲಕ್ಷಿತ್, ರುದ್ರಾಗೆ ತಲಾ ಐದೂವರೆ ಅಂಕ

ಪ್ರಜಾವಾಣಿ ವಾರ್ತೆ

ಮಂಗಳೂರು: ಆತಿಥೇಯ ದಕ್ಷಿಣ ಕನ್ನಡ ಜಿಲ್ಲೆಯ ಆರುಷಿ ಸೆವೆರಿನ್ ಹೆಲೆನ್ ಡಿಸಿಲ್ವ, ಲಕ್ಷಿತ್ ಬಿ.ಸಾಲಿಯಾನ್ ಮತ್ತು ರುದ್ರಾ ರಾಜೀವ ಅವರು ಕ್ಲಾಸಿಕಲ್ ರೇಟೆಡ್ ರಾಷ್ಟ್ರೀಯ ಮುಕ್ತ ಚೆಸ್ ಟೂರ್ನಿಯ ಆರು ಸುತ್ತುಗಳ ಕೊನೆಯಲ್ಲಿ ತಲಾ 5.5 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡರು.

ನಗರದ ಪುರಭವನದಲ್ಲಿ ಆಯೋಜಿಸಿರುವ ಟೂರ್ನಿಯ ಮೂರನೇ ದಿನವಾದ ಸೋಮವಾರ ಪ್ರಮುಖರು ನಿರಾಸೆ ಕಂಡರು. ಅಗ್ರಶ್ರೇಯಾಂಕಿತ, ತಮಿಳುನಾಡಿನ ಶ್ಯಾಮ್ ಸೇರಿದಂತೆ ಒಟ್ಟು 16 ಮಂದಿ 5 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

2122 ರೇಟಿಂಗ್ ಹೊಂದಿರುವ ಶ್ಯಾಮ್ ವಿರುದ್ಧ 1812 ರೇಟಿಂಗ್‌ನ ಆರುಷಿ ಸಿಲ್ವಾ ಐದನೇ ಸುತ್ತಿನಲ್ಲಿ ಡ್ರಾ ಸಾಧಿಸಿದರು. ಆರನೇ ಸುತ್ತಿನಲ್ಲಿ ಕೇರಳದ ಸ್ಯಾಮ್ಯುಯೆಲ್ ಅಜಿತ್ ವಿರುದ್ಧ ಗೆದ್ದರು. ಐದನೇ ಸುತ್ತಿನಲ್ಲಿ ಲಕ್ಷಿತ್ ಕೂಡ ಅಮೋಘ ಆಟವಾಡಿದರು. 1721 ರೇಟಿಂಗ್ ಪಾಯಿಂಟ್‌ಗಳಿರುವ ಅವರ ತಂತ್ರಗಳ ಎದುರು ಡಿಫೆನ್ಸ್ ಅಕೌಂಟ್ಸ್ ಸ್ಪೋರ್ಟ್ಸ್ ಕಂಟ್ರೋಲ್ ಬೋರ್ಡ್‌ನ ಅಜಿತ್ ತಿವಾರಿ (1978) ನಿರುತ್ತರರಾಗಿ ಡ್ರಾಗೆ ಸಮಾಧಾನಪಟ್ಟರು. ಆರನೇ ಸುತ್ತಿನಲ್ಲೂ ಲಕ್ಷಿತ್ ತಮಗಿಂತ ಹೆಚ್ಚು ರೇಟಿಂಗ್ ಹೊಂದಿರುವ ಆಟಗಾರನ ಸವಾಲು ಮೀರಿದರು. ದಕ್ಷಿಣ ಕನ್ನಡದ ಆರುಷ್ ಭಟ್ (1825) ವಿರುದ್ಧ ಅವರು ಜಯಭೇರಿ ಮೊಳಗಿಸಿದರು.

ಭಾನುವಾರ 3.5 ಅಂಕ ಗಳಿಸಿದ್ದ ರುದ್ರಾ ರಾಜೀವ್ ಸೋಮವಾರ ಎರಡೂ ಸುತ್ತುಗಳಲ್ಲಿ ಗೆಲುವು ಸಾಧಿಸಿದರು. ಬೆಳಿಗ್ಗೆ ಕೇರಳದ ನೀರದ್ ಪಿ ವಿರುದ್ಧ ಗೆದ್ದ ಅವರು ಸಂಜೆ ತಮಿಳುನಾಡಿನ ರಕ್ಷಿತ್ ಎಂ ಅವರನ್ನು ಮಣಿಸಿದರು.

ಕೊನೆಯ ದಿನ ಎರಡು ಸುತ್ತುಗಳು ಇದ್ದು ಬೆಳಿಗ್ಗೆ ಆರುಷಿ ಡಿಸಿಲ್ವಾ ಮತ್ತು ಲಕ್ಷಿತ್ ನಡುವಿನ ಹೋರಾಟ ಕುತೂಹಲ ಕೆರಳಿಸಿದೆ. ರುದ್ರ ರಾಜೀವ್‌ಗೆ ಶ್ಯಾಮ್ ಅವರ ಸವಾಲು ಎದುರಾಗಿದೆ.

ಆರುಷಿ ಡಿಸಿಲ್ವ

ಲಕ್ಷಿತ್ ಸಾಲಿಯಾನ್

ರುದ್ರಾ ರಾಜೀವ್

ಮುಖ್ಯಾಂಶಗಳು

- ಎರಡನೇ ಸ್ಥಾನಕ್ಕೆ ಸರಿದ ಅಗ್ರಶ್ರೇಯಾಂಕಿತ ಶ್ಯಾಮ್
- 16 ಮಂದಿಗೆ ತಲಾ 5 ಅಂಕ

ಪ್ರಮುಖ ಫಲಿತಾಂಶಗಳು

5ನೇ ಸುತ್ತು: ಆರುಷಿ ಸೆವೆರಿನ್ ಡಿಸಿಲ್ವಾ ಮತ್ತು ಶ್ಯಾಮ್ ಆರ್, ಅಜಯ್ ಕುಮಾರ್ ರೈ ಮತ್ತು ನಿರಂಜನ್ ವಾರಿಯರ್, ಆರುಷ್ ಭಟ್ ಮತ್ತು ನಿಶಾಂತ್ ಡಿಸೋಜ, ಪ್ರದೀಪ್ ತಿವಾರಿ ಮತ್ತು ಲಕ್ಷಿತ್ ಬಿ.ಸಾಲಿಯಾನ್, ರವಿಗೋಪಾಲ್ ಹೆಗ್ಡೆ ಮತ್ತು ಪುನೀತ್ ನೀಲಿ, ರಜಸ್ ದಹಲೆ, ದರ್ಶನ್ ಭಟ್, ಕೃಪೇಶ್ ಮತ್ತು ಹರ್ಷಿಲ್ ಮಿಶ್ರಾ, ಹಿಂದೋಳ್ ಘೋಷ್ ಮತ್ತು ಸಂದೀಪ್ ಸಂತೋಷ್ ನಡುವಿನ ಪಂದ್ಯ ಡ್ರಾ; ರಕ್ಷಿತ್‌ಗೆ ಜೋಶುವಾ ಮಾರ್ಕ್ ಟೆಲಿಸ್ ವಿರುದ್ಧ ಜಯ; ರುದ್ರಾ ರಾಜೀವ್‌ಗೆ ನೀರದ್ ಪಿ ವಿರುದ್ಧ.

6ನೇ ಸುತ್ತು: ಶ್ಯಾಮ್ ಆರ್ ಮತ್ತು ಅಜಯ್ ಕುಮಾರ್ ರೈ, ನಿರಂಜನ್ ವಾರಿಯರ್ ಮತ್ತು ನಿಶಾಂತ್ ಡಿಸೋಜ, ವಿಹಾನ್ ತಾರಿ ಮತ್ತು ಅನೀಶ್ ಅಡಿಗ ನಡುವಿನ ಪಂದ್ಯ ಡ್ರಾ; ಆರುಷಿ ಡಿಸಿಲ್ವಾಗೆ ಸ್ಯಾಮುಯೆಲ್ ಅಜಿತ್ ವಿರುದ್ಧ, ಲಕ್ಷಿತ್ ಸಾಲಿಯಾನ್‌ಗೆ ಆರುಷ್ ಭಟ್ ಎದುರು, ರುದ್ರಾ ರಾಜೀವ್‌ಗೆ ರಕ್ಷಿತ್ ಎಂ ವಿರುದ್ಧ, ಪ್ರದೀಪ್ ತಿವಾರಿಗೆ ಆರ್ಥ್ ಸಿದ್ದೇಶ್ ಶೇಣವಿ ವಿರುದ್ಧ, ರವಿಗೋಪಾಲ್ ಹೆಗ್ಡೆಗೆ ದರ್ಶನ್ ಭಟ್ ವಿರುದ್ಧ, ಹರ್ಮನ್ ಡಯಾನ್‌ಗೆ ಮಾಧವ ಕೃಷ್ಣನ್ ಆರ್ ವಿರುದ್ಧ, ದರ್ಶ್ ಶೆಟ್ಟಿಗೆ ಹರ್ಷಿಲ್ ಮಿಶ್ರಾ ಎದುರು ಜಯ.

ಖೇಲೊ ಇಂಡಿಯಾ ಯೂತ್ ಗೇಮ್ಸ್ ಈಜು ಸ್ಪರ್ಧೆ

ಕೃಷ್, ಮಾನ್ವಿ, ಶ್ರೀಚರಣಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಚಿನ್ನ ಗೆದ್ದ ಕರ್ನಾಟಕದ ಈಜುಪಟು ಶ್ರೀಚರಣಿ ತುಮು

ಬೆಂಗಳೂರು: ಕರ್ನಾಟಕದ ಈಜುಪಟುಗಳಾದ ಕೃಷ್ ಸುಕುಮಾರ್ ಮತ್ತು ಮಾನ್ವಿ ವರ್ಮಾ ಅವರು ಬಿಹಾರದ ಪಟ್ನಾದಲ್ಲಿ ನಡೆಯುತ್ತಿರುವ ಖೇಲೊ ಇಂಡಿಯಾ ಯೂತ್ ಗೇಮ್ಸ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದರು.

ಕೂಟದ ಎರಡನೇ ದಿನವಾದ ಸೋಮವಾರ ಕರ್ನಾಟಕದ ಸ್ಪರ್ಧಿಗಳು ನಾಲ್ಕು ಚಿನ್ನ ಮತ್ತು ಐದು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ಮಾನ್ವಿ ವರ್ಮಾ ಅವರು ಬಾಲಕಿಯರ 50 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲೂ ಚಿನ್ನಕ್ಕೆ ಮುತ್ತಿಕ್ಕಿದರು. 800 ಮೀಟರ್ ಫ್ರೀಸ್ಟೈಲ್‌ನಲ್ಲಿ ಶ್ರೀಚರಣಿ ತುಮು ಚಾಂಪಿಯನ್ ಆದರು.

ಫಲಿತಾಂಶ: ಬಾಲಕರು: 100 ಮೀ. ಫ್ರೀಸ್ಟೈಲ್: ಕೃಷ್ ಕುಮಾರ್ (1ನಿ.06.39ಸೆ)–1, ಸೂರ್ಯ ಜೋಯಪ್ಪ (ಇಬ್ಬರೂ ಕರ್ನಾಟಕ)–2, ಶುಭಂ ಜೋಶಿ (ಮಹಾರಾಷ್ಟ್ರ)–3. 200 ಮೀ. ಫ್ರೀಸ್ಟೈಲ್: ಅಭಿನವ್ (ಕೇರಳ, 1ನಿ.55.32ಸೆ)–1, ದಕ್ಷಣ್ ಎಸ್. (ಕರ್ನಾಟಕ, 1ನಿ.55.59ಸೆ)–2, ಸಂಪತ್ ಕುಮಾರ್ ಯಾದವ್ (ಆಂಧ್ರ ಪ್ರದೇಶ)–3. 50 ಮೀ. ಬಟರ್‌ಫ್ಲೈ: (ಜನಂಜಯ್ ಜ್ಯೋತಿ ಹಜಾರಿಕಾ, 25.98ಸೆ)–1, ಚಿಂತನ್ ಎಸ್. ಶೆಟ್ಟಿ (ಕರ್ನಾಟಕ, 25.26ಸೆ)–2, ವೇದಾಂತ್ ಸಂತೋಷ್ (ಮಹಾರಾಷ್ಟ್ರ)–3 **ಬಾಲಕಿಯರು:** 100 ಮೀ. ಫ್ರೀಸ್ಟೈಲ್: ಮಾನ್ವಿ ವರ್ಮಾ (ಕರ್ನಾಟಕ, 1ನಿ.18.30ಸೆ)–1, ಸಮೀರಾ ಮೆಹ್ರೋತ್ರಾ 2, ಸೋಮಶೇಖರ್ ಬಕ್ಸಿ (ಇಬ್ಬರೂ ಮಹಾರಾಷ್ಟ್ರ)–3. 50 ಮೀ. ಬಟರ್‌ಫ್ಲೈ: ಮಾನ್ವಿ ವರ್ಮಾ (28.87ಸೆ)–1, ಚರಿತಾ ಫಣೀಂದ್ರನಾಥ್ (ಇಬ್ಬರೂ ಕರ್ನಾಟಕ, 29.21ಸೆ)–2, ರುತುಜಾ ಪ್ರಸಾದ್ (ಮಹಾರಾಷ್ಟ್ರ)–3. 800 ಮೀ. ಫ್ರೀಸ್ಟೈಲ್: ಶ್ರೀಚರಣಿ ತುಮು (9ನಿ.22.29ಸೆ)–1, ಅದಿತಿ ಎನ್. ಮುಲ್ಯೆ (ಇಬ್ಬರೂ ಕರ್ನಾಟಕ, 9ನಿ.25.51ಸೆ)–2, ಅದಿತಿ ಸತೀಶ್ (ಮಹಾರಾಷ್ಟ್ರ)–3.

ಆಟಗಾರರ ನೋಂದಣಿ: ಬಾಗನ್‌ಗೆ ನಿರ್ಬಂಧ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಫಾರ್ವರ್ಡ್ ಜೇಸನ್ ಕಮಿಂಗ್ಸ್ ಅವರ ವರ್ಗಾವಣೆಗೆ ಸಂಬಂಧಿಸಿ ಆದ 'ತಾಂತ್ರಿಕ ದೋಷ'ದ ಕಾರಣ ಹೊಸ ಆಟಗಾರರ ನೋಂದಣಿ ಮಾಡದಂತೆ ಐಎಸ್ಎಲ್ ವಿಜೇತ ತಂಡ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಮೇಲೆ ರಾಷ್ಟ್ರೀಯ ನಿಷೇಧ ಹೇರಲಾಗಿದೆ.

ಫಿಫಾದ ನ್ಯಾಯಿಕ ಮಂಡಳಿಯ ನಿರ್ದೇಶಕರಿಂದ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ಗೆ (ಎಐಎಫ್‌ಎಫ್) ಈ ಸಂಬಂಧ ಅಧಿಕೃತ ಸಂದೇಶ ಬಂದ ಬೆನ್ನಲ್ಲೆ ಈ ಬೆಳವಣಿಗೆ ನಡೆದಿದೆ.

ಫಿಫಾದ ಸೂಚನೆಯಂತೆ ತಕ್ಷಣ ಜಾರಿಗೆ ಬರುವಂತೆ ಹೊಸ ಆಟಗಾರರನ್ನು ನೋಂದಾಯಿಸುವುದರ ಮೇಲೆ ರಾಷ್ಟ್ರೀಯ ಮಟ್ಟದ ನಿಷೇಧ ಜಾರಿಗೊಳಿಸಲಾಗಿದೆ ಎಂದು ಎಐಎಫ್‌ಎಫ್, ಮೋಹನ್ ಬಾಗನ್‌ಗೆ ತಿಳಿಸಿದೆ.

'ಇದು ಸಣ್ಣ ವಿಷಯ. ಇದನ್ನು ಮೋಹನ್ ಬಾಗನ್ ಸೂಪರ್‌ಜೈಂಟ್ಸ್ ವಾರದ ಒಳಗೆ ಬಗೆಹರಿಸಲಿದೆ' ಎಂದು ಕ್ಲಬ್‌ನ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

'ಇದು ತಾತ್ಕಾಲಿಕ ನಿಷೇಧ. ಆದರೆ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ಆಡಳಿತ ಮಂಡಳಿಯು ಇದನ್ನು ಪರಿಹರಿಸಲು ಈಗಾಗಲೇ ಕ್ರಮಗಳನ್ನು ಕೈಗೊಂಡಿದೆ. ಕೆಲವೇ ದಿನಗಳಲ್ಲಿ ನಿಷೇಧ ತೆರವಾಗಲಿದೆ' ಎಂದು ಅಧಿಕಾರಿ ತಿಳಿಸಿದರು.

'ಇದು ಹಣಕಾಸು ಅಕ್ರಮಕ್ಕೆ ಸಂಬಂಧಿಸಿದ್ದಲ್ಲ. ಆಡಳಿತಾತ್ಮಕ ಸ್ವರೂಪದ್ದು. ಫಿಫಾ ಜೊತೆ ಸಂಪರ್ಕ ಸಾಧಿಸಲಾಗಿದೆ. ವಾರದ ಒಳಗೆ ಸರಿಪಡಿಸಲಾಗುವುದು' ಎಂದರು.

ಪಹಲ್ಗಾಮ್ ದಾಳಿಗೆ ಪುಟಿನ್ ಖಂಡನೆ

ಒಂದನೇ ಪುಟದಿಂದ...

ಭಾರತ–ರಷ್ಯಾದ ವಿಶೇಷವಾದ ರಾಜತಾಂತ್ರಿಕ ಸಂಬಂಧ ವೃದ್ಧಿಗಾಗಿ ಬದ್ಧತೆಯಿಂದ ಕೆಲಸ ಮಾಡುವುದಾಗಿ ಪುಟಿನ್ ಹೇಳಿದರು.

ಭಾರತ ಭೇಟಿಗೆ ಒಪ್ಪಿಗೆ: ಈ ವರ್ಷ ಭಾರತದಲ್ಲಿ ನಡೆಯಲಿರುವ ಭಾರತ–ರಷ್ಯಾ ವಾರ್ಷಿಕ ಶೃಂಗಸಭೆಗೆ ಭೇಟಿ ನೀಡುವಂತೆ ಪ್ರಧಾನಿ ಮೋದಿ ಅವರು ನೀಡಿದ ಆಹ್ವಾನವನ್ನು ಪುಟಿನ್ ಅವರು ಸ್ವೀಕರಿಸಿದರು.

ಜಪಾನ್ ಬೆಂಬಲ: ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟಕ್ಕೆ ಬೆಂಬಲ ನೀಡುವುದಾಗಿ ಜಪಾನ್‌ನ ರಕ್ಷಣಾ ಸಚಿವ ಜನರಲ್ ನಕತಾನಿ ತಿಳಿಸಿದರು. ಅವರು ಸೋಮವಾರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೊಂದಿಗೆ ಮಾತುಕತೆ ನಡೆಸಿದರು.

ಸೈಬರ್ ದಾಳಿ; ನಿರಂತರ ನಿಗಾ ವಹಿಸಲು ಕ್ರಮ (ಶ್ರೀನಗರ ವರದಿ): ನವದೆಹಲಿಯ ಮನೋಹರ್ ಪರಿಕ್ಕರ್ ರಕ್ಷಣಾ ಅಧ್ಯಯನ ಹಾಗೂ ವಿಶ್ಲೇಷಣಾ ಸಂಸ್ಥೆ, ಇಂಡಿಯನ್ ಮಿಲಿಟರಿ ಎಂಜಿನಿಯರಿಂಗ್ ಸರ್ವಿಸ್ ಸಂಸ್ಥೆಯ ವೆಬ್‌ಸೈಟ್ ಮೇಲೆ ಸೈಬರ್ ದಾಳಿ ನಡೆಸಿ ಅತ್ಯಂತ ಸೂಕ್ಷ್ಮ ಮಾಹಿತಿಗಳನ್ನು ಪಡೆಯಲಾಗಿದೆ ಎಂದು 'ಪಾಕಿಸ್ತಾನ್ ಸೈಬರ್‌ಫೋರ್ಸ್' ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ತಿಳಿಸಿದೆ.

'ಯಾವುದೇ ಸೈಬರ್ ದಾಳಿಗಳನ್ನು ಪತ್ತೆಹಚ್ಚಲು ನೆಟ್‌ವರ್ಕ್‌ಗಳ ಮೇಲೆ ನಿರಂತರ ನಿಗಾವಹಿಸಲಾಗಿದೆ' ಎಂದು ಸೈಬರ್ ಭದ್ರತಾ ತಜ್ಞರು ಹಾಗೂ ಭದ್ರತಾ ಸಂಸ್ಥೆಗಳು ತಿಳಿಸಿವೆ.

'ಭಾರತದ ರಕ್ಷಣಾ ಇಲಾಖೆಗೆ ಸೇರಿದ ಸಂಸ್ಥೆಗಳ ಸೂಕ್ಷ್ಮ ಮಾಹಿತಿ, ಸೈನಿಕರ ವೈಯಕ್ತಿಕ ಮಾಹಿತಿಗಳು, ಲಾಗಿನ್ ವಿವರಗಳನ್ನು ಪಡೆಯಲಾಗಿದೆ' ಎಂದು ಪಾಕಿಸ್ತಾನ್ ಸೈಬರ್ ಫೋರ್ಸ್ 'ಎಕ್ಸ್' ಮೂಲಕ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯಲ್ಲಿ ಚೇನಾಬ್ ನದಿಗೆ ಅಡ್ಡಲಾಗಿ ಕಟ್ಟಲಾಗಿರುವ ಅಣೆಕಟ್ಟೆಯ ಎಲ್ಲ ಗೇಟ್‌ಗಳನ್ನು ಸೋಮವಾರ ಮುಚ್ಚಲಾಯಿತು. ಪಹಲ್ಗಾಮ್‌ನಲ್ಲಿ ದಾಳಿಯ ಬಳಿಕ ಸಿಂಧೂ ನೀರು ಒಪ್ಪಂದವನ್ನು ಭಾರತ ಅಮಾನತುಗೊಳಿಸಿದ್ದು, ಅದರ ಭಾಗವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ –ಪಿಟಿಐ ಚಿತ್ರ

'ಫತಾಹ್ ಸರಣಿ' ಕ್ಷಿಪಣಿ ಪರೀಕ್ಷೆ ಯಶಸ್ವಿ

ಇಸ್ಲಾಮಾಬಾದ್: 120 ಕಿ.ಮೀ. ದೂರ ಸಾಗಬಲ್ಲ ಸಾಮರ್ಥ್ಯದ 'ಫತಾಹ್ ಸರಣಿ' ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಾಕಿಸ್ತಾನವು ಯಶಸ್ವಿಯಾಗಿ ಸೋಮವಾರ ನಡೆಸಿತು.

ಪಾಕಿಸ್ತಾನದ ಕಾರ್ಯತಂತ್ರ ವಿಭಾಗದ ಹಿರಿಯ ಅಧಿಕಾರಿಗಳು, ಎಂಜಿನಿಯರ್‌ಗಳು, ವಿಜ್ಞಾನಿಗಳು ಹಾಗೂ ಸೇನೆಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಈ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು. 450 ಕಿ.ಮೀ ದೂರ ಸಾಗಬಲ್ಲ ಸಾಮರ್ಥ್ಯದ 'ಅಬ್ದಾಲಿ' ಗುರಿ ನಿರ್ದೇಶಿತ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಪಾಕಿಸ್ತಾನವು ಇತ್ತೀಚೆಗಷ್ಟೇ ನಡೆಸಿತ್ತು.

> **ಪಾಕಿಸ್ತಾನವು ಭಾರತ ವಿರೋಧಿ ಕಾರ್ಯಾಚರಣೆಯನ್ನು ಹೀಗೆಯೇ ಮುಂದುವರಿಸಿದರೆ ಅದು ಸಂಪೂರ್ಣ ನಾಶವಾಗಲಿದೆ**
> **ಅನುರಾಗ್ ಠಾಕೂರ್,** ಕೇಂದ್ರದ ಮಾಜಿ ಸಚಿವ

ಗರಿಷ್ಠ ಸಂಯಮ ಇರಲಿ: ವಿಶ್ವಸಂಸ್ಥೆ

ಗುಟೆರಸ್

ವಿಶ್ವಸಂಸ್ಥೆ (ಪಿಟಿಐ): ಅಣ್ವಸ್ತ್ರ ಬಲ ಹೊಂದಿರುವ ಭಾರತ ಮತ್ತು ಪಾಕಿಸ್ತಾನ ದೇಶಗಳು ಈ ಸಂದರ್ಭದಲ್ಲಿ ಗರಿಷ್ಠ ಸಂಯಮ ಕಾಯ್ದುಕೊಳ್ಳಬೇಕು ಎಂದು ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಒತ್ತಾಯಿಸಿದರು.

'ಎರಡೂ ದೇಶಗಳ ನಡುವಿನ ಸಂಬಂಧ ಸಾಕಷ್ಟು ಹದಗೆಟ್ಟಿದೆ. ಈ ಸಂದರ್ಭದಲ್ಲಿ ಉಭಯ ದೇಶಗಳ ಸೇನೆಗಳು ಮುಖಾಮುಖಿ ಆಗುವುದನ್ನು ತಪ್ಪಿಸಬೇಕಾದ ಅಗತ್ಯ ಹೆಚ್ಚಿದೆ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕ ದಾಳಿಯನ್ನು ಪುನಃ ಖಂಡಿಸಿದ ಅವರು, ಯಾವುದೇ ಸಂದರ್ಭದಲ್ಲೂ ನಾಗರಿಕರ ಮೇಲಿನ ದಾಳಿಗಳು ಸ್ವೀಕಾರಾರ್ಹವಲ್ಲ ಎಂಬುದನ್ನು ಒತ್ತಿಹೇಳಿದರು.

176 ತರಬೇತುದಾರರ ನೇಮಕಾತಿ ಮಾಡದ್ದಕ್ಕೆ ಸಿಎಂ ಗರಂ

ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳಿಗೆ ತರಾಟೆ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ನಿಗದಿತವಾಗಿ ಸಭೆಗಳನ್ನು ನಡೆಸದಿದ್ದರೆ ಕ್ರೀಡಾ ಪ್ರಾಧಿಕಾರ ಇದ್ದೂ ಏನು ಪ್ರಯೋಜನ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಆರ್ಥಿಕ ಇಲಾಖೆ ಒಪ್ಪಿಗೆ ಕೊಟ್ಟು ವರ್ಷವಾದರೂ 176 ತರಬೇತುದಾರರ ನೇಮಕಾತಿ ಮಾಡಿಕೊಂಡಿಲ್ಲ. ಇದು ನಿರ್ಲಕ್ಷ್ಯದ ಪರಮಾವಧಿ. ನೇಮಕಾತಿ ಪ್ರಕ್ರಿಯೆ ತಕ್ಷಣವೇ ಆರಂಭಿಸಬೇಕು. ಯಾವ ಜಿಲ್ಲೆಯಲ್ಲೂ ಉಪನಿರ್ದೇಶಕರ ಸ್ಥಾನ ಖಾಲಿ ಬಿಡಬಾರದು. ಪ್ರಾಧಿಕಾರದ ಸಭೆಗಳನ್ನು ನಿಯಮಿತವಾಗಿ ಆಯೋಜಿಸಬೇಕು. ಪ್ರತಿ ವರ್ಷ ಲೆಕ್ಕಪರಿಶೋಧನೆ ಆಗಬೇಕು. ದಸರಾ ಕ್ರೀಡಾಕೂಟ ಆರಂಭಕ್ಕೂ ಮೊದಲು ಪ್ರಾಧಿಕಾರ ಕ್ರಿಯಾಶೀಲವಾಗಬೇಕು ಎಂದು ಸೂಚಿಸಿದರು.

ರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸಲು ಅಗತ್ಯ ಅನುದಾನ ನಿಗದಿ ಮಾಡಬೇಕು. ಅಂತರರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸುವ ಮೊದಲು ಕನಿಷ್ಠ 15 ರಾಷ್ಟ್ರಗಳ ಪಾಲ್ಗೊಳ್ಳುವಿಕೆ ಖಚಿತಪಡಿಸಿಕೊಳ್ಳಬೇಕು. ಕಾಗದಪತ್ರಗಳಲ್ಲಷ್ಟೇ 'ಅಂತರರಾಷ್ಟ್ರೀಯ, ರಾಷ್ಟ್ರೀಯ ಕ್ರೀಡಾಕೂಟ' ಎಂದು ನಮೂದಿಸಿ, ಭಾಗವಹಿಸುವ ಸಂಸ್ಥೆಗಳಿಗೆ ಕಡಿವಾಣ ಹಾಕಬೇಕು. ಅಗತ್ಯವಾದ ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದರು.

ಭಾರತೀಯ ಕ್ರೀಡಾ ಪ್ರಾಧಿಕಾರದ ಕಾರ್ಯ ಚಟುವಟಿಕೆಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಬೇಕು. ಅದಕ್ಕಿಂತ ಉತ್ತಮವಾಗಿ ರಾಜ್ಯದ ಕ್ರೀಡಾ ಚಟುವಟಿಕೆಗಳನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಕ್ರೀಡಾಕೂಟಗಳಿಗೆ ಆನ್‌ಲೈನ್‌ನಲ್ಲಿ ಅನುದಾನ ನೀಡುವುದು, ಕಂಠೀರವ ಕ್ರೀಡಾಂಗಣ ಹವಾ ನಿಯಂತ್ರಿತ ವ್ಯವಸ್ಥೆ ಅಳವಡಿಕೆ, ಪ್ರೇಕ್ಷಕರ ಗ್ಯಾಲರಿಗಳ ಗುಣಮಟ್ಟ ಪರಿಶೀಲನೆ, ಕಂಬಳಕ್ಕೆ ಗ್ರಾಮೀಣ ಕ್ರೀಡೆ ಎಂದು ಮಾನ್ಯತೆ ನೀಡುವ ಕುರಿತು ಚರ್ಚೆ ನಡೆಯಿತು.

ಮಳೆಯಿಂದ ಪಂದ್ಯ ರದ್ದು • ಉಭಯ ತಂಡಗಳಿಗೆ ತಲಾ ಒಂದು ಅಂಕ

ಪ್ಲೇ ಆಫ್ ರೇಸ್‌ನಿಂದ ಸನ್ ಹೊರಕ್ಕೆ

ಹೈದರಾಬಾದ್ (ಪಿಟಿಐ): ಆತಿಥೇಯ ಸನ್‌ರೈಸರ್ಸ್ ಹೈದರಾಬಾದ್ ತಂಡದ ಬ್ಯಾಟಿಂಗ್ ಕಣ್ತುಂಬಿಕೊಳ್ಳಲು ಇಲ್ಲಿನ ಉಪ್ಪಳದ ರಾಜೀವಗಾಂಧಿ ಅಂತರ ರಾಷ್ಟ್ರೀಯ ಕ್ರೀಡಾಂಗಣಕ್ಕೆ ಬಂದಿದ್ದ ಅಭಿಮಾನಿಗಳಿಗೆ ಮಳೆಯು ನಿರಾಸೆ ಮೂಡಿಸಿತು.

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ವೇಗಿ ಪ್ಯಾಟ್ ಕಮಿನ್ಸ್ ಅವರ ದಾಳಿಗೆ ಆರಂಭದಲ್ಲೇ ಕುಸಿಯಿತು. ಕೆಳ ಕ್ರಮಾಂಕದ ಬ್ಯಾಟರ್‌ಗಳ ಹೋರಾಟದ ನೆರವಿನಿಂದ ಎದುರಾಳಿ ತಂಡಕ್ಕೆ 134 ರನ್‌ಗಳ ಸಾಧಾರಣ ಗುರಿ ನೀಡಿತ್ತು.

ಡೆಲ್ಲಿ ತಂಡದ ಇನಿಂಗ್ಸ್ ಮುಗಿಯುತ್ತಿದ್ದಂತೆ ಮಳೆ ಆರಂಭವಾಯಿತು. ರಾತ್ರಿ 11.10 ಗಂಟೆಯವರೆಗೂ ಹವಾಮಾನ ಪರಿಸ್ಥಿತಿ ಸುಧಾರಿಸದ ಕಾರಣ ಪಂದ್ಯವನ್ನು ರದ್ದುಗೊಳಿಸಲಾಯಿತು. ಉಭಯ ತಂಡಗಳಿಗೆ ಒಂದೊಂದು ಅಂಕ ನೀಡಲಾಯಿತು. ಇದರೊಂದಿಗೆ ಹಾಲಿ ರನ್ನರ್ ಅಪ್ ಹೈದರಾಬಾದ್ ತಂಡದ ಪ್ಲೇ ಆಫ್ ಕನಸು ಕೂಡ ಭಗ್ನಗೊಂಡಿತು. ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಈಗಾಗಲೇ ಹೊರಬಿದ್ದಿವೆ.

ಇದಕ್ಕೂ ಮುನ್ನ ಕಮಿನ್ಸ್ (4–0–19–3) ದಾಳಿಯಿಂದಾಗಿ ಡೆಲ್ಲಿ ತಂಡವು 29 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೊಳಗಾಯಿತು.

ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಎಎಫ್‌ಪಿ ಚಿತ್ರ

ಅಗ್ರ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು.

ಕಮಿನ್ಸ್ ತಮ್ಮ ಮೂರು ಓವರ್‌ಗಳಲ್ಲಿ ಮೂರು ವಿಕೆಟ್ ಗಳಿಸಿದರು. ಅದೂ ಪ್ರತಿಯೊಂದು ಓವರ್‌ನ ಮೊದಲ ಎಸೆತದಲ್ಲಿ ಅವರು ವಿಕೆಟ್ ಪಡೆದರು. ಇನಿಂಗ್ಸ್‌ನ ಮೊದಲ ಎಸೆತದಲ್ಲಿ ಕರುಣ್ ನಾಯರ್, ತಮ್ಮ ಎರಡನೇ ಓವರ್‌ನ ಮೊದಲ ಎಸೆತದಲ್ಲಿ ಫಾಫ್ ಡುಪ್ಲೆಸಿ (3 ರನ್) ಮತ್ತು ಮೂರನೇ ಓವರ್‌ನ ಪ್ರಥಮ ಎಸೆತದಲ್ಲಿ ಅಭಿಷೇಕ್ ಪೊರೆಲ್ (8 ರನ್) ಅವರ ವಿಕೆಟ್ ಗಳಿಸಿದರು. ಈ ಮೂವರು ಬ್ಯಾಟರ್‌ಗಳ ಕ್ಯಾಚ್‌ಗಳನ್ನು ವಿಕೆಟ್‌ಕೀಪರ್ ಇಶಾನ್ ಕಿಶನ್ ಅವರೇ ಪಡೆದಿದ್ದು ವಿಶೇಷ.

ಈ ವೇಳೆ ಕೆ.ಎಲ್. ರಾಹುಲ್ ಮತ್ತು ನಾಯಕ ಅಕ್ಷರ್ ಪಟೇಲ್ ಅವರು ಡೆಲ್ಲಿ ತಂಡಕ್ಕೆ ಚೇತರಿಕೆ ನೀಡುವ ಪ್ರಯತ್ನ ಮಾಡಿದರು. ಆದರೆ ಹರ್ಷಲ್ ಪಟೇಲ್ ಅವರ ಎಸೆತದಲ್ಲಿ ಅಕ್ಷರ್ ದೊಡ್ಡ ಹೊಡೆತಕ್ಕೆ ಯತ್ನಿಸಿ ಫೀಲ್ಡರ್ ಕಮಿನ್ಸ್‌ಗೆ ಕ್ಯಾಚ್ ಆದರು. ಇದಾಗಿ ಕೆಲವು ನಿಮಿಷಗಳ ನಂತರ ಜಯದೇವ್ ಉನದ್ಕತ್ ಅವರ ಓವರ್‌ನಲ್ಲಿ ರಾಹುಲ್ ಅವರೂ ಕೀಪರ್ ಇಶಾನ್‌ಗೆ ಕ್ಯಾಚ್ ಆದರು.

ಆಗ ಕ್ರೀಸ್‌ಗೆ ಬಂದ ಟ್ರಿಸ್ಟನ್ ಸ್ಟಬ್ಸ್ (41; 36ಎ, 4X4) ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದರು. ಅವರು 6ನೇ ವಿಕೆಟ್ ಜೊತೆಯಾಟದಲ್ಲಿ ವಿಪ್ರಜ್ ನಿಗಂ (18) ಜೊತೆಗೆ 33 ರನ್ ಸೇರಿಸಿದರು. ವಿಪ್ರಜ್ ರನ್‌ಔಟ್ ಆಗಿ ಹೊರನಡೆದಾಗ ತಂಡವು 6 ವಿಕೆಟ್‌ಗಳಿಗೆ 62 ರನ್ ಗಳಿಸಿತ್ತು. ಬಳಿಕ ಆಶುತೋಷ್ ಶರ್ಮಾ (41; 26ಎ, 4X2, 6X3) ಇನಿಂಗ್ಸ್ ಚಿತ್ರಣವನ್ನೇ ಬದಲಿಸಿದರು. 7ನೇ ವಿಕೆಟ್ ಜೊತೆಯಾಟದಲ್ಲಿ ಸ್ಟಬ್ಸ್ ಮತ್ತು ಶರ್ಮಾ ಅವರು 66 ರನ್ ಸೇರಿಸಿದರು. ಅದರಿಂದಾಗಿ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 133 ರನ್ ಗಳಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 133 (ಕೆ.ಎಲ್. ರಾಹುಲ್ 10, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 41, ಆಶುತೋಷ್ ಶರ್ಮಾ 41, ವಿಪ್ರಜ್ ನಿಗಂ 18, ಪ್ಯಾಟ್ ಕಮಿನ್ಸ್ 19ಕ್ಕೆ3, ಜಯದೇವ್ ಉನದ್ಕತ್ 13ಕ್ಕೆ1) ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್. ಫಲಿತಾಂಶ: ಪಂದ್ಯ ರದ್ದು, ಉಭಯ ತಂಡಗಳಿಗೆ ತಲಾ ಒಂದು ಅಂಕ

ತಾತ್ಕಾಲಿಕ ಅಮಾನತು ಶಿಕ್ಷೆ ಮುಗಿಸಿದ ರಬಾಡ

ನವದೆಹಲಿ (ಎಎಫ್‌ಪಿ): ಮಾದಕದ್ರವ್ಯ ಸೇವನೆ ಆರೋಪದಲ್ಲಿ ಅಮಾನತು ಶಿಕ್ಷೆ ಪೂರ್ಣಗೊಳಿಸಿರುವ ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ ಅವರು ಶೀಘ್ರದಲ್ಲೇ ಗುಜರಾತ್ ಟೈಟನ್ಸ್ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಫ್ರ್ಯಾಂಚೈಸಿ ಸೋಮವಾರ ತಿಳಿಸಿದೆ.

29 ವರ್ಷ ವಯಸ್ಸಿನ ರಬಾಡ ಅವರು ತಿಂಗಳ ಹಿಂದೆ ಐಪಿಎಲ್ ಟೂರ್ನಿಯಿಂದ ದಿಢೀರ್ ಹಿಂದೆ ಸರಿದು, ತವರಿಗೆ ಮರಳಿದ್ದರು. ಮಾದಕ ದ್ರವ್ಯ ಸೇವನೆ ಪರೀಕ್ಷೆಯಲ್ಲಿ ದೃಢಪಟ್ಟಿದ್ದರಿಂದ ತಾತ್ಕಾಲಿಕ ಅಮಾನತು ಶಿಕ್ಷೆಗೆ ಗುರಿಯಾಗಿದ್ದರು.

‘ಕಗಿಸೊ ರಬಾಡ ಅವರು ತನ್ನ ತಪ್ಪಿಗೆ ವಿಷಾದ ವ್ಯಕ್ತಪಡಿಸಿದ್ದಾರೆ. ದಕ್ಷಿಣ ಆಫ್ರಿಕಾದ ಮಾದಕದ್ರವ್ಯ ಮುಕ್ತ ಕ್ರೀಡಾ ಸಂಸ್ಥೆ (ಎಸ್‌ಎಐಡಿಎಸ್) ತನಿಖೆಯನ್ನು ಪೂರ್ಣಗೊಳಿಸಿದೆ. ಅಮಾನತು ಶಿಕ್ಷೆಯನ್ನು ರಬಾಡ ಪೂರ್ಣಗೊಳಿಸಿದ್ದು, ಐಪಿಎಲ್‌ನ ಉಳಿದ ಪಂದ್ಯಗಳಲ್ಲಿ ಆಯ್ಕೆಗೆ ಲಭ್ಯವಿದ್ದಾರೆ’ ಎಂದು ಗುಜರಾತ್ ಟೈಟನ್ಸ್ ಹೇಳಿಕೆಯಲ್ಲಿ ತಿಳಿಸಿದೆ.

ಮುಂಬೈ ಇಂಡಿಯನ್ಸ್‌ಗೆ ಗುಜರಾತ್ ಸವಾಲು ಇಂದು

ಬಲಾಢ್ಯರ ಹಣಾಹಣಿಗೆ ವಾಂಖೆಡೆ ಸಿದ್ಧ



ಜಸ್‌ಪ್ರೀತ್ ಬೂಮ್ರಾ



ಪ್ರಸಿದ್ಧ ಕೃಷ್ಣ

ಮುಂಬೈ (ಪಿಟಿಐ): ಐಪಿಎಲ್ ಅಂಕ ಪಟ್ಟಿಯ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿರುವ ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟನ್ಸ್ ತಂಡಗಳು ಮಂಗಳವಾರ ಮುಖಾಮುಖಿಯಾಗಲಿವೆ.

ಮುಂಬೈ ಮತ್ತು ಟೈಟನ್ಸ್ ಪ್ಲೇ ಆಫ್‌ಗೆ ಲಗ್ಗೆ ಇಡುವ ನೆಚ್ಚಿನ ತಂಡಗಳಾಗಿವೆ. ಸತತ ಆರು ಪಂದ್ಯಗಳಲ್ಲಿ ಗೆದ್ದಿರುವ ಮುಂಬೈ ತಂಡವು ಮೂರನೇ ಸ್ಥಾನದಲ್ಲಿದೆ. ಆರಂಭಿಕ ಹಂತದ ಪಂದ್ಯಗಳಲ್ಲಿ ಹೆಚ್ಚು ಸೋತಿದ್ದರೂ ಪುಟಿದೆದ್ದ ಮುಂಬೈ ಅಮೋಘ ಆಟವಾಡುತ್ತಿದೆ. ರೋಹಿತ್ ಶರ್ಮಾ(293 ರನ್), ರಿಯಾನ್ ರಿಕೆಲ್ಟನ್ (334), ಸೂರ್ಯಕುಮಾರ್ ಯಾದವ್ (475), ತಿಲಕ್ ವರ್ಮಾ (239), ನಮನ್ ಧೀರ್ (155) ಆಲ್‌ರೌಂಡರ್ ವಿಲ್ ಜ್ಯಾಕ್ಸ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ (157 ಮತ್ತು 13 ವಿಕೆಟ್) ಅವರು ಬ್ಯಾಟಿಂಗ್ ವಿಭಾಗವನ್ನು ಬಲಾಢ್ಯಗೊಳಿಸಿದ್ದಾರೆ. ದೊಡ್ಡ ಮೊತ್ತಗಳ ಗಳಿಕೆ ಮತ್ತು ಚೇಸಿಂಗ್ ಎರಡರಲ್ಲೂ ಯಶಸ್ಸು ಸಾಧಿಸುತ್ತಿದೆ.

ಬೌಲರ್‌ಗಳು ಕೂಡ ತಂಡದ ನಿರೀಕ್ಷೆಗೆ ತಕ್ಕಂತೆ ಆಡುತ್ತಿದ್ದಾರೆ. ಟ್ರೆಂಟ್ ಬೌಲ್ಟ್ (16 ವಿಕೆಟ್), ಜಸ್‌ಪ್ರೀತ್ ಬೂಮ್ರಾ (11) ಮತ್ತು ದೀಪಕ್ ಚಾಹರ್ (9) ಅವರು ಎದುರಾಳಿ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡುತ್ತಿದ್ದಾರೆ. ಎದುರಾಳಿ ತಂಡಗಳು ದ್ವಿಶತಕದ ಗಡಿ ಮುಟ್ಟದಂತೆ ನಿಯಂತ್ರಿಸಿದ್ದಾರೆ.

ಗುಜರಾತ್ ತಂಡವೂ ಮುಂಬೈನಷ್ಟೇ ಬಲಾಢ್ಯವಾಗಿದೆ. ಸ್ಥಿರ ಪ್ರದರ್ಶನ ನೀಡುತ್ತಿರುವ ಆರಂಭಿಕ ಬ್ಯಾಟರ್ ಸಾಯಿ ಸುದರ್ಶನ್ (504 ರನ್), ಜೋಸ್ ಬಟ್ಲರ್ ಮತ್ತು ನಾಯಕ ಗಿಲ್ (465) ಉತ್ತಮ ಲಯದಲ್ಲಿದ್ದಾರೆ. ಅವರು ಮುಂಬೈ ಬೌಲರ್‌ಗಳಿಗೆ ತಿರುಗೇಟು ನೀಡುವ ಸಮರ್ಥರೂ ಹೌದು.

ಟೈಟನ್ಸ್ ತಂಡದ ವೇಗಿ, ಕನ್ನಡಿಗ ಪ್ರಸಿದ್ಧ ಕೃಷ್ಣ (19 ವಿಕೆಟ್), ಮೊಹಮ್ಮದ್ ಸಿರಾಜ್ (14) ಮತ್ತು ಆರ್. ಸಾಯಿಕಿಶೋರ್ (12) ಅವರು ಉತ್ತಮ ಲಯದಲ್ಲಿದ್ದಾರೆ.

ಹೀಗಾಗಿ ಉಭಯ ತಂಡಗಳ ನಡುವಣ ಹಣಾಹಣಿಯು ರೋಚಕ ರಸದೌತಣ ನೀಡುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	11	8	3	16	0.482
ಪಂಜಾಬ್ ಕಿಂಗ್ಸ್	11	7	3	15	0.376
ಮುಂಬೈ ಇಂಡಿಯನ್ಸ್	11	7	4	14	1.274
ಗುಜರಾತ್ ಟೈಟನ್ಸ್	10	7	3	14	0.867
ಡೆಲ್ಲಿ ಕ್ಯಾಪಿಟಲ್ಸ್	11	6	4	13	0.362
ಕೋಲ್ಕತ್ತ ನೈಟ್ ರೈಡರ್ಸ್	11	5	5	11	0.249
ಲಖನೌ ಸೂಪರ್ ಜೈಂಟ್ಸ್	11	5	6	10	-0.469
ರಾಜಸ್ಥಾನ ರಾಯಲ್ಸ್	12	3	9	6	-0.718
ಸನ್‌ರೈಸರ್ಸ್ ಹೈದರಾಬಾದ್	11	3	7	7	-1.192
ಚೆನ್ನೈ ಸೂಪರ್ ಕಿಂಗ್ಸ್	11	2	9	4	-1.117

ಆರೇಂಜ್ ಕ್ಯಾಪ್
ವಿರಾಟ್ ಕೊಹ್ಲಿ
(ಆರ್‌ಸಿಬಿ) 505 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ
(ಜಿಟಿ) 19 ವಿಕೆಟ್

ಆರ್‌ಸಿಬಿ ಅರ್ಜಿ ವಜಾ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಕ್ರಿಕೆಟ್ ತಂಡವು ಯೂಟ್ಯೂಬ್ ಜಾಹೀರಾತಿಗೆ ಸಂಬಂಧಿಸಿದಂತೆ ಊಬರ್ ಮೋಟೊ ವಿರುದ್ಧ ದಾಖಲಿಸಿದ್ದ ಮೊಕದ್ದಮೆಯನ್ನು ಸೋಮವಾರ ದೆಹಲಿ ಹೈಕೋರ್ಟ್ ವಜಾ ಮಾಡಿದೆ.

ಈ ಜಾಹೀರಾತಿನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಟಗಾರ ಟ್ರಾವಿಸ್ ಹೆಡ್ ಅಭಿನಯಿಸಿದ್ದಾರೆ. ಜಾಹೀರಾತಿನಲ್ಲಿ ತಮ್ಮ ಫ್ರ್ಯಾಂಚೈಸಿಯ ಟ್ರೇಡ್‌ಮಾರ್ಕ್‌ಗೆ ಅವಹೇಳನ ಮಾಡಲಾಗಿದೆ ಎಂದು ಆರ್‌ಸಿಬಿಯು ಊಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೆಟ್ ಲಿಮಿಟೆಡ್ ವಿರುದ್ಧ ಅರ್ಜಿ ದಾಖಲಿಸಿತ್ತು.

ಪ್ರಕರಣದ ವಿಚಾರಣೆ ನಡೆಸಿದ ಜಸ್ಟಿಸ್ ಸೌರಭ್ ಬ್ಯಾನರ್ಜಿ, ‘ಜಾಹೀರಾತಿನಲ್ಲಿ ಯಾವುದೇ ಅವಹೇಳನಕಾರಿ ಅಥವಾ ನಿಯಮ ಉಲ್ಲಂಘನೆಯ ಅಂಶಗಳು ಮೇಲ್ನೋಟಕ್ಕೆ ಕಂಡುಬಂದಿಲ್ಲ. ಕ್ರಿಕೆಟ್ ಹಿನ್ನೆಲೆಯ ಜಾಹೀರಾತು ಇದಾಗಿದೆ. ಲಘು ಹಾಸ್ಯಮಿಶ್ರಿತ ಮತ್ತು ಆರೋಗ್ಯಪೂರ್ಣ ಧಾಟಿಯ ದೃಶ್ಯಗಳಿವೆ. ಇದರಲ್ಲಿ ಯಾವುದೇ ನ್ಯಾಯಾಲಯದ ಮಧ್ಯಸ್ಥಿಕೆ ಬೇಕಿಲ್ಲ’ ಎಂದಿದ್ದಾರೆ.

ಊಬರ್ ಜಾಹೀರಾತಿನ ವಿಡಿಯೊದಲ್ಲಿ; ಬೆಂಗಳೂರಿನ ಕ್ರಿಕೆಟ್ ಕ್ರೀಡಾಂಗಣದ ಬಳಿ ಬರೆಯಲಾಗಿದ್ದ ಬೆಂಗಳೂರು ವರ್ಸಸ್ ಹೈದರಾಬಾದ್ ಎಂದು ಬರೆದಿರುವ ಫಲಕದ ಮೇಲೆ ಟ್ರಾವಿಸ್ ಹೆಡ್ ಮತ್ತು ಇನ್ನೊಬ್ಬ ನಟ ಸೇರಿ, ‘ರಾಯಲ್ಲಿ ಚಾಲೆಂಜ್ಡ್ ಬೆಂಗಳೂರು’ ಎಂದು ಸ್ಪ್ರೇ ಮೂಲಕ ಬರೆಯುವ ದೃಶ್ಯವಿದೆ.

ಇದು ತಮ್ಮ ಫ್ರ್ಯಾಂಚೈಸಿಯ ಟ್ರೇಡ್‌ಮಾರ್ಕ್‌ಗೆ ಮಾಡಿರುವ ಅವಹೇಳನ ಎಂದು ಆರ್‌ಸಿಬಿ ದೂರು ದಾಖಲಿಸಿತ್ತು.

ಸನ್‌ರೈಸರ್ಸ್ ತಂಡ ಸೇರಿದ ಹರ್ಷ ದುಬೆ

ಹೈದರಾಬಾದ್ (ಪಿಟಿಐ): ಗಾಯಗೊಂಡಿರುವ ಎಡಗೈ ಬ್ಯಾಟರ್ ಸ್ಮರಣ್ ರವಿಚಂದ್ರನ್ ಬದಲು ಸನ್‌ರೈಸರ್ಸ್ ಹೈದರಾಬಾದ್ ತಂಡವು ಆಲ್‌ರೌಂಡರ್ ಹರ್ಷ ದುಬೆ ಅವರಿಗೆ ಸ್ಥಾನ ಕಲ್ಪಿಸಿದೆ.

ದೇಶಿ ಕ್ರಿಕೆಟ್‌ನಲ್ಲಿ ವಿದರ್ಭ ತಂಡವನ್ನು ಪ್ರತಿನಿಧಿಸುತ್ತಿರುವ ದುಬೆ ಅವರು ₹30 ಲಕ್ಷ ಮೂಲಬೆಲೆಗೆ ಸನ್‌ರೈಸರ್ಸ್ ತಂಡವನ್ನು ಸೇರಿಕೊಂಡಿದ್ದಾರೆ.

22 ವರ್ಷ ವಯಸ್ಸಿನ ಈ ಆಟಗಾರ 16 ಟಿ20, 20 ಎ ದರ್ಜೆ ಪಂದ್ಯಗಳು ಮತ್ತು 18 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದು, ಎಲ್ಲಾ ಮಾದರಿಗಳಲ್ಲಿ ಒಟ್ಟು 127 ವಿಕೆಟ್ ಮತ್ತು 941 ರನ್ ಕಲೆ ಹಾಕಿದ್ದಾರೆ.

ಅಂಗವಿಕಲರ ಕ್ರಿಕೆಟ್: ಭಾರತಕ್ಕೆ ಸರಣಿ

ಬೆಂಗಳೂರು: ಭಾರತ ಅಂಗವಿಕಲರ ಕ್ರಿಕೆಟ್ ತಂಡವು ಶ್ರೀಲಂಕಾ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯನ್ನು 5–0 ಅಂತರದಿಂದ ಗೆದ್ದುಕೊಂಡಿದೆ.

ಪಿ.ಡಿ. ದೀಪಕ್ ಲೋಹಿಯಾ ಸ್ಮರಣಾರ್ಥ ಟ್ರೋಫಿಗಾಗಿ ನಡೆದ ಟೂರ್ನಿಯಲ್ಲಿ ಕಾಲುಗಳ ನ್ಯೂನತೆಯುಳ್ಳ ಕ್ರಿಕೆಟಿಗರ ತಂಡಗಳು ಸ್ಪರ್ಧಿಸಿದ್ದವು. ಕುಂಬಳಗೋಡಿನಲ್ಲಿರುವ ಕಿಣಿ ಸ್ಪೋರ್ಟ್ಸ್ ಅರೇನಾದಲ್ಲಿ ಸೋಮವಾರ ನಡೆದ ಐದನೇ ಟಿ20 ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 191 ರನ್ ಕಲೆಹಾಕಿತು. ಈ ಗುರಿ ಬೆನ್ನತ್ತಿದ ಶ್ರೀಲಂಕಾ 15 ಓವರ್‌ಗಳಲ್ಲಿ 88 ರನ್‌ಗಳಿಗೆ ಸರ್ವಪತನವಾಯಿತು.

ಭಾರತ ತಂಡದ ನರೇಂದ್ರ ಮನಗೋಳ್ ಪಂದ್ಯಶ್ರೇಷ್ಠ, ರವೀಂದ್ರ ಸಂತೆ ಸರಣಿಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸರಣಿ ಗೆದ್ದ ಭಾರತ ತಂಡಕ್ಕೆ ₹ 2 ಲಕ್ಷ ಮತ್ತು ಶ್ರೀಲಂಕಾ ತಂಡಕ್ಕೆ ₹ 50 ಸಾವಿರ ಬಹುಮಾನ ಪ್ರದಾನ ಮಾಡಲಾಯಿತು.

ಬೆಂಗಳೂರು ಡ್ರೀಮ್ ಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಸೋಮವಾರ 4–1 ಗೋಲುಗಳಿಂದ ಎಫ್‌ಸಿ ಡೆಕ್ಕನ್ ವಿರುದ್ಧ ಜಯ ಸಾಧಿಸಿತು.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಪರ ಜೈ ಹರಿ ಬರ್ಮನ್ (24ನೇ, 86ನೇ ನಿ.) ಗೋಲು ಗಳಿಸಿದರು. ಡಿವೈಇಎಸ್ ಎಫ್‌ಸಿ ತಂಡ 4–2 ಗೋಲುಗಳಿಂದ ಶ್ರೀ ಗಜಾನನ ಎಫ್‌ಸಿ ತಂಡವನ್ನು ಮಣಿಸಿತು.

ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (1) ತಂಡವು ಕೆಎಸ್‌ಸಿಎ ಮೊದಲ ಡಿವಿಷನ್ ಪ್ರಥಮ ಗುಂಪಿನ ಲೀಗ್ ಕಮ್ ನಾಕೌಟ್ ಟೂರ್ನಿಯಲ್ಲಿ ಸರ್ ಮಿರ್ಜಾ ಇಸ್ಮಾಯಿಲ್ ಶೀಲ್ಡ್ ಗೆದ್ದುಕೊಂಡಿತು. (ನಿಂತವರು) ಎಡದಿಂದ; ಎ. ರೋಹನ್ ಪಾಟೀಲ್, ವಿಶಾಲ್ ಒನಾತ್, ರೋಹಿತ್ ಆರ್. ವಾರಂಬಳ್ಳಿ, ಅನಿರುದ್ಧ್ ಶ್ರೀನಿವಾಸ್, ಚಿನ್ಮಯ್ ಎನ್.ಎ, ನಿಶ್ಚಿತ್ ಪೈ, ಸಂಕಲ್ಪ್ ಎಸ್.ಎಸ್, ಪಾರಸ್ ಗುರುಭಕ್ಸ್ ಆರ್ಯ, ಪ್ರಖರ್ ಚತುರ್ವೇದಿ, ಭೀಮ್ ರಾವ್, ತಿಪ್ಪಾರೆಡ್ಡಿ, ಆರವ್ ಮಹೇಶ್ (ಕುಳಿತವರು) ಅಭಿಲಾಷ್ ಶೆಟ್ಟಿ, ರಕ್ಷಿತ್ ಶಿವಕುಮಾರ್ (ನಾಯಕ), ರೋಹಿತ್ ಸಬರ್‌ವಾಲ್ (ಕೋಚ್), ಶಶಿಕುಮಾರ್ ಕೆ.

ನಿಮ್ಮ ಆಯ್ಕೆಯ ಪಲ್ಸರ್ ಏರಿ, ಬೈಕ್ ಬಳಗದೊಂದಿಗೆ ಸೇರಿ
ಡೌನ್-ಪೇಮೆಂಟ್ ₹5 544/-* ರಿಂದ ಪ್ರಾರಂಭವಾಗುತ್ತದೆ

	125 NEON	NS125 BASE	N160 TWIN DISC	220F	N250
ಉಳಿತಾಯ	-	-	-	₹6 387/-	₹9 114/-
ವಿಶೇಷ ಬೆಲೆ (ಉಳಿತಾಯದ ನಂತರ)	₹86 477/-	₹99 994/-	₹1 22 720/-	₹1 37 139/-	₹1 43 757/-

*ಎಕ್ಸ್-ಶೋರೂಮ್ ಬೆಲೆ

pulsar
DEFINITELY DARING

72198 21111 | BAJAJ SECURE • AMC • ROAD SIDE ASSISTANCE | BAJAJ CREDIT

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. *ಸೂಚಿಸಲಾದ ಪಲ್ಸರ್ ವೇರಿಯಂಟ್ಗಳಿಗೆ ಎಕ್ಸ್-ಶೋರೂಂ ಬೆಲೆ. ಮಾರ್ಚ್ 31, 2025 ರಂತೆ ಉಲ್ಲೇಖಿಸಲಾದ ಪಲ್ಸರ್ ವೇರಿಯಂಟ್‌ಗಳ ಎಕ್ಸ್-ಶೋರೂಂ ಬೆಲೆಗೆ ಹೋಲಿಸಿದರೆ ಬೆಲೆ ಪರಿಷ್ಕರಣೆ. *ಪಲ್ಸರ್ 125 ನಿಯಾನ್‌ಗೆ ಡೌನ್-ಪೇಮೆಂಟ್ ಮಾರ್ಜಿನ್ ಮನಿ ಆಗಿದೆ. ಮಾರ್ಜಿನ್ ಮನಿಯು DCC ಶುಲ್ಕಗಳು, ಸಂಸ್ಕರಣಾ ಶುಲ್ಕಗಳು, ಇತರ ಶುಲ್ಕಗಳನ್ನು ಹೊರತುಪಡಿಸಿದೆ ಮತ್ತು ಇದು ಕ್ರೆಡಿಟ್ ನಿಯತಾಂಕಗಳ ನೆರವೇರಿಕೆಯನ್ನು ಆಧರಿಸಿದೆ. ಪೂರ್ವ ಸೂಚನೆ ಇಲ್ಲದೆ, ಯಾವುದೇ ಅಥವಾ ಎಲ್ಲಾ ಕೊಡುಗೆಗಳನ್ನು ಹಿಂತೆಗೆದುಕೊಳ್ಳುವ ಹಕ್ಕನ್ನು ಬಜಾಜ್ ಆಟೋ ಕಾಯ್ದಿರಿಸಿದೆ. ಸಾಮಾನ್ಯ ಸಾರ್ವಜನಿಕ ಅಥವಾ ಸಾರ್ವಜನಿಕ ರಸ್ತೆಗಳಿಂದ ಪ್ರತ್ಯೇಕವಾಗಿ, ವೃತ್ತಿಪರ ಮೇಲ್ವಿಚಾರಣೆಯಲ್ಲಿ, ನಿಯಂತ್ರಿತ ಮತ್ತು ಸುರಕ್ಷಿತ ವಾತಾವರಣದಲ್ಲಿ, ಸಾಹಸಗಳನ್ನು ತಜ್ಞರು ನಿರ್ವಹಿಸಿದ್ದಾರೆ. ಈ ಸಾಹಸಗಳನ್ನು ಪುನರಾವರ್ತಿಸಲು ಪ್ರಯತ್ನಿಸಬೇಡಿ ಮತ್ತು ಯಾವಾಗಲೂ ಸಂಚಾರ ಮತ್ತು ಸುರಕ್ಷತಾ ನಿಯಮಗಳನ್ನು ಅನುಸರಿಸಿ. ನಿರ್ದಿಷ್ಟ ಮಾದರಿಗಳಲ್ಲಿ ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ AMC ಲಭ್ಯವಿದೆ. ಹೆಚ್ಚಿನ ವಿವರಗಳನ್ನು ಬಜಾಜ್ ಡೀಲರ್ ರಿಂದ ತಿಳಿದುಕೊಳ್ಳಿ. ರಸ್ತೆ ಬದಿಯ ಸಹಾಯ ರೋಡ್ ಸೈಡ್ ಅಸಿಸ್ಟನ್ಸ್ ಥರ್ಡ್ ಪಾರ್ಟೀಸ್, ಅವರ ನಿಯಮಗಳು ಮತ್ತು ಷರತ್ತುಗಳಡಿ ನೀಡಲಿದ್ದಾರೆ.

Authorised Dealers for Bajaj Auto Ltd.: Bangalore • **Bommanahalli** AMBA BAJAJ: 9535411100 • **HSR Layout** AMBA BAJAJ: 8884333732 • **Sarjapur** AMBA BAJAJ: 7406688884• **BTM Layout** AMBA BAJAJ: 9513926221• **Madiwala** AMBA BAJAJ: 9945000048• **Electronic City** AMBA BAJAJ: 8971711118• **Nayandahalli** RV BAJAJ: 6360308373 • **Moodalapalya** RV BAJAJ: 9740444545 • **Kengeri** RV BAJAJ: 7353763305 • **Giri Nagar** RV BAJAJ: 7353763302• **Vijaynagar** RV BAJAJ: 7353763307• **Banashankari** POPULAR BAJAJ: 9945111874 • **Rajajinagar** POPULAR BAJAJ : 6366554001 • **Koramangala** POPULAR BAJAJ: 9845589079 • **Konankunte** POPULAR BAJAJ: 7760967834 • **Ramnagara** POPULAR BAJAJ: 7760967832 • **Kanakpura** POPULAR BAJAJ: 9972533890 • POPULAR BAJAJ **Channapatna** 9901947666 • POPULAR BAJAJ **Uttarahalli** 9972095890 • POPULAR BAJAJ **Gottigere** 7760996891 • **Yelahanka** KALYANI BAJAJ: 9449849618 • **Mekhri circle** KALYANI BAJAJ 8884413593 **Mathikere** KALYANI BAJAJ: 8884430126 • **Chikkaballapura** KALYANI BAJAJ: 8884413594 • **Devanahalli** KALYANI BAJAJ: 9449849624 • **Marathahalli** KHIVRAJ BAJAJ: 9036091986 • **Kasturba Rd** KHIVRAJ BAJAJ: 9035060140 • **Indiranagar** KHIVRAJ BAJAJ: 9035060139 • **Hennur** KHIVRAJ BAJAJ: 9742155225 • **Banaswadi** KHIVRAJ BAJAJ: 9035060147 • **Yeshwanthpur :** KHIVRAJ BAJAJ: - 9148752305 • **Hesargatta** KHIVRAJ BAJAJ: 9035060148 • **Whitefield** KHIVRAJ BAJAJ: 8618840097 • **Hoskote** KHIVRAJ BAJAJ: 9035005075 • **Magadi Rd** ANANT BAJAJ: 9980009166 • **Laggere** ANANT BAJAJ: 9900072690 • **Hubli** CHANNAMMA BAJAJ: 9008030908 • **Arvind Nagar branch** 8884771881 **Gadag** CHANNAMMA BAJAJ: 7090665850 • **Sirsi** CHANNAMMA BAJAJ: 8884645609 • **Haveri** CHANNAMMA BAJAJ: 8151884422 • **Belgaum** JAGASHREE BAJAJ: 988690116, JAGASHREE BAJAJ: 9448634872. • **Chikodi** JAGASHREE BAJAJ: 7349773953 • **Gokak** JAGASHREE BAJAJ: 7349773965 • **Bellary AADI BAJAJ: 9606050246• Raichur SHREE BALAJI AUTOMOBILES: 9880235539• Koppal I A BAJAJ: 9632512938• Hospet AADI BAJAJ:9731361414** • **Hagaribommanahalli AADI BAJAJ: 9900363010• SIRUGUPPA AADI BAJAJ: 9110217558** • **Bijapur BIJJARGI BAJAJ (BLDE Road)**: 6362877793 •(Bus Stand Road) 8884000970 • **Bagalkot** BIJJARGI BIKES: 9148448324 • **Sindagi** BIJJARGI BAJAJ 8861946802• **Bidar** SINDOL BAJAJ 9513226555 • **Chitradurga** BTV BAJAJ: Ph: 8310553554 • **Hiriyur** BTV BAJAJ: Ph: 8310553554 • **Challakere** BTV BAJAJ 8310553554 • **Davangere** JAIN BAJAJ: Ph: 9343636805 • **Harihara** JAIN BAJAJ: Ph: 9632300444 • **Gulbarga** VKG BAJAJ: 9632018700 • **Yadgir** VKG BAJAJ: 8867776567 • **Humnabad** VKG BAJAJ 8050889160 • **Shimoga** SUPREME BAJAJ: 8105000999 • **Sagar** SUPREME BAJAJ: 9008339799 • **Bhadravathi** SUPREME BAJAJ: 9008352799 • **Chikkamagalur** SUPREME BAJAJ: 9008379799 • **Tarikere** SUPREME BAJAJ: 9008569799 • **Hosanagar** SUPREME BAJAJ 9731767799 • **Anandpura** SUPREME BAJAJ 9663501499 • **Hassan** ARPITA BAJAJ: 9902439255, **Arsikere** ARPITA BAJAJ: 9964094535 • **Kolar** KHIVRAJ 9611768292 • **KGF** KHIVRAJ BAJAJ: 7349507477• **Tumkur** AKSHAYA BAJAJ: 7259040212• **Tiptur** AKSHAYA BAJAJ: 7259040226 • **Sira** AKSHAYA BAJAJ: 7259040328 • **Kunigal** AKSHAYA BAJAJ: 7338662706 • **Madhugiri** AKSHAYA BAJAJ: 7259040340 • **BH Road:** 7338662687 • **Mysore Saraswathipuram** POPULAR BAJAJ: 9148101113 • **Chamarajapuram** POPULAR BAJAJ: 7259786271 • **Vontikoppal** STAR BAJAJ: 9886959722 • **Mandya** POPULAR BAJAJ: 7760967900 • **Chamarajanagara** PATEL BAJAJ: 9480494888 • **Hunsur** STAR BAJAJ: 8884374777 • **Kushalnagar** POPULAR BAJAJ: 7259786276 • **Nanjangud** STAR BAJAJ: 9742100252 • **NR Mohalla** STAR BAJAJ: 8095777706 • **Balmatta** SUPREME BAJAJ: 9606973192 • **Kuloor** SUPREME BAJAJ: 9606237547 • **Surathkal** SUPREME BAJAJ: 9606973193 • **Thokottu** 9606702429 • **B C Road** 7618715273 • **Bidar** SINDOL BAJAJ 9513226555 • **UDUPI** SAANVI BAJAJ 8861135225.